issued under sub-section (1) of section 16 of the Mysore Motor Vehicles Taxation Act, 1957.

BUDGET FOR 1959-60—DEMANDS FOR GRANTS

Demands Nos. 23, 40, 25, 26, 5.—Agriculture, Horticulture and Fisheries; Community Development, etc.; Animal Husbandry; Co-operation; and Forest.

(Debate contd.)

Mr. SPEAKER.—Sri Narayanaswami. Fifteen minutes please.

ಶ್ರೀ ಬಿ. ಎಲ್. ನಾರಾಯಣಸ್ವಾಮಿ (ಮುಳಬಾಗಿಲು).—ಸ್ವಾಮಿ, ಮೊಟ್ಟ ಮೊದಲನೆಯದಾಗಿ ನಮ್ಮ ಮುಂದಿರುವ ವ್ಯವಸಾಯದ ಬೇಡಿಕೆಯ ವಿಷಯದಲ್ಲಿ ನಾಲ್ಕಾರು ವಿಷಯಗಳನ್ನು ಹೇಳಬೇಕೆಂದಿದ್ದೇನೆ. ಮೊದಲು ವ್ಯವಸಾಯ ಯಾವ ಮಟ್ಟದಲ್ಲಿ ಇತ್ತೋ ಈಗಲೂ ಅದೇ ಮಟ್ಟದಲ್ಲಿ ಅಥವಾ ಸ್ವಲ್ಪ ಸುಧಾರಿಸಿದೆ ಎಂದು ಹೇಳಬಹುದು. ಆದರೂ ಯಾವ ಪ್ರಮಾಣದಲ್ಲಿ ಸುಧಾರಿಸಬೇಕಾಗಿತ್ತೋ ಆ ಪ್ರಮಾಣದಲ್ಲಿ ಸುಧಾರಣೆಯಾಗಿಲ್ಲ. ನಮ್ಮಲ್ಲಿ ಇನ್ನೂ ಆಹಾರದ ಕೊರತೆ ಇರುವುದು ವಿಷಾದದ ಸಂಗತಿ. ಆಹಾರದ ಕೊರತೆಯನ್ನು ಪೂರ್ತಿ ತುಂಬುವುದಾಗಿ ಸರ್ಕಾರದವರು ಭರವಸೆ ಇಟ್ಟುಕೊಂಡಿದ್ದಾರೆ. ಆದರೆ ನನಗಾದರೂ ಇದರಲ್ಲಿ ನಂಬಿಕೆಯಿಲ್ಲ. ಇದಕ್ಕೆ ಕಾರಣ, ಆಹಾರವನ್ನು ಪರಿಪೂರ್ಣವಾಗಿ ಬೆಳೆಯಬೇಕಾದರೆ, ವ್ಯವಸಾಯದಲ್ಲಿರತಕ್ಕ ದೋಷವೇನೆಂಬುದನ್ನು ಇದುವರೆಗೆ ಯಾರೂ ಕಂಡುಕೊಂಡಿಲ್ಲ. ಬೇರೆಯವರು ಇದನ್ನು ಗಮನಕ್ಕೆ ತಂದರೂ ಸರ್ಕಾರ ಕಡೆಗಣ್ಣಿನಿಂದ ಕಾಣುತ್ತಿರುವುದು ವಿಷಾದಕರ. ಒಟ್ಟಿನಲ್ಲಿ ಒಂದು ಅಂಶವನ್ನು ಪ್ರಸ್ತಾಪಮಾಡದೆ ವಿಧಿಯಿಲ್ಲ. ಇರತಕ್ಕ ಕುಂದು ಕೊರತೆಗಳನ್ನು ಸರ್ಕಾರದ ಗಮನಕ್ಕೆ ತಂದು ಪ್ರಜೆಗಳಿಗೆ ಬೇಕಾದಷ್ಟು ಅನುಕೂಲಗಳನ್ನು ಒದಗಿಸುವುದಕ್ಕೆ ಪ್ರಯತ್ನಪಡುತ್ತೇವೆ. ಸರ್ಕಾರದವರು ಸಾರ್ವಜನಿಕ ಹಿತವನ್ನು ಬಯಸಿ, ಇವಕ್ಕೆ ಸಂಬಂಧಪಟ್ಟ ಎಲ್ಲ ವಿಷಯಗಳನ್ನೂ ಕೂಲಂಕಷವಾಗಿ ವಿಮರ್ಶೆಮಾಡಿ, ಸಾಧ್ಯಾಸಾಧ್ಯತೆಯನ್ನು ನೋಡಿ ತೀರ್ಮಾನ ಮಾಡಬೇಕು. ಸಾರ್ವಜನಿಕರು ಹೇಳಿದುದನ್ನು ತಾತ್ಸಾರ ಮಾಡಿಕುಳಿತರೆ ಅದು ಒಳ್ಳೆಯ ಆಡಳಿತವಾಗುವುದಿಲ್ಲ. ಅದರಲ್ಲಿಯೂ ಪ್ರಜಾಪ್ರಭುತ್ವವನ್ನು ನಡೆಸುವ ಮಂತ್ರಿಗಳು ಪ್ರಜೆಗಳು ಹೇಳಿದುದಕ್ಕೆ ಮನ್ನಣೆ ಕೊಡಬೇಕು.

ಸ್ವಾಮೀ, ನಮ್ಮ ದೇಶದಲ್ಲಿರುವ ಅಭಾವ ಪ್ರದೇಶಗಳಿಂದ ಸುಮಾರು ಹತ್ತು ಲಕ್ಷ ಎಕರೆ ಪ್ರದೇಶದಲ್ಲಿ ಬೆಳೆಗಳು ಸದಾ ಕಾಲದಲ್ಲಿಯೂ ಕೆಡುತ್ತಿವೆ ಎನ್ನುವುದು ಸರಕಾರಕ್ಕೆ ಗೊತ್ತಿದೆ. ಈ ಬಗ್ಗೆ ಕೋಲಾರ ಜಿಲ್ಲೆಯಲ್ಲೇ ಸುಮಾರು ಮೂರುವರೆ ಲಕ್ಷ ಎಕರೆಗಳಷ್ಟು ಭೂಮಿಯನ್ನುಪಯೋಗಿಸಿಕೊಂಡು ಜಮೀನುಗಳಲ್ಲಿ ಬೆಳೆ ಮಾಡುತ್ತಿದ್ದರೂ ಬೆಳೆ ಕೆಡುತ್ತಾ ಇದೆ. ಈ ವಿಚಾರದಲ್ಲಿ ಅನೇಕಬಾರಿ ಸರಕಾರಕ್ಕೆ ಮನವಿಮಾಡಿಕೊಂಡರೂ ಯಾವುದೊಂದು ಸೂಕ್ತವಾದ ಕಾರ್ಯಕ್ರಮವನ್ನೂ ಕೈಗೊಂಡಿಲ್ಲ. ಇಷ್ಟೊಂದು ವಿಸ್ತಾರವಾದ ಪ್ರದೇಶಗಳಲ್ಲಿ ಬೆಳೆ ಕೆಡುತ್ತ ಇರಬೇಕಾದರೆ ಆಹಾರದ ಪರಿಪೂರ್ಣತೆ ಹೇಗೆ ತಾನೇ ಸಾಧ್ಯ? ಇದರ ಬಗೆಗೆ ಏನೇನು ಕಾರ್ಯಕ್ರಮಗಳನ್ನು ತೆಗೆದುಕೊಂಡಿದ್ದಾರೆ ಎಂಬುದಕ್ಕೆ ಮಾನ್ಯ ಸಚಿವರು ಉತ್ತರ ಕೊಡಬೇಕೆಂದು ಕೇಳುತ್ತಿದ್ದೇನೆ.

ಇದಕ್ಕಾಗಿ ಒಂದು ಸಹಾಯವನ್ನು ಕೊಡಬೇಕು, ಒಂದು ರೀತಿಯಾಗಿ ಹೆಚ್ಚಿಗೆ ನಿಗಾ ಕೊಡಬೇಕು ಎಂದು ಕೇಂದ್ರ ಸರಕಾರದವರು ಕೂಡ ತಿಳಿಸಿದ್ದಾರೆ; ಮತ್ತು ಅದೇ ರೀತಿಯಾಗಿ ನಮ್ಮ ಸರಕಾರದವರೂ ಕೂಡ ಒಂದು ನಿರ್ದೇಶನವಿತ್ತಿದ್ದಾರೆ ಎಂದು ತಿಳಿದುಬಂದಿದೆ. ಆದರೆ ಇದು ಕಾರ್ಯರೂಪದಲ್ಲಿ ಏನೂ ಆಗಿಲ್ಲ. ನಮ್ಮ ಕೋಲಾರ ಜಿಲ್ಲೆಯನ್ನೇ ನೋಡುವುದಾದರೆ ಸ್ವಲ್ಪ ಸಹಾಯವನ್ನು ಕೊಟ್ಟು ನೀರಾವರಿಗೆ ಅನುಕೂಲವಾಗುವಂತೆ ಬಾವಿಗಳನ್ನು ಮಾಡಬೇಕಾದುದು ಅಗತ್ಯವಾಗಿದೆ. ಸರಕಾರದವರು ಇದನ್ನು ಉಚಿತವಾಗಿ ಮಾಡಬೇಕೆಂದು ಹೇಳುತ್ತಿಲ್ಲ. ನಾವು ಕೇಳತಕ್ಕ ಭೂಮಿಗೆ ಸಾಲವಾಗಿ ಹಣವನ್ನು ಒದಗಿಸಿ ಕೊಡಿ. ಆ ಸಾಲವನ್ನು ವಸೂಲು ಮಾಡಿಕೊಳ್ಳಬಹುದು. ಈ ರೀತಿಯಾದ ಸಹಾಯವನ್ನು ತೋರಿಸಿದರೆ ಅದರಿಂದ ಹೆಚ್ಚಿನ ಸಹಾಯಮಾಡಿದಂತಾಗುತ್ತದೆ ಮತ್ತು ಇದರಿಂದಾಗಿ ಹೆಚ್ಚಿನ ಆಹಾರಧಾನ್ಯಗಳನ್ನು ಬೆಳೆಯಲು ಅನುಕೂಲವಾಗುತ್ತದೆ. ದೇಶದಲ್ಲಿ ಆಹಾರ ಪರಿಪೂರ್ಣತೆಯಾಗಬೇಕಾದರೆ ದೇಶದಲ್ಲಿ ಆಹಾರದ ಅಭಾವಪ್ರದೇಶಗಳ ಅಭಾವವನ್ನು ತಪ್ಪಿಸಬೇಕಾದರೆ ಸರಕಾರ ಇದಕ್ಕೆ ತಕ್ಕ ಸೌಕರ್ಯಗಳನ್ನು ಒದಗಿಸಿಕೊಡಬೇಕು. ಆ ರೀತಿಯಾದ ಯಾವ ಪ್ರಯತ್ನವಾದರೂ ನಡೆದಿದೆಯೋ ಎಂದರೆ ಆ ರೀತಿಯಾದ ಯೋಜನೆಗಳಿಲ್ಲದಂತೆ ಕಾಣುತ್ತದೆ.

ಈಚೆಗೆ ಸರಕಾರದವರು ಕೆಲವು ವರ್ಷಗಳಿಂದ ಲ್ಯಾಂಡು ಇಂಪ್ರೂವ್‌ಮೆಂಟು ಲೋನುಗಳೆಂದು ಕೊಡುತ್ತಿದ್ದಾರೆ. ಇರಿಗೇಷನ್ನು ಬಾವಿಗಳಿಗಾಗಿ ಕೇವಲ ಹದಿನೈದು ಲಕ್ಷ ರೂಪಾಯಿಗಳು, ಮೂವತ್ತು ಲಕ್ಷ ರೂಪಾಯಿಗಳು ಎಂದು ಒದಗಿಸಿರುವುದು ಏನೇನೂ ಸಾಲದು. ಹತ್ತೊಂಬತ್ತು ಜಿಲ್ಲೆಗಳಿಗೆ ವಾಸ್ತವವಾಗಿ ನೋಡಿದರೆ ಈ ಹಣ ಎಷ್ಟರಮಟ್ಟಿಗೆ ಸಾಕಾಗುತ್ತದೆ? ಕೋಲಾರ ಜಿಲ್ಲೆಯೊಂದಕ್ಕೆ ಸುಮಾರು ಹತ್ತಿಪ್ಪತ್ತು ಲಕ್ಷ ರೂಪಾಯಿಗಳಷ್ಟಾದರೂ ಕೊಡಬೇಕಾಗುತ್ತದೆ. ಆದುದರಿಂದ ಒಟ್ಟು ದೇಶಕ್ಕೆ ಪೂರ್ತಿಯಾಗುವಂತೆ ಸುಮಾರು ಹತ್ತು ಕೋಟಿ ರೂಪಾಯಿಗಳಷ್ಟನ್ನಾದರೂ ನೀವು ಸಾಲವಾಗಿ ಕೊಡಿ. ಹೀಗೆ ಕೋಲಾರ ಜಿಲ್ಲೆಗೂ ಒದಗಿಸಿಕೊಟ್ಟು ದೇಶದಲ್ಲಿರುವ ಒಂದು ಕ್ಷಾಮದ ದುರವಸ್ಥೆಯಿಂದ ಪಾರುಮಾಡುವಂತಹ ಯೋಜನೆಗಳನ್ನು ತಯಾರುಮಾಡಿ ಈ ಯೋಜನೆಗಳನ್ನು ಕಾರ್ಯರೂಪಕ್ಕೆ ತರಬೇಕೆಂದು ನಾನು ಮತ್ತೊಮ್ಮೆ ಹೇಳುತ್ತೇನೆ.

ಮತ್ತೆ ನೀರಾವರಿ ಅಭಾವಕ್ಕೆ ಒಳಗಾಗಿರುವ ಪ್ರದೇಶಗಳಿಗೆ ಸಬ್‌ಸಿಡಿ ಕೊಡತಕ್ಕ ಒಂದು ಪದ್ಧತಿ ಇದೆ. ಕಳೆದ ವರ್ಷ ನಾಲ್ಕು ಲಕ್ಷ ರೂಪಾಯಿಗಳನ್ನು ಕೊಡಲಾಗಿತ್ತು. ಆದರೆ ಈ ವರ್ಷ ಎರಡೂವರೆ ಲಕ್ಷ ರೂಪಾಯಿಗಳಿಗೆ ಇಳಿಸಿದ್ದಾರೆ. ಹೀಗೇಕೆ ಮಾಡಬೇಕಾಗಿತ್ತು? ವಾಸ್ತವವಾಗಿ ಇವತ್ತಿನ ದಿವಸ ಬಾವಿಯನ್ನು ತೆಗೆಸಬೇಕಾದರೆ ಅದರ ಖರ್ಚೇ ಜಾಸ್ತಿಯಾಗಿದೆ. ಇಂತಹ ವ್ಯವಸಾಯಗಾರನಿಗೆ 250 ರಿಂದ 500 ರೂಪಾಯಿಗಳವರೆಗೆ ಕೊಡಬೇಕೆಂದು ಕೇಂದ್ರ ಸರಕಾರವನ್ನು ಪ್ರಾರ್ಥನೆ ಮಾಡಿಕೊಳ್ಳುತ್ತಿರುವಾಗ ತಾವು ಇದನ್ನು ಈ ವರ್ಷ ಕಡಮೆಯಾಗಿ ಎಂದರೆ

(ಶ್ರೀ ಬಿ. ಎಲ್. ನಾರಾಯಣಸ್ವಾಮಿ)

ಎರಡೂವರೆ ಲಕ್ಷ ರೂಪಾಯಿಗಳಷ್ಟನ್ನು ಒದಗಿಸಿರುವುದು ಏನೇನೂ ಸಾಲದು. ಅದಕ್ಕಾಗಿ ಈ ಬಾವಿಗಳನ್ನು ಮಾಡಿಸುವುದಕ್ಕಾಗಿ ಪಿ.ಡಬ್ಲ್ಯು.ಡಿ. ಯಿಂದ ಐನೂರು ರೂಪಾಯಿಗಳಷ್ಟು ಎಂದು ಸಬ್‌ಸಿಡಿಯನ್ನು ಹೆಚ್ಚಾಗಿ ಒದಗಿಸಬೇಕೆಂದು ತಮ್ಮಲ್ಲಿ ನಾನು ನಿವೇದಿಸಿಕೊಳ್ಳುತ್ತೇನೆ.

ಸ್ವಾಮೀ, ಇನ್ನೆರಡು ವರ್ಷಗಳೊಳಗೆ ಆಹಾರದ ಪರಿಸ್ಥಿತಿ ಸ್ವಯಂ ಪರಿಪೂರ್ಣತೆಯನ್ನು ಹೊಂದಲು ಅವಕಾಶವಿದೆ ಎಂದು ಹೇಳಿದರು. ಆದರೆ ನಮ್ಮ ಕೋಲಾರ ಜಿಲ್ಲೆಯನ್ನೇ ತೆಗೆದುಕೊಂಡರೆ ಈಗ ಅಲ್ಲಿ ಆಗಬೇಕಾಗಿದ್ದ ಕಾರು ರಾಗಿ ಬೆಳೆಯಲ್ಲ ಹಾಳಾಗಿ ರೈತರು ಪರಿತಪಿಸುತ್ತ ಆಕಾಶವನ್ನು ನೋಡುತ್ತಿದ್ದಾರೆ. ಹೀಗೆ ಬೆಳೆಗಳು ಹಾಳಾಗುತ್ತಿರುವುದಕ್ಕೆ ಕಾರಣವನ್ನು ಸರಕಾರ ಕಂಡುಹಿಡಿದು ಇದನ್ನು ತಪ್ಪಿಸಬೇಕೆಂದು ಕೇಳುತ್ತಿದ್ದೇನೆ.

ಇನ್ನು ಅಗ್ರಿಕಲ್‌ಚರಿಗೆ ಬೇಕಾದ ಮೆಟೀರಿಯಲ್ಸುಗಳನ್ನು ಹಂಚುವ ವಿಚಾರವನ್ನು ತೆಗೆದುಕೊಳ್ಳೋಣ. ಈ ಗೊಬ್ಬರ ಇತ್ಯಾದಿಗಳನ್ನು ಸರಿಯಾಗಿ ಸಕಾಲದಲ್ಲಿ ಹಂಚಬೇಕೆಂದು ಕಳೆದ ಸಾರಿಯೂ ಮನವಿಮಾಡಿಕೊಂಡಿದ್ದೆ ಮತ್ತು ಅನೇಕಸಲ ಪ್ರಾರ್ಥನೆಮಾಡಿಕೊಂಡಮೇಲೆ ಕಡೆಗೆ ಒಂದು ಸಾರಿ ನಮ್ಮ ಕಡೆಗೆ ಕಳುಹಿಸಿಕೊಟ್ಟರು. ಅದು ಒಂದು ತಾಲ್ಲೂಕಿಗೆ ಮಾತ್ರ ಬರುತ್ತದೆ ಎಂದು ಹಂಚಲಾಯಿತು. ಆದರೆ ಈ ರೀತಿಯಾಗಿ ತಾಲ್ಲೂಕಿನಿಂದ ತಾಲ್ಲೂಕಿಗೆ ಪರಿಪೂರ್ಣವಾಗಿ ಕೊಡದೆಹೋದರೆ ರೈತನು ಹೇಗೆ ಉಪಯೋಗಿಸಿಕೊಳ್ಳಲು ಅನುಕೂಲವಾಗುತ್ತದೆ! ಇವತ್ತಿನ ದಿವಸ ರೈತ ಬ್ಲಾಕು ಮಾರ್ಕೆಟ್ಟಿನಲ್ಲಿ ಗುಳಗಳನ್ನು ಕೊಳ್ಳಲು ಸಾಧ್ಯವಾಗುತ್ತದೆಯೇ! ಸಕಾಲದಲ್ಲಿ ಅವನಿಗೆ ಒದಗುವಂತೆ ಮಾಡಬೇಕಾದರೆ ಈ ಗುಳಗಳನ್ನು ಮತ್ತು ಗೊಬ್ಬರವನ್ನು ಪ್ರತಿಯೊಂದು ಸೊಸೈಟಿಯಲ್ಲಿಯೂ ಹೆಚ್ಚಾಗಿ ಒದಗಿಸಿಕೊಟ್ಟು ರೈತನಿಗೆ ಕಷ್ಟವಿರದಂತೆ ಮಾಡತಕ್ಕದ್ದು ಯುಕ್ತವಾಗಿದೆ.

ಇನ್ನು ಈ ಮೆನ್ಯೂರುಗಳ ವಿಚಾರ. ಇದರಲ್ಲಿ ನಾನು ಒಂದು ವಿಷಯವನ್ನು ಇಲ್ಲಿ ಬಿನ್ನವಿಸಿಕೊಳ್ಳಬೇಕಾಗಿದೆ. ಒಂದು ಕಡೆ ಒಬ್ಬ ಅಧಿಕಾರಿ ಫರ್ಟಿಲೈಸರುಗಳನ್ನು ಉಪಯೋಗಿಸಿ ಎಂದು ಹೇಳುತ್ತಾರೆ. ಇನ್ನೊಂದು ಕಡೆ ನಮ್ಮ ಹಿರಿಯನಾಯಕರು ಫರ್ಟಿಲೈಸರುಗಳನ್ನು ಜಾಸ್ತಿ ಉಪಯೋಗಿಸಿದರೆ ಭೂಮಿಯ ಸಾರವೆಲ್ಲ ಹೋಗುತ್ತದೆ ಅದರಿಂದ ಹೆಚ್ಚಾಗಿ ಗ್ರೀನು ಮೆನ್ಯೂರನ್ನೇ ಜಾಸ್ತಿಮಾಡಿ ಎಂದು ಹೇಳುತ್ತಿದ್ದಾರೆ. ಹೀಗೆ ಯಾವುದನ್ನು ಮಾಡಬೇಕೋ ಏನೋ ಒಂದೂ ಅರ್ಥವಾಗುತ್ತಿಲ್ಲ, ಏನುಮಾಡೋಣ? ಅನೇಕ ಸನ್ನಿವೇಶಗಳಿಂದ ಕೆಲವು ಕಡೆ ಬೆಳೆಯುವುದೂ ಹೋಗುತ್ತಿದೆ. ಇದಕ್ಕೇನು ಕಾರಣ ಎನ್ನುವುದನ್ನು ನೋಡುವುದಕ್ಕೆ ಕೆಲವು ತಜ್ಞರಿಂದ ಸಾಯಿಲ್ಲನ್ನು ಟೆಸ್ಟು ಮಾಡಿಸಿ, ಯಾವ ಯಾವ ಪ್ರಮಾಣದಲ್ಲಿ ಎಷ್ಟೆಷ್ಟು ಮೆನ್ಯೂರುಗಳನ್ನು ಒದಗಿಸಬೇಕು ಎನ್ನುವ ಒಂದು ಪರೀಕ್ಷೆಯನ್ನು ಮಾಡಿದರೆ ಬಹಳ ಒಳ್ಳೆಯ ಉಪಯೋಗವಾಗುತ್ತದೆ ಎನ್ನುವ ದೃಷ್ಟಿಯಿಂದ ಹೇಳುತ್ತಿದ್ದೇನೆ. ಆದರೆ ಸಾಮಾನ್ಯವಾದ ಒಬ್ಬ ರೈತನಿಗೆ ಇಷ್ಟೆಲ್ಲಾ ಪರಿಚಯಮಾಡಿಕೊಡುವುದಕ್ಕೆ ಇಂತಹ ತಜ್ಞರ ಸಹಾಯವನ್ನು ಒದಗಿಸಿ ಅವನ ತೊಂದರೆಯನ್ನು ತಪ್ಪಿಸಬೇಕೆಂದು ಹೇಳಬಯಸುತ್ತೇನೆ. ಹಳ್ಳಿಗಾಡಿನಲ್ಲಿ ಇಂತಹ ವ್ಯವಸಾಯಗಾರನನ್ನು ಉತ್ತಮಪಡಿಸುವ ಒಂದು ಸ್ಥಾನ ಈಗ ನಮಗೆ ದೊರೆತಿರುವ ಒಬ್ಬ ವಿಲೇಜು ಲೆವೆಲ್ಲಿನ ವರ್ಕರು, ಇವನಿಂದ ಆಗಬೇಕಾಗಿದೆ. ಇವನಿಗೆ ಸುಮಾರು ಮೂವ್ವತ್ತು ಹಳ್ಳಿಗಳಲ್ಲಿ ಓಡಾಡಬೇಕೆಂದು ನೇಮಿಸಿದ್ದಾರೆ. ಇವನು ವಿದ್ಯಾವಂತನಾಗಿ ತನಗೆ ತಿಳಿದಿರುವ ವಿಷಯಗಳನ್ನು ರೈತರಿಗೆ ತಿಳಿಸಬೇಕು. ಆದರೆ ಇವನು ಪ್ರತಿಯೊಂದು ಹಳ್ಳಿಯಲ್ಲಿರುವ ಭೂಮಿ ಮತ್ತು ಆ ಭೂಮಿಯ ಗುಣವನ್ನು ತಿಳಿದು ಕೆಲಸಮಾಡಲು ಸಾಧ್ಯವಿರುವುದಿಲ್ಲ. ಅಲ್ಲದೆ ಈ ವಿಲೇಜು ಲೆವಲ್ಲು ವರ್ಕರಿನ ಮೂಲಕ ಸಾಯಿಲ್ಲನ್ನು ಪುನಃ ಟೆಸ್ಟಿಂಗುಮಾಡಿ ಕಳುಹಿಸುವುದಕ್ಕೂ ಅಧಿಕಾರವಿಲ್ಲ ಮತ್ತು ಅವನೇ ಸ್ವತಃ ಪರೀಕ್ಷೆಮಾಡುವುದಕ್ಕೂ ಸಾಧ್ಯವಿಲ್ಲ.

ಶ್ರೀ ಕೆ. ಎಫ್. ಪಾಟೀಲ್ (ವ್ಯವಸಾಯ ಇಲಾಖೆಯ ಮಂತ್ರಿಗಳು)... ವಿಲೇಜು ಲೆವಲ್ಲು ವರ್ಕರು ಅದನ್ನೆಲ್ಲ ಕಳುಹಿಸಬೇಕು. ಅನಂತರ ಟೆಸ್ಟುಮಾಡಿ ಕಳುಹಿಸುತ್ತಾರೆ.

ಶ್ರೀ ಬಿ. ಎಲ್. ನಾರಾಯಣಸ್ವಾಮಿ.—ಅದು ಆಗುತ್ತಿಲ್ಲ. ಅದನ್ನೇ ಮಾಡಿಸಬೇಕು ಎಂದು ನಾನು ಪ್ರಾರ್ಥನೆ ಮಾಡುತ್ತಿದ್ದೇನೆ.

ಶ್ರೀ ಕೆ. ಎಫ್. ಪಾಟೀಲ್.—ಆಗುತ್ತಿಲ್ಲ ಎನ್ನುವುದರ ಕಡೆಗೆ ಲಕ್ಷ್ಯ ಕೊಡಬೇಕೆಂದು ತಿಳಿದುಬಂದಿದೆ. ಅದರ ಬಗ್ಗೆಯೂ ಪ್ರಯತ್ನಮಾಡೋಣ.

ಶ್ರೀ ಬಿ. ಎಲ್. ನಾರಾಯಣಸ್ವಾಮಿ.—ವ್ಯವಸಾಯ ಸರ್ವತೋಮುಖವಾಗಿ ಅಭಿವೃದ್ಧಿಯಾಗಬೇಕಾದರೆ ರೈತನ ಆರ್ಥಿಕಸ್ಥಿತಿ ಅಭಿವೃದ್ಧಿಯಾಗಲೇಬೇಕು. ಹಾಗೆ ಮಾಡಬೇಕಾದರೆ ರೈತನಿಗೆ ಬೇಕಾದಷ್ಟು ಸಹಾಯ ಸೌಲಭ್ಯಗಳನ್ನು ಒದಗಿಸಿ ಪ್ರೋತ್ಸಾಹಿಸುವಂತಹ ಸೌಕರ್ಯಗಳು ಇದ್ದರೆ ಅವನು ಇನ್ನೂ ಹೆಚ್ಚು ರೀತಿಯಲ್ಲಿ ಮುಂದಕ್ಕೆ ಬರಬಹುದು. ಆ ರೀತಿಯಾಗಿ ಅಭಿವೃದ್ಧಿಪಡಿಸುವುದಕ್ಕೆ ಯಾವ ಸೌಕರ್ಯವೂ ಇರುವುದಿಲ್ಲ. ಆದಕಾರಣ ಈ ರೈತನಿಗೆ ಯಾವುದಾದರೂ ಉಪಕಸಬುಗಳನ್ನು ಇರುವಂತೆ ಮಾಡಬೇಕು. ಈ ವ್ಯವಸಾಯಗಾರನಿಗೆ ಸಿರಿಕಲ್‌ಚರು ಮತ್ತು ಹಾರ್ಟಿಕಲ್‌ಚರಿನಲ್ಲಿ ಕೆಲಸಮಾಡುವಂತಹ ಸೌಕರ್ಯಗಳನ್ನು ಒದಗಿಸಿಕೊಡಬೇಕು. ಈಗಿರುವ ವಿಲೇಜು ಲೆವಲ್ಲು ವರ್ಕರರಿಗೆ ಅಗ್ರಿಕಲ್‌ಚರಿನ ಜೊತೆಗೆ, ಹಾರ್ಟಿಕಲ್‌ಚರು ಮತ್ತು ಸಿರಿಕಲ್‌ಚರಿನಲ್ಲೂ ಟ್ರೇನಿಂಗನ್ನು ಕೊಟ್ಟು ಹಳ್ಳಿಗಳಲ್ಲಿ ನೇಮಿಸಿದರೆ ಅವನಿಂದ ರೈತರಿಗೆ ಇಂತಹ ಉಪಕಸಬುಗಳನ್ನು ಮಾಡಲು ನಿಜವಾಗಿಯೂ ಬಹಳ ಸಹಾಯವಾಗುತ್ತದೆ. ಆ ರೀತಿಯಾದ ಕೆಲಸವನ್ನು ತಾವು ಮಾಡಬೇಕೆಂದು ನಾನು ತಮ್ಮಲ್ಲಿ ಮನವಿಮಾಡಿಕೊಳ್ಳುತ್ತೇನೆ.

ಈ ತಾಲ್ಲೂಕು ಮುಖ್ಯ ಸ್ಥಳದಲ್ಲಿ ಪ್ರತ್ಯೇಕವಾಗಿ ಅಗ್ರಿಕಲ್‌ಚರಲ್ ಎಕ್ಸ್‌ಟೆನ್‌ಷನ್ನು ಆಫೀಸರೆಂದು ಇದ್ದಾರೆ. ಈಗ ನಮ್ಮ ದೇಶದಲ್ಲಿ ಸಿರಿಕಲ್‌ಚರನ್ನು ಅಭಿವೃದ್ಧಿಪಡಿಸಲು ಪ್ರಕೃತಿದತ್ತವಾದ ಸೌಲಭ್ಯಗಳಿವೆ. ಆದರೂ ಅನೇಕ ತಾಲ್ಲೂಕುಗಳಲ್ಲಿ ಇದು ಅಭಿವೃದ್ಧಿಗೆ ಬಂದಿಲ್ಲ. ಈ ಇಲಾಖೆ ಎಲ್ಲ ಕ್ಷೇತ್ರದಲ್ಲಿಯೂ ಸರಿಯಾಗಿ ಕೆಲಸಮಾಡುತ್ತಿಲ್ಲ. ಆದರೆ ಈ ಅಗ್ರಿಕಲ್‌ಚರು ಎಕ್ಸ್‌ಟೆನ್‌ಷನ್ನು ಆಫೀಸರಿಗೆ ಈ ಸಿರಿಕಲ್‌ಚರಿನಲ್ಲಿ ಟ್ರೇನಿಂಗನ್ನು ಕೊಡಿಸಿ ಅವರು ಅಗ್ರಿಕಲ್‌ಚರಿನ ಜೊತೆಗೆ ಈ ಕೆಲಸಗಳನ್ನೂ ಪ್ರಚಾರಮಾಡಿ ಕೆಲಸಗಳನ್ನು ಮಾಡುವಂತೆ ಮಾಡಬೇಕು. ಇದಲ್ಲದೆ ಈ ಆಫೀಸರು ವಿಲೇಜು ಲೆವಲ್ಲಿನ ವರ್ಕರಿನಮೇಲೆಯೂ ಒಂದು ನಿಗವನ್ನು ಇಟ್ಟು ಕೆಲಸಮಾಡಲನುಕೂಲವಾಗುತ್ತದೆ. ಇಂತಹ ಟ್ರೇನಿಂಗನ್ನು ವಿಲೇಜು ಲೆವಲ್ಲಿನ ವರ್ಕರಿಗೂ ಕೊಡಬೇಕೆಂದು ನಾನು ಸೂಚನೆ ಕೊಡುತ್ತಿದ್ದೇನೆ.

ಇನ್ನು ಸಸ್ಯವೃದ್ಧಿ ವಿಚಾರ. ನಿನ್ನೆ ಮಾತನಾಡಿದ ಅನೇಕ ಸ್ನೇಹಿತರು ಹೇಳುತ್ತಿದ್ದರು, ಈ "ವನ ಮಹೋತ್ಸವ" ಎನ್ನುವುದು ಬರೀ "ವನ ಮಹೋತ್ಸವ" ಎನ್ನುವಂತಾಗಿದೆ ಎಂದು. ಇದು ನಿಜ. ಅನೇಕ ಸಂದರ್ಭಗಳಲ್ಲಿ ಹೀಗಾಗಿದೆ. ನಮ್ಮ ಕೋಲಾರದ ಜಿಲ್ಲೆಯಲ್ಲೇ ಕೇಂದ್ರ ಸರಕಾರದ ಉಪ ಸಚಿವರನ್ನು ಕರೆಸಿ ಬಹಳ ವಿಜೃಂಭಣೆಯಿಂದ "ವನ ಮಹೋತ್ಸವ" ಎಂದೇನೋ ಮಾಡಿದರು. ಆದರೆ ಅಲ್ಲಿಂದೀಚೆಗೆ ಏನೂ ಆಗಿಲ್ಲ. ಈಗ ಬರೀ ಒಣ ಮಹೋತ್ಸವವಾಗಿದೆ ಎಂದು ಹೇಳಬಹುದು. ಸರಕಾರದವರು ಯಾವ ಒಂದು ಮಹತ್ತರವಾದ ಉದ್ದೇಶದಿಂದ ಇದನ್ನು ತರಬೇಕೆಂದು ಮಾಡಿದರೋ ಅದರಂತೆ ಸಾರ್ಥಕವಾಗುತ್ತಿಲ್ಲ. ಇಂತಹವುಗಳನ್ನೆಲ್ಲ ರೈತನಿಂದ ಮಾಡಿಸಲು ಅವನಿಗೆ ತಕ್ಕಷ್ಟು ಉತ್ಸಾಹವನ್ನು ಕೊಟ್ಟು ಈ ರೈತನು ಮಾಡುವಂತೆ ಮಾಡಬೇಕು. ಈಗಿರತಕ್ಕ ಪದ್ಧತಿಯಲ್ಲಿ ರೈತನಿಗೆ ಗಿಡಮರಗಳನ್ನು ಬೆಳೆಸುವುದರಲ್ಲಿ ವಿಶ್ವಾಸವಿದೆ. ಅವನಿಗೆ ಯಾವ ಯಾವ ರೀತಿಯಾದ ಗಿಡಗಳನ್ನು ನೆಡಬೇಕು, ಯಾವುದನ್ನು ನೆಡಬಾರದು ಎನ್ನತಕ್ಕ ತಿಳುವಳಿಕೆಯನ್ನು ಕೊಡುವುದೇ ಕಷ್ಟವಾಗಿದೆ.

1-30 P.M.

ಇದಕ್ಕೆ ಕಚೇರಿಗೆ ಬರಬೇಕು, ಅರ್ಜಿಕೊಡಬೇಕು. ರೆವಿನ್ಯೂ ಇನ್ಸ್‌ಪೆಕ್ಟರ ಮನೆಗೆ ತಿರುಗಬೇಕು. ಇಷ್ಟೆಲ್ಲ ಇದೆ. ಇದರಮೇಲೆ ಸ್ವಾರ್ಥಪರರ ಕಾಟ ಬೇರೆ ಇದೆ. ಆದ್ದರಿಂದ ಸರ್ಕಾರದವರು ಇಂಥ ವಿಷಯಗಳಲ್ಲೆಲ್ಲಾ ಒಂದು ನಿರ್ದಿಷ್ಟವಾದ ಯೋಜನೆಯನ್ನಿಟ್ಟುಕೊಂಡು ರೈತನು ಸುಖವಾಗಿರಬೇಕಾದರೆ ಏನು ಮಾಡಬೇಕೆಂಬುದನ್ನು ಯೋಚನೆಮಾಡಬೇಕು. ಒಬ್ಬ ರೈತ ಸುಖವಾಗಿರುವುದಕ್ಕೆ ಮೊದಲನೆಯದಾಗಿ ಸಾಕಷ್ಟು ಭೂಮಿ, ಭೂಮಿಯನ್ನು ಬೇಸಾಯ ಮಾಡಲಿಕ್ಕೆ ಅನುಕೂಲವಾಗುವಂತೆ ಒಂದಾದರೂ ಬಾವಿ, ಸಾಕಷ್ಟು ದನ ಮತ್ತು ಗಿಡಗಳು ಇಷ್ಟಿದ್ದರೆ ರೈತ ತಾನು ಪರಿಪೂರ್ಣವಾಗಿದ್ದಾನೆಂದು ಭಾವಿಸಬಲ್ಲ ಎಂಬ ಧ್ಯೇಯವನ್ನಿಟ್ಟುಕೊಂಡು, ಆ ಧ್ಯೇಯವನ್ನು ಮುಟ್ಟಲು ಅವಶ್ಯಕವಾದ ಕಾರ್ಯಕ್ರಮಗಳೆಲ್ಲವನ್ನೂ ಹಾಕಿಕೊಳ್ಳಬೇಕೆಂದು ಹೇಳುತ್ತೇನೆ.

ಅರಣ್ಯದ ವಿಚಾರ. ಈಚೆಗೆ ಮಳೆ ಬಹಳ ಕಡಮೆಯಾಗಿದೆಯೆಂದು ಹೇಳಬಹುದು. ಮರಗಳನ್ನು ಕಡಿದುಹಾಕಿದರು, ಅದರಿಂದ ಮಳೆ ಕಡಮೆಯಾಗಿದೆ ಎಂದು ತಜ್ಞರು ಹೇಳುತ್ತಾರೆ. ಇಂದು ಎಲ್ಲಿ ನೋಡಲಿ ಸರ್ಕಾರಿ ಮರಗಳನ್ನು ಕಡಿಯುತ್ತಿರುವುದೇ ಅಲ್ಲ. ಖಾಸಗಿ ಜನರ ಮರಗಳನ್ನೂ ವಿಪರೀತವಾಗಿ ಕಡಿಯುತ್ತಿದ್ದಾರೆ. ಇದಕ್ಕೆ ನಿಯಂತ್ರಣ ಬೇಕು. ಕಳ್ಳತನದಲ್ಲಿ ಬೇರೆ ಕಡಿಯಲ್ಪಡುತ್ತಿವೆ. ಉದಾಹರಣೆಗೆ ಹೇಳುವುದಾದರೆ, ಶ್ರೀನಿವಾಸಪುರ ತಾಲ್ಲೂಕು ಚಲುವನಹಳ್ಳಿ ಗ್ರಾಮದಲ್ಲಿ ಸರ್ಕಾರಿ ಅಮರಾಯಿ ಗಿಡಗಳನ್ನೇ ಕಳ್ಳತನದಲ್ಲಿ ಕಡಿದು ಮಾರಿದ್ದಾರೆ. ಇಪ್ಪತ್ತೆರಡು ಫಲದ ಹುಣಸೆಮರಗಳನ್ನು ಸರಿ ಸುಮಾರು 80 ಸಾರಿ ಬರ್ತಿಯಷ್ಟನ್ನು ಕಳ್ಳತನದಿಂದ ಕಡಿದು ಸಾಗಿಸಿದ್ದಾರೆಂದರೆ, ಇನ್ನು ಸರ್ಕಾರದ ಭೀತಿಯಲ್ಲದೆ! ಅಮರಾಯಿ ಹರಾಜು ಮಾಡಿದ್ದರೂ ಹೀಗೆ ಕದ್ದು ಹೊಡೆದುಕೊಂಡು ಹೋಗಿದ್ದಾರಲ್ಲ!

ಈಗೇನೋ ಇಲಾಖೆಯವರು ಕೆಲವುಕಡೆ ಬಹಳ ಮುತುವರ್ಜಿಯಿಂದ ಗಿಡಗಳನ್ನು ನೆಡಿಸುತ್ತಿದ್ದಾರೆ. ಆದರೆ, ನಾನು ನೋಡಿದ್ದರಲ್ಲಿ ತಾವು ಆದಾಯ ಬರುವಂಥ ಗಿಡಗಳನ್ನು ನೆಡಿಸುತ್ತಿಲ್ಲ. ನಮ್ಮ ಜಿಲ್ಲೆಯಲ್ಲೆಲ್ಲಾ ಕಾಷ್ಯುರೀನಾ, ಯೂಕಲಿಪ್ಟಸ್ ಗಿಡಗಳನ್ನು ಹಾಕಿಸುತ್ತಿದ್ದಾರೆ. ಇವುಗಳಿಂದ ಸೌದೆಗೆ ಅನುಕೂಲವೇನೋ ಆಗುತ್ತದೆ ಅಷ್ಟೆ. ಇದಕ್ಕಿಂತ, ಹೆಚ್ಚು ಆದಾಯ ಬರುವ ಗಿಡಗಳನ್ನು ಬೆಳೆಸಬೇಕೆಂದು ನಾನು ಸೂಚಿಸಬಯಸುತ್ತೇನೆ.

Fuel ವಿಚಾರದಲ್ಲಿಕೂಡ ಸರ್ಕಾರದವರು ತೀವ್ರಾಲೋಚನೆ ಮಾಡಬೇಕಾಗಿದೆ. ಇನ್ನು 10-12 ವರ್ಷಗಳಲ್ಲಿ ಸೌದೆಗೆ ಹಳ್ಳಿಗಾಡಿನಲ್ಲಿಯೂ ಕೂಡ ಅಭಾವ ಬರುತ್ತದೆ. ಆದ್ದರಿಂದ ಸರ್ಕಾರದವರು ತಾವೇ ಗಿಡಗಳನ್ನು ಬೆಳೆಯಿಸಿ ಎಲ್ಲ ಜನರಿಗೂ ಸೌದೆ ಒದಗಿಸುತ್ತೇವೆಂದು ಹೇಳಿದರೆ ಅದು ಎಂದಿಗೂ ಸಾಧ್ಯವಾಗದಮಾತು. ಆದ್ದರಿಂದ ಎಲ್ಲೆಲ್ಲಿ ಸಾಧ್ಯವಿದೆಯೋ ಅಲ್ಲೆಲ್ಲಾ Private Fuel Plantation ಗಳಿಗೆ ಅವಕಾಶಮಾಡಬೇಕು. ಈಗಂತೂ ಮಂಜಪ್ಪನವರ ಸುಧಾರಣೆ ಅವರೀಗ ಸಭೆಯಲ್ಲಿಲ್ಲ—ಅವರ ಸುಧಾರಣೆ ಬರತಕ್ಕ ಸಂದರ್ಭದಲ್ಲಿ ಏನೊಂದು ಕೇಳುವುದೂ ಕಷ್ಟವಾಗಿದೆ, ಅವರು ಕೊಡುವುದೂ ಕಷ್ಟವಾಗಿದೆ. ಆದರೂ ಇದು ಒಟ್ಟು ಜನಜೀವನಕ್ಕೆ ಅತ್ಯಾವಶ್ಯಕವಾದ ಸಾಮಗ್ರಿಯೆಂದು ಭಾವಿಸಿ ಈ ವಿಷಯಕ್ಕೆ ವಿಶೇಷ ಗಮನಕೊಟ್ಟು ಸೂಕ್ತ ಏರ್ಪಾಡುಮಾಡಬೇಕೆಂದು ಹೇಳುತ್ತೇನೆ.

ಆಮೇಲೆ Cashew Nut ವಿಚಾರ. ಕೋಲಾರ ಮತ್ತು ಬೆಂಗಳೂರು ಜಿಲ್ಲೆಯ ಭೂಗುಣ ಇದರ ವ್ಯವಸಾಯಕ್ಕೆ ಹಿತಕರವಲ್ಲವೆಂದು ಇದನ್ನು ಹಿಂದೆ ಕೈಬಿಟ್ಟಿದ್ದರು. ಆದರೆ, ಇತ್ತೀಚೆಗೆ ಈ ವಿಷಯದಲ್ಲಿ ಪರೀಕ್ಷೆಕೂಡ ಮಾಡಿದ್ದಾರೆ. ಸಂಬಂಧಪಟ್ಟ ಮಂತ್ರಿಗಳಿಗೂ ಲಿಖಿತಮೂಲಕ ತಿಳಿಸಿದ್ದಾಗಿದೆ. ಕೋಲಾರ ಜಿಲ್ಲೆಯಲ್ಲಿ 10 ಮೂಟೆ ಬೀಜವನ್ನು ಹಂಚಿದ್ದಾರೆ, ಅವುಗಳಿಂದ ಒಳ್ಳೆಯ ಸೊಗಸಾದ ಸಸಿಗಳು ಬಂದಿವೆ. ಆದ್ದರಿಂದ, ಶಿವಮೊಗ್ಗ ಹಾಸನ ಜಿಲ್ಲೆಗಳಲ್ಲಿ ಕ್ಯಾಷು ನಟ್ (ಗೋಡಂಬಿ) ವ್ಯವಸಾಯಕ್ಕೆ ಯಾವ ರೀತಿಯ ಅನುಕೂಲಮಾಡಿ ಕೊಟ್ಟಿದ್ದೀರೋ ಅದೇರೀತಿ ಕೋಲಾರ ಮತ್ತು ಬೆಂಗಳೂರು ಜಿಲ್ಲೆಗಳಲ್ಲೂ ಸೌಲಭ್ಯಗಳನ್ನು ಕಲ್ಪಿಸಿಕೊಡಬೇಕೆಂದು ಹೇಳುತ್ತೇನೆ.

ಆಮೇಲೆ, ವ್ಯವಸಾಯದ ಮಂತ್ರಿಗಳ ಖಾತೆಗೆ ಸಂಬಂಧಪಟ್ಟಹಾಗೆ ಇರುವ Animal Husbandry ವಿಷಯ ಹೇಳಬಯಸುತ್ತೇನೆ. ಸ್ವಾತಂತ್ರ್ಯ ಬರುವುದಕ್ಕೆ ಮೊದಲು ಮೂಗು ಪ್ರಾಣಿಗಳನ್ನು ಯಾರೂ ಕೇಳುವವರೇ ಇಲ್ಲವಲ್ಲ ಎಂದು ಹೇಳುತ್ತಿದ್ದರು. ಈಗ ಸ್ವಾತಂತ್ರ್ಯ ಬಂದಮೇಲೆ ಏನು ವ್ಯತ್ಯಾಸವಾಗಿದೆಯೆಂದರೆ, ಮೂಗು ಪ್ರಾಣಿಗಳ ವಿಷಯವನ್ನು ಕೇಳುತ್ತಿದ್ದಾರೆ ಎಂದು ಹೇಳಬಹುದಾಗಿದೆ ಅಷ್ಟೆ. ಆದರೆ ಅವರು ಮಾಡುತ್ತಿರುವುದು, ಕೇವಲ ಅರೆಮನಸ್ಸಿನಿಂದ ಎಂದು ಹೇಳಬೇಕು. ತಾಲ್ಲೂಕಿಗೊಂದು ಆಸ್ಪತ್ರೆ ಎನ್ನುವುದು ಅಥವಾ ಯಾರಾದರೂ ದೊಡ್ಡ ಮನುಷ್ಯರು ಕೇಳಿಕೊಂಡರೆ ಅಲ್ಲಿಗೊಂದು ಆಸ್ಪತ್ರೆ ಕೊಟ್ಟರೆ ಸಾಕು ಎಂಬ ಈ ನೀತಿ ಸರಿಯಲ್ಲ. ಪ್ರತಿಯೊಂದು ಹೋಬಳಿಯಲ್ಲೂ ಮತ್ತು ಮುಖ್ಯವಾದ ಸ್ಥಳಗಳಲ್ಲೂ ಒಂದು ಆಸ್ಪತ್ರೆಯನ್ನು ಕೊಡಬೇಕು. ಏನಾದರೂ ಜನರು ತಾನಾಗಿಯೇ ಮುಂದೆ ಬಂದು ಕಟ್ಟಡ ಮುಂತಾಗಿ ಸಹಾಯಮಾಡುತ್ತೇವೆಂದರೆ ಅಲ್ಲಿಗೆ ಕೊಡಿ. ಈಗ ಲಕ್ಷ್ಮೀಪುರ, ಅಡಗಲ್ಲು ಯಲ್ದೂರಿನಲ್ಲಿ ಹಾಗೆ ಜನರೇ ಮುಂದೆಬಂದು ಕೇಳುತ್ತಿದ್ದಾರೆ. ಆದ್ದರಿಂದ ಸರ್ಕಾರದವರು ಈ ಬಗ್ಗೆ ಒಂದು ಸರಿಯಾದ ಯೋಜನೆಯನ್ನು ತಯಾರಿಸಿ ಎಲ್ಲಕಡೆಗೂ ಆಸ್ಪತ್ರೆಗಳನ್ನು ಏರ್ಪಡಿಸಬೇಕು. ಪರಿಪೂರ್ಣವಾದ ಆಸ್ಪತ್ರೆಯನ್ನು

(ಶ್ರೀ ಬಿ. ಎಲ್. ನಾರಾಯಣಸ್ವಾಮಿ)

ಮಾಡುವುದಕ್ಕೆ ಸಾಧ್ಯವಿಲ್ಲದಿದ್ದರೂ ಒಬ್ಬ Stockman ಆದರೂ ಕೊಡಬೇಕೆಂದು ಹೇಳುತ್ತೇನೆ.

ತಳಿಗಳ ಅಭಿವೃದ್ಧಿವಿಚಾರ. ಸಂಸ್ಥಾನದಲ್ಲಿ ತಳಿಗಳ ಅಭಿವೃದ್ಧಿಗೆಂದು Artificial Insemination Centreಗಳನ್ನು ಏರ್ಪಡಿಸಿದ್ದಾರೆ. ಇದು ಎಷ್ಟರಮಟ್ಟಿಗೆ ಪ್ರಯೋಜನಕಾರಿ ಎಷ್ಟರಮಟ್ಟಿಗೆ ಅಲ್ಲ ಎಂಬುದು ಇನ್ನೂ ಪರಿಶೋಧಿಸಬೇಕಾದ ವಿಚಾರವಾಗಿದೆ. ಇದು ಕೇವಲ ಸಮೀಪದಲ್ಲಿರತಕ್ಕ ಹಸುಗಳಿಗೆ ಉಪಯೋಗವಾಗಿದೆಯೇ ಹೊರತು ದೂರದಲ್ಲಿರತಕ್ಕ ಹಸುಗಳಿಗೆ ಉಪಯೋಗವಾಗುತ್ತಿಲ್ಲ. ಆದ್ದರಿಂದ ದೂರ ಪ್ರದೇಶದಲ್ಲಿರುವ ಹಸುಗಳ ದೃಷ್ಟಿಯಿಂದ ಅಲ್ಲಲ್ಲೇ ಒಳ್ಳೆಯ ಜಾತಿಯ ಗೂಳಿಗಳನ್ನು ಒದಗಿಸುವ ಏರ್ಪಾಡುಮಾಡಬೇಕು. ಒಂದು ತಾಲ್ಲೂಕಿಗೆ ಒಂದೆರಡು ಹಳ್ಳಿಕಾಡು ಗೂಳಿಗಳನ್ನು ಒದಗಿಸಿದರೆ ಸಾಕಾಗುತ್ತದೆಯೇ? ಇನ್ನೂ ಹೆಚ್ಚಿನ ಸಂಖ್ಯೆಯಲ್ಲಿ ಗೂಳಿಗಳನ್ನು ಒದಗಿಸಬೇಕೆಂದು ಹೇಳುತ್ತೇನೆ.

ಇನ್ನು ಪೌಲ್ಟ್ರಿ ಫಾರಮುಗಳ ವಿಷಯ. ಅನೇಕ ವೇಳೆ ನಾನು ಮೊಟ್ಟೆ ಮತ್ತು ಮರಿಗಳನ್ನು ಕೊಟ್ಟಿರುವುದನ್ನು ನೋಡಿದ್ದೇನೆ. ಆದರೆ ಸ್ವಲ್ಪ ದಿವಸವಾದ ಮೇಲೆ ನೋಡಿದರೆ ಅಲ್ಲಿ ಮೊಟ್ಟೆಯೂ ಇರುವುದಿಲ್ಲ ಮರಿಗಳೂ ಇರುವುದಿಲ್ಲ. ಏನಾಗುತ್ತದೋ ಗೊತ್ತಾಗುವುದಿಲ್ಲ. ಈಗ ಎಲ್ಲಿ ನೋಡಿದರೂ ಒಂದು ಫಾರಂ ಕೂಡ ಕಾಣುವುದಿಲ್ಲ. ಹೀಗಾಗಿ ಸರ್ಕಾರದವರ ಸ್ಕೀಮು ಒಂದು ಪರಿಹಾಸ್ಯಕ್ಕೆ ಕಾರಣವಾಗಿದೆಯೇ ಹೊರತು ವಾಸ್ತವವಾಗಿ ನಿಮ್ಮ ಯೋಜನೆ ಫಲಕಾರಿಯಾಗಿದ್ದೇ ಕಾಣವುದಿಲ್ಲ. ಆದ್ದರಿಂದ ತಾವು ಏನಾದರೂ ಒಂದು ಸ್ಕೀಮ್ ಹಾಕಿ ಜನರ ಕಣ್ಣಿಗೆ ಬೀಳುವಂಥ ಏನಾದರೊಂದನ್ನು ಮಾಡಿ. ಸುಮ್ಮನೆ ಈ ನಕಲಿ ಆಟದಿಂದ ಏನು ಪ್ರಯೋಜನ? ವ್ಯರ್ಥವಾಗಿ ಬೇರೆಯವರಿಗೆ ಕೊಡುವ ಸಬ್ಸಿಡಿ ನಿಲ್ಲಿಸಿಬಿಡಿ. ಈ ರೀತಿಮಾಡಿದರೆ ಇಷ್ಟು ಉತ್ಪತ್ತಿ ಬರುತ್ತದೆ ಎಂಬ ಭರವಸೆ ಉಂಟುಮಾಡುವಂತೆಮಾಡಿ. ಈ ವಿಷಯದಲ್ಲಿ ಹೆಚ್ಚಿನ ಪ್ರಚಾರಬೇಕಾಗಿದೆಯೆಂದು ನಾನು ಹೇಳುತ್ತೇನೆ.

N.E.S. ವಿಷಯ. ವ್ಯವಸಾಯಕ್ಕೂ, N.E.S.ಗೂ ಯಾವಾಗಲೂ ಸಂಬಂಧವಿದ್ದೇ ಇದೆ. ಮಾನ್ಯ ಉಪಸಚಿವರೂ ಈ ವಿಷಯದಲ್ಲಿ ಇದುವರೆಗೂ ನಡೆದಿರುವ ಕೆಲಸ ಅಷ್ಟು ಸಮರ್ಪಕವಾಗಿಲ್ಲವೆಂಬುದನ್ನು ತಿಳಿದುಕೊಂಡಿದ್ದಾರೆ. ಏಕೆಂದರೆ, ಅವರು ಹೆಚ್ಚಾಗಿ ಪ್ರವಾಸ ಮಾಡಿ ನೋಡಿದ್ದಾರೆ; ಅಲ್ಲದೆ, ಹೋದಕಡೆಯಲ್ಲೆಲ್ಲಾ ಜನರನ್ನೂ ಕರೆಸಿಕೊಂಡು ವಿಷಯಗಳನ್ನು ಪ್ರಸ್ತಾಪ ಮಾಡಬೇಕು, ಇದಕ್ಕೆ ಸಂಬಂಧಪಟ್ಟ ವಿಷಯಗಳನ್ನು ಆದಷ್ಟು ಪ್ರಚಾರಮಾಡಬೇಕೆಂಬ ಮನೋಪ್ರವೃತ್ತಿಯುಳ್ಳವರು ಅವರು. ಅವರು ಹಾಗೂ ಉತ್ಸಾಹದಿಂದ, ಈ ಕಾರ್ಯವನ್ನು ನಡೆಸಬೇಕೆಂಬ ಆಕಾಂಕ್ಷೆಯುಳ್ಳವರಾಗಿದ್ದಾರೆ. ಅವರೂ ಕೂಡ ಇನ್ನೂ ಈ ಯೋಜನೆಯಲ್ಲಿ ಸಾಕಷ್ಟು ಕೆಲಸ ನಡೆದಿಲ್ಲವೆಂಬುದನ್ನು ಒಪ್ಪಿಕೊಳ್ಳುತ್ತಾರೆಂದು ನಂಬಿದ್ದೇನೆ.

ಶ್ರೀ ಎಚ್. ಸಿ. ಲಿಂಗಾರೆಡ್ಡಿ (ಯೋಜನೆ ಮತ್ತು ಅಭಿವೃದ್ಧಿ ಶಾಖೆಗಳ ಉಪಮಂತ್ರಿಗಳು).—ಇದಕ್ಕಾಗಿ ಒದಗಿದ್ದ 668 ಲಕ್ಷದ ಪೈಕಿ 517 ಲಕ್ಷ ರೂಪಾಯಿಗಳು ಈಗಾಗಲೇ ಖರ್ಚಾಗಿವೆ. Seventy-five per cent of the target figure has already been spent.

Sri G. VENKATAI GOWDA (Palaiyam).—What is the corresponding return?

ಶ್ರೀ ಎಚ್. ಸಿ. ಲಿಂಗಾರೆಡ್ಡಿ.—ಆಮೇಲೆ ಹೇಳುತ್ತೇನೆ.

ಶ್ರೀ ಬಿ. ಎಲ್. ನಾರಾಯಣಸ್ವಾಮಿ.—ದುಡ್ಡು ಖರ್ಚಾಗಿದೆ. ಅದನ್ನು ನಾನು ಪ್ರಶ್ನೆ ಮಾಡಲಿಲ್ಲ. ಆದರೆ, ಈ ಹಣ ಆಗಬೇಕಾದ ರೀತಿಯಲ್ಲಿ ಖರ್ಚಾಗಿಲ್ಲ. ನಮ್ಮ ಉದ್ದೇಶ ಸಾಧನೆಯಾಗಿಲ್ಲವೆಂದು ಹೇಳಬಯಸುತ್ತೇನೆ. ಸ್ವಾತಂತ್ರ್ಯಕ್ಕೆ ಮೊದಲು ನಾವು ಏನು ಬಯಸಿದ್ದೆವು, ಇಂದು ಏನಾಗಿದೆ? ಮುಂದೆ ಏನು ಆಗಬೇಕಾಗಿದೆ ಎಂಬುದನ್ನು ನೋಡಬೇಕು. ಮೊದಲು ಕೇಳುವವರೇ ಇರಲಿಲ್ಲ. ಈಗ ಕೇಳುವವರು ಆದ ಹಾಗಾಯಿತು. ರೈತನು ಸ್ವಪರಿಪೂರ್ಣತೆಯನ್ನು ಹೊಂದಬೇಕು, ಅವನಲ್ಲಿ ಯಾವುದಕ್ಕೂ ಕೊರತೆಯಿರಬಾರದು ಎಂದು ಬಯಸಿದ್ದೆವು. ಸ್ವಪರಿಪೂರ್ಣತೆ ಎನ್ನುವುದರ ಅರ್ಥ, ವಿದ್ಯೆ, ಬುದ್ಧಿ, ಆರ್ಥಿಕ ಚೈತನ್ಯ, ವ್ಯವಸಾಯಾಭಿವೃದ್ಧಿ ಇವೆಲ್ಲಾ ವಿಷಯಗಳಲ್ಲೂ ರೈತನನ್ನು ಕೊರತೆಯಿಲ್ಲದಂತೆ ಮಾಡಬೇಕೆಂಬುದು. ಈ ದೃಷ್ಟಿಯಿಂದಲೇ ಈಗ N.E.S. ಯೋಜನೆ ಬಂದಿರುವುದಾಗಿದೆ. ಈ ಎಲ್ಲಾ ಕಾರ್ಯಗಳನ್ನೂ ಒಂದುಗೂಡಿಸಿ ಮಾಡುವುದರಿಂದ ಹಳ್ಳಿಗಾಡಿಗೆ ಅನುಕೂಲವಾಗುತ್ತದೆಂಬುದು ಸರ್ಕಾರದವರ ಉದ್ದೇಶವಾಗಿದೆ. ಆದರೆ, ಈ ಯೋಜನೆ ನಾವು ನಿರೀಕ್ಷಿಸಿದಷ್ಟುಮಟ್ಟಿಗೆ ಮುಂದುವರಿಯುತ್ತಿಲ್ಲ. ನಾನು ಒಂದು ಡೆವಲಪ್‌ಮೆಂಟ್ ಕಮಿಟಿಯ ಮೆಂಬರಾಗಿದ್ದೆ. ಅನೇಕ ಸಲಹೆಗಳನ್ನು ಕೊಟ್ಟಿದ್ದೇನೆ, ಹಾಗೂ ಅಧಿಕಾರಿಗಳ ಗಮನವನ್ನು ಪದೇ ಪದೇ ಅದರಕಡೆ ಸೆಳೆದಿದ್ದೇನೆ. ಆದರೂ ಅವು ಕಾರ್ಯರೂಪಕ್ಕೆ ಬಂದಿಲ್ಲ. ಅದರಲ್ಲಿ ಏಳು ಜನರು ಮೆಂಬರುಗಳಿದ್ದಾರೆ—ಸಪ್ತ ಗ್ರಹಗಳು. ಅವರು ಮುಖ್ಯವಾಗಿ ಮಾಡಬೇಕಾದ ಕೆಲಸವೇನು? ಪ್ರತಿಯೊಂದು ಹಳ್ಳಿಯಲ್ಲೂ ಮೊಟ್ಟಮೊದಲನೆಯದಾಗಿ ಜನಸಂಖ್ಯೆಯೆಷ್ಟು, ಅವರಲ್ಲಿ ಎಷ್ಟು ಜನ ಅಕ್ಷರಸ್ಥರಿದ್ದಾರೆ, ಎಷ್ಟು ಜನ ಅನಕ್ಷರಸ್ಥರು, ಸಾಕಾದಷ್ಟು ಶಾಲೆಗಳಿವೆಯೇ, ಶಾಲೆಗಳಿಲ್ಲದಿದ್ದರೆ ಶಾಲೆಗಳನ್ನು ತೆರೆಯುವುದಕ್ಕೆ ಏರ್ಪಾಡುಮಾಡೋಣ, ಸಾಕಷ್ಟು ಹುಡುಗರಿಲ್ಲದಿದ್ದರೆ ಪಕ್ಕದ ಗ್ರಾಮಕ್ಕೆ ಹೋಗುವಂತೆ ಮಾಡೋಣ, ವಯಸ್ಕರ ಶಾಲೆಗಳಿವೆಯೇ ನೋಡಿ ವಯಸ್ಕರಿಗೆ ಶಿಕ್ಷಣಕ್ಕೆ ಏರ್ಪಾಡು ಮಾಡೋಣ, ಇನ್ನೂ ಭೂಮಿಯ ವಿಚಾರ ಯೋಚನೆಮಾಡಿದರೆ, ಎಷ್ಟು ಜನರಿಗೆ ಸಾಕಷ್ಟು ಭೂಮಿಯಿದೆ, ಎಷ್ಟು ಜನರಿಗೆ ಇಲ್ಲ ಎಂದು ನೋಡಿ ಅವರಿಗೆ ಭೂಮಿ ಒದಗಿಸೋಣ, ಯಾರಿಗಾದರೂ ಋಣಬಾಧೆಯಿದ್ದರೆ ಅವರಿಗೆ ಲ್ಯಾಂಡ್ ಮಾರ್ಟ್‌ಗೇಜ್ ಬ್ಯಾಂಕಿನಿಂದ ಸಾಲ ಕೊಡಿಸೋಣ. ಈರೀತಿ ಪ್ರತಿಯೊಂದು ಭಾಗದಲ್ಲೂ ಕೆಲಸಮಾಡಿ ಆ ಗ್ರಾಮವನ್ನು ಸ್ವಪರಿಪೂರ್ಣ ಮಾಡುವುದೆಂಬುದು ಈ ಯೋಜನೆಯ ಉದ್ದೇಶವೆಂದು ನಾವು ಭಾವಿಸಿದ್ದೇವೆ. ಅಂಥದರಲ್ಲಿ ಈಗ ಆಗುತ್ತಿರುವುದೇನು? ಒಂದು ಚರಂಡಿಮಾಡಿಸುವುದು, ಅಲ್ಲಿಂದಿಲ್ಲಿಗೆ ಒಂದು ರಸ್ತೆಮಾಡಿಸುವುದು, ಇಷ್ಟೆ.

ಇಷ್ಟಕ್ಕೇ ನಾವು ತೃಪ್ತಿ ಪಡಬೇಕಾಗಿಲ್ಲ. ಈ ಏಳು ವರ್ಷಗಳಲ್ಲಿ ವರ್ಷೇ ವರ್ಷೇ ಕೆಲವು ಗ್ರಾಮಗಳನ್ನು ಆರೀತಿ ಮಾಡುತ್ತಾ ಬಂದಿದ್ದರೆ ಆ ದೊಡ್ಡ ಕೀರ್ತಿ ಇಲಾಖೆಗೆ ಹೋಗುತ್ತಾ ಇತ್ತು. ದಯವಿಟ್ಟು ಮಾಡತಕ್ಕ ಕೆಲಸವನ್ನು ಒಂದು ಹಳ್ಳಿಯಲ್ಲಿ ಪರಿಪೂರ್ಣ ಮಾಡಿದರೆ, ಮತ್ತೆ ಆ ಹಳ್ಳಿಗೆ ಹೋಗಬೇಕಾಗಿರುವುದಿಲ್ಲ. ಚೆನ್ನಾಗಿದ್ದೀರ ಎಂದು ಯೋಗಕ್ಷೇಮ

ವಿಚಾರಿಸುವ ದೃಷ್ಟಿಯಿಂದ ಹೋಗಬೇಕು, ಅಷ್ಟೆ. ಉಪಸಚಿವರು ಹೆಚ್ಚಿನ ಮುತುವರ್ಜಿಯಿಂದ ಸುತ್ತಬೇಕೆಂದು ಹೇಳುತ್ತೇನೆ. ಸುತ್ತಾಡುವುದಕ್ಕೆ ನನ್ನ ಆಕ್ಷೇಪಣೆಯಿಲ್ಲ. ಇನ್ನೂ ಹೆಚ್ಚಾಗಿ ಸುತ್ತಾಡಿ ಕೆಲಸ ಮಾಡಲಿ ಎಂದು ಹೇಳುತ್ತೇನೆ.

ಸಮತಾವಾದದ ಅಭಿವೃದ್ಧಿಗೆ ಮೇಲಾಗಿ ಸಹಕಾರ ಬೇಕಾಗಿದೆ. ಸಹಕಾರ ಬೇಕಾದಾಗ ಕೊಂಚ ಅಸಹಕಾರ ಜಾಸ್ತಿಯಾಗುತ್ತಿದೆ. ಅನೇಕ ಕಡೆ ಸಹಕಾರ ರಂಗದಲ್ಲಿ ರಾಜಕೀಯ ಪ್ರಭಾವ ಜಾಸ್ತಿಯಾಗಿ ಕಾಣುತ್ತಿದೆ. ಅದರಲ್ಲಿಯೂ ಅಭಿವೃದ್ಧಿ ಕಾರ್ಯಗಳಲ್ಲಿ ತೊಂದರೆಯುಂಟು ಮಾಡಲು, ಇದು ಎಳ್ಳಷ್ಟೂ ಇರಕೂಡದು. ಪ್ರಜೆಗಳ ಸೇವೆ ಮಾಡುವಾಗ ಒಳಗುಂಪುಗಳು, ಗುಂಪುಗುಂಪುಗಳೂ, ಪಕ್ಷಪ್ರತಿಪಕ್ಷಗಳೂ, ಸ್ವಪಕ್ಷಗಳೂ ಇರಬಾರದು. ಮಾನ್ಯ ಮಂತ್ರಿಗಳು ನೀತಿಯುತವಾಗಿ ಇದ್ದರೂ, ಅವರನ್ನು ಸುಮ್ಮನೆ ಇರಗೊಡುವುದಿಲ್ಲ; ಏನಾದರೂ ತಂದೊಡ್ಡುತ್ತಾರೆ. ಇವು ಇಲ್ಲದೆ ಇದ್ದರೆ ಒಳ್ಳೆಯದೆಂದು ಹೇಳುತ್ತೇನೆ. ಶ್ರೀ ಮರಿಯಪ್ಪನವರು ವಿವಿಧೋದ್ದೇಶ ಸಹಕಾರ ಸಂಘಗಳನ್ನು ಮಾಡಿದ್ದಾರೆ. ಅವುಗಳಲ್ಲಿ ಅನೇಕ ಸಂಘಗಳು ಈಗಲೂ ಕೆಲಸ ಮಾಡುತ್ತಿವೆ. ಬಹು ಸಂಖ್ಯೆಯ ಸಂಘಗಳು ದಕ್ಷತೆ ಇಲ್ಲದೆ ಕೆಟ್ಟುಹೋಗಿವೆ. ಈಗ ಅನೇಕ ವಿಧವಾದ ಸಂಘಗಳನ್ನು ಸ್ಥಾಪನೆ ಮಾಡಿರುವುದರಿಂದ, ಅವುಗಳಿಗೆ ಸಾಕಷ್ಟು ಜನಗಳು ಕೂಡ ನಿಮಗೆ ಒದಗುವುದಿಲ್ಲ. ಆಫೀಸಿನ ಜವಾಬ್ದಾರಿಯನ್ನು ನಡೆಸತಕ್ಕಂಥವರೂ ಹಳ್ಳಿಯಲ್ಲಿ ಸಿಕ್ಕುವುದಿಲ್ಲ. ಪ್ರತಿಯೊಂದು ಹಳ್ಳಿಯಲ್ಲಿಯೂ ಸೊಸೈಟಿ ಇರಬೇಕೆಂದು ಹೇಳುವುದು ಸಾಧುವಾದುದು. ಅದಕ್ಕೆ ಇನ್ನೂ ಕೊಂಚ ಕಾಲ ಬೇಕು. ತತ್ಕಾಲಕ್ಕೆ ಸ್ಮಾಲ್ ಸ್ಕೇಲ್ ಕೋ-ಆಪರೇಟಿವ್ ಸೊಸೈಟಿಗಳು ಎಂದು ಏನು ಮಾಡಿದ್ದೀರೋ ಅದನ್ನೂ ಹೆಚ್ಚಿನ ಸಂಖ್ಯೆಯಲ್ಲಿ ಮಾಡಬೇಕು. ಎಲ್ಲಾ ಕೆಲಸಗಳನ್ನೂ ವಿವಿಧೋದ್ದೇಶದ ಒಂದು ದೃಷ್ಟಿಯಿಂದ ಮಾಡಿ ಜನಗಳಿಗೆ ಹೆಚ್ಚಿನ ಉಪಯೋಗ ಮಾಡಿಕೊಡಬೇಕೆಂದು ಪ್ರಾರ್ಥನೆ ಮಾಡುತ್ತೇನೆ.

ಸಹಕಾರ ತತ್ವದ ವಿಚಾರದಲ್ಲಿ ದೇಶಾದ್ಯಂತ ಹೆಚ್ಚಿನ ಪ್ರಚಾರ ಅವಶ್ಯಕವಾಗಿದೆ. ಸಹಕಾರ ಪ್ರಚಾರ ಎಷ್ಟು ಹೆಚ್ಚಿಗೆ ಆಗುತ್ತದೋ, ಅಷ್ಟೂ ಕೂಡ ಸಮತಾವಾದ ಸಮಾಜದ ಅಭಿವೃದ್ಧಿಗೆ ಅನುಕೂಲವಾಗುತ್ತದೆ. ಕೋ-ಆಪರೇಟೀವ್ ಫಾರ್ಮಿಂಗಿಗೆ ಕೂಡ ಅದು ಒಳ್ಳೆಯದಾಗುತ್ತದೆ. ಮೊದಲು ಮಾನಸಿಕವಾಗಿ ಒಳ್ಳೆಯ ವಾತಾವರಣವನ್ನು ತಾವು ಕಲ್ಪಿಸಬೇಕೆಂದು ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ.

ಶ್ರೀ ಜಿ. ಎಂ. ಚಿನ್ನಸ್ವಾಮಿ (ಬಿಳಿಗೆರೆ).—ಮಾನ್ಯ ಅಧ್ಯಕ್ಷರೆ, ಈ ದಿವಸ ನಮ್ಮ ಮುಂದಿರುವ ಡಿಮ್ಯಾಂಡುಗಳನ್ನು ವಿರೋಧಿಸುತ್ತ ಕೆಲವು ಅಭಿಪ್ರಾಯಗಳನ್ನು ತಮ್ಮ ಮುಂದಿಡಬೇಕೆಂದು ನಿಂತಿದ್ದೇನೆ.

ಮುಖ್ಯವಾಗಿ ವ್ಯವಸಾಯಕ್ಕೆ ಬೇಕಾದುದೇನು ? ಕಬ್ಬಿಣ, ಮರ. ಈವಾಗ ಬೇಸಿಗೆ ಕಾಲದಲ್ಲಿ ಗಾಡಿ ಪಟ್ಟೆ ಇಲ್ಲದೆ ಹೋದರೆ, ರೈತರಿಗೆ ಬಹಳ ತೊಂದರೆ. ಈ ಟೈಮಿನಲ್ಲಿ ಅವರಿಗೆ ಗಾಡಿ ಪಟ್ಟೆ ಬೇಕು. ಹೊಸ ಗಾಡಿ ಮಾಡಿಸುವವರಿಗೆ, ಹಳೆ ಗಾಡಿ ರಿಪೇರಿ ಮಾಡಿಸಿಕೊಳ್ಳುವವರಿಗೆ ಇವುಗಳು ಬೇಕು. ಮೂರು ತಿಂಗಳಿಂದಲೂ ಯಾವ ಸೊಸೈಟಿಯಲ್ಲಿಯೂ ಗಾಡಿ ಪಟ್ಟೆಗಳಿಲ್ಲ. ರೈತರು ಗೊಬ್ಬರ ಹೊಡಬೇಕು, ಅವರು ಮಾರ್ಚ್ ಕಳೆದುಹೋದಮೇಲೆ ಹೇಗೆ ಗೊಬ್ಬರ ಹೊಡುವುದಕ್ಕೆ ಸಾಧ್ಯ ? ಗೊಬ್ಬರ ಹೊಡದೆ ಹೇಗೆ ವ್ಯವಸಾಯ ಮಾಡುವುದು ? ಕಬ್ಬಿಣಕ್ಕೆ ಇಷ್ಟು ಅಭಾವ ಮಾಡಿದ್ದೀರಿ. ಕಾರುಗಳ ಟೈರುಗಳು ಪಂಕ್ಚರ್ ಆದರೆ, ಹೊಸ ಟೈರ್ ತಂದುಕೊಂಡು ಹಾಕಿಸಿಕೊಳ್ಳುತ್ತೀರಿ. ರೈತರಿಗೆ ಮುಖ್ಯವಾಗಿ ಗಾಡಿ ಪಟ್ಟೆಗೆ ಬೇಕಾದಂಥ ಕಬ್ಬಿಣದ ಸಾಮಾನನ್ನು ಒದಗಿಸಿ ಕೊಡದೆ ಹೋದರೆ ಅವನು ವ್ಯವಸಾಯ ಮಾಡುವುದು ಹೇಗೆ ಸಾಧ್ಯ ?

ಅಲ್ಲದೆ ವ್ಯವಸಾಯ ಇಲಾಖೆಯಲ್ಲಿ ಇನ್‌ಸ್ಪೆಕ್ಟರುಗಳನ್ನು ಇಟ್ಟಿದ್ದೀರಿ. ಅವರು ಹಳ್ಳಿಗಳಿಗೆ ಹೋಗಿ ರೈತರಿಗೆ ಏನು ತೊಂದರೆಗಳಿವೆ ಎಂದು ಕೇಳಿ, ಏನು ಪ್ರಚಾರ ಮಾಡಿದ್ದಾರೆ ? ಹೋದ ವರ್ಷ ಇದೇ ಅಸೆಂಬ್ಲಿಯಲ್ಲಿ ಈ ವಿಚಾರದಲ್ಲಿ ಸಲಹೆ ಕೊಟ್ಟರೂ, ಯಾವ ಕಾರ್ಯಕ್ರಮವನ್ನೂ ತೆಗೆದುಕೊಂಡಿಲ್ಲ. ಈ ಇನ್‌ಸ್ಪೆಕ್ಟರುಗಳು ಹಳ್ಳಿಗಳಿಗೆ ಹೋಗಿ ಯಾವ ಯಾವ ಏರಿಯಾದಲ್ಲಿ ಯಾವ ಯಾವ ಕ್ರಾಪುಗಳನ್ನು ಹೇಗೆ ಬೆಳೆಯಬೇಕು ಎನ್ನುವ ವಿಷಯದಲ್ಲಿ ಅಡ್‌ವೈಸ್ ಮಾಡಬೇಕು.

ಬೀರವಾಳದ ಹತ್ತಿರ ಸರ್ಕಾರದ ಭೂಮಿಯಲ್ಲಿ ಒಂಬತ್ತು ಸಾವಿರ ರೂಪಾಯಿ ಖರ್ಚು ಮಾಡಿ 110 ಪಲ್ಲವನ್ನು ಬೆಳೆದಿದ್ದಾರೆ. 110 ಪಲ್ಲಕ್ಕೆ ಎಷ್ಟು ರೂಪಾಯಿ ಆಗುತ್ತದೆ ? ಸರ್ಕಾರಕ್ಕೆ ಎಲ್ಲಾ ಫೆಸಿಲಿಟಿಗಳು ಇದ್ದೂ .110 ಪಲ್ಲ ಬೆಳೆದರೆ, ರೈತ ಎಷ್ಟು ಬೆಳೆಯಬಹುದು ಎನ್ನುವುದು ಮುಂದೆ ಲ್ಯಾಂಡ್ ರಿಫಾರ್ಮ್ಸ್ ಬಿಲ್ಲು ಬಂದಾಗ ಬೇಕಾಗುತ್ತದೆ. ನೀವೇ ಮೇಲ್ಪಂಗ್ತಿ ಹಾಕಿಕೊಟ್ಟಿದ್ದೀರಿ. ಮಂತ್ರಿಗಳು ತಮ್ಮ ಉತ್ತರದಲ್ಲಿ ಈ ಪ್ರಶ್ನೆಗೆ ಉತ್ತರ ಕೊಡಬೇಕು. ಇಷ್ಟು ಕಡಮೆ ಬೆಳೆಯುವುದಕ್ಕೆ ಭೂಮಿ ಚೆನ್ನಾಗಿ ಇರಲಿಲ್ಲವೇ ಅಥವಾ ವ್ಯವಸಾಯ ಸರಿಯಾಗಿ ಇರಲಿಲ್ಲವೇ, ಏಕೆ ಹೀಗಾಯಿತು ಎನ್ನುವುದನ್ನು ತಿಳಿಸಬೇಕು. ಒಂಭತ್ತು ಸಾವಿರ ಖರ್ಚು ಮಾಡಬೇಕಾಗಿದ್ದರೆ ಎಷ್ಟು ಎಕರೆ ಜಮೀನಿನಲ್ಲಿ ವ್ಯವಸಾಯ ಮಾಡಿದ್ದಾರೆ ? ಇಷ್ಟು ಕಡಮೆ ಈಲ್ಡ್ ಬರಬೇಕಾದರೆ ಕಾರಣವೇನು ? ಭತ್ತಕ್ಕೆ ರೋಗ ಬಂದಿತ್ತೆ ? ನಂಜನಗೂಡು ತಾಲ್ಲೂಕಿನಲ್ಲಿ ಎಲ್ಲಾ ಕಡೆಯಲ್ಲಿಯೂ ಭತ್ತ ಬಹಳ ಕಡಮೆಯಾಗಿದೆ. ಒಂದು ತರಹ ವಾರು ಬಂದಿದೆ. ಪೈರು ಹಸುರಾಗಿ ಹೊಡೆ ಬರುವ ಕಾಲದಲ್ಲಿ ಬಿಳುಪು ಬಂದಿದೆ. ಕ್ರಾಪ್ ಕುಯಿಲಿಗೆ ಬಂದು ರೈತರ ಕಣಜಕ್ಕೆ ಭತ್ತ ಬರುತ್ತದೆ ಎಂದು ನಿರೀಕ್ಷಿಸುತ್ತಿದ್ದಾಗ ಹೀಗಾಗಿದೆ. ಇಂಥ ಇನ್‌ಸ್ಪೆಕ್ಟರನ್ನು ಇಟ್ಟುಕೊಂಡರೆ ಏನು ಪ್ರಯೋಜನ ? ಸರ್ಕಾರಕ್ಕೆ ದುಡ್ಡು ಬರುತ್ತಿರುವುದು ರೈತರಿಂದ. ಅಂಥ ರೈತರ ಕಡೆಗೆ ಸರ್ಕಾರ ಗಮನ ಕೊಡುತ್ತಿಲ್ಲ. ಸರ್ಕಾರ ಬ್ರೇಕ್ ಇಲ್ಲದ ಮೋಟಾರ್ ಆಗಿದೆ. ಮೇಲೆ ಕುಳಿತಿದ್ದೇವೆ. ಎಲ್ಲಿ ಡ್ಯಾಷ್ ಹೊಡಿಸಿಬಿಡುತ್ತೀರೋ ಎಂದು ಭಯವಾಗಿದೆ. ಬ್ರೇಕ್ ರಿಪೇರಿ ಮಾಡಿಸಿ.

ಶ್ರೀ ಜಿ. ಎಚ್. ಪುಟ್ಟಣ್ಣ (ತುಮಕೂರು).—ಬೆಲ್ಲೂ ಇಲ್ಲ.

ಶ್ರೀ ಜಿ. ಎಂ. ಚಿನ್ನಸ್ವಾಮಿ.—ಬೆಲ್ಲು ಇಲ್ಲದಿದ್ದರೆ, ಪುಟ್ಟಣ್ಣನವರು ಕೂಗಿಕೊಳ್ಳುತ್ತಾರೆ, ಬ್ರೇಕ್ ಇಲ್ಲದೇ ಹೋದ ಸರ್ಕಾರವಾಗಿದೆ. ನಾವು ಮೇಲೆ ಕುಳಿತಿದ್ದೇವೆ. ನಿಮ್ಮ ಯೋಗಕ್ಷೇಮಕ್ಕೆ ಹೆದರದಿದ್ದರೂ, ನಮ್ಮ ಯೋಗಕ್ಷೇಮ ನೋಡಿ ರಿಪೇರಿ ಮಾಡಿಸಿ.

ಹಾಸನದ ಇಂಪ್ಲಿಮೆಂಟ್ ಫ್ಯಾಕ್ಟರಿಯಲ್ಲಿ ಅಗ್ರಿಕಲ್ಚರ್ ಫಾರಂ ಮಾಡಿದ್ದಾರೆ. ಆರು ಸಾವಿರ ರೂಪಾಯಿ ಖರ್ಚು ಮಾಡಿ, ಏಳು ಪಲ್ಲ ಹುರುಳಿ ಬೆಳೆಸಿದಾರೆ. ಗವರ್ನಮೆಂಟಿನವರೇ ಇಷ್ಟು ಕಡಮೆ ಈಲ್ಡ್ ಬರುವ ಹಾಗೆ ಬೆಳೆದರೆ, ರೈತ ಏನು ಬೆಳೆಯಬೇಕು ?

ಶ್ರೀ ಕೆ. ಎಫ್. ಪಾಟೀಲ್.—ಸಂಖ್ಯೆ ಎಷ್ಟಿಯುದು ಎಂಬುದನ್ನು ಹೇಳಿದರೆ, ನೋಡುತ್ತೇನೆ.

ಶ್ರೀ ಜಿ. ಎಂ. ಚಿನ್ನಸ್ವಾಮಿ.—ಹಾಸನದ ಇಂಪ್ಲಿಮೆಂಟ್ ಫ್ಯಾಕ್ಟರಿಯಲ್ಲಿ.

ಶ್ರೀ ಕೆ. ಎಫ್. ಪಾಟೀಲ್.—ಒಂಭತ್ತು ಸಾವಿರ ಖರ್ಚು ಮಾಡಿದ್ದು !

ಶ್ರೀ ಜಿ. ಎಂ. ಚಿನ್ನಸ್ವಾಮಿ.—ಬೀರವಾಳದಲ್ಲಿ ಸರ್ಕಾರದವರು ವ್ಯವಸಾಯ ಮಾಡಿಸಿದ್ದಾರಂತೆ. ಅದಕ್ಕೆ 9,000 ರೂಪಾಯಿ ಖರ್ಚು ಮಾಡಿದ್ದಾರೆ. 110 ಪಲ್ಲ ಬೆಳೆದಿದ್ದಾರಂತೆ. ಏತಕ್ಕೆ ಒಂಭತ್ತು ಸಾವಿರ ರೂಪಾಯಿ ಖರ್ಚು ಮಾಡಿದ್ದಾರೆ ?

ಶ್ರೀ ಕೆ. ಎಫ್. ಪಾಟೀಲ್.—ಅದನ್ನು ಪರಿಶೀಲನೆ ಮಾಡುತ್ತೇವೆ.

ಶ್ರೀ ಜಿ. ಎಂ. ಚಿನ್ನಸ್ವಾಮಿ.—ಪರಿಶೀಲನೆ ಮಾಡಿ. ನಮ್ಮ ಪರ್ಮಿಷನ್ ಇಲ್ಲದೆ ನೀವೇ ತೆಗೆದುಕೊಳ್ಳಬಹುದಲ್ಲ. ನಿಮಗೆ ಪವರ್ ಇದೆ. ಒಂಭತ್ತು ಸಾವಿರ ರೂಪಾಯಿ ಖರ್ಚು ಮಾಡಿದ್ದೀರಿ. ಎಷ್ಟು ಎಕರೆ ಭೂಮಿ ವ್ಯವಸಾಯ ಮಾಡಿದ್ದೀರಿ ? ಒಂಭತ್ತು ಸಾವಿರ ಏಕೆ ಖರ್ಚು ಮಾಡಿದಿರಿ ! ಅಷ್ಟು ಕಡಮೆ ಈಲ್ಡ್ ಬಂದಿದೆ ಎಂದು ಯಾವುದೋ ಲೆಕ್ಕ ಬರೆದು, ಸುಮ್ಮನೆ ಖರ್ಚಾಯಿತು ಎಂದು ಹೇಳಿಬಿಟ್ಟರೆ, ವ್ಯವಸಾಯಗಾರರಾದ ನಾವು ಒಪ್ಪಿಕೊಳ್ಳುವುದಿಲ್ಲ. ಈ ಪ್ರಕಾರವಾದರೆ ಲ್ಯಾಂಡ್ ರಿಫಾರಂ ರೈತರಿಗೆ ಈಲ್ಡ್ ಕೊಡಬಲ್ಲದೇ ? ಎಕ್ವಿಪ್‌ಮೆಂಟ್ ಇದ್ದೂ ಏಳು ಪಲ್ಲ ಹುರುಳಿ ಬೆಳೆದಿದ್ದಾರಲ್ಲಾ ! ಅಷ್ಟು ಕಡಮೆ ಏಕೆ ಬೆಳೆಯುತ್ತಾರೆ ? ಅವರಿಗೆ ಟ್ರ್ಯಾಕ್ಟರುಗಳಿವೆ.

ಹೋದ ಸಾರಿ ಅಸೆಂಬ್ಲಿಯಲ್ಲಿ ತಾಲ್ಲೂಕುವಾರು ಒಂದೊಂದು ಟ್ರ್ಯಾಕ್ಟರು, ಬುಲ್‌ಡೋಜರು, ಲಾರಿ ಇರಬೇಕೆಂದು ಹೇಳಿದೆ. ಇವುಗಳಿದ್ದರೆ ರೈತರಿಗೆ ಬಹಳ ಉಪಯೋಗವಾಗುತ್ತದೆ. ಇವುಗಳಿಲ್ಲದೆ ರೈತರಿಗೆ ಬಹಳ ತೊಂದರೆಯಾಗುತ್ತಿದೆ. ಅನುಕೂಲಸ್ಥರಿಗೆ ಬೇಡ. ಪ್ರತಿಯೊಂದು ತಾಲ್ಲೂಕಿನಲ್ಲಿಯೂ ಒಂದೊಂದು ಲಾರಿ, ಟ್ರ್ಯಾಕ್ಟರ್, ಬುಲ್‌ಡೋಜರ್ ಬಡರೈತರಿಗೋಸ್ಕರ ಇರಬೇಕು.

ತಾಲ್ಲೂಕುವಾರ್ ಒಂದು ಪ್ರೈಜ್ ಇಡಿ ಎಂದು ಹೋದಸಾರಿಯೇ ಸರ್ಕಾರಕ್ಕೆ ತಿಳಿಸಿದ್ದೆ. ಯಾರು ಹೆಚ್ಚಾಗಿ ಬೆಳೆಯುತ್ತಾರೋ, ಈಲ್ಡ್ ತರುತ್ತಾರೋ ಅವರಿಗೆ ಪ್ರೈಸ್ ಕೊಡಿ. ಸೆಂಟ್ರಲ್ ಗವರ್ನಮೆಂಟಿನವರು ಅಂಥ ಪ್ರೈಜ್ ಇಡುತ್ತಾರೆ. ಮೈಸೂರು ಸರ್ಕಾರದವರೂ ಇಟ್ಟರೆ ಏನಾಗುತ್ತದೆ? ಚೆನ್ನಾಗಿ ಬೆಳೆಯುವವರಿಗೆ ಉತ್ತೇಜನ ಕೊಡಿ ಎಂದು ಹೋದ ವರ್ಷ ಬಾಯಿ ಬಡಿದುಕೊಂಡದ್ದಾಯಿತು. ನಾನು ಹೇಳುವುದರಲ್ಲಿ ಸತ್ಯಾಂಶವೆಷ್ಟಿದೆ, ಪ್ರೈಜ್ ಇಡುವುದು ಉತ್ತಮವಲ್ಲವೇ ಎಂಬುದನ್ನು ಯೋಚನೆ ಮಾಡಿ.

ನಂಜನಗೂಡಿನಲ್ಲಿ ರೆಗ್ಯುಲೇಟೆಡ್ ಮಾರ್ಕೆಟ್ ಸ್ಥಾಪಿಸುವುದು ಎರಡು ವರ್ಷಗಳಿಂದ ಮುಂದುವರಿಯುತ್ತಿದೆ. ಈಗ 25-30 ಮೈಲಿ ದೂರವಿರುವ ಮೈಸೂರಿಗೆ ರೈತರು ಬರಬೇಕಾಗಿದೆ. ಅಲ್ಲಿಗೆ ಬಂದರೆ ದಳ್ಳಾಳಿಗಳ ಕಾಟ. ಸಾಲದ್ದಕ್ಕೆ ಸರ್ಕಾರದ ಕಾಟ. ಇವೆರಡನ್ನೂ ಸಹಿಸಲು ಬಹಳ ಕಷ್ಟವಾಗಿದೆ, ಏಕೆ ಎರಡು ವರ್ಷದಿಂದ ಸತಾಯಿಸುತ್ತಿದ್ದಾರೋ ತಿಳಿಯದು. ಸರ್ಕಾರದಲ್ಲಿ ಹಣವಿಲ್ಲವೋ ಅಥವಾ ಅದನ್ನು ತೆರೆಯಬಾರದೆಂಬ ಉದ್ದೇಶವಿದೆಯೋ ಒಂದೂ ಅರ್ಥವಾಗುವುದಿಲ್ಲ.

ಅರಣ್ಯ ನಮ್ಮ ತಾಲ್ಲೂಕಿನಲ್ಲಿಲ್ಲ. ಇರುವ ಕಡೆ ನೋಡಿ ಅನುಭವ ಪಡೆದಿರುವುದನ್ನು ಹೇಳುತ್ತೇನೆ. ಕದ್ದು ಬೇಕಾದಷ್ಟು ಮರ ಸಾಗಿಸುತ್ತಿದ್ದಾರೆ. ಅರಣ್ಯ ಇಲಾಖಾ ಆಫೀಸರು ಸುಮ್ಮನಿರುತ್ತಾರೆ, ಅವರ ಇನ್‌ಫ್ಲೂಯೆನ್ಸ್‌ನಿಂದ ಮರ ಸಾಗಿ ಹೋಗುತ್ತಿದೆಯೆಂದಲ್ಲ. ಜವಾನರಿಗೆ ಬಂದೂಕ ಕೊಟ್ಟಿದ್ದಾರೆ. ರಾತ್ರಿ ವೇಳೆ ಫಾರೆಸ್ಟ್ ಲಾರಿ ತಂದು ಕಾಯುತ್ತಾರೆ. ಒಂದು ಸಲ ಮಾದೇಶ್ವರ ಬೆಟ್ಟಕ್ಕೆ ವರ್ತಕರು ಮೈಸೂರಿನಿಂದ ಹೋಗುತ್ತಿದ್ದರು. ಆಗ ಮೂಗೂರು ಬಳಿ ಅವರಿಗೆ ಅಡ್ಡವಾಗಿ ಏಕ್‌ದಂ ಲಾರಿ ತಂದು ನಿಲ್ಲಿಸಿದರು. ಎಲ್ಲಾ ಹೆಂಗಸರೇ ಇದ್ದುದರಿಂದ ಕೂಗಿಕೊಂಡರು. ಅಲ್ಲಿಂದ ಎರಡು ಮೂರು ಮೈಲಿಯೊಳಗೆ ಯಾವ ಊರೂ ಇಲ್ಲ. ಶ್ರೀ ಚನ್ನಬಸಪ್ಪನವರು ನಮ್ಮ ಸಬ್‌ಡಿವಿಜನ್ನಿಗೆ ಪ್ರವಾಸ ಬಂದಾಗ ಅವರಿಗೂ ಇದರ ಅನುಭವವಾಗಿರಬೇಕು. ಮೇಲೆ ದಿಣ್ಣೆಯಲ್ಲಿ ಲಾರಿ ನಿಲ್ಲಿಸಿಕೊಂಡಿರುತ್ತಾರೆ. ನನ್ನ ಕಾರಿಗೆ ಒಂದು ಸಲ ಲಾರಿ ಡ್ಯಾಷ್ ಆಗುವುದರಲ್ಲಿತ್ತು. ಕಾರಿನಲ್ಲಿದ್ದವರು ಆಕಸ್ಮಿಕದಿಂದ ಹೇಗೋ ಪಾರಾದೆವು. ಕಾರುಗಳಲ್ಲಿ ಅಲ್ಪ ಸ್ವಲ್ಪ ತೆಗೆದುಕೊಂಡು ಹೋಗುವವರನ್ನು ಹಿಡಿಯುತ್ತಿದ್ದಾರೆಯೇ ವಿನಾ ಲಾರಿಗಳಲ್ಲಿ ವಿಶೇಷವಾಗಿ ಸಾಗಿಸುವವರನ್ನು ಹಿಡಿಯುತ್ತಿಲ್ಲ. ನಾನು ರಸ್ತೆಗೆ ಅಡ್ಡವಾಗಿ ಲಾರಿ ನಿಲ್ಲಿಸಿ, ಇಲ್ಲದಿದ್ದರೆ ಕೈ ತೋರಿಸಿ, ಹಾಗೆ ಮಾಡದಿದ್ದರೆ ಅಪಾಯವಾಗುತ್ತದೆಂದು ಡ್ಯಾಷ್ ಆಗುವ ಸಂಭವವಿದ್ದಾಗ ಹೇಳಿದೆ. ದೂರು ಕೊಟ್ಟರೆ ಪೋಲೀಸಿನವರಿಂದ ಸಹಾಯವೇನೂ ದೊರೆಯುವುದಿಲ್ಲವೆಂದು ನಾನೇ ಲಾರಿಯವರಿಗೆ ಬುದ್ಧಿ ಹೇಳಿದೆ. ಸರ್ಕಾರಕ್ಕೆ ದೊಡ್ಡ ದೊಡ್ಡ ಲಾರಿಗಳಲ್ಲಿ ಮರ ಹೋಗುವುದನ್ನು ತಿಳಿಸಿದರೆ ಪ್ರಯೋಜನವಾಗುತ್ತಿಲ್ಲ. ಸದಸ್ಯರೂ ಕೂಡ ಈ ವಿಚಾರ ತಿಳಿಸಿರಬೇಕು. ಆದರೆ ಉಪಯೋಗವೇನು ! ಸುಮ್ಮನೆ ರಸ್ತೆ ಕಾಯುವುದಕ್ಕೆ ಬದಲಾಗಿ ಪೋಲೀಸ್ ಅಥವಾ ಬೇರೆ ಸಿಬ್ಬಂದಿ ಇಟ್ಟು ಹಿಡಿಯಬೇಕು. ಫಾರೆಸ್ಟ್ ಆಫೀಸರೇ ಅವಕಾಶ ಕೊಡುವಾಗ ಸಣ್ಣ ಅಧಿಕಾರಿಗಳನ್ನು ಹಿಡಿಯುವುದು ಸರಿಯಲ್ಲ.

ವ್ಯವಸಾಯದ ಬಗ್ಗೆ ಒಂದು ತಾಲ್ಲೂಕಿಗೆ ಒಬ್ಬ ಇನ್‌ಸ್ಪೆಕ್ಟರಿರುವುದು ಸಾಲದು. ಒಬ್ಬರೇ ಎಲ್ಲಾ ಗ್ರಾಮಗಳಲ್ಲೂ ಸುತ್ತುವುದಕ್ಕಾಗುವುದಿಲ್ಲ. ಇಬ್ಬರು ಇನ್‌ಸ್ಪೆಕ್ಟರಾದರೂ ಇರಬೇಕು ಮತ್ತು ಅವರಿಗೆ ಒಂದು ವಾಹನವನ್ನು ಕೊಟ್ಟೇ ಕೊಡಬೇಕು. ಏನು ಮಾಡಿದ್ದಾರೆ, ಏಕೆ ಹೇಳುತ್ತಾರೆ ಎಂಬುದನ್ನು ನೋಡಬೇಕು. ಇನ್‌ಸ್ಪೆಕ್ಟರು ಸುಮ್ಮನೆ ಕುಳಿತರೆ ಅದು ಅವರ ತಪ್ಪಲ್ಲ. ಬೈಸಿಕಲ್ಲಿನ ಮೇಲೆ ಎಲ್ಲಿಯವರೆಗೆ ಸುತ್ತಲು ಸಾಧ್ಯ ! ಬಸ್ಸುಗಳಲ್ಲಿ ಹೋದರೆ ಬಸ್ಸಿಳಿದು ಎರಡು ಮೂರು ಮೈಲಿ ನಡೆಯಬೇಕು. ಆದುದರಿಂದ ತಾಲ್ಲೂಕಿಗೊಂದು ವಾಹನ ಕೊಡಬೇಕು. ಆದಷ್ಟು ಸುತ್ತಿ ರೈತರಿಗೆ ತಿಳಿವಳಿಕೆ ಹೇಳಲು ಅವಕಾಶ ಕೊಡಬೇಕು.

ಜಪಾನ್ ಮಾದರಿ ಬೆಳೆ ಹೇಗೆ ಬೆಳೆಯುತ್ತಿದೆ ಎಂದು ಹೋದ ಸಲ ಸಭೆಯಲ್ಲೂ ಹೇಳಿದರು. ರೈತರಿಗೆ ಅದ ಗೊತ್ತಾಗುವುದಿಲ್ಲ. ಹಾಗಿರುವಾಗ ಅದರಿಂದ ಪ್ರಯೋಜನವೇನು ? ವ್ಯವಸಾಯಕ್ಕೆ ರೈತರಿಗೇನು ಸೌಕರ್ಯ ಬೇಕೋ ಅದನ್ನು ಸರ್ಕಾರ ಹೆಚ್ಚಾಗಿ ಕೊಡಬೇಕು.

ನೀರಾವರಿಗೆ ಡೀಸಲ್ ಆಯಿಲ್ ಪಂಪುಗಳನ್ನು ಸ್ವಲ್ಪ ಜಾಸ್ತಿ ಕೊಡಬೇಕು.

ಸೊಸೈಟಿಗಳಿಂದ ಸಾಲ ಕೊಡುವುದು ಬಹಳ ಕಡಮೆ. ಸ್ವಲ್ಪ ಜಾಸ್ತಿ ಮಾಡಬೇಕು. ಆರಂಬದ ಕಾಲದಲ್ಲಿ ಬಡವ ಸಾಲ ಕೇಳಿದರೆ ನಾಟಿಯಲ್ಲಾ ಆಗಿ ಹೋದಮೇಲೆ ಕೊನೆಗೆ ಸಿಕ್ಕುತ್ತದೆ. ನಿಧಾನವಾಗಿ ದೊರೆತರೆ ಸೊಸೈಟಿಗೆ ಕೊಡಬೇಕಾದ ಬಾಕಿ ತೆರಲು ಅವಕಾಶವಾಗುತ್ತದೆ, ಅಷ್ಟೆ. ಬತ್ತ ಬೆಳೆ

ಯುವ ಕಡೆ ಜೂರ್ ಹೊತ್ತಿಗೆ ಸಾಲ ದೊರೆಯುವ ಹಾಗೆ ವ್ಯವಸ್ಥೆ ಮಾಡಬೇಕು. ಈಗ ಕೊಡುವುದು ಸಾಲದು, ಜಾಸ್ತಿ ಮಾಡಬೇಕು.

ನಮ್ಮ ತಾಲ್ಲೂಕಿನವರಿಗೆ ಎನ್.ಇ.ಎಸ್. ಪರಿಚಯ ವಿಲ್ಲ. ಹೋದ ಸಲವೇ ಅಲ್ಲಿಗೆ ಬ್ಲಾಕು ಬರಬೇಕಾಗಿತ್ತು. ಮಂತ್ರಿಗಳಿಗೆ ಶಿಫಾರ್ಸು ಜಾಸ್ತಿ, ಇನ್‌ಫ್ಲುಯೆನ್ಸಿಗೆ ಅವಕಾಶವಿದೆ, ಆದುದರಿಂದ ನಮ್ಮ ಕಡೆ ಗಮನ ಬರುವುದಿಲ್ಲ. ನಾವು ಬಹಳ ಹಿಂದುಳಿದಿದ್ದೇವೆ. ಈ ಸಾರಿ ಅಲಾಟ್ ಮಾಡುವಾಗಲಾದರೂ ಕೊಡಬೇಕು. ಗುಂಡಲಪೇಟೆ, ಹೆಗ್ಗಡದೇವನಕೋಟೆಗಳಲ್ಲಿದೆ; ಎಲ್ಲಾ ಕಡೆ ಬಾರ್ಡರ್ ನಮಗಿದೆ, ಎಲ್ಲಾ ಅನುಕೂಲವಿದೆ. ಮಂತ್ರಿಗಳಿಗೆ ಹೇಳಿ ಕಾಗದ ಸಹ ಬರೆವೆ, ಈ ಸಲವೂ ಹೇಳಿದ್ದೇನೆ. ನಮ್ಮ ತಾಲ್ಲೂಕಿನಲ್ಲಿ ಎರಡು ಹೋಬಳಿ ಬಿಟ್ಟರೆ ಉಳಿವುರುವುದೆಲ್ಲಾ ಹಿಂದುಳಿದಿದೆ. ಆದುದರಿಂದ ಈ ಸಲವಾದರೂ ಎನ್.ಇ.ಎಸ್. ಬ್ಲಾಕನ್ನು ನಮ್ಮ ತಾಲ್ಲೂಕಿಗೆ ಖಂಡಿತ ಕೊಡರೇಬೇಕೆಂದು ಸೂಚಿಸುತ್ತೇನೆ.

ಔಷಧಿಯ ವಿಷಯದಲ್ಲಿ ಇನ್‌ಸ್ಪೆಕ್ಟರುಗಳಿಗೆ ಸ್ವಲ್ಪ ಅನುಭವ ಸಾಲದೆಂದು ಕಾಣುತ್ತದೆ. ಏನು ರೋಗವೆಂದು ಅವರಿಗೆ ಹೇಳುವುದಕ್ಕೇ ಬರುವುದಿಲ್ಲ ಸುಮ್ಮನೆ ಬಂದು ನೋಡಿ ಏನೋ ಪೌಡರ್ ಹಾಕಿದರೆ ಪ್ರಯೋಜನವೇನು! ಈ ಸಲ ಬತ್ತದ ಬೆಳೆ ಬಹಳ ನಷ್ಟವಾಯಿತು, ನೂರು ಪಲ್ಲ ಬರುವಕಡೆ 50 ಪಲ್ಲ ಕೂಡ ಬಂದಿಲ್ಲ. ಇನ್‌ಸ್ಪೆಕ್ಟರುಗಳಿಗೆ ರೋಗದ ವಿಷಯ ತಿಳಿದುಕೊಳ್ಳುವ ಹಾಗೆ ಶಿಕ್ಷಣ ಕೊಡಬೇಕು. ಇಷ್ಟು ಅವಕಾಶ ಕೊಟ್ಟಿದ್ದಕ್ಕಾಗಿ ವಂದಿಸುತ್ತೇನೆ.

ಶ್ರೀ ಬಿ. ವಿ. ದೇಸಾಯ್ (ಗಂಗಾವತಿ).—ಅಧ್ಯಕ್ಷರೇ, ಇವೊತ್ತಿನ ದಿವಸ ನಮ್ಮ ಮುಂದಿರುವ ಬೇಡಿಕೆಗಳನ್ನು ಸಮರ್ಥನೆ ಮಾಡುತ್ತಾ, ವ್ಯವಸಾಯ, ಸಹಕಾರ ಮತ್ತು ಅರಣ್ಯ ಖಾತೆಗಳ ಮೇಲೆ ನಾಲ್ಕು ಮಾತುಗಳನ್ನು ಹೇಳಬಯಸುತ್ತೇನೆ.

ನಮ್ಮ ದೇಶದಲ್ಲಿ ವ್ಯವಸಾಯ ಖಾತೆ ನಮ್ಮ ರೈತರಿಗೆ ಪ್ರಾಮುಖ್ಯವಾದುದು. ಆದರೆ ಇವೊತ್ತಿನ ದಿವಸ ನಮ್ಮಲ್ಲಿ ವ್ಯವಸಾಯ ಖಾತೆಯಲ್ಲೇನು ಕೆಲಸವಾಗಿದೆ ಮತ್ತು ಹೆಚ್ಚು ಆಹಾರಧಾನ್ಯಗಳನ್ನು ಬೆಳೆಯಬೇಕು, ಆದರಿಂದ ನಮ್ಮ ದೇಶದಲ್ಲಿ ಈಗಿರುವ ಕೊರತೆ ಕಡಮೆ ಮಾಡಬೇಕು ಎಂಬ ಉದ್ದೇಶದಿಂದ ಯಾವ ರೀತಿ ಮುಂದುವರಿಯುತ್ತಿದ್ದೇವೆ ಎಂಬುದನ್ನು ನೋಡಿದರೆ ಅದು ಸರಿಯಾದ ರೀತಿಯಲ್ಲಿಲ್ಲ, ರೈತರಿಗೆ ಕೂಡ ಅನುಕೂಲವಾಗಿಲ್ಲವೆಂದು ಕಾಣುತ್ತದೆ. ಏಕೆಂದರೆ ಎಲ್ಲಿ ಅಷ್ಯೂರ್ಡ್ ಕ್ರಾಪ್ ಇರುತ್ತದೆ, ಎಲ್ಲಿ ನೀರಾವರಿ ಇರುತ್ತದೆ ಅಲ್ಲಿ ತೊಂದರೆಯಿದೆ. ಅಂಥ ಕಡೆ ಬಹಳ ಹೆಚ್ಚಿನ ಕೆಲಸ ಮಾಡುವುದು ಅವಶ್ಯಕ. ನಮ್ಮ ಹೊಸ ಮೈಸೂರಿನಲ್ಲಿ ದೊಡ್ಡದಾದ ತುಂಗಭದ್ರಾ ಪ್ರಾಜೆಕ್ಟ್ ಇದೆ. ಅದರ ದೆಶೆಯಿಂದ ವ್ಯವಸಾಯ ಖಾತೆಯವರು ಬಹಳ ಕೆಲಸ ಮಾಡಿದ್ದಾರೆ. ಆ ವಿಷಯದಲ್ಲಿ ನಾಲ್ಕು ಮಾತನ್ನು ತಿಳಿಸುತ್ತಿದ್ದೇನೆ.

2 P.M.

ತುಂಗಭದ್ರಾ ಪ್ರಾಜೆಕ್ಟು ನಮ್ಮ ಇಡೀ ಮೈಸೂರು ದೇಶದಲ್ಲಿಯೇ ಅತ್ಯಂತ ದೊಡ್ಡದಾದ ಯೋಜನೆಯಾಗಿದೆ. ಈ ಯೋಜನೆಯಿಂದ ಐದು ಲಕ್ಷ 70 ಸಾವಿರ ಎಕರೆ ಭೂಮಿ ನಿರಾವರಿ ರಾಯಚೂರ ಜಿಲ್ಲೆಯೊಂದರಲ್ಲಿಯೇ ಆಗುತ್ತದೆ. ಬಳ್ಳಾರಿ ಜಿಲ್ಲೆಯಲ್ಲಿ ಎರಡು ಲಕ್ಷ ಎಕರೆ ಭೂಮಿ ನೀರಾವರಿಯಾಗುತ್ತದೆ. ಈ ಯೋಜನೆಯಿಂದ ಸುಮಾರು ಹತ್ತು ಲಕ್ಷ ಎಕರೆ ನೀರಾವರಿಯಾಗುತ್ತದೆಂದು ಅಂದಾಜು ಮಾಡಲಾಗಿದೆ. ನಮ್ಮ ಜಿಲ್ಲೆಯಲ್ಲಿಯ ನೀರಾವರಿ ಪ್ರದೇಶದ ಬೆಳೆವಣಿಗೆ ಮಾಡುವದಕೋಸ್ಕರ ಮತ್ತು ಹೆಚ್ಚು ಆಹಾರ ಬೆಳೆಯುವದಕ್ಕೆ ಜಾಗ್ರತೆಯಾಗಿ ಇನ್ನೂ ಹೆಚ್ಚು ಉತ್ಸಾಹದಿಂದ ವ್ಯವಸಾಯ ಇಲಾಖೆಯವರು ಕೆಲಸ ಮಾಡಬೇಕು. ನಮ್ಮ ಜಿಲ್ಲೆಯಲ್ಲಿಯ 5,70,000 ಎಕರೆ ಭೂಮಿಯಲ್ಲಿ ಸುಮಾರು ನಾಲ್ಕು ಲಕ್ಷ ಎಕರೆ ಭೂಮಿಯಲ್ಲಿ light irrigation ಮಾಡಲಾಗುತ್ತಿದೆ. ಕೆಲವು ಪ್ರದೇಶವಲ್ಲಿ heavy irri-ation ಮಾಡುವದಕ್ಕೆ ಕೊಡುತ್ತಾರೆ. ಆಹಾರ ಧಾನ್ಯ ಎಂದರೆ ಅಕ್ಕಿ ಒಂದೇ ಎಂದು ತಿಳಿದುಕೊಳ್ಳಬಾರದು. ಜನಸಾಮಾನ್ಯರ staple food ನಮ್ಮ ಪ್ರದೇಶದಲ್ಲಿ ಜೋಳ ಮತ್ತು ರಾಗಿ ನಮ್ಮ ರಾಯಚೂರ ಜಿಲ್ಲೆ ಮತ್ತು ಬಳ್ಳಾರಿ ಜಿಲ್ಲೆಯಲ್ಲಿ ಸುಮಾರು ಐದು ಲಕ್ಷ ಎಕರೆಗಳಿಗೆ light irrigation ಕೊಡುತ್ತಿದ್ದಾರೆ. Light irrigationನಲ್ಲಿ ಜೋಳ ಬೆಳೆಯಾಗುತ್ತದೆ. ಈ ಪ್ರದೇಶದಲ್ಲಿ ಮಳೆ ಕಡಮೆಯಾಗಿರುವುದರಿಂದ ತುಂಗಭದ್ರಾ ಯೋಜನೆಯ ನೀರಾವರಿಯಿಂದ ಜೋಳ ಬೆಳೆಯುವುದಕ್ಕೆ ಸಾಧ್ಯವಿದೆ. ಈ ವರ್ಷ ಕೆಲವು ಕಡೆ ಒಂದು ಎಕರೆಯಲ್ಲಿ 20 ಪಲ್ಲ ಜೋಳ ಬೆಳೆದಿದ್ದಾರೆ. ನೀರಾವರಿಯಿಂದ ಮೂರು ನಾಲ್ಕು ಪಟ್ಟು ಹೆಚ್ಚು ಬೆಳೆ ಮಾಡಬಹುದು. ಆಹಾರ ಧಾನ್ಯವೆಂದರೆ ಬರೀ ಅಕ್ಕಿ ಒಂದೇ ಅಲ್ಲ. ರಾಗಿ ಜೋಳ ಕೂಡ ಬೆಳೆಯಬಹುದು. ವ್ಯವಸಾಯ ಇಲಾಖೆಯವರು ಸಾಕಷ್ಟು ಕೆಲಸ ಮಾಡಿದ್ದಾರೆ. ಆದರೆ ಇನ್ನೂ ಹೆಚ್ಚು ಕೆಲಸ ಮಾಡಬೇಕು.

ಈ ತುಂಗಭದ್ರಾಯೋಜನೆಯ ಪ್ರದೇಶದಲ್ಲಿ ಹತ್ತು ಲಕ್ಷ ಎಕರೆ ಭೂಮಿ ನೀರಾವರಿಯಾಗುತ್ತಿದ್ದರೂ ಸಹ ಈ ಪ್ರದೇಶದಲ್ಲಿ ಒಂದು ಫರ್ಟಿಲೈಜರ್ ಫ್ಯಾಕ್ಟರಿಯನ್ನು ಪ್ರಾರಂಭಿಸುವ ಬಗ್ಗೆ ಯಾವದೊಂದೂ ಯೋಜನೆಯಿಲ್ಲ. ಈ ಫರ್ಟಿಲೈಜರ್ ಫ್ಯಾಕ್ಟರಿಯನ್ನು ದೂರದಲ್ಲಿ ಎಲ್ಲಿಯಾದರೂ ಪ್ರಾರಂಭಿಸಿದರೆ ಅಲ್ಲಿಂದ ತರುವುದಕ್ಕೆ ಟ್ರಾನ್ಸ್‌ಪೋರ್ಟ್ ಚಾರ್ಜಸ್ ಬಹಳವಾಗುತ್ತದೆ. ಆದ್ದರಿಂದ ದಕ್ಷಿಣ ಹಿಂದುಸ್ತಾನದಲ್ಲಿ ಕೇಂದ್ರ ಸರಕಾರದ ಸಹಾಯ ಪಡೆದು ಒಂದು ಫ್ಯಾಕ್ಟರಿಯನ್ನು ಪ್ರಾರಂಭಿಸಬೇಕು ಎಂದು ನಾನು ಒತ್ತಾಯ ಪೂರ್ವಕವಾಗಿ ಕೇಳಿಕೊಳ್ಳುತ್ತೇನೆ. ಇದನ್ನು ಯಾವಾಗ ಪ್ರಾರಂಭಿಸುತ್ತಾರೆ ಎಂಬುದು ನನಗೆ ಗೊತ್ತಿಲ್ಲ. ಸುಮಾರು ಹತ್ತು ಲಕ್ಷ ಎಕರೆ ನೀರಾವರಿಯಾಗುವ ಈ ಪ್ರದೇಶದಲ್ಲಿ ಹೊರಗಿನಿಂದ ಫರ್ಟಿಲೈಜರ್ ತರಿಸುವುದು ಸಾಧ್ಯವಿಲ್ಲ. ಟ್ರಾನ್ಸ್‌ಪೋರ್ಟ್ ಚಾರ್ಜಸ್ ಹೆಚ್ಚಾಗುತ್ತದೆ. ಆದ್ದರಿಂದ ಕೇಂದ್ರ ಸರಕಾರದ ಮೇಲೆ ಒತ್ತಾಯ ಮಾಡಿ, ದಕ್ಷಿಣ ಹಿಂದೂಸ್ತಾನದಲ್ಲಿ ಒಂದು ಕಾರ್ಖಾನೆಯನ್ನು ಸ್ಥಾಪವೆ ಮಾಡಬೇಕು. ಅದನ್ನು ಈ ಪ್ರದೇಶದಲ್ಲಿಯೇ ಸ್ಥಾಪನೆ ಮಾಡುವ ಹಾಗೆ ಮಾಡಬೇಕು.

ಶ್ರೀ ಬಿ. ಡಿ. ಜತ್ತಿ (ಮುಖ್ಯ ಮಂತ್ರಿಗಳು).—ಈಗಾಗಲೇ ಫರ್ಟಿಲೈಜರ್ ಎಕ್ಸ್‌ಪಾನ್‌ಷನ್ ಸ್ಕೀಮು ಕೇಂದ್ರ ಸರಕಾರದವರ ಮುಂದೆ ಇಟ್ಟಿದ್ದಾರೆ. ಯಾವ ಸ್ಥಳವಲ್ಲಿ ಪ್ರಾರಂಭಿಸುವದಕ್ಕೆ ಒಪ್ಪುತ್ತಾರೋ ಅದು ಗೊತ್ತಿಲ್ಲ. ಅದನ್ನು ಪರಿಶೀಲನೆ ಮಾಡುತ್ತಿದ್ದಾರೆ. ಅದು ನಮ್ಮ ರಾಜ್ಯದಲ್ಲಿ ಸ್ಥಾಪನೆಯಾದರೆ ಸಾಕು.

Sri T. MARIAPPA (Miuister for Finance).—It is now before the Technical Committee.

ಶ್ರೀ ಬಿ. ವಿ. ದೇಸಾಯ್.—ಎಲ್ಲಿಯಾದರೂ ಸ್ಥಾಪನೆಯಾಗಲಿ. ಯಾವ ಸ್ಥಳಯೋಗ್ಯವಾಗಿದೆಯೋ ಅಲ್ಲಿ ಸ್ಥಾಪನೆ ಮಾಡಬೇಕು. ದಕ್ಷಿಣ ಹಿಂದುಸ್ತಾನದಲ್ಲಿ ನಮ್ಮ ತುಂಗಭದ್ರಾ ಯೋಜನೆಯ ಪ್ರದೇಶದಲ್ಲಿ, ಹತ್ತು ಲಕ್ಷ ಎಕರೆ ಭೂಮಿ ನೀರಾವರಿಯಾಗುವ ಪ್ರದೇಶದಲ್ಲಿ ಈ ಕಾರ್ಖಾನೆ ಸ್ಥಾಪನೆಯಾಗಬೇಕು ಎಂದು ನಾನು ಹೇಳುತ್ತೇನೆ.

ಈ ಪ್ರದೇಶದಲ್ಲಿ ಮೂರು ಸಕ್ಕರೆ ಕಾರ್ಖಾನೆಗಳು ಇವೆ. ಸುಮಾರು 1,70,000 ಎಕರೆ ಪ್ರದೇಶವನ್ನು ಲೋಕಲೈಜ ಮಾಡಿದ್ದಾರೆ; heavy irrigationನಲ್ಲಿ ಭತ್ತ ಕಬ್ಬು ಬೆಳೆಯಲಾಗುತ್ತದೆ. ಈ ಒಂದು ವಿಷಯವನ್ನು ಮತ್ತೆ ಮತ್ತೆ ಸಮಯ ದೊರೆತಾಗಲೆಲ್ಲಾ ಪ್ರತಿ ವರ್ಷ ಬಜೆಟ್ಟಿನ ಮೇಲೆ ಮಾತಾಡುವಾಗ ಸಹ ಹೇಳುತ್ತಲೇ ಬಂದಿದ್ದೇನೆ. ಗಂಗಾವತಿ ಸಕ್ಕರೆ ಕಾರ್ಖಾನೆ ಸ್ಥಾಪನೆ ಮಾಡುವುದಕ್ಕೆ ಗವನಕೊಡುತ್ತಿಲ್ಲ ಎಂದು ಹೇಳಬೇಕಾಗಿದೆ. ಈ ಪ್ರದೇಶದಲ್ಲಿ ಕಬ್ಬು ಬೆಳೆಯುತ್ತಿದ್ದರೂ ಕೂಡ ಅದಕ್ಕೆ ಮಾರ್ಕೆಟ್ ಇಲ್ಲ. ತುಂಗಭದ್ರಾ ಯೋಜನೆಯ ಪ್ರದೇಶದಲ್ಲಿ ನಾಲ್ಕು ಸಕ್ಕರೆ ಕಾರ್ಖಾನೆಗಳನ್ನು ಸ್ಥಾಪನೆ ಮಾಡಬಹುದೆಂದು ಪ್ರೊಪೋಜಲ್ ಮಾಡಿದ್ದಾಗಿದೆ. ಈಗಾಗಲೇ ಮೂರು ಸಕ್ಕರೆ ಕಾರ್ಖಾನೆಗಳಿವೆ. ಇನ್ನೊಂದು ಸಕ್ಕರೆ ಕಾರ್ಖಾನೆಯನ್ನು ಗಂಗಾವತಿಯಲ್ಲಿ ಸ್ಥಾಪನೆ ಮಾಡುವದಕ್ಕೆ ಕೊಡಬೇಕು. ಹಿಂದಕ್ಕೆ ಈ ಕಾರ್ಖಾನೆ ಸ್ಥಾಪನೆ ಮಾಡುವದಕ್ಕೆ ಲೈಸನ್ಸ್ ಸಹ ಕೊಟ್ಟಿದ್ದರು.

ಶ್ರೀ ಮಾಲಿ ಮರಿಯಪ್ಪ (ಸಹಕಾರ ಶಾಖೆಯ ಮಂತ್ರಿಗಳು).—ಈ ವರ್ಷ ಗಂಗಾವತಿ ಸುತ್ತು ಮುತ್ತು ಕಬ್ಬು ಬೆಳೆದಿದರೆ ಅದನ್ನು ಕಂಪಲಿ ಸಕ್ಕರೆ ಕಾರ್ಖಾನೆಯವರು ತೆಗೆದುಕೊಳ್ಳುತ್ತಾರೆ.

ಶ್ರೀ ಬಿ. ವಿ. ದೇಸಾಯ್.—ಮಾನ್ಯ ಸದಸ್ಯರಿಗೆ ಈ ವಿಷಯದ ಬಗ್ಗೆ ಪೂರ್ತಿಯಾಗಿ ಹೇಳಬಯಸುತ್ತೇನೆ. ಈ ಬಗ್ಗೆ ಏನೋ ಒಂದು ತಪ್ಪು ಕಲ್ಪನೆ ಇದ್ದಹಾಗೆ ಕಾಣುತ್ತದೆ. ಈ ಪ್ರದೇಶದಲ್ಲಿ ನಾಲ್ಕು ಸಕ್ಕರೆ ಕಾರ್ಖಾನೆಗಳು ಆಗಬೇಕೆಂದು ಮೊದಲಿನ ಯೋಜನೆಯ ಪ್ರಕಾರ ಇದ್ದಿತು. ಅದರ ಪ್ರಕಾರ ಮುನೀರಾಬಾದ ಹೊಸಪೇಟೆ ಕಂಪಲಿ ಮತ್ತು ಗಂಗಾವತಿಯಲ್ಲಿ ಹೀಗೆ ನಾಲ್ಕು ಸಕ್ಕರೆ ಕಾರ್ಖಾನೆಗಳನ್ನು ಪ್ರಾರಂಭಿಸುವುದು ಆಗಿತ್ತು. ಈಗ ಅಲ್ಲಿರತಕ್ಕ ಮೂರು ಸಕ್ಕರೆ ಕಾರ್ಖಾನೆಗಳಿಂದ ಅಲ್ಲಿ ಬೆಳೆಯುತಕ್ಕ ಎಲ್ಲ ಕಬ್ಬನ್ನೂ ತೆಗೆದುಕೊಳ್ಳುವದಕ್ಕೆ ಸಾಧ್ಯವಿಲ್ಲ. ಯಾವದೋ ಕಾರ್ಯದರ್ಶಿಯು ತಪ್ಪು ಕಲ್ಪನೆ ಬರುವ ಹಾಗೆ ರಿಪೋರ್ಟು ಮಾಡಿದ್ದಾರೆ. ಇದನ್ನು ಪರಿಶೀಲನೆ ಮಾಡಿ ನೋಡಬೇಕು. ಈಗಿರುವ ಸಕ್ಕರೆ ಕಾರ್ಖಾನೆಗಳ ಉತ್ಪತ್ತಿ ಲಿಮಿಟೆಡ್ ಇರುತ್ತದೆ. ಇನ್ನು 200 ಟನ್ ಅಷ್ಟು ಜಾಸ್ತಿ ಉತ್ಪತ್ತಿ ಮಾಡುವುದು ಸಾಧ್ಯವಿಲ್ಲ, ಹೀಗಾದರೆ ಈ ಪ್ರದೇಶ ಅಭಿವೃದ್ಧಿಯಾಗಲಾರದು. ಕಂಪಲಿ ಸಕ್ಕರೆ ಕಾರ್ಖಾನೆಯವರು ಈ ಕಬ್ಬನ್ನು ತೆಗೆದು ಕೊಳ್ಳುತ್ತಾರೆಂದು ಸಹಕಾರ ಮಂತ್ರಿಗಳು ಈಗ ಹೇಳಿದರು. ಈ ಕಂಪಲಿ ಸಕ್ಕರೆ ಕಾರ್ಖಾನೆಯ ಬಗ್ಗೆ ಮಂತ್ರಿಗಳಿಗೆ ತಪ್ಪು ಕಲ್ಪನೆ ಕೊಟ್ಟಿರಲಿಕ್ಕೆ ಬೇಕು ಎಂದು ನನಗೆ ಅನಿಸುತ್ತದೆ. ಅವರ ಕಾರ್ಯದರ್ಶಿಗಳು ಹೀಗೆ ತಪ್ಪು ಕಲ್ಪನೆಯನ್ನು ಅವರಿಗೆ ಉಂಟು ಮಾಡಿರಬಹುದು. ಗಂಗಾವತಿ ಪ್ರದೇಶದಲ್ಲಿ 1,70,0 0 ಎಕರೆ ಭೂಮಿ ಲೋಕಲೈಜೇಷನ್ ಆಗಿದೆ. ಈಗಾಗಲೆ ಕಂಪಲಿ ಕಾರ್ಖಾನೆಗೆ 16,000 ಎಕರೆ ಭೂಮಿ ಇದೆ. ಈ ಬಗ್ಗೆ ನನ್ನ ಹತ್ತಿರ ಎಲ್ಲ ಕಾಗದ ಪತ್ರಗಳು ಫೈಲು, ರಿಪೋರ್ಟು ಇವೆ. ನಾನು ಇದನ್ನೆಲ್ಲಾ ಅವರಿಗೆ ತಿಳಿಸಿ ಹೇಳಬಹುದು. ಈಗ ಇರತಕ್ಕ ಕಂಪಲಿ ಸಕ್ಕರೆ ಕಾರ್ಖಾನೆಯ capacityಯನ್ನು ಒಂದು ಸಾವಿರ ಟನ್‌ಷ್ಟು ಹೆಚ್ಚು ಮಾಡಿದರೂ ಸಹ 1,70,000 ಎಕರೆ ಭೂಮಿಯಲ್ಲಿ ಬೆಳೆಯುತಕ್ಕ ಕಬ್ಬನ್ನು ಕಂಪಲಿ ಕಾರ್ಖಾನೆಯವರು ತೆಗೆದುಕೊಳ್ಳಬಹುದು ಎಂದು ಹೇಳಲಿಕ್ಕೆ ಆಗುವದಿಲ್ಲ.

ಶ್ರೀ ಬಿ. ಡಿ. ಜತ್ತಿ.—ಶ್ರೀ ಬಿ. ವಿ. ದೇಸಾಯಿ ಅವರು ಕೋ-ಆಪರೇಟೀವ್ ಬೇಸಿಸ್‌ಮೇಲೆ ಸಕ್ಕರೆ ಕಾರ್ಖಾನೆಯನ್ನು ಮಾಡುವುದಕ್ಕೆ ಪ್ರಯತ್ನ ಮಾಡಿದರೆ ಅವರಿಗೆ ಹೆಚ್ಚು ಪ್ರಾಸ್ಪೆಕ್ಟ್ಸ್ ಇದೆ, ಇಲ್ಲದೇ ಇದ್ದರೆ ಸ್ವಲ್ಪ ಕಷ್ಟ ಎಂದು ಕಾಣುತ್ತದೆ.

ಶ್ರೀ ಬಿ. ವಿ. ದೇಸಾಯ್.—ಸ್ವಲ್ಪ ಹೆಚ್ಚು ವಿಷಯ ಹೇಳಬೇಕಾಗಿ ಬಂತು. ಏಕೆಂದರೆ ಆರು ವರ್ಷದಿಂದ ಪ್ರೈವೇಟ್ ಕಂಪನಿಗೆ ಕೊಡುತ್ತೇವೆ, ಕೋ-ಆಪರೇಟೀವ್ ಬೇಸಿಸ್ ಮೇಲೆ ಮಾಡಿದರೆ ಲೈಸೆನ್ಸ್ ಕೊಡುವುದಿಲ್ಲ ಎಂದು ಹೇಳಿದರು. ಹೈದರಾಬಾದ್ ಸರ್ಕಾರದವರು ಪ್ರಾರಿ ಕಂಪನಿಗೆ ಲೈಸೆನ್ಸ್ ಕೊಟ್ಟರು. ಅವರು ಆರು ತಿಂಗಳು ಒಂದು ವರ್ಷದ ತನಕ ಆ ಲೈಸೆನ್ಸನ್ನು ಹಾಗೆಯೇ ಇಟ್ಟುಕೊಂಡು ಏನೂ ಕೆಲಸ ಮಾಡಲಿಲ್ಲ. ಏಕೆ ಕೆಲಸ ಮಾಡಲಿಲ್ಲ ಎಂದು ಸರ್ಕಾರದ ಕಡೆಯಿಂದ ಕೇಳಿಸಿಕೊಂಡು ಲೈಸೆನ್ಸ್ ಕ್ಯಾನ್ಸಲ್ ಆಯಿತು. ಆಮೇಲೆ ಬಿರ್ಲಾ ಕನ್ಸರ್ನ್ ಅವರು ಬಂದು ನೋಡಿಕೊಂಡು ಹೋದರು ಮತ್ತು ಲೈಸೆನ್ಸಿಗೆ ಪ್ರಯತ್ನ ಮಾಡಬೇಕೆನ್ನುವುದರಲ್ಲೇ ಸರ್ಕಾರದವರ ಮನಸ್ಸು ಬದಲಾಯಿತು. ಕೋ-ಆಪರೇಟೀವ್‌ಗೆ ಕೊಡುತ್ತೇವೆ, ಪ್ರೈವೇಟ್‌ಗೆ ಕೊಡುವುದಿಲ್ಲ ಎಂದು ಹೇಳಿದರು. ಕೋ-ಆಪರೇಟೀವ್‌ಗೆ ಪ್ರಯತ್ನಮಾಡಿ ಆರು ಲಕ್ಷ ರೂಪಾಯಿ ಷೇರ್‌ಕಲೆಕ್ಟ್ ಮಾಡಿದೆವು, ಎಲ್ಲಾ ಆಯಿತು. ಡೆಲ್ಲಿಯಿಂದ ಮತ್ತೆ ಇಲ್ಲಿಂದಲೂ ಕಾಗದ ಬಂತು ಏನೆಂದರೆ ಫಾರಿನ್ ಎಕ್ಸ್‌ಚೇಂಜ್ ಕಷ್ಟ, ಹಾಗೆ ಹೀಗೆ ಎಂದು ಹೇಳಿ ಕೋ-ಆಪರೇಟೀವ್‌ಗೆ ಕೊಡುವುದಿಲ್ಲ ಎಂದು ತಿಳಿಸಿದರು. ಮತ್ತೆ ಏನು ಮಾಡುವುದು? ಸರ್ಕಾರದವರನ್ನೂ approach ಮಾಡಿದೆವು. ಆಗ ಅವರು ಪ್ರೈವೇಟ್ ಅಥವಾ ಪಬ್ಲಿಕ್ ಲಿಮಿಟೆಡ್ ಕಂಪನಿ ಸ್ಟಾರ್ಟ್ ಮಾಡಿ ಎಂದು ಹೇಳಿದರು. ಅದೇ ಪ್ರಕಾರ ಶಿವಮೊಗ್ಗದಲ್ಲಿ ಹಾಕಿದ್ದು ಹೇಗೆ ನಡೆಯಿತು ಎಂಬುದು ತಮಗೆಲ್ಲರಿಗೂ ಗೊತ್ತಿದೆ. ಅದನ್ನು ಹೇಳುವುದಕ್ಕೆ ನಾನು ಹೋಗುವದಿಲ್ಲ. ನಮ್ಮಲ್ಲಿ ಆ ತರಹ ಮಾಡಲಿಕ್ಕೆ ಸಾಧ್ಯವಾಗಲಿಲ್ಲ. ಬಾಲ್‌ಚಂದ್, ಟೀಕ್‌ಚಂದ್ ಕಂಪೆನಿಯವರು ಲೈಸೆನ್ಸಿಗೆ ಅಪ್ಲೈ ಮಾಡಿದರು. ಅದಕ್ಕೆ ಲೈಸೆನ್ಸ್ ಕೊಡಿಸುತ್ತೇವೆ ಎಂದು ಹೇಳಿದರು. ಆ ಹೇಳಿಕೆಯ ಪ್ರಕಾರ ಅವರು ಅಪ್ಲೈ ಕೂಡ ಮಾಡಿದ್ದಾರೆ. It is pending in the present Governmeut. ಇವತ್ತಿನ ದಿವಸ ಏನು ಹೇಳುತ್ತಾರೆ? ಕೋ-ಆಪರೇಟಿವ್ ಬೇಸಿಸ್ ಮೇಲೆ ಫ್ಯಾಕ್ಟರಿ ಸ್ಟಾರ್ಟ್ ಮಾಡಿದರೆ ಲೈಸೆನ್ಸ್ ಕೊಡುವುದಿಲ್ಲ ಪ್ರೈವೇಟ್ ಅಥವಾ ಪಬ್ಲಿಕ್ ಲಿಮಿಟೆಡ್ ಕಂಪನಿ ಆಗಿ ಮಾಡಿದರೆ ಲೈಸೆನ್ಸ್ ಕೊಡುತ್ತೇವೆ ಎಂದು letter ಬರೆದಿದ್ದಾರೆ. ಅದರಂತೆ ನಾವು 24ನೇ ಫೆಬ್ರುವರಿ 1959ರಲ್ಲಿ ಜನರಲ್ ಬಾಡಿ ಮೀಟಿಂಗ್ ಕರೆದು ವಿಷಾದದಿಂದ ಹಿಂದೆ ಷೇರು ಕೂಡಿಸಿ ಪ್ರಾರಂಭಿಸಿದ್ದ ಸಂಘವನ್ನು ಡಿಸಾಲ್ವ್ ಮಾಡಿದ್ದೇವೆ. ಅದರ ನಿರ್ಣಯವನ್ನು ಡೈರೆಕ್ಟರ್ ಆಫ್ ಇಂಡಸ್ಟ್ರೀಸ್ ಅಂಡ್ ಕಾಮರ್ಸ್ ಅವರಿಗೆ ಕಳುಹಿಸಿದ್ದೇವೆ. ಈಗ ಮಾನ್ಯ ಮಂತ್ರಿಗಳು ಕೋ-ಆಪರೇಟೀವ್ ಆಗಿ ಪ್ರಯತ್ನ ಮಾಡಿದರೆ ಸಿಕ್ಕುತ್ತದೆ ಎಂದು

ಹೇಳುತ್ತಾರೆ. ಅದು ಯಾವ ರೀತಿ ಮಾಡಬೇಕೆನ್ನುವುದೇ ತಿಳಿಯದಾಗಿದೆ. ಇದರ ಬಗ್ಗೆ ಮಾನ್ಯ ಮಂತ್ರಿಗಳು ತಿಳಿಸಿದರೆ ಮುಂದೆ ಹೇಳುತ್ತೇನೆ.

ಶ್ರೀ ಬಿ. ಡಿ. ಜತ್ತಿ.—ಶ್ರೀಮಾನ್ ದೇಸಾಯಿ ಅವರು ಹೇಳಿದ ಸಂಗತಿ ಎಷ್ಟು ಸರಿ ಎಷ್ಟು ತಪ್ಪು ಎಂಬುದನ್ನು ಹೇಳಲು ಪ್ರಯತ್ನ ಪಡುವುದಿಲ್ಲ. ಅವರು ಹೇಳುವ ಪ್ರಕಾರ ಮೊನ್ನೆ ಗವರ್ನ್‌ಮೆಂಟ್ ಆಫ್ ಇಂಡಿಯಾದವರ ಕಡೆ ಕೇಳಿದೆವು. ಕೋ-ಆಪರೇಟೀವ್ ಆದರೆ ಲೈಸೆನ್ಸ್ ಸಿಕ್ಕುವುದು ಎಂದು ಹೇಳಿದರು. ಅದರ ಬಗ್ಗೆ ನ್ಯಾಷನಲ್ ಡೆವಲಪ್‌ಮೆಂಟ್ ಕೌನ್ಸಿಲ್‌ನಲ್ಲಿ ಚರ್ಚೆ ಮಾಡಿಕೊಂಡು ಬಂದು ಫೈನಲ್ ಆಗಿ ಏನಾಗುತ್ತದೆ ಎಂಬುದನ್ನು ಹೇಳುತ್ತೇನೆ.

ಶ್ರೀ ಮಾಲಿ ಮರಿಯಪ್ಪ.—ನಾನು ಹೇಳಿದ್ದು, 1,200 ಟನ್ ಕಬ್ಬನ್ನು ಕನ್ಸ್ಯೂಮ್ ಮಾಡುವುದಕ್ಕೆ ಅವಕಾಶವಿದೆ. ಕೋ-ಆಪರೇಟಿವ್ ಬೇಸಿಸ್ ಮೇಲೆ ಸ್ಟಾರ್ಟ್ ಮಾಡುವತನಕ ಅಲ್ಲಿ ನೀವು ಬೆಳೆದದ್ದನ್ನೇ ಕಂಪೆನಿಯವರು ಕನ್ಸ್ಯೂಂ ಮಾಡಬೇಕಾಗುತ್ತದೆ. ಇನ್ನೂ ಅಲ್ಲಿ ಡೆವಲಪ್ ಆಗಿಲ್ಲ. ಡೆವಲಪ್ ಆದರೆ ಅದನ್ನು ಉಪಯೋಗಿಸಿಕೊಳ್ಳಲಿಕ್ಕೆ ಅವಕಾಶವಿದೆ.

ಶ್ರೀ ಬಿ. ವಿ. ದೇಸಾಯಿ.—ಅದು ವಾಸ್ತವಿಕ. ತತ್ಪೂರ್ವವಾಗಿ ನಮ್ಮ ಭಾಗದದಲ್ಲಿ ಡೆವಲಪ್ ಆಗಬೇಕಾದದ್ದು ಬಹಳ ಅವಶ್ಯಕ. ಷುಗರ್ ಫ್ಯಾಕ್ಟರಿ ಸ್ಥಾಪನೆ ಮಾಡುವ ಜಾಗಕ್ಕೂ, ಷುಗರ್ ಕೇನ್ ಎಲ್ಲಿಂದ ಸಪ್ಲೈ ಆಗಬೇಕೋ ಆ ಜಾಗಕ್ಕೂ ನಡುವೆ ಒಂದು ನದಿಯಿದೆ. ಕಾಸ್‌ವೇ ಆದಮೇಲೆ ಸಾಕಾದಷ್ಟು ಕಬ್ಬನ್ನು ಕಳುಹಿಸಬಹುದು. 16 ಲಕ್ಷ ಟನ್ ಕಬ್ಬು ಬೆಳೆದರೂ ಲಾರಿಯಿಂದ ಸಾಗಿಸಬೇಕೆಂದರೂ ಕೂಡ, you have to go across the river. ಈಗೇನೋ ಒಂದು ತಾತ್ಕಾಲಿಕವಾದ ಸೌಲಭ್ಯ ಇದೆ. ಅದನ್ನೇ ಮುಂದುವರಿಸಿಕೊಂಡು ಹೋಗುವುದು ಯೋಗ್ಯವಲ್ಲ. ಶಾಶ್ವತವಾದ ಒಂದು ಸೇತುವೆ ಹಾಕಿಕೊಡಬೇಕೆಂದು ಕೇಳಿದ್ದಾಯಿತು. ಇನ್ನೂ ಅದು ಆಗಿಲ್ಲ. ಉತ್ತರ ಕರ್ನಾಟಕದಿಂದ ನಾಲ್ಕು ಆರು ಬೋಟ್ಸ್, P W.D.ಯಿಂದ ಒಂದು ಎರಡು ಬೋಟ್ಸ್ ಕೊಡಿಸಿದ್ದೇವೆ. ಬೋಟ್‌ನಿಂದ ಕಬ್ಬನ್ನು ತಂದರೂ ಕೂಡ ಅರ್ಧ ಮೈಲಿಯಷ್ಟು ಮರಳಿನಲ್ಲಿ ತರಬೇಕಾಗುತ್ತದೆ. ಆ ಕಡೆ ಮತ್ತೆ ಇನ್ನರ್ಧ ಮೈಲಿ ಲಾರಿಗಳು ಹೋಗುವುದಿಲ್ಲ. ಆದ್ದರಿಂದ ಕಾಸ್‌ವೇ ಆದರೂ ಹಾಕಿಕೊಟ್ಟರೆ ಒಳ್ಳೆಯದು. ಕಬ್ಬು ಸಪ್ಲೈ ಆಗುವುದಿಲ್ಲ ಎನ್ನುವುದು ತಪ್ಪು ಕಲ್ಪನೆ. ನಮ್ಮಲ್ಲಿ Sugar Factory Control Act ಇಲ್ಲ. ಬಳ್ಳಾರಿ ಸೈಡ್‌ನಲ್ಲಿ ಹೊಸಪೇಟೆಯಲ್ಲಿ ಮದರಾಸ್‌ನಲ್ಲಿರತಕ್ಕ ಆಕ್ಟ್ ಲಾಗೂ ಇದೆ.

ಅನಂತರ ಈ ಲೋಕಲೈಸೇಷನ್ ವಿಚಾರದಲ್ಲಿ ಒಂದು ಮಾತು ಹೇಳಬೇಕಾಗಿದೆ. ನಾನು ಎಷ್ಟೋ ಪ್ರಾಜೆಕ್ಟ್‌ಗಳನ್ನು study ಮಾಡಿದ್ದೇನೆ. ನಮ್ಮ ಮೈಸೂರು ಸ್ಟೇಟ್‌ನಲ್ಲಿ ಕೃಷ್ಣರಾಜ ಸಾಗರ ಮತ್ತು ಇನ್ನಿತರ ಇರಿಗೇಷನ್ ಪ್ರಾಜೆಕ್ಟ್‌ಗಳು ಇವೆ. ಅದೇ ರೀತಿ ಆಂಧ್ರ ಪ್ರದೇಶದಲ್ಲೂ ಕೂಡ ಬೇರೆ ಬೇರೆ ಭಾಗದಲ್ಲಿ ದೊಡ್ಡ ದೊಡ್ಡ ಪ್ರಾಜೆಕ್ಟ್‌ಗಳು ಇವೆ. ಯಾವ ಕಡೆಯೂ ಕೂಡ ಈ ರೀತಿ ಲೋಕಲೈಸೇಷನ್ ಸ್ಕೀಂ ಎಂದು ಇಲ್ಲ. ಶ್ರೀಮಾನ್ ವೀರಣ್ಣಗೌಡರು ಮಿನಿಸ್ಟರಾಗಿದ್ದಾಗ ಒಂದು ಡೆಲಿಗೇಷನ್ ಬಂದಿದ್ದರು, ಅದನ್ನು ಕ್ಯಾನ್ಸಲ್ ಮಾಡಿಸಿದರು ಎಂದು ಕೇಳಿದ್ದೇನೆ. ನಮ್ಮಲ್ಲಿ ಏನಾಗಿದೆ ಎಂದರೆ ಬತ್ತ ಬೆಳೆಯತಕ್ಕ ಭೂಮಿಯಲ್ಲಿ ಬತ್ತವನ್ನೇ ಬೆಳೆಯಬೇಕು. ಎರಡನೆಯದನ್ನು ಹಾಕಿದರೆ 500 ರೂಪಾಯಿ ದಂಡ. ಹೋದವರ್ಷ ಬತ್ತ ಬೆಳೆಯುವ ಕಡೆ ಕಬ್ಬು ಹಾಕಿದರು ಎಂದು 500 ರೂಪಾಯಿ ದಂಡ ಹಾಕಿದ್ದಾರೆ. ಇದರಿಂದ ರೈತರಿಗೆ ಸಹಾಯ ಮಾಡಬೇಕೆನ್ನುವಾಗ ಯಾವ ರೀತಿ ಆಗುತ್ತದೆ ಎಂಬುದನ್ನು ಮಾನ್ಯ ಸದಸ್ಯರ ಮುಂದೆ ಇಡುತ್ತಾ ಇದ್ದೇನೆ. ನಮ್ಮ ಡಿಸ್ಟ್ರಿಕ್ಟ್ ಇಡೀ ದೇಶಕ್ಕೇ ಗ್ರ್ಯಾನರಿ ಆಗಿದೆ. ಆ ಭಾಗಕ್ಕೆ ಈ ರೀತಿ • ನಿಗಾ ಕೊಡುತ್ತಾ ಇದ್ದೀರಿ ಎಂಬುದನ್ನು ಮಾನ್ಯ ಸಭೆಯವರ ಲಕ್ಷ್ಯಕ್ಕೆ ತರುತ್ತಾ ಇದ್ದೇನೆ. ಈ ಲೋಕಲೈಸೇಷನ್ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳ ಎದುರಿಗೆ ಮತ್ತು ಯಾರು ಆಫೀಸರ್ಸ್ ಅಲ್ಲಿ ಬಂದಿದ್ದರೋ ಅವರ ಎದುರಿಗೆ ಸಾಕಾದಷ್ಟು ದೀರ್ಘವಾಗಿ ಚರ್ಚೆಮಾಡಿ ಮೆಮೋರ್ಯಾಂಡಂ ಸಹ ಕೊಟ್ಟದ್ದು ಆಯಿತು. ಚನ್ನಬಸಪ್ಪನವರು ಬಂದಾಗಲೂ ಕೂಡ ಲೋಕಲೈಸೇಷನ್ ಆಕ್ಟ್ ಎಲ್ಲಾ ಪೂರ್ಣವಾಗಿ ತೆಗೆದು ನೋಡಲಾಯಿತು. ಈ ರೀತಿ ಒಂದೇ ತರಹ ಬೆಳೆಯನ್ನು ಇಡಬೇಕು ಎಂಬ ಕಡ್ಡಾಯ ಇಲ್ಲ. ಮತ್ತು ಜುಲ್ಮಾನೆ ಹಾಕಬೇಕೆಂಬುದೂ ಕೂಡ ಇಲ್ಲ. ರಿಟ್‌ಕೂಡ ತೆಗೆದುಕೊಂಡು ಹೋಗಿ it is against the rules ಎಂದು ಆಯಿತು. ಏಕೆಂದರೆ ಯಾವ ಬೆಳೆಯನ್ನು ಹೆಚ್ಚಾಗಿ ಬೆಳೆಯಬೇಕೆಂದು ಹೇಳುತ್ತೀರೋ ಅದಕ್ಕೆ ಹೆಚ್ಚು ಇನಿಷಿಯೇಟೀವ್ ಕೊಡಬೇಕು. ಹೀಗೆ ಮಾಡದೇ ಹೋದರೆ ಈ ಸಲ ಅಲ್ಲಿ ಒಂದುದೊಡ್ಡ ರಿವೋಲ್ಟ್ ಏಳತಕ್ಕ ಸಂಭವ ಇದೆ. ಏಕೆಂದರೆ ಎಷ್ಟೋಜನ ಕಬ್ಬು ಅಥವಾ ಬೇರೆ ಇನ್ನಾವುದಾದರೂ ಲಾಭಬರತಕ್ಕ ಬೆಳೆಯನ್ನು ತೆಗೆಯಬೇಕೆಂದು ಕಾತರರಾಗಿದ್ದಾರೆ. ಅದಕ್ಕೆ ಅನುಕೂಲ ಮಾಡಿಕೊಡಬೇಕು. ಹಾಗಲ್ಲದೆ ಇಂಥದನ್ನೇ ಬೆಳೆಯಬೇಕೆಂದು ಕಡ್ಡಾಯ ಮಾಡಿದರೆ ಅದು unnatural ಆಗುತ್ತದೆ. ಈ ಕಾನೂನು ಸಹ ಬಹಳ ದಿವಸ ನಡೆಯಲಾರದು.

ಅದಕ್ಕೋಸ್ಕರವೇ ಈ ವಿಷಯದಲ್ಲಿ ಮಾನ್ಯ ಮುಖ್ಯ ಮಂತ್ರಿಗಳಲ್ಲಿ ರೆಪ್ರಸೆಂಟ್ ಮಾಡಿದ್ದೇನೆ. ಅದನ್ನು ಪರ್ಯಾಲೋಚಿಸುತ್ತೇನೆಂದು ಹಿಂದೆ ಅವರು ಹೇಳಿದರು. ಆದರೆ ಇನ್ನೂ ವಿಚಾರಮಾಡಲಿಲ್ಲ. ಅದು ಬಹುಭಾಗದಜನರ ಮತ್ತು ರೈತರ ಪ್ರಶ್ನೆ. ಈಗಲಾದರೂ ಅದನ್ನು ಕೂಲಂಕಷವಾಗಿ ವಿಚಾರಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಫಾರೆಸ್ಟ್ ಬಗ್ಗೆ ಒಂದು ಮಾತು ಹೇಳಬೇಕೆಂದಿದ್ದೇನೆ. ಫಾರೆಸ್ಟ್ ಇಲಾಖೆಯ ಪಾಲಿಸಿ ಎಲ್ಲಿ ಗಿಡಗಳು ಬೆಳೆಯುತ್ತವೋ ಅಲ್ಲಿ ಅವು ಕಡ್ಡಾಯವಾಗಿ ಬೇಕು, ಎಲ್ಲಿ ಗಿಡಗಳು ಬೆಳೆಯುವುದಿಲ್ಲವೋ ಅಲ್ಲಿ ಗಿಡಗಳನ್ನು ದೊರಕಿಸಬಾರದು ಎಂದು ಇರಬಹುದು. ನಮ್ಮ ಭಾಗದಲ್ಲಿ ಎಷ್ಟು ಮೈಲಿಗಳದೂರ ಹೋದರೂ ಒಂದು ಎಲೆ ಗಿಡಕೂಡ ಸಿಕ್ಕುವುದಿಲ್ಲ. ಒಂದು ಹೊಸ ಗಿಡವನ್ನಾದರೂ ಟ್ರೇಸ್ ಮಾಡೋಣವೆಂದರೂ ಕೂಡ ಸಿಕ್ಕುವುದಿಲ್ಲ.

ಶ್ರೀ ಟಿ. ಮರಿಯಪ್ಪ.—ಹೊಸಗಿಡಗಳನ್ನು ಹಾಕಿದ್ದರೂ, ಜನಗಳು ಕಿತ್ತುಕೊಂಡು ಹೋಗಿದ್ದಾರೋ ಏನೋ ?

ಶ್ರೀ ಬಿ. ವಿ. ದೇಸಾಯಿ.—ಹಾಗೇನೂ ಇಲ್ಲ. ವನ ಮಹೋತ್ಸವ ಎನ್ನುವುದೇ ಇಲ್ಲ. ನನ್ನ ಜಿಲ್ಲೆ ತುಂಗಭದ್ರಾ ಮತ್ತು ಕೃಷ್ಣಾ ನದಿಗಳ ಮಧ್ಯೆ ಇದೆ. ಎಷ್ಟು ಫಲವತ್ತಾದ ಭೂಮಿ ಅಲ್ಲದೆ ಒಂದಾನೊಂದು ಕಾಲದಲ್ಲಿ ವಾಲಿ-ಸುಗ್ರೀವ ನೆಲೆಸಿದ್ದು ಅಲ್ಲಿಯೇ. ಅಂತಹ ದಂಡಕಾರಣ್ಯ ಭಾಗದಲ್ಲಿ ಒಂದು ಗಿಡವೂ ಬೇಡವೇ ? ಈ ಪಾಲಿಸಿ ಇಟ್ಟುಕೊಂಡು

(ಶ್ರೀ ಬಿ. ವಿ. ದೇಸಾಯಿ)

ಹೋದರೆ ಅರಣ್ಯ ಸಂಪತ್ತು ಬೆಳೆಯುವುದು ಹೇಗೆ? ಕೆಲವೇ ಭಾಗಗಳಲ್ಲಿ ಗಿಡಗಳು ನಿರ್ದಿಷ್ಟವಾಗಿ ಬೆಳೆದಿವೆ. ಅವನ್ನು ಕಟ್ ಮಾಡಿದರೆ ಹೇಗೆ?

ಶ್ರೀ ಟಿ. ಎನ್. ಮುಡಲಗಿರಿಗೌಡ (ಕುಣಿಗಲ್).—ಈ ವರ್ಷದಲ್ಲಿ ಎಷ್ಟು ಗಿಡಗಳನ್ನು ಹೊಸದಾಗಿ ಹಾಕಿದ್ದೀರಿ, ಎಷ್ಟರ ಮಟ್ಟಿಗೆ ಅಫಾರೆಸ್ಟೇಷನ್ ಮಾಡಿದ್ದೀರಿ ಎಂಬುದನ್ನು ಹೇಳಬೇಕು.

ಶ್ರೀ ಕೆ. ಎಫ್. ಪಾಟೀಲ್.—ಉತ್ತರ ಕೊಡುವಾಗ ತಿಳಿಸುತ್ತೇನೆ.

ಶ್ರೀ ಬಿ. ವಿ. ದೇಸಾಯಿ.—ಇನ್ನು ಅರಣ್ಯಖಾತೆಯ ಬಗ್ಗೆ ಹೇಳುವುದಾದರೆ, ಒಂದು ಸಾರಿ ಮುನಿರಾಬಾದ್ ಫಾರೆಸ್ಟ್ ಇಲಾಖೆಯವರು ಏನೇನು ಕೆಲಸಮಾಡಿದ್ದಾರೆ ಎಂಬುದನ್ನು ಮಂತ್ರಿಗಳಿಗೆ ತೋರಿಸಲು ಅಲ್ಲಿಗೆ ವ್ಯವಸಾಯ ಮಂತ್ರಿಗಳನ್ನು ಕರೆಸಿದ್ದರು. ಆ ಬಗ್ಗೆ ಅವರ ಅಭಿಪ್ರಾಯವನ್ನು ಈಗ ನಾನು ಹೇಳುವುದಿಲ್ಲ. ಅವರೇ ಹೇಳಬೇಕು. ಮುನಿರಾಬಾದ್ ಪ್ರದೇಶದಲ್ಲಿ ಡ್ರೈಏರಿಯಾ ಇಲ್ಲ. ಹೆಚ್ಚು ನೀರಾವರಿ ಇದೆ. ನರ್ಸರಿ ಗಿಡಗಳು ಅಲ್ಲಿನ ಭೂಮಿಗಳಲ್ಲಿ ಯಾವರೀತಿ ಇತ್ತು, ಈಗ ಅರಣ್ಯ ಶಾಖೆಯಲ್ಲಿ ಕೆಲಸ ಹೇಗೆ ನಡೆಯುತ್ತಿದೆ ಎಂಬುದನ್ನು ಮಾನ್ಯಮಂತ್ರಿಗಳೇ ಹೇಳಬೇಕು. ಇನ್ನೊಂದು ವಿಷಯ. ಎಲ್ಲಿ ಅರಣ್ಯ ದೊಡ್ಡದಾಗಿದೆಯೋ ಅಲ್ಲಿ ಮಳೆ ಹೆಚ್ಚಿಗೆ ಬೀಳುತ್ತದೆ. ಎಲ್ಲಿ ಅರಣ್ಯ ಕಡಿಮೆ ಇದೆಯೋ ಅಲ್ಲಿ ಮಳೆ ಕಡಿಮೆಯಾಗುತ್ತದೆ ಎಂಬುದಾಗಿ ಮಾನ್ಯ ಸದಸ್ಯರಾದಂಥ ಕೂರ್ಗಿನಿಂದ ಬಂದಿರತಕ್ಕ ಶ್ರೀ ಮಲ್ಲಪ್ಪನವರು ಹೇಳಿದರು. ಅವರು ಕಂಪು ಪ್ರದೇಶದಿಂದ ಬಂದಿರುವವರು. ಇತರ ಕೆಲವು ಪ್ರದೇಶಗಳ ವಿಷಯಗಳು ಅಷ್ಟಾಗಿ ಅವರಿಗೆ ಗೊತ್ತಾಗುವುದಿಲ್ಲ. ನಮ್ಮ ಭಾಗದಲ್ಲಿ ಎಷ್ಟು ಶ್ರಮವಿದೆ ಅವರಿಗೆ ತಿಳಿದಿಲ್ಲ. ಅವರ ಭಾಗದಲ್ಲಿ ನೂರಾರು ಇಂಚುಗಳಷ್ಟು ಮಳೆಯಾಗುತ್ತದೆ. ನಿಮ್ಮ ಭಾಗದಲ್ಲಿ 10-20 ಇಂಚುಗಳಷ್ಟು ಮಾತ್ರ ಮಳೆಯಾಗುತ್ತದೆ. ಅದೂ ಅಲ್ಲದೆ ರಾಯಚೂರ್‌ನಲ್ಲಿ ವಿಜಯನಗರದ ರಾಜರು ಆಳುತ್ತಿದ್ದ ಕಾಲದಲ್ಲಿ ನೂರಾರು ಯುದ್ಧಗಳಾಗಿವೆ. ಆರೀತಿ ಯುದ್ಧಗಳು ಆಗುವಾಗ ಎಷ್ಟೋ ಕಷ್ಟ ನಷ್ಟಗಳು ಆಗಿರುವಾಗ್ಗೆ, ಎಷ್ಟೋ ಗಿಡಗಳೂ ಸಹ ನಾಶವಾಗಿವೆ. ಹೀಗೆ ಅರಣ್ಯ ಸಂಪತ್ತು ಕೆಟ್ಟುಹೋಯಿತು. ಉತ್ಕೃಷ್ಟವಾದ ಭೂಮಿಯೆಲ್ಲಾ ಬಂಜರು ಭೂಮಿ ಆಯಿತು. ಆ ಪ್ರದೇಶಗಳಲ್ಲಿ ಮಳೆಯೂ ಕಡಿಮೆ ಆಯಿತು. ಅರಣ್ಯ ಬೆಳೆಯಲಿಲ್ಲ. ಇದೇ ರೀತಿ ಸಿಂಧನೂರು ತಾಲ್ಲೂಕಿನಲ್ಲಿ 145 ಹಳ್ಳಿಗಳಿವೆ. ಅವುಗಳ ಪೈಕಿ 45 ಬೇಚರಾಕ್ ಹಳ್ಳಿಗಳು. ಏಕೆ ಹೀಗಾಯಿತು ಎಂದರೆ ಆಗ್ರಾಮಗಳಲ್ಲಿ ಮಳೆಯೇ ಇಲ್ಲ. ಅರಣ್ಯವಿಲ್ಲ. ಅಲ್ಲಿ ಅರಣ್ಯರೋದನೆ ಮಾಡುವುದಷ್ಟೇ ಎಂದು ಹೇಳುತ್ತೇನೆ. ಆದರಿಂದ ನೀರಾವರಿ ಸೌಕರ್ಯ ಎಲ್ಲಿ ಇದೆಯೋ ಅಲ್ಲಾದರೂ ನಾಲ್ಕಾರು ಗಿಡಗಳನ್ನು ಬೆಳೆಸಬೇಕೆಂದು ನಾನು ಕೇಳುತ್ತಿದ್ದೇನೆ. ಗಂಗವತಿ ತಾಲ್ಲೂಕಿನಲ್ಲಿ ಸಣ್ಣ ಸಣ್ಣ ಕುಪ್ಪೆಗಳನ್ನು ಹರಾಜುಮಾಡುತ್ತಿದ್ದಾರೆ. ಯಾರು ಅವನ್ನು ತೆಗೆದುಕೊಳ್ಳುತ್ತಾರೋ ಅವರು ಕೆಲವನ್ನು ರಿಜರ್ವ್ ಏರಿಯಾಕ್ಕೋಸ್ಕರ ಬಿಟ್ಟು ಉಳಿದುದನ್ನು ಫೈರ್‌ವುಡ್‌ಗಾಗಿ ಉಪಯೋಗ ಮಾಡುತ್ತಿದ್ದಾರೆ. ಈ ವರ್ಷ ಹರಾಜಿನಲ್ಲಿ ಸಕ್ಕರೆ ಕಂಪನಿಯವರು ತೆಗೆದುಕೊಂಡರು. ಅವರೂ ಸಹ ಈ ಹರಾಜಿನೊಳಗೆ ಸೇರಿದ್ದರಿಂದ ಎಲ್ಲಾ ಸ್ಕೋಪ್ಸ್ ಅವರಿಗೇ ಹೋಯಿತು. ಇದರಿಂದ ಇವತ್ತಿನ ದಿವಸ ಗಂಗವತಿಯಲ್ಲಿ ಫೈರ್‌ವುಡ್ ಸಪ್ಲೈವಿಷಯ ಹೇಗಿದೆ ಎಂದರೆ ಒಂದು ಉದಾಹರಣೆ ಹೇಳುತ್ತೇನೆ. ಸುಮಾರು 1—1½ ತಿಂಗಳ ಹಿಂದೆ ಒಬ್ಬರ ಮನೆಯವರು ತೀರಿಕೊಂಡರು. ಅವರಿಗೆ ಸ್ಮಶಾನ ಯಾತ್ರೆಮಾಡಿಸಿ ಸುಡುವುದಕ್ಕೆ ಕಟ್ಟಿಗೆಯೇ ದೊರಕಲಿಲ್ಲ ಆಗ ನಾಲ್ಕೈದು ಮನೆಗಳಲ್ಲಿದ್ದ ಸೌದೆಯನ್ನು ತಂದುಕೊಂಡರು. ಮೃತರಾದವರು ಶ್ರೀ ಅದಿಯಪ್ಪನವರ ಹೆಂಗಸರು. ಲಿಂಗಸುಗೂರ್ ತಾಲ್ಲೂಕ್ ಆಫೀಸರಿಗೂ, ಗುಲ್ಬರ್ಗಾ ಆಫೀಸರಿಗೂ ದಯಮಾಡಿ ಗಂಗವತಿ ತಾಲ್ಲೂಕಿನಲ್ಲಿ ಕಟ್ಟಿಗೆಯನ್ನು ದೊರಕಿಸಿ ಕೊಡಿ ಎಂದು ಹೇಳಿದರೂ, ಅವರು ಲೋಕಲ್ ಆಫೀಸರಿಗೆ ಈಬಗ್ಗೆ ಆರ್ಡರ್ ಕೊಟ್ಟರೂ ಇವತ್ತಿನವರೆಗೂ ಗಂಗವತಿ ಊರಿನಲ್ಲಿ ಕಟ್ಟಿಗೆ ಅಭಾವ ಬಹಳವಾಗಿದೆ. ಇಂತಹ ಸಣ್ಣವಿಷಯವನ್ನು ಕುರಿತು ಈ ಸಭೆಯಲ್ಲಿ ಮಾತನಾಡುವುದಕ್ಕೆ ಇಷ್ಟವಿಲ್ಲ. ಇದನ್ನು ಆದಷ್ಟು ಜಾಗ್ರತೆ ಸರಿಪಡಿಸಬೇಕೆಂದು ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ.

ಇನ್ನು ಸಹಕಾರದ ಬಗ್ಗೆ ಹೇಳುವುದಾದರೆ ನನ್ನ ಕ್ಷೇತ್ರವಾದ ಗಂಗವತಿಯಲ್ಲಿ ಒಂದು ಲ್ಯಾಂಡ್ ಮಾರ್ಟ್‌ಗೇಜ್ ಬ್ಯಾಂಕಿನ ಒಂದು ಬ್ರಾಂಚ್ ಇದೆ. ರಾಯಚೂರಿನಲ್ಲಿಲ್ಲ. ಉಳಿದ ಭಾಗದಲ್ಲಿ ಇದೆಯೋ ಇಲ್ಲವೋ ಗೊತ್ತಿಲ್ಲ. ರಾಯಚೂರಿನ ಈ ಒಂದು ತಾಲ್ಲೂಕಿನಲ್ಲಿ ಮಾತ್ರ ಇದೆ. ಅದು ಹೆಸರಿಗೆ ಲ್ಯಾಂಡ್ ಮಾರ್ಟ್‌ಗೇಜ್ ಬ್ಯಾಂಕ್ ಆಗಿದೆಯೇ ಹೊರತಾಗಿ ಅದರಿಂದ ಏನೂ ಕೆಲಸವಾಗುತ್ತಿಲ್ಲ. ನೀರಾವರಿ ಪ್ರದೇಶಗಳು ನಮ್ಮ ತಾಲ್ಲೂಕಿನಲ್ಲಿ ಎಲ್ಲೆಲ್ಲಿ ಇವೆಯೋ ಅಲ್ಲೆಲ್ಲಾ ವ್ಯಾಲ್ಯುಯೇಷನ್ ಮಾಡಿ ಕಾನೂನು ಪ್ರಕಾರ ಎಷ್ಟೆಷ್ಟು ಸಾಲ ಕೊಡಬೇಕೋ ಅಷ್ಟನ್ನು ಕೊಡುತ್ತಿಲ್ಲ. ಪ್ರಾಸ್ಪೆಕ್ಟಿವ್ ವ್ಯಾಲ್ಯುಯೇಷನ್ ತೆಗೆದುಕೊಳ್ಳದೆ ಮಾಡುತ್ತಿದ್ದಾರೆ. ಅಸೆಸ್‌ಮೆಂಟ್ ಒಂದು ರೂಪಾಯಿ, 1½ ರೂಪಾಯಿ, ಹನ್ನೆರಡು ಆಣೆ, ಎಂಟು ಆಣೆ ಹೀಗೆ ವಿಧಿಸಿದ್ದಾರೆ. ಹೈದರಾಬಾದ್ ಆಕ್ಟ್ ಪ್ರಕಾರ 25 ರಷ್ಟು ಅಸೆಸ್‌ಮೆಂಟ್ ಕೊಡಬೇಕೆಂದಿದೆ. 28 ರೂಪಾಯಿಗಳಷ್ಟು ಡೆವಲಪ್‌ಮೆಂಟಿಗೆ ಸಿಕ್ಕುತ್ತದೆ. ಅದಕ್ಕೆ 800 ಸಾವಿರರೂಪಾಯಿಗಳಷ್ಟು ಈಗಾಗಲೇ ಬೆಲೆ ಇದೆ. ಈಗ ಒಂದು ಸಾವಿರ ರೂಪಾಯಿಗಳವರೆಗೆ ಆ ಬ್ಯಾಂಕಿನವರು ವ್ಯಾಲುಯೇಷನ್ ಅಸೆಸ್‌ಮೆಂಟ್ ಹಾಕಿದ್ದಾರೆಂದು ನಾನು ಹೇಳುತ್ತೇನೆ.

ಶ್ರೀ ಟಿ. ಮರಿಯಪ್ಪ.—ಲ್ಯಾಂಡ್ ಮಾರ್ಟ್‌ಗೇಜ್ ಬ್ಯಾಂಕ್ ಸರ್ಕಾರದ್ದಲ್ಲ. ಕೊ-ಆಪರೇಟಿವ್ ಇನ್‌ಸ್ಟಿಟ್ಯೂಟಿಗೆ ಸೇರಿದ್ದು.

ಶ್ರೀ ಬಿ. ವಿ. ದೇಸಾಯಿ.—ಬಳ್ಳಾರಿ ಭಾಗದಲ್ಲಿ ಮದ್ರಾಸ್ ಆಕ್ಟ್ ಪ್ರಕಾರ ಪ್ರಾಸ್ಪೆಕ್ಟಿವ್ ವ್ಯಾಲ್ಯುಯೇಷನ್ ತೆಗೆದುಕೊಂಡು ಸಾಲಕೊಡುತ್ತಾರೆ. ಆ ರೀತಿಯಾಗಿಯೇ ಇಲ್ಲಿಯೂ ಪ್ರಾಸ್ಪೆಕ್ಟಿವ್ ವ್ಯಾಲ್ಯುಯೇಷನ್ ತೆಗೆದುಕೊಂಡು ಸಾಲಕೊಡಬೇಕೆಂದು ಮಾನ್ಯ ಮಂತ್ರಿಗಳಿಗೆ ಕೇಳಿಕೊಳ್ಳುತ್ತೇನೆ. ಈ ಬಗ್ಗೆ ಸರ್ಕಾರಕ್ಕೆ ರೆಪ್ರಸೆಂಟ್ ಮಾಡಿದ್ದೇನೆ. ಲ್ಯಾಂಡ್ ಮಾರ್ಟ್‌ಗೇಜ್ ಬ್ಯಾಂಕಿನ ಚೇರ್‌ಮನ್ ಸಹ ರೆಪ್ರಸೆಂಟ್ ಮಾಡಿ ಸರ್ಕಾರದ ಕಡೆ ಇದಕ್ಕೆ ಸಂಬಂಧಪಟ್ಟ ಆಕ್ಟ್ ಬದಲಾವಣೆಯಾಗಬೇಕು ಎಂದು ಹೇಳಿದ್ದಾರೆ. ಮಾನ್ಯ ಸಹಕಾರ ಮಂತ್ರಿಗಳಾದ ಶ್ರೀ ಮಾಲಮರಿಯಪ್ಪನವರಿಗೂ ಈ ವಿಷಯವನ್ನು ತಿಳಿಸಿದ್ದೇನೆ. ಇದರ ಬಗ್ಗೆ ಸರ್ಕಾರದವರು ತೀವ್ರವಾಗಿ ಗಮನವನ್ನು ತೆಗೆದುಕೊಳ್ಳಬೇಕು.

2-30 P.M.

ಇನ್ನು ನಾನು ಸರ್ಕಾರದವರಲ್ಲಿ ಒಂದೇ ಒಂದು ವಿಷಯವನ್ನು ಹೇಳಬೇಕೆಂದಿದ್ದೇನೆ. ಆದರೆ ಈಗ ಮಾನ್ಯ ಮಂತ್ರಿಗಳಾದ ಶ್ರೀ ಚನ್ನಬಸಪ್ಪನವರು ಸಭೆಯಲಿಲ್ಲ. ಈ ದಿವಸ ನಮ್ಮಲ್ಲಿ ವಾಟರ್ ರೇಟು ಎಕರೆಗೆ 35 ರೂಪಾಯಿಗಳಿವೆ. ವಾಸ್ತವವಾಗಿ ಮೈಸೂರು ಸ್ಟೇಟಿನ ಎರಡನೆಯ ಭಾಗದಲ್ಲಿ 18 ರೂಪಾಯಿಗಳಿಂದ ಹಿಡಿದು 25, 30, 35 ರೂಪಾಯಿಗಳವರೆಗೂ ಇರುತ್ತದೆ. ಹಳೆಯ ಮೈಸೂರು ದೇಶದಲ್ಲಿ ಕಬ್ಬನ್ನು ಬೆಳೆಯುತ್ತಿರುವಂಥ ಭೂಮಿಗೂ ಕೂಡ ಈಗ ಎಕರೆಗೆ ಹತ್ತು ರೂಪಾಯಿಗಳಿಗಿಂತ ಹೆಚ್ಚು ವಾಟರ್ ರೇಟಿಲ್ಲ. ಆದರೆ ನಮ್ಮ ಪ್ರಾಂತ್ಯದಲ್ಲಿ ಕಬ್ಬನ್ನು ಬೆಳೆಯಲಿ ಅಥವಾ ಬೆಳೆಯದಿರಲಿ ಅಲ್ಲೀಗ ಎಕರೆಗೆ 35 ರೂಪಾಯಿ ವಾಟರ್ ರೇಟನ್ನು ಇಟ್ಟಿದಾರೆ. ಆದರೆ ಈಗತಾನೇ ಒಂದು ವಿಷಯವನ್ನು ಒಬ್ಬ ಮಾನ್ಯ ಗೆಳೆಯರು ಹೇಳಿದರು ಹೈದರಾಬಾದ್ ಕರ್ಣಾಟಕದಲ್ಲಿ ಈ ವಾಟರ್ ರೇಟ್ 35 ರೂಪಾಯಿಗಳಿಂದ 95 ರೂಪಾಯಿಗಳವರೆಗೂ ಇದೆ-ಎಂದು. ಆದರೆ ನಾವು ಎಲ್ಲಿಯವರೆಗೂ ಹೀಗೆ ಒಂದು ಡಿಫರೆನ್ಸ್ ಇರತಕ್ಕ ರೇಟಿನ ಪ್ರಕಾರ ಇವರಿಗೆ ಟ್ಯಾಕ್ಸನ್ನು ಕೊಡುತ್ತಿರಬೇಕೋ ಗೊತ್ತಿಲ್ಲ. ಇದನ್ನು ತಪ್ಪಿಸಲು ಸರ್ಕಾರದವರು ಕೂಡಲೆ ದೇಶದ ಸಮಾಗ್ರ ಭಾಗಗಳಿಗೂ ಒಂದೇರೀತಿಯ ಕಾನೂನನ್ನು ಜಾರಿಗೆ ತರಬೇಕಾದದ್ದು ಅತ್ಯಗತ್ಯ. ಇದಕ್ಕೆ ಸರ್ಕಾರ ತಕ್ಕ ಏರ್ಪಾಡನ್ನು ಮಾಡಬೇಕು. ಆ ಭಾಗದ ರೈತರನ್ನು ಉಳಿಸಬೇಕೆಂಬ ಆಸೆ ಸರ್ಕಾರದವರಿಗಿದ್ದರೆ ಈ ಅನ್ಯಾಯವನ್ನು ಕೂಡಲೆ ತಪ್ಪಿಸಬೇಕೆಂದು ಹೇಳುತ್ತೇನೆ. ಇಲ್ಲದಿದ್ದರೆ ನೀವು ಇದಕ್ಕೆ ಜವಾಬುದಾರರಾಗುತ್ತೀರೆಂದು ಹೇಳುತ್ತೇನೆ. ಸರ್ಕಾರದವರು ಈರೀತಿ ವಾಟರ್ ರೇಟನ್ನು ಹಾಕಲು ಹೊರಟರೆ ಅಲ್ಲಿ ರೈತರಿಗೆ ತೆರಲಿಕ್ಕೆ ಶಕ್ತಿಯಿಲ್ಲದೆ ಅವರು ಹೊರಗಡೆಯಿಂದ ಬಂದಿರತಕ್ಕ ಜನರಿಗೆ ತಮ್ಮ ಆಸ್ತಿ ಪಾಸ್ತಿಗಳನ್ನು ಮಾರಿಕೊಂಡು ಕಡೆಗೆ ಅವರು ಆ ಹೊಸಜನರಿಗೆ ಕೂಲಿಗಾರರಾಗಿರಬೇಕಾಗುತ್ತದೆ, ಈ ವಿಚಾರವನ್ನು ಸರ್ಕಾರದವರು ಕೂಡಲೆ ತಮ್ಮ ಮರ್ಜಿಗೆ ತೆಗೆದುಕೊಂಡು ಇದನ್ನು ಸರಿಪಡಿಸಬೇಕೆಂದು ಹೇಳಿ ನನಗೆ ಇಷ್ಟು ಮಾತುಗಳನ್ನಾಡಲು ಅವಕಾಶ ಕಲ್ಪಿಸಿಕೊಟ್ಟದ್ದಕಾಗಿ ನಾನು ಅಧ್ಯಕ್ಷರಿಗೆ ನನ್ನ ವಂದನೆಗಳನ್ನರ್ಪಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

Mr. SPEAKER.—The House will now adjourn for recess and meet after half an hour.

———

The House adjourned for recess at Thirty-five Minutes past Two of the Clock and re-assembled at Ten Minutes past three of the Clock.

———

[MR. SPEAKER in the Chair.]

ಶ್ರೀ ಸಿ. ಕೆ. ರಾಜಯ್ಯಶೆಟ್ಟಿ (ಚಿಕ್ಕನಾಯಕನಹಳ್ಳಿ).—ಮಾನ್ಯ ಸಭಾಪತಿಗಳೇ, ದೇಶದಲ್ಲಿ ಇಂದು ವ್ಯವಸಾಯದ ಮುಂದೆ ಎರಡು ದೊಡ್ಡ ಸಮಸ್ಯೆಗಳಿವೆ. ಒಂದು ಸರ್ಕಾರದ ವ್ಯವಸಾಯಕ್ಕೂ ಮತ್ತು ಸಮಾಜಕ್ಕೂ ಇರುವ ಸಂಬಂಧದ ರೀತಿ, ಮತ್ತೊಂದು ವ್ಯವಸಾಯವನ್ನು ಉತ್ತಮಪಡಿಸುವ ರೀತಿ. Method of cultivation ಒಂದು, Socio-agrarian policy of Government ಎಂದು ಇನ್ನೊಂದು. ಇವೆರಡನ್ನೂ ನೋಡಿಕೊಂಡರೆ ನಿಜವಾಗಿಯೂ ಕೂಡ ದೇಶದಲ್ಲಿ ವ್ಯವಸಾಯ ಏನೂ ಪ್ರಗತಿ ಹೊಂದುವುದಕ್ಕೆ ಸಾಧ್ಯವಿಲ್ಲವೆನ್ನುವ ವ್ಯತಿರೇಕವಾದ ಭಾವನೆಗಳು ಕಂಡುಬರುತ್ತವೆ. ಆಹಾರವನ್ನು ಜಾಸ್ತಿ ಬೆಳೆಯಬೇಕು, ಆಹಾರದ ಉತ್ಪತ್ತಿ ಜಾಸ್ತಿಯಾಗಬೇಕು, ವ್ಯವಸಾಯಕ್ಕೆ ಜಾಸ್ತಿ ಪ್ರೋತ್ಸಾಹ ಕೊಡಬೇಕು. ಪಂಡಿತ ನೆಹರೂ ಅವರುಕೂಡ "Nothing can be more important in India than improvement in agriculture, particularly improvement in the cereal situation. Nothing can be given a higher priority than this." ಎಂದು ಒಮ್ಮೆ ಹೇಳಿದ್ದಾರೆ. ಇವೊತ್ತು ನಾವು ಲೆಕ್ಕ ಹಾಕಿ ನೋಡೋಣ. ಭೂಸುಧಾರಣೆ ವಿಷಯ ದೇಶದ ಮುಂದೆ ಬಂದ ರಾಗಾಯ್ತು, ಎಂದರೆ ಸುಮಾರು ಎರಡುವರ್ಷಗಳಿಂದ ಸರ್ಕಾರದ ಹಿಡುವಳಿಯಲ್ಲಿರುವ 23 ಲಕ್ಷ ಎಕರೆ ಜಮೀನನ್ನು ಸಾಗುವಳಿಮಾಡುವುದಕ್ಕೆ ದೊಡ್ಡ ಆತಂಕ ಬಂದಿದೆ. ಸರ್ಕಾರ ಜಮೀನನ್ನು ಜನಗಳಿಗೆ ಕೊಡುವಹಾಗೂ ಇಲ್ಲ; ತಾವು ವ್ಯವಸಾಯ ಮಾಡುವಹಾಗೂ ಇಲ್ಲ. ಸರಾಸರಿ ಐದು ಲಕ್ಷ ಎಕರೆಯನ್ನು ವ್ಯವಸಾಯಕ್ಕೆ ಕೊಟ್ಟಿದ್ದ ಪಕ್ಷದಲ್ಲಿ ಕೊನೆಯ ಪಕ್ಷ ಹತ್ತು ಲಕ್ಷ ಪಲ್ಲ ಆಹಾರ ಧಾನ್ಯ ಜಾಸ್ತಿ ಬೆಳೆಯುತ್ತಿತ್ತು ಎಂದು ನಾನು ಹೇಳಬಲ್ಲೆ.

ಅದೇ ರೀತಿ ತೆಂಗಿನ ವ್ಯವಸಾಯವನ್ನು ತಗೆದುಕೊಂಡರೆ, ಚಿಕ್ಕನಾಯಕನಹಳ್ಳಿ, ತಿಪಟೂರು, ಗುಬ್ಬಿ ಮತ್ತು ಸಿರಾ, ಈ ನಾಲ್ಕು ತಾಲ್ಲೂಕುಗಳಲ್ಲಿ ಒಂದು ಲಕ್ಷ ಎಕರೆ ಈಚಲು ವನವಿದೆ. ಇವೊತ್ತು ಪಾನನಿರೋಧದ ಬಗ್ಗೆ ಯಾವ ಒಂದು ಪೂರ್ಣಅಭಿಪ್ರಾಯವನ್ನೂ ಸರ್ಕಾರ ಹೊಂದದೆ ಇರುವುದರಿಂದ, ಈ ಒಂದು ಲಕ್ಷ ಎಕರೆಯಿಂದ ಎಕ್ಸೈಸ್ ಇಲಾಖೆಗೆ ಆದಾಯವಿಲ್ಲ, ತೆಂಗಿನಬೆಳೆಗೂ ಪ್ರೋತ್ಸಾಹವನ್ನು ಕೊಡುತ್ತಿಲ್ಲ. ಒಂದು ಎಕರೆಗೆ 40 ಗಿಡಗಳಂತೆ ಒಂದು ಲಕ್ಷ ಎಕರೆಯಲ್ಲಿ 40 ಲಕ್ಷ ತೆಂಗಿನಗಿಡಗಳನ್ನು ನೆಡಬಹುದು. 40 ಲಕ್ಷ ತೆಂಗಿನ ಗಿಡಗಳಿಂದ, ಮರವೊಂದಕ್ಕೆ 60 ಕಾಯಿಗಳಂತೆ 2,400 ಲಕ್ಷ ತೆಂಗಿನಕಾಯಿಗಳನ್ನು ಪಡೆಯಬಹುದು. ಇವೊತ್ತು ಇಂಡಿಯದೇಶ ಪ್ರತಿ ವರ್ಷವೂ ಎರಡು ಕೋಟಿ ರೂಪಾಯಿಗಳ ತೆಂಗಿನ ಕಾಯನ್ನು ಬೇರೆ ದೇಶಗಳಿಂದ ತರಿಸುತ್ತಿದೆ. ಮಾನ್ಯ ಮಂತ್ರಿಗಳು ಈ ಬಗ್ಗೆ ಅಂಕಿ ಅಂಶಗಳನ್ನು ನೋಡಿದರೆ ಗೊತ್ತಾಗುತ್ತದೆ. ನಮಗೆ ಸಿಲೋನ್‌ನಿಂದ ತೆಂಗಿನಕಾಯಿ ಬರುತ್ತಿದೆ. ಇದನ್ನು ನೋಡಿದರೆ ಸರ್ಕಾರದ ಧೋರಣೆ ಆಹಾರವನ್ನು ಜಾಸ್ತಿಬೆಳೆಯಬೇಕು ಎಂದು ಇದ್ದ ಪಕ್ಷದಲ್ಲಿ, ಕ್ಲಿಷ್ಟವಾದ ಸಮಸ್ಯೆಗಳಲ್ಲಿ ತಕ್ಷಣ ನಿರ್ಧಾರವನ್ನು ತೆಗೆದುಕೊಳ್ಳಬೇಕು ಎಂದು ನನಗನ್ನಿಸುತ್ತದೆ.

[SRI ALUR HANUMANTHAPPA in the Chair.]

ನಾವು ಖುಷ್ಕಿ ಜಮೀನನ್ನು ತೆಗೆದುಕೊಂಡರೆ ಒಂದು ಎಕರೆ ಹತ್ತಿ ಬೆಳೆಗೆ 300 ರೂಪಾಯಿ ಬರುತ್ತದೆ; ಕಡ್ಲೆಕಾಯಿ ಬೆಳೆಗೆ 200 ರೂಪಾಯಿ ಬರುತ್ತದೆ. ಒಂದು ಎಕರೆಯಲ್ಲಿ ಬೆಳೆದ ರಾಗಿ ಬೆಳೆಗೆ 100 ರೂಪಾಯಿ ಬರುತ್ತದೆ. ಹಾಗೆಯೇ ತರೀ ಮತ್ತು ಬಾಗಾಯ್ತು ಜಮೀನಿನಲ್ಲಿ ಭತ್ತ ಬೆಳೆದರೆ ಒಂದು ಎಕರೆಗೆ 300 ರೂಪಾಯಿ ಬರುತ್ತದೆ, ಕಬ್ಬನ್ನು ಬೆಳೆದರೆ 600 ರೂಪಾಯಿ ಬರುತ್ತದೆ; sugar factory area ಆದರೆ ಒಂದುಸಾವಿರ ರೂಪಾಯಿ ಬರುತ್ತದೆ. Mulberry ಬೆಳೆದರೆ ಒಂದು ಸಾವಿ

(ಶ್ರೀ ಸಿ. ಕೆ. ರಾಜಯ್ಯಶೆಟ್ಟಿ)

ದವರೆಗೂ ಬರುತ್ತದೆ. ಹೀಗಿರುವಾಗ ಯಾವರೀತಿ ಆಹಾರ ಬೆಳೆಯುವುದಕ್ಕೆ ಜನ ಮುಂದೆ ಬರುತ್ತಾರೆ? ಆಹಾರದ ಉತ್ಪತ್ತಿ ಮಾಡುವುದಕ್ಕೆ ಹೇಗೆ ಸಾಧ್ಯ. ಇದನ್ನು ಸರ್ಕಾರ ದೀರ್ಘವಾಗಿ ಯೋಚನೆಮಾಡಬೇಕು. ಇವೊತ್ತು ನನ್ನ ಮಿತ್ರರೊಬ್ಬರು ಸಕ್ಕರೆ ಕಾರ್ಖಾನೆಯನ್ನು ಕೊಡಿ ಎಂದು ಕೇಳಿದರು. ಆಹಾರ ಬೆಳೆಯುತ್ತಿರುವುದು ನಮ್ಮ ದೇಶಕ್ಕೆ ಸಾಲದೆ ಇರುವಾಗ ಸಕ್ಕರೆ ಕಂಪೆನಿಗಳಿಗೆ ಪ್ರೋತ್ಸಾಹ ಕೊಡಕೂಡದು ಇವೊತ್ತು ನಮ್ಮ ದೇಶಕ್ಕೆ ಸಕ್ಕರೆ ಎಷ್ಟು ಬೇಕಾಗಿದೆಯೋ ಅದಕ್ಕಿಂತ ಹೆಚ್ಚು ಉತ್ಪತ್ತಿ ಆಗುತ್ತಿದೆ. ಕೋಟ್ಯಂತರ ರೂಪಾಯಿಗಳನ್ನು ಆಹಾರಕ್ಕಾಗಿ ಪ್ರತಿವರ್ಷವೂ ಪರದೇಶಗಳಿಗೆ ಕೊಡುತ್ತಿದ್ದೇವೆ. ಆಹಾರಕ್ಕಾಗಿ ಸರ್ಕಾರ ಪ್ರೋತ್ಸಾಹ ಕೊಡಬೇಕು. ಜಾಸ್ತಿ ಉತ್ಪತ್ತಿ ಯಾವುದರಿಂದ ಇದೆಯೋ ಅದಕ್ಕೆ ಪ್ರೋತ್ಸಾಹ ಕೊಡಬಾರದು.

ದ್ವಿತೀಯ ಪಂಚವಾರ್ಷಿಕ ಯೋಜನೆ ಆರಂಭವಾಗುವ ಮುನ್ನ ನಾಲ್ಕು ಬೆಳೆಗಳಲ್ಲಿ ಸ್ವಯಂ ಪೂರ್ಣತೆಯಾಗುವಂತೆ ಮಾಡಬೇಕೆಂದು ಭಾರತಸರ್ಕಾರ ಒಂದು ಯೋಜನೆಯನ್ನು ಹಾಕಿತು. ಮೊದಲನೆಯದು ಆಹಾರದಬೆಳೆ, ಎರಡನೆಯದು jute, ಮೂರನೆಯದು ಹತ್ತಿ, ನಾಲ್ಕನೆಯದು ಕಬ್ಬು ಅಥವಾ ಹತ್ತಿ. ಇದರಲ್ಲಿ ಇತ್ತೀಚೆಗೆ ದೊರಕಿರುವ ಅಂಕಿ ಅಂಶಗಳನ್ನು ನೋಡಿದ ಪಕ್ಷದಲ್ಲಿ ಮೂರು ಪದಾರ್ಥಗಳು ಮಾತ್ರ ಜಾಸ್ತಿ ಪ್ರಗತಿ ಹೊಂದಿದೆ. ಆದರೆ ಆಹಾರದ ಪ್ರಗತಿ ಅಷ್ಟುಚೆನ್ನಾಗಿ ಆಗಿಲ್ಲವೆಂದು ನಾನು ಹೇಳಬೇಕಾಗಿದೆ. ಅದಕ್ಕೆ ಒಂದಲ್ಲ ನಾಲ್ಕಾರು ಕಾರಣಗಳಿವೆ. ಮೊದಲನೆಯದು ನಾನು ಹೇಳಿದಹಾಗೆ ಆಹಾರದ ಬೆಳೆಯಿಂದ ರೈತನಿಗೆ ಬರುವ ಉತ್ಪತ್ತಿ ಕಡಮೆ. ಎರಡನೆಯದು ಎಂದರೆ ಆಹಾರದ ಮೇಲೆ ಅನೇಕ ತರಹ ಕಂಟ್ರೋಲ್ ಹುಕುಂಗಳ ದೊಡ್ಡ ಭೂತ. ಕುಳಿತಿದೆ ಇದನ್ನು ಸರ್ಕಾರ ಯಾವಾಗ ಜಾರಿ ಮಾಡಿತೋ ಆಗಿನಿಂದ ಒಂದು ಪಲ್ಲಾ ಭತ್ತವನ್ನು ಮಿಲ್ಲಿಗೆ ಹಾಕಬೇಕಾದ ರೆಪರ್ಮಿಟ್ ಬೇಕು ಇವೆಲ್ಲ ಕಾರಣಗಳಿಂದ ಆಹಾರದಬೆಳೆ ಇತರ ಪದಾರ್ಥಗಳ ಬೆಳೆಗಳಿಗಿಂತ ಬಹಳ ಕಡಮೆ ಇದೆ. ಹೀಗಿರುವಾಗ ಆಹಾರದ ಉತ್ಪತ್ತಿ ಹೇಗೆ ಹೆಚ್ಚಾಗುತ್ತದೆ! ಒಂದೇ ಒಂದು ಅಂಶವನ್ನು ಹೇಳುತ್ತೇನೆ. ನಮ್ಮ ದೇಶವನ್ನು ಇತರ ದೇಶಗಳಿಗೆ ಹೋಲಿಸಿನೋಡಿದರೆ ಸಾಮಾನ್ಯವಾಗಿ ನಮ್ಮ ದೇಶದ ರೈತನ ಆದಾಯ ಬಹಳ ಹಿಂದೆ ಇದೆ. ಅಮೆರಿಕಾ ದೇಶದಲ್ಲಿ ವ್ಯವಸಾಯವನ್ನು ಮಾಡುವ ರೈತನ ಆದಾಯ ಒಂದು ವರ್ಷಕ್ಕೆ ಸರಾಸರಿ 1453 ಡಾಲರುಗಳು.

		ಡಾಲರುಗಳು.
ಇಂಗ್ಲೆಂಡಿನಲ್ಲಿ	...	773
ಕೆನಡಾ	...	870
ಡೆನ್ಮಾರ್ಕ್	...	689
ಆಸ್ಟ್ರೇಲಿಯಾ	...	679
ಇಟಲಿ	...	255
ಕೊಲಂಬಿಯ	...	132
ಮೆಕ್ಸಿಕೊ	...	121
ಜಪಾನ್	...	100
ಕ್ಯೂಬಾ	...	296
ಯುಗೊಸ್ಲೇವಿಯಾ	...	166
ಗ್ರೀಸ್	...	128
ಬ್ರೆಜಿಲ್	...	112
ಇಂಡಿಯಾ	...	57

ನಮ್ಮ ದೇಶದ ರೈತನ ಸರಾಸರಿ ವರಮಾನ 57 ಡಾಲರುಗಳು. ಆಹಾರ ಧಾನ್ಯಗಳಲ್ಲದೆ ಇತರ ವಾಣಿಜ್ಯ ಬೆಳೆಗಳನ್ನು ಬೆಳೆದೂ ಕೇವಲ 57 ಡಾಲರು ವರಮಾನವಿರುವಾಗ ನಮ್ಮ ದೇಶ ಆಹಾರದಲ್ಲಿ ಪರಿಪೂರ್ಣತೆಯನ್ನು ಪಡೆಯಬೇಕೆಂದು ಹೇಳಿದರೆ ಯಾವ ಉತ್ಸಾಹದಿಂದ ರೈತ ಕೆಲಸಮಾಡುತ್ತಾನೆಂದು ಕೇಳಬೇಕಾಗಿದೆ.

ದೇಶದಲ್ಲಿ ಇನ್ನೊಂದು ದೊಡ್ಡ ಸಮಸ್ಯೆಯೆಂದರೆ, Socio-agrarian policy, ಸರ್ಕಾರದ ಭೂನೀತಿಯಿಂದ ಕಳವಳವುಂಟಾಗಿದೆ. ರಷ್ಯಾದಲ್ಲಿ ಕಲೆಕ್ಟಿವ್ ಫಾರ್ಮಿಂಗ್ ಇದೆ, ಇದರಿಂದ ಆಹಾರ ಹೆಚ್ಚು ಉತ್ಪತ್ತಿಯಾಗುತ್ತದೆಂದು ಶ್ರೀಮಾನ್ ಹನುಮಂತಯ್ಯನವರು ಹೇಳಿದರು. ಬೇರೆ ಬೇರೆ ದೇಶಗಳಲ್ಲಿ ಬೇರೆ ಬೇರೆ ರೀತಿಯ ವ್ಯವಸ್ಥೆ ಇದೆ. ಒಂದು ಕಡೆ ರಷ್ಯಾದಲ್ಲಿ Collective farming ಇದೆ, ಇನ್ನೊಂದು ಕಡೆ ಅಮೆರಿಕದಲ್ಲಿ Extensive farming ಇದೆ, ಮತ್ತೊಂದು ಕಡೆ ಜಪಾನ್‌ನಲ್ಲಿ Intensive farming ಇದೆ, ಚೈನಾದಲ್ಲಿ Co-operative farming ಇದೆ, ಹೀಗೆ ನಾಲ್ಕು ಬೇರೆ ಬೇರೆ ಇದ್ದರೂ ಆ ದೇಶಗಳ ಆಹಾರೋತ್ಪತ್ತಿ ನಮ್ಮ ದೇಶಗ ಮೂರರಷ್ಟು ನಾಲ್ಕರಷ್ಟು ಇದೆ. ಇಲ್ಲಿ ಯಾರು ತಜ್ಞರಿದ್ದಾರೋ ಅವರಿಗೆ ಅವಕಾಶ ಕೊಡದೆ ಸುಮ್ಮನೆ ಭೂಸುಧಾರಣೆ, ಕೋ-ಆಪರೇಟಿವ್ ಫಾರ್ಮಿಂಗ್ ಎಂದು ಹೇಳುತ್ತಾ ಜನರ ತಲೆಯನ್ನು ಕೆಡಿಸಿ ಇಡೀ ಸಮಾಜವೇ ಇದರಿಂದ ಹಾಳಾಗುತ್ತಿದೆ. ಇದನ್ನು ಕೂಡ ಎರಡು-ಮೂರು ವರ್ಷಗಳಲ್ಲಿ ಕಾರ್ಯರೂಪಕ್ಕೆ ತರುವುದನ್ನು ಐದು ಹತ್ತು ವರ್ಷ ಮಾಡುತ್ತಾರೆ. ಇದರಿಂದ ಯಾವ ವಿಧಾನದಲ್ಲಿ ವ್ಯವಸಾಯ ಹೋಗುತ್ತದೆಯೋ ಅದೂ ತಪ್ಪಿ ಅವ್ಯವಸ್ಥೆಯಾಗುತ್ತಿದೆ. ಸರ್ಕಾರಕ್ಕೆ ನಿಜವಾಗಿಯೂ ಆಹಾರ ಹೆಚ್ಚು ಬೆಳೆಯಬೇಕು, ರೈತನ ಆದಾಯ ಹೆಚ್ಚಬೇಕು ಎಂದಿದ್ದರೂ ಇದೇ ದೊಡ್ಡ ಕಂಟಕಪ್ರಾಯವಾಗಿದೆ. ಈ ಹೊತ್ತು ಕೋ-ಆಪರೇಟಿವ್ ಫಾರ್ಮಿಂಗ್ ಮಾಡಬೇಕೆಂದರೆ, Cash credit ಸಹಕಾರ ಸಂಘಗಳು ಹೇಗೆ ನಡೆಯುತ್ತಿವೆ, ಮಲ್ಟಿಪರ್‌ಪಸ್ ಸಹಕಾರ ಸಂಘಗಳು ಹೇಗೆ ನಡೆಯುತ್ತಿವೆ, ಇಂಡಸ್ಟ್ರಿಯಲ್ ಕೋ-ಆಪರೇಟಿವ್ ಸೊಸೈಟಿಗಳು ಹೇಗೆ ನಡೆಯುತ್ತಿವೆ ಎಂಬುದನ್ನು ನೋಡಿದರೆ ಶ್ರೀಮಾನ್ ಮುಕ್ಕಣ್ಣಪ್ಪನವರು ಹೇಳಿದಹಾಗೆ, ಇವುಗಳು ಸಾಮಾನು ಶೇಖರಿಸುವುದು, ಮಾರುವುದು ಮುಂತಾದ ಕೆಲಸಗಳಲ್ಲಿ ನೂರಕ್ಕೆ ತೊಂಭತ್ತರಷ್ಟು ದೋಷವಿದೆ ಎಂದು ಹೇಳಿದರೆ ತಪ್ಪಾಗಲಾರದು. ವಿವಿಧೋದ್ದೇಶ ಸಹಕಾರ ಸಂಘಗಳು ಎಷ್ಟರಮಟ್ಟಿಗೆ ಕೆಲಸ ಮಾಡುತ್ತಿವೆ ಎಂಬುದನ್ನು ನೋಡಿದರೆ, ನಿಜವಾಗಿಯೂ ಕೋ-ಆಪರೇಟಿವ್ ಫಾರ್ಮಿಂಗ್ ಯೋಜನೆಯನ್ನು ಇನ್ನೂ ಹತ್ತು ಇಪ್ಪತ್ತು ವರ್ಷ ತಡೆದಿಡುವುದು ಒಳ್ಳೆಯದೆಂದು ವಿಷಾದದಿಂದ ಹೇಳಬೇಕಾಗಿದೆ. Co-operation has failed to such an extent. ಸಮಾಜದ ಹಿತದೃಷ್ಟಿಯಿಂದ ಸಹಕಾರಬೇಕು. ಇರುವ ಸಹಕಾರವನ್ನು ಉತ್ತಮಗೊಳಿಸಿ ಆಮೇಲೆ ಸರ್ವಿಸ್ ಕೋ-ಆಪರೇಟಿವ್ ಸಂಘಗಳನ್ನು ಮಾಡಬಹುದು........

ಶ್ರೀ ಕೆ. ಎಸ್. ಸೂರ್ಯನಾರಾಯಣರಾವ್ (ಮೈಸೂರು ಸಿಟಿ).—ಇದು ತಮ್ಮ ಸ್ವಂತ ಅಭಿಪ್ರಾಯವೋ ಅಥವಾ ಪಕ್ಷದ ಅಭಿಪ್ರಾಯವೋ?

ಶ್ರೀ ಸಿ. ಕೆ. ರಾಜಯ್ಯಶೆಟ್ಟಿ.—ಹೇಗಾದರೂ ಆಗಲಿ. ಸರ್ವೆ ಮಾಡಿದರೆ, ಅಂಕಿಅಂಶಗಳನ್ನು ನೋಡಿದರೆ, ಜನತೆಯ ನೈತಿಕಮಟ್ಟದಿಂದ ಸಹಕಾರ ಸಂಘಗಳು

ಎಷ್ಟುಮಟ್ಟಿಗೆ ಯಶಸ್ವಿಯಾಗಿ ನಡೆದಿವೆ ಎಂಬುದನ್ನು ನೋಡಿದರೆ, ಸ್ಥಳೀಯ ಸಂಸ್ಥೆಗಳನ್ನು ನೋಡಿದರೆ, ಖಂಡಿತವಾಗಿಯೂ ಕೋ-ಆಪರೇಟಿವ್ ಫಾರ್ಮಿಂಗ್‌ನ್ನು ಯಾವ ಒಂದು ಯೋಜನೆಯೂ ಇಲ್ಲದೆ ಮಾಡುವುದು ಶುದ್ಧ ತಪ್ಪು. ಈಗಾಗಲೇ ಕೋ-ಆಪರೇಟಿವ್ ಫಾರ್ಮಿಂಗ್ ಆಗಿರುವುದನ್ನು ತೆಗೆದುಕೊಳ್ಳೋಣ. ನಮ್ಮ ತಾಲ್ಲೂಕಿನಲ್ಲಿ ಒಂದು ಕಡೆ ಕೋ-ಆಪರೇಟಿವ್ ಫಾರ್ಮಿಂಗ್ ಸೊಸೈಟಿಗೆ ಇಪ್ಪತ್ತು ಮೂವತ್ತು ಸಾವಿರ ರೂಪಾಯಿ ಕೊಟ್ಟಿದೆಯೆಂದು ಹೇಳುತ್ತಾರೆ. ಆದರೆ ಅಲ್ಲಿರುವ ಸ್ಥಿತಿಯನ್ನು ನೋಡಿದರೆ, ಹೋದ ವರ್ಷಕ್ಕಿಂತ ಈ ವರ್ಷ ಅವ್ಯವಸ್ಥೆ ಹೆಚ್ಚಾಗಿದೆ. ಮುಖ್ಯವಾಗಿ ಇದಕ್ಕೆ ಕಾರಣ, ಅಲ್ಲಿರುವ ಸೆಕ್ರೆಟರಿ ವ್ಯವಸಾಯ ತಜ್ಞರಲ್ಲ. ಯಾವ ಬೆಳೆಯನ್ನು ಬೆಳೆಯಬೇಕು, ಆ ಸಹಕಾರ ಸಂಘದ ಕ್ಷೇತ್ರದ ವಿಸ್ತೀರ್ಣ ಎಷ್ಟಿದೆ, ಅದರಲ್ಲಿ ನೀರಾವರಿ ಎಷ್ಟು, ಖುಷ್ಕಿ ಎಷ್ಟು ಮಾಡಬೇಕು, ಪ್ಲಾಂಟೇಷನ್ ಎಷ್ಟು ಮಾಡಬೇಕು ಎಂಬುದು ಅವರಿಗೆ ಗೊತ್ತಿಲ್ಲ. ಸುಮ್ಮನೆ ಅರ್ಥವಿಲ್ಲದೆ ಸಹಕಾರ ವ್ಯವಸಾಯ ಎಂದರೇನು ಪ್ರಯೋಜನ? ಇದರ ಉದ್ದೇಶವೇನಿದೆ, ಇದರ ಮೂಲವೇನಿದೆ, ಯಾವರೀತಿ ಜಾರಿಗೆ ತರುವುದು ಎಂಬುದನ್ನು ಹೇಳುವುದಾದರೆ, ನನಗೆ ಎಷ್ಟುಮಟ್ಟಿಗೆ ಗೊತ್ತಿದೆಯೋ ಅವರಿಗೂ ಅಷ್ಟೇ ಮಟ್ಟಿಗೆಗೊತ್ತಿದೆ ಎಂದು ಖಂಡಿತವಾಗಿ ಹೇಳಬಹುದು. ಪಂಡಿತ ನೆಹರೂ ಅವರು ಚೀನಾ ದೇಶಕ್ಕೆ ಹೋಗಿ ಅಲ್ಲಿ ಕೋ-ಆಪರೇಟಿವ್ ಫಾರ್ಮಿಂಗ್ ಚೆನ್ನಾಗಿದೆ ಎಂದು ಹೇಳಿದರು. ಜಪಾನಿಗೆ ಹೋಗಿ ಬಂದು ಇಂಟೆನ್ಸಿವ್ ಫಾರ್ಮಿಂಗ್ ಚೆನ್ನಾಗಿದೆ ಎಂದು ಹೇಳಿದರು, ರಷ್ಯಾದಲ್ಲಿ ಕಲೆಕ್ಟಿವ್ ಫಾರ್ಮಿಂಗ್ ಚೆನ್ನಾಗಿದೆ ಎಂದರು. ಇದರಿಂದ ಇಲ್ಲಿ ಒಂದು ಭ್ರಾಂತಿ ಬಂದಿದೆ. ವ್ಯವಸಾಯಾಭಿವೃದ್ಧಿ ಆಗಬೇಕಾದರೆ ಏನು ಮಾಡಬೇಕೆಂಬುದನ್ನು ತಜ್ಞರಿಗೆ ಬಿಟ್ಟುಬಿಡಬೇಕು...

Sri K. S. SURYANARAYANA RAO.—Sri M. C. Narasimhan will not agree.

Sri C. K. RAJAIAH SETTY.—Sri Narasimhan will never agree with me.

ನಾಗಪುರದ ಕಾಂಗ್ರೆಸ್ ಅಧಿವೇಶನದಲ್ಲಿ ಪಂಡಿತ ನೆಹರೂ ಅವರು ಹೇಳಿದರು, ನಾನಾಗಲೀ ನಮ್ಮಪ್ಪನಾಗಲೀ ವ್ಯವಸಾಯಗಾರರಲ್ಲ ಎಂದು. ಈ ಹೊತ್ತು ವ್ಯವಸಾಯದ ನೀತಿ ಸಮಾಜದಲ್ಲಿ ಏನಾಗಿದೆ? ಕುದುರೆಯನ್ನು ಬಿಗಿಯಾಗಿ ಕಟ್ಟಿ ಬಾಲದ ಕಡೆಗೆ ಹುಲ್ಲು ಹಾಕಿದ್ದೇನೆಂದು ಹೇಳಿದಹಾಗಿದೆ. ಇದನ್ನು ನೋಡಿದರೆ, ಒಂದು ಕತೆ ಜ್ಞಾಪಕಕ್ಕೆ ಬರುತ್ತದೆ. ಡಾಬ್ಸ್ ಎಂದು ಒಬ್ಬರು ತುಮಕೂರಿನಲ್ಲಿ ಡೆಪ್ಯುಟಿ ಕಮಿಷನರಿದ್ದರು. ಅವರು ಪ್ರವಾಸ ಬಂದರು. ಅಲ್ಲಿ ಒಬ್ಬರು ಶಾನುಭೋಗರ ಮನೆಯಲ್ಲಿ ಅವರಪ್ಪನ ತಿಥಿಗೆ ಉದ್ದಿನ ವಡೆ ಮಾಡಿದ್ದರು, ಅದನ್ನು ಇವರಿಗೆ ತಂದುಕೊಟ್ಟರಂತೆ. ಅದು ಬಹಳ ರುಚಿಯಾಗಿತ್ತು. 'ಇದೇನು' ಎಂದು ಕೇಳಿದರು. ಅದಕ್ಕೆ ಆತ ಈಹೊತ್ತು ನಮ್ಮಪ್ಪನ ತಿಥಿ, ಅದಕ್ಕೆ ಮಾಡಿದ್ದು, ಎಂದರಂತೆ. ಅವರು ಇನ್ನೊಂದು ಸಾರಿ ಅಲ್ಲಿಗೆ ಬಂದಾಗ ಆ ಶಾನುಭೋಗರಿಗೆ ಹತ್ತು ರೂಪಾಯಿ ಕೊಟ್ಟು, ನಿಮ್ಮಪ್ಪನ ತಿಥಿ ಮಾಡಿಸಿ ತನ್ನಿ ಎಂದು ಹೇಳಿದರಂತೆ. ಇದನ್ನು ಕೇಳಿ ಅವರಿಗೆ ಆಶ್ಚರ್ಯವಾಯಿತಂತೆ. ಆಮೇಲೆ ಹಿಂದಿನದನ್ನು ಜ್ಞಾಪಕಮಾಡಿಕೊಂಡರಂತೆ. ಹೀಗೆಯೇ ಕೋ-ಆಪರೇಟಿವ್ ಫಾರ್ಮಿಂಗ್ ಎನ್ನುವುದು ಸಮಾಜದ ತಿಥಿಯಾಗುತ್ತದೆಯೋ ಏನೋ ಎನ್ನಿಸುತ್ತದೆ. ಯಾವ ನಿರ್ಧಾರ ತೆಗೆದುಕೊಂಡರೂ ಸರ್ಕಾರ ಒಂದು ಡಿಸ್ಟ್ರಿಕ್ಟಿನ ಒಂದು ತಾಲ್ಲೂಕಿನಲ್ಲಿ ಇದನ್ನು ಮೊದಲು ತೆಗೆದುಕೊಂಡು ಮಾಡಲಿ. ಯಾರು ಕಲೆಕ್ಟಿವ್ ಫಾರ್ಮಿಂಗ್ ವಿಷಯದಲ್ಲಿ ಜಂಬ ಕೊಚ್ಚಿದ್ದಾರೋ, ಯಾರು ಅದನ್ನು ಯಶಸ್ವಿಯಾಗಿ ಮಾಡುತ್ತೇನೆಂದು ಹೇಳುತ್ತಾರೋ ಅವರಿಗೇ ಈ ಜವಾಬ್ದಾರಿಯನ್ನು ಕೊಡಬೇಕು. ಅದು ಯಶಸ್ವಿಯಾದರೆ ಆಮೇಲೆ ದೇಶಕ್ಕೆ ಜಾರಿ ಮಾಡಬಹುದು. ಹೀಗೆ ಮಾಡದೆ ಇದ್ದಕ್ಕಿದ್ದಹಾಗೆ ಇದನ್ನು ಮಾಡುತ್ತೇವೆಂದರೆ, ವ್ಯವಸಾಯಕ್ಕೇ ದೊಡ್ಡ ಅಪಘಾತ ಬರುತ್ತದೆ. ಆದುದರಿಂದ ಸರ್ಕಾರ ಎಚ್ಚರಿಕೆಯಿಂದ ಸೂಕ್ಷ್ಮವಾಗಿ ಪರಿಶೀಲನೆ ಮಾಡಬೇಕೆಂದು ಹೇಳುತ್ತೇನೆ.

ಇನ್ನು 'ಹಾರ್ಟಿಕಲ್ಚರ್' ವಿಚಾರ. ನಿಜವಾಗಿಯೂ ಮೈಸೂರು ಬಹಳ ವರ್ಷಗಳಿಂದಲೂ ಉದ್ಯಾನವನಗಳು ಮತ್ತು ತೋಟಗಳ ಅಭಿವೃದ್ಧಿಯಲ್ಲಿ ಪ್ರಗತಿಯನ್ನು ಸಾಧನೆಮಾಡಿದೆ. ಇಂದೂ ಕೂಡ ಅದೇ ಪ್ರಗತಿ ಇದೆ. ಕೇಂದ್ರ ಸರ್ಕಾರದ ವ್ಯವಸಾಯದ ಡೆಪ್ಯುಟಿ ಮಿನಿಸ್ಟರು ಕೂಡ ಮೈಸೂರು ಈ ವಿಷಯದಲ್ಲಿ ಬಹಳ ಪ್ರಖ್ಯಾತಿ ಹೊಂದಿದೆ, ಕೆಲಸ ಚೆನ್ನಾಗಿ ನಡೆಯುತ್ತಿದೆ ಎಂದು ಹೇಳಿದ್ದಾರೆ. ಆದರೆ ಕೇವಲ ಒಂದು ಲಕ್ಷ ರೂಪಾಯಿಗಳನ್ನು ಇದಕ್ಕೆ ಒದಗಿಸಿದ್ದಾರೆ. ನಮ್ಮ ರಾಜ್ಯ ಒಂಭತ್ತು ಜಿಲ್ಲೆಗಳಿದ್ದುದು 19 ಆಯಿತು. ಸಿಬ್ಬಂದಿ ಹೆಚ್ಚಾಗಿ ಕೊಟ್ಟಿದ್ದಾರೆ. ಬಡ್ಜೆಟ್ ಹೆಚ್ಚಾಗಿದೆ. ಬೇರೆ ಇಲಾಖೆಗಳಿಗೆ, ಬೇರೆ ಕೆಲಸಗಳಿಗೆ ಎಷ್ಟು ಹೆಚ್ಚಾಗಿ ಕೊಟ್ಟಿದ್ದಾರೋ ಅಷ್ಟನ್ನಾದರೂ ಹೆಚ್ಚು ಮಾಡಿ ಮೈಸೂರಿಗೆ ಬಂದಿರುವ ಕೀರ್ತಿಯನ್ನು ಉಳಿಸಿಕೊಳ್ಳಬೇಕು. ಹೊಸದಾಗಿ ಏನೂ ಹೆಚ್ಚು ಮಾಡಬೇಕಾಗಿಲ್ಲ.

ಟ್ರ್ಯಾಕ್ಟರ್ಸ್ ಮತ್ತು ಬುಲ್‌ಡೋಜರುಗಳ ವಿಚಾರ ಹೇಳುವುದಾದರೆ, ಏಳು ಲಕ್ಷ ರೂಪಾಯಿಗಳನ್ನು ಟ್ರ್ಯಾಕ್ಟರುಗಳ ಸ್ಪೇರ್ ಪಾರ್ಟುಗಳಿಗೆ ಕೊಟ್ಟಿದೆ, ನಾಲ್ಕು ಲಕ್ಷ ಚಿಲ್ಲರೆ ಇವುಗಳನ್ನು ನಡೆಸುವುದಕ್ಕೆ fuelಗಾಗಿ ಕೊಟ್ಟಿದೆ. ಈ ಹನ್ನೊಂದೂವರೆ ಲಕ್ಷ ರೂಪಾಯಿಗಳಲ್ಲಿ ಎಷ್ಟು ಎಕರೆ ಭೂಮಿಯನ್ನು ಸಾಗುವಳಿ ಮಾಡುತ್ತಾರೊ, ಎಷ್ಟು ಎಕರೆ reclamation ಮಾಡುತ್ತಾರೋ ಗೊತ್ತಿಲ್ಲ. ಟ್ರ್ಯಾಕ್ಟರುಗಳು ಬುಲ್‌ಡೋಜರುಗಳು ಎಷ್ಟು ಕೆಲಸವನ್ನು ಪ್ರತಿವರ್ಷವೂ ಮಾಡುತ್ತವೆಂಬುದನ್ನು ನೋಡಿದರೆ, ಇವುಗಳನ್ನು ಬಾಡಿಗೆಗೆ ಕೊಟ್ಟರೆ ಸುಲಭವಾಗುತ್ತದೆಂದು ನನ್ನ ಅಭಿಪ್ರಾಯ.

3-30 P.M.

ಆನೆಗಳನ್ನು ನಮ್ಮ ಫಾರೆಸ್ಟು ಇಲಾಖೆಯಲ್ಲಿ ಎಷ್ಟೋ ಕೆಲಸಗಳಿಗಾಗಿ ಉಪಯೋಗಿಸಿಕೊಳ್ಳಬಹುದು. ಟ್ರ್ಯಾಕ್ಟರು ಮತ್ತು ಬುಲ್‌ಡೋಜರುಗಳಿಗಿಂತ ಈ ಆನೆಯಿಂದ ಕೆಲಸಗಳನ್ನು ಮಾಡಿಸಿಕೊಳ್ಳಬಹುದು. ಈಗ ನಮ್ಮ ಅರಣ್ಯಶಾಖೆಯಲ್ಲಿ 24 ಆನೆಗಳನ್ನು ಹಿಡಿದಿದ್ದಾರೆ ಎಂದು ಹೇಳಿದರು. ಈ ಆನೆಗಳಿಂದ ಹೇಗೆ ಕೆಲಸ ಮಾಡಿಸಬಹುದು ಎನ್ನುವ ಒಂದು ಮೆತೆಡ್ಡನ್ನು ಯೋಚನೆಮಾಡಿ ಅದರಿಂದ ಒಂದು ಪ್ರಯೋಜನವನ್ನು ಪಡೆಯುವಂತೆ ಮಾಡಿಕೊಳ್ಳಬೇಕು. ಈ ರೀತಿಯಾಗಿ ತಾವು ಮಾಡಿ ನಮ್ಮ ದೇಶದಲ್ಲಿ ಸಾಕಷ್ಟು ಇದರಿಂದ ಪ್ರಯೋಜನ ಕಂಡುಹಿಡಿದು ಮಾಡಿದರೆ ಯಶಸ್ವಿಯಾಗುತ್ತದೆ. ಟ್ರ್ಯಾಕ್ಟರು ಮತ್ತು ಬುಲ್‌ಡೋಜರುಗಳಿಗಿಂತ ಒಂದು ಆನೆಯಶಕ್ತಿ ನಲವತ್ತು ಹಾರ್ಸ್ ಪವರಿನಷ್ಟಿದೆ ಎಂದು ಹೇಳುತ್ತಾರೆ. ಹೀಗೆ ನಮ್ಮ ದೇಶದಲ್ಲಿ ಈಗ 24 ಆನೆಗಳಿರುವುದರಿಂದ ಎಷ್ಟು ಶಕ್ತಿಯನ್ನು ಉಪಯೋಗಿಸಿಕೊಳ್ಳಬಹುದು ಎನ್ನುವುದನ್ನು ಯೋಚನೆಮಾಡಬಹುದು. ಇವತ್ತಿನ ದಿವಸ ಎಷ್ಟೋ ಲಕ್ಷಾಂತರ

(ಶ್ರೀ ಸಿ. ಕೆ. ರಾಜಯ್ಯಶೆಟ್ಟಿ)

ರೂಪಾಯಿಗಳಷ್ಟು ದುಡ್ಡನ್ನು ಈ ಟಾಕ್ಟರು ಮತ್ತು ಬುಲ್ ಡೋಜರುಗಳಿಗಾಗಿ ಖರ್ಚು ಮಾಡುವುದಕ್ಕಿಂತ ಇಂತಹ 24 ಆನೆಗಳಿಂದ ಎಷ್ಟು ಕೆಲಸಗಳನ್ನು ಮಾಡಿಸಿ ಕೊಳ್ಳಬಹುದು ಎನ್ನುವುದನ್ನು ಪರಿಶೀಲಿಸಿ ಅದರಂತೆ ತಕ್ಕ ಕ್ರಮಗಳನ್ನು ತೆಗೆದುಕೊಂಡರೆ ನಿಜವಾಗಿಯೂ ಇದರಿಂದ ಅನುಕೂಲವಾಗುತ್ತದೆ. ಇಷ್ಟು ಹೇಳಿ ಈ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

†ಶ್ರೀ ಕೆ. ವಿ. ಬೈರೇಗೌಡ (ಬೆಂಗಳೂರು ನಾರ್ತ್).—ಸ್ವಾಮಿ, ದೇಶದಲ್ಲಿ ಬಹು ಮುಖ್ಯವಾದ ವ್ಯವಸಾಯದ ಬೇಡಿಕೆಗಳ ಬಗ್ಗೆ ನಾವಿಂದು ಇಲ್ಲಿ ಪ್ರಸ್ತಾಪ ಮಾಡುತ್ತಿದ್ದೇವೆ.

ಬಹುಶಃ ಹತ್ತು-ಹನ್ನೊಂದು ವರ್ಷಗಳಿಂದಲೂ ಒಂದೇ ಸಮನಾಗಿ ನಾವು ಆಹಾರದ ಪದಾರ್ಥಗಳನ್ನು ಹೆಚ್ಚಾಗಿ ಬೆಳೆಯಬೇಕು ಎಂದು ಪ್ರಯತ್ನ ಮಾಡುತ್ತಿದ್ದರೂ ಸಾಕಾದಷ್ಟು ಪೈರುಗಳು ಆಗದೇ ಇರುವುದಕ್ಕೆ ಏನು ಕಾರಣ ಎನ್ನುವುದೇ ಒಂದು ದೊಡ್ಡ ಸಮಸ್ಯೆಯಾಗಿದೆ. ಇದಕ್ಕೆ ಮೊದಲಾಗಿ ಇಲ್ಲಿ ನಾವು ಹಾಕಿರತಕ್ಕ ಯೋಜನೆಗಳನ್ನು ಅವಲಂಬಿಸಿರತಕ್ಕ ರೈತವರ್ಗ ಅದನ್ನು ಪೂರ್ಣವಾಗಿ ನಿರ್ವಹಿಸುತ್ತಿಲ್ಲ. ಇಂತಹ ಸಮಯದಲ್ಲಿ ಪೂರ್ಣವಾಗಿ ಕೆಲಸ ಮಾಡಬೇಕೆಂದು ದೇಶದಲ್ಲಿ "Grow more food" ಎಂದು ಕೋಟಿಗಟ್ಟಲೆ ರೂಪಾಯಿ ಖರ್ಚುಮಾಡಿದರು. ಆದರೆ ಈ ಬೆಳೆಗಳನ್ನು ಹೆಚ್ಚಿಗೆ ಬೆಳೆಯುವುದಕ್ಕಾಗದೆ ಪರದೇಶಗಳಿಂದ ಹೆಚ್ಚಿನ ಆಹಾರಪದಾರ್ಥಗಳನ್ನು ತರಿಸಿ ಇದಕ್ಕಾಗಿ ಹೆಚ್ಚಿನ ಹಣವ್ಯಯ ಮಾಡುತ್ತಿದ್ದಾರೆ. ನಿಜವಾದ ದೃಷ್ಟಿಯಿಂದ ಬೆಳೆಗಳಾಗಬೇಕು ಎಂದು ಪ್ರಯತ್ನ ಮಾಡಿದ್ದರೆ ಸ್ವಲ್ಪಮಟ್ಟಿಗಾದರೂ ಸಾಧಿಸುವುದಕ್ಕೆ ಆಗುತ್ತಿತ್ತು ಎನ್ನುವುದರಲ್ಲಿ ಯಾವ ಸಂದೇಹವೂ ಇಲ್ಲ.

ದೇಶದ ವ್ಯವಸಾಯಗಾರನು ತಾನು ಬೆಳೆಯುವ ಉತ್ಪತ್ತಿಗೆ ತಕ್ಕ ಬೆಲೆ, ತನ್ನ ಖರ್ಚಿಗೆ ತಕ್ಕ ಬೆಲೆ ಇಲ್ಲಿಯವರೆಗೂ ಪಡೆಯಲಿಕ್ಕೆ ಸಾಧ್ಯವಾಗುತ್ತಿಲ್ಲ. ಎಂದು ಹೇಳುವುದಕ್ಕೆ ನಾನು ನಿಂತಿದ್ದೇನೆ. ಇದನ್ನು ಪದೇ ಪದೇ ಆಗಿಂದಾಗ್ಗೆ ಪರಿಶೀಲನೆಮಾಡಬೇಕೆಂದು ರಾಜ್ಯ ಸರ್ಕಾರಕ್ಕೆ ಹೇಳುತ್ತಲಿದ್ದೇವೆ. ಇವರು ಸಾಕಾದಷ್ಟು safetyಕೊಟ್ಟಿದ್ದರೆ ಇಷ್ಟುಹೊತ್ತಿಗೆ ಸರಿಹೋಗುತ್ತಿತ್ತೋ ಏನೋ, ಸಾಕಾದಷ್ಟು ಪ್ರಯತ್ನಮಾಡಿ ಖರ್ಚುಮಾಡಿ ಬೆಳೆಯನ್ನು ತೆಗೆಯುವ ರೈತನಿಗೆ ಒಂದು ಗ್ಯಾರಂಟಿ ಕೊಡದಿದ್ದರೆ, ಇಷ್ಟು ಸಹಾಯವಿಲ್ಲದಿದ್ದರೆ ಏನೂ ಪ್ರಯೋಜನವಾಗುವುದಿಲ್ಲ. ಇದನ್ನು ಮಾಡಬೇಕೆಂದು ಸರಕಾರದಲ್ಲಿ ಅರಿಕೆಮಾಡಿಕೊಳ್ಳುತ್ತೇನೆ.

ಸ್ವಾಮಿ, ಈ ಇಲಾಖೆಯಲ್ಲಿ ಕೈಯಿಂದ ಕೆಲಸಮಾಡತಕ್ಕ ಮಷಿನರಿಗಳು ಎಂದರೆ Mechanised Tractors and Bull-dozersಗಳು ಸುಮಾರು 19 ವರ್ಷಗಳ ಹಿಂದೆಯೇ ಪ್ರಾರಂಭವಾದವು. ಇದಕ್ಕಾಗಿ ಲಕ್ಷಾಂತರ ರೂಪಾಯಿಗಳನ್ನು ಹಾಕಿ ಎಕ್ಸ್‌ಪೆರಿಮೆಂಟು ಮಾಡಿದರೂ ಇದರಿಂದ ಪ್ರಯೋಜನವೇನೂ ಇಲ್ಲ ಎನ್ನುವುದನ್ನು ಎಲ್ಲರೂ ಮನಸ್ಸಿನಲ್ಲಿ ತಿಳಿದುಕೊಂಡಿದ್ದಾರೆ. ನನ್ನ ಸ್ಪಷ್ಟವಾದ ತೀರ್ಮಾನ ಹೇಳುವುದಾದರೆ, ಈ ಟ್ರಾಕ್ಟರುಗಳು ಮತ್ತು ಬುಲ್ ಡೋಜರುಗಳನ್ನು ಪೂರ್ಣ Service Station ರೀತಿಯಲ್ಲಿ ಸಹಕಾರ ಸಂಘಗಳು ಮತ್ತು ಖಾಸಗೀ ಸಂಸ್ಥೆಗಳು ಇವನ್ನು ಕೊಡುವುದು ಮತ್ತು ಟ್ರಾಕ್ಟರುಗಳಿಗೆ ರಿಪೇರಿಮಾಡುವುದು ಇತ್ಯಾದಿ ಕಾರ್ಯಕ್ರಮ ಇಟ್ಟುಕೊಂಡರೆ ಯಶಸ್ವಿಯಾಗಬಹುದು. ಟ್ರೇನಿಂಗು ಇಲ್ಲದೆ ಸಿಬ್ಬಂದಿಯನ್ನು ಹಾಕದೆ ದೇಶಕ್ಕೆ ಈ ಟ್ರಾಕ್ಟರು ಮತ್ತು ಬುಲ್‌ಡೋಜರುಗಳ ಸರ್ವಿಸ್ಸಿನಿಂದೇನೂ ಅನುಕೂಲವಾಗುವುದಿಲ್ಲ. ಇದಕ್ಕೆ ಕೂಡಲೇ ಮನಸ್ಸುಮಾಡಿ ನಿರ್ದಿಷ್ಟವಾದ ಒಂದು ತೀರ್ಮಾನವನ್ನು ಕೈಗೊಳ್ಳಬೇಕು; ಮತ್ತು ಈಗಾಗಲೇ ಎಕ್ಸ್‌ಪೆರಿಮೆಂಟುಮಾಡಿರುವುದರಲ್ಲಿ 70-75 ಭಾಗ ವ್ಯವಸಾಯದಲ್ಲಿನ ಇಲಾಖೆಯಲ್ಲಿ ಏನೂ ರೀಸರ್ಚು ಹೆಚ್ಚಾಗಿ ಮಾಡಿಲ್ಲ. ಈ ಅಗ್ರಿಕಲ್‌ಚರಿನಲ್ಲಿ Research work ಸರಿಯಾಗಿ ಆಗಿಲ್ಲ ಎಂದು ನಾನು ಈ ಸಮಯದಲ್ಲಿ ಹೇಳಬೇಕಾಗಿದೆ. ನಮ್ಮಲ್ಲಿ ಕೆಸರುಗದ್ದೆಗೆ ಪೂರ್ಣವಾಗಿ ಭತ್ತವನ್ನು ಬಿತ್ತಿದ ನಂತರ ಮೂರುನಾಲ್ಕು ತಿಂಗಳನಂತರ ನೀರನ್ನು ಬಿಟ್ಟುಕೊಡುತ್ತಾರೆ ಇಂತಹ ಒಂದು ಉತ್ತಮವಾದ ವ್ಯವಸಾಯಕ್ಕೆ ಸರಕಾರ ಸಹಾಯ ಮಾಡಿಕೊಟ್ಟರೆ ಇದರಿಂದ ಉತ್ತಮವಾದ ಬೆಳೆಯನ್ನು ಮಾಡಬಹುದು.

ಕಮರ್ಷಿಯಲ್ ಕ್ರಾಪ್ಪುಗಳ ವಿಚಾರದಲ್ಲಿ ಹೇಳುವುದಾದರೆ ಬೀಜಗಳಿಗಾಗಿ I.C.I. Committee ಮೂಲಕ ಲಕ್ಷಾಂತರ ರೂಪಾಯಿಗಳಷ್ಟು ಖರ್ಚುಮಾಡಿದರು. ಹೀಗೆ ಕಡ್ಲೆಕಾಯಿ ಬಿತ್ತವನ್ನು ಕೊಟ್ಟಿದ್ದರು. ಅನಂತರ ಡಾಕ್ಟರ್ ಬಾದಾಮಿ ಎಂಬುವರು ಹಿಂದೆ ಒಂದು ರೀತಿಯಾದ ಬಾದಾಮಿ ಕಡಲೆಕಾಯಿ ಬೀಜವೆಂದು ಹೀಗೆ ಬೇರೆಬೇರೆ ವಿಧಗಳಾದ ಬೀಜಗಳನ್ನು ಕಂಡುಹಿಡಿದು ಕೊಟ್ಟಿದ್ದರೂ ಇದರಂತೆ ಜನ ಹೆಚ್ಚಾಗಿ ಅಭ್ಯಾಸಮಾಡಿಕೊಳ್ಳಲಿಲ್ಲ. ಅವರು ಈ ರೀತಿಯಾದ ಎಕ್ಸ್‌ಪೆರಿಮೆಂಟಿಗೆ ಪ್ರಚಾರಮಾಡುವುದರಿಂದ ರೈತನ ಕೈಯಲ್ಲೇ ಹೆಚ್ಚಿಗೆ ಬೆಳೆಯನ್ನು ಮಾಡಬಹುದು. ಅವನ ಸ್ಥಿತಿಯನ್ನು ಉತ್ತಮಪಡಿಸುವುದಕ್ಕೆ ಆಹಾರ ಪದಾರ್ಥಗಳ ಜೊತೆಗೆ ಈ ಕಮರ್ಷಿಯಲ್ ಕ್ರಾಪ್ಸುಗಳನ್ನು ಕೂಡ ಜೊತೆಯಲ್ಲೇ ಬೆಳೆಯಬೇಕು. ಇದನ್ನು ಮಾಡುವುದಕ್ಕೆ ಪ್ರಯತ್ನಮಾಡಬೇಕು.

ಇನ್ನು ನಮ್ಮ ದೇಶದಲ್ಲಿ ಆಲೂಗೆಡ್ಡೆಯ ಬೆಳೆಯನ್ನು ಉತ್ತಮಪಡಿಸುವುದಕ್ಕಾಗಿ ಒಂದು Research Station ಮಾಡಬೇಕೆಂದು ಪದೇ ಪದೇ ಹೇಳುತ್ತಿದ್ದೇವೆ. ಈಗ ಈ ಆಲೂಗೆಡ್ಡೆ ಬಿತ್ತಗಳನ್ನು ಸಿಮ್ಲಾದಿಂದ ಮತ್ತು ಪರದೇಶಗಳಿಂದ ಹಾಗೂ ರಂಗೂನಿನಿಂದ ಸುಮಾರು ಎರಡು ಕೋಟಿ ರೂಪಾಯಿಗಳಷ್ಟು ಬೆಲೆಬಾಳುವಂತಹ ಬೀಜಗಳನ್ನು ತರಿಸಿ ಅದನ್ನು ಸಹಕಾರ ಸಂಘಗಳ ಮೂಲಕ ಹಂಚಿದ ಅವ್ಯವಸ್ಥೆಗಳನ್ನು ಈಗಾಗಲೇ ನೋಡಿದ್ದೇವೆ. ಹಾಗೆಯೇ ಖಾಸಗೀ ಜನರು ಇದರ ಬೆಲೆಯನ್ನು ಎಷ್ಟು ಮಟ್ಟಿಗೆ ಕೊಡುತ್ತಿದ್ದಾರೆ ಎಂದರೆ ಅದು ರೈತನಿಗೆ ಅಷ್ಟುಮಟ್ಟಿಗೆ ಕೈಗೆ ಎಟುಕದಂತಿದೆ. ಇನ್ನು ಸಹಕಾರ ಸಂಘಗಳ ಮುಖೇನ ನಾವು 50 ರೂಪಾಯಿಗಳಂತೆ ಕೊಡುತ್ತಿದ್ದರೆ ಖಾಸಗಿಯವರಲ್ಲಿ ಎಂದರೆ ಮಂಡಿಯವರು ಸುಮಾರು 80 ರೂಪಾಯಿಗಳಂತೆ ಮಾರುತ್ತಿದ್ದಾರೆ. ಆದುದರಿಂದ ಇಂತಹ ಉತ್ತಮವಾದ ಆಲೂಗೆಡ್ಡೆಯ ಬೀಜಗಳನ್ನು ಉಪಯೋಗಿಸಲನುಕೂಲವಾಗುವಂತೆ ಒಂದು Research Stationನ್ನನ್ನು ಮಾಡಬೇಕು. ಇದು ಅತ್ಯಂತ ಮುಖ್ಯವಾಗಿ ಬೇಕಾಗಿದೆ.

ಇನ್ನು ನೀರಾವರಿ ವಿಷಯ. ಇವೊತ್ತು ದೇಶದಲ್ಲಿರುವ ನದಿಗಳಿಗೆ ಅಣೆಕಟ್ಟನ್ನು ಪೂರ್ಣವಾಗಿ ಕಟ್ಟುವ ವ್ಯವಸ್ಥೆಯನ್ನು ಸರಕಾರದವರು ಮಾಡುತ್ತಿದ್ದಾರೆ. ಅದರಂತೆ ಸರಕಾರದ ಸಹಾಯದಿಂದ ಜನರಿಗೆ ಸಾಕಾದಷ್ಟು ಆಹಾರವನ್ನು ಬೆಳೆಯುವುದಕ್ಕೆ ಅನುಕೂಲವಾಯಿತು ಎಂದು ಹೇಳುವಹಾಗಿಲ್ಲ. ಇಲ್ಲಿ ಬಾವಿಗಳಿಗಾಗಿ ಬಡ್ಜೆಟ್ಟಿನಲ್ಲಿ ತಾವು ಹಣವನ್ನು ಒದಗಿಸಿರುವಂತೆ

ಏರ್ಪಾಡುಮಾಡಿದರೆ ಏನೂ ಪ್ರಯೋಜನವಾಗುವುದಿಲ್ಲ. ಇದು ಸಾಲುವುದಿಲ್ಲ. ಕೊಯಮತ್ತೂರಿನಲ್ಲಿ Tube wells ಗಳಿಂದ ಸಾಗುವಳಿಮಾಡುವ ಪದ್ಧತಿ ಇದೆ. ನಮ್ಮ ಇಲಾಖೆಯಲ್ಲಿರುವ Tractor ಮತ್ತು Bulldozerಗಳಿಂದ ಮಾಡುವ ಕೆಲಸ ಅಲ್ಲಿಲ್ಲ.

ಅದೇ ರೀತಿ ಇಲ್ಲಿಯೂ ವ್ಯವಸಾಯಮಾಡುವುದಕ್ಕೆ ಅವಕಾಶವಿದೆ ; ಮತ್ತು cash crops ಗಳನ್ನೂ ಮಾಡುವುದಕ್ಕೆ ಅವಕಾಶವಿದೆ. ಇದರಿಂದ ನಿಜವಾಗಿಯೂ ರೈತನಿಗೆ ಅನುಕೂಲಮಾಡಿಕೊಟ್ಟಂತಾಗುತ್ತದೆ. ಸರಕಾರ ಈ ಒಂದು ಕಾರ್ಯಕ್ಕೆ ಸ್ವಲ್ಪ ಮನಸ್ಸು ಕೊಡಬೇಕು. ತಮ್ಮ ಮುಂದೆ ಹೇಳುತ್ತಿದ್ದೇನೆ. ಬಯಲುಸೀಮೆಯಲ್ಲಿ ಇದನ್ನು ಉಪಯೋಗಿಸಿಕೊಂಡು ವ್ಯವಸಾಯಮಾಡುವುದಕ್ಕೆ ಈಗ ಕೊಯಮತ್ತೂರಿನಲ್ಲಿ ಒಂದು ನಿದರ್ಶನ ಇಲ್ಲಿರುವಾಗ ನಾವು ಮಾಡುವುದಕ್ಕೆ ಸಾಕಾದಷ್ಟು ಧೈರ್ಯವಿದೆ. ಇದನ್ನು ಮಾಡಿಸಿಕೊಡಬೇಕು ಎಂದು ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಸ್ವಾಮೀ, ಇಷ್ಟೆಲ್ಲ ವ್ಯವಸಾಯವನ್ನು ಅಭಿವೃದ್ಧಿ ಮಾಡಲು ನಮಗೆ ಸಾಕಾದಷ್ಟು ಕ್ಷೇತ್ರಗಳಿರುವಾಗ ಬಾಕಿ ಪ್ರಾಂತದಲ್ಲಿ ಏನು ವಿಧಾನದಿಂದ ಹೆಚ್ಚಿನ ಉತ್ಪತ್ತಿಗಳನ್ನು ಮಾಡುತ್ತಿದ್ದಾರೋ ಹಾಗೆ ಆ ನೂತನ ವಿಧಾನಗಳನ್ನು ಅನುಸರಿಸಿದರೆ ಇಲ್ಲಿಯ ವ್ಯವಸಾಯಪದ್ಧತಿಯನ್ನೂ ಉತ್ತಮಮಾಡುವುದಕ್ಕೆ ಅವಕಾಶವಾಗುತ್ತದೆ.

ಕೋ-ಆಪರೇಷನ್ನು ಮತ್ತು ವ್ಯವಸಾಯ ಅಣ್ಣತಮ್ಮಂದಿರ ಹಾಗೆ ಜೊತೆಯಲ್ಲಿಯೇ ಹೋಗಬೇಕು. ನಮ್ಮ ದೇಶದಲ್ಲಿರುವ ರೆಗ್ಯುಲೇಟೆಡ್ಡು ಮಾರ್ಕೆಟ್ಟುಗಳು ಎಲ್ಲೆಲ್ಲಿವೆಯೋ ಅವನ್ನೆಲ್ಲ ಸರಿಪಡಿಸಬೇಕು. ಇವು ಇನ್ನೂ ಹೆಚ್ಚಾಗಬೇಕು. ನಮ್ಮ ಸೆಕೆಂಡು ಫೈವ್ ಇಯರ್ ಪ್ಲಾನಿನಲ್ಲಿ ಇದನ್ನು ಇನ್ನೂ ಉತ್ತಮವಾದ ರೀತಿಯಲ್ಲಿ ಮಾಡಬೇಕೆಂದು ಹೇಳುತ್ತಿದ್ದರೂ ಆ ರೀತಿ ಆಗಿಲ್ಲವೆಂದು ನಾನು ವಿಷಾದದಿಂದ ಹೇಳಬೇಕಾಗಿದೆ. ಆದರಿಂದಾಗಿ ಈ ವ್ಯಾಪಾರದಲ್ಲಿ ಮಧ್ಯವರ್ತಿಗಳನ್ನು ತೆಗೆಯುವುದಕ್ಕೆ ಸಾಧ್ಯವಾಗಿಲ್ಲ. ತಾವು ಈ ಒಂದು ರೆಗ್ಯುಲೇಟೆಡ್ಡು ಮಾರ್ಕೆಟ್ಟುಗಳಿಂದ ಸರಿಯಾಗಿ ಕೆಲಸಮಾಡುವಂತಾದರೆ ಎಲ್ಲ ಪದಾರ್ಥಗಳ ಬೆಲೆಯೂ ಇಳಿಯುತ್ತದೆ. ಇದನ್ನು ಇಂತಹ ಮಧ್ಯವರ್ತಿ ಜನರು ಮಾಡುತ್ತಿರುವುದರಿಂದ ಇವರನ್ನು ತಪ್ಪಿಸಿ ಸುಧಾರಿಸತಕ್ಕ ಒಂದು ಪದ್ಧತಿಯನ್ನು ತರಬೇಕು. ಇದರಿಂದ ರೈತನು ತಾನು ಬೆಳೆಯುವ ಬೆಳೆಗಳಿಗೆ ಒಂದು ಮಾರುಕಟ್ಟೆ ದೊರೆಯುತ್ತದೆ. ಇಲ್ಲದಿದ್ದರೆ ಇವರ ಪರಿಸ್ಥಿತಿಗೇ ರೈತ ಬರಬೇಕಾದ ಸ್ಥಿತಿ ಬರುತ್ತದೆ.

ಆದ್ದರಿಂದ ವ್ಯವಸಾಯ ಮತ್ತು ಸಹಕಾರ–ಇವೆರಡೂ ಅಣ್ಣತಮ್ಮಂದಿರಂತೆ ಜೊತೆಯಲ್ಲೇ ಹೋಗಬೇಕು. ವ್ಯಾಪಾರದ ವಿಷಯದಲ್ಲಿ ಈ ತೊಂದರೆಯನ್ನು ಕೂಡಲೆ ನಿವಾರಣೆಮಾಡುವುದಕ್ಕೆ ತಾವು ಗಮನಕೊಡಬೇಕೆಂದು ಹೇಳುತ್ತೇನೆ. ಪಾಶ್ಚಾತ್ಯ ದೇಶಗಳ ವಿಚಾರವನ್ನು ನಮ್ಮ ಮಾನ್ಯ ಸ್ನೇಹಿತರು ಹೇಳಿದರು. ಅಲ್ಲಿನ ಪರಿಸ್ಥಿತಿಯನ್ನೂ ಇಲ್ಲಿನ ಪರಿಸ್ಥಿತಿಯನ್ನೂ ನೋಡಿದರೆ ನಮ್ಮ ಮನಸ್ಸು ನೋಯುತ್ತದೆ. ನಮ್ಮ ಜನರು ನೂರಾರು ವರ್ಷಗಳಿಂದ ಹಳ್ಳಿಗಳಲ್ಲಿ ಕೆಲಸ ಮಾಡುತ್ತಿದ್ದರೂ ನಮ್ಮ ವ್ಯವಸಾಯ ಅಭಿವೃದ್ಧಿಯಾಗಿಲ್ಲ. ವಿದ್ಯಾವಂತರಾದ ಜನರು ಹಳ್ಳಿಗೆ ಹೋಗಬೇಕು ಎಂದು ಎಷ್ಟೋ ಹೇಳುತ್ತಿದ್ದೇವೆ. ಆದರೆ, ಇಂದಿಗೂ ಎಷ್ಟು ಜನ ಹಳ್ಳಿಯಲ್ಲಿ ಹೋಗಿ ನೆಲೆಸಿದ್ದಾರೆ! ಅಲ್ಲಿನ ಆದಾಯ ವೆಚ್ಚ ನೋಡಿದರೆ ಖಂಡಿತ ಯಾರೂ ಹೋಗುವುದಿಲ್ಲ. ಒಂದು ಫ್ಯಾಕ್ಟರಿಗೋ ಅಥವಾ ಯಾವುದಾದರೂ ಬೇರೆ ಉದ್ಯೋಗಕ್ಕೋ ಹೋಗುವ ಹಾಗೆ ವ್ಯವಸಾಯಕ್ಕೇಕೆ ವಿದ್ಯಾವಂತ ಜನ ಹೋಗಕೂಡದು! ಮುಖ್ಯ ಕಾರಣ, ನಾವು ಭೂಮಿಗೆ ಮಾಡಿದ ಕೆಲಸಕ್ಕೆ ಸರಿಯಾದ ಫಲ ಬರುತ್ತದೆಯೋ? ಪ್ರಕೃತಿಯ ತೊಂದರೆ, ಆರ್ಥಿಕ ಸ್ಥಿತಿ, ವ್ಯಾಪಾರದ ತೊಂದರೆ—ಇವುಗಳೆಲ್ಲವನ್ನೂ ನೋಡಿಕೊಂಡರೆ ಹಳ್ಳಿಗೆ ವಿದ್ಯಾವಂತರು ಹೋಗುತ್ತಾರೆಯೇ! 'Fool of the family goes to agriculture' ಎಂದು ಗಾದೆಯೇ ಇದೆ. ವಿದ್ಯಾವಂತರಾದ ಜನರು ಈ ಎಡರು ತೊಡರುಗಳನ್ನು ನೋಡಿ ಭಯಪಡುತ್ತಾರೆ. ತಿಳುವಳಿಕೆಯುಳ್ಳ ಜನ, ವಿದ್ಯಾವಂತರಾದ ಜನ, ಶಕ್ತಿವಂತರಾದ ಜನರು ಎಲ್ಲಿಯವರೆಗೆ ವ್ಯವಸಾಯಕ್ಕೆ ಹೋಗದೆ ಫ್ಯಾಕ್ಟರಿಗೋ, ಕಾರ್ಖಾನೆಗೋ ಹುಡುಕಿಕೊಂಡು ಅಲೆಯುತ್ತಾರೋ, ಅಲ್ಲಿಯವರೆಗೂ ನಮ್ಮ ವ್ಯವಸಾಯ ಉತ್ತಮಗೊಳ್ಳುವುದಿಲ್ಲ.

ಹೀಗೆಂದ ಮಾತ್ರಕ್ಕೆ ನಾವು ಬರೀ ವ್ಯವಸಾಯವನ್ನೇ ದೇಶದಲ್ಲಿ ಇಟ್ಟುಕೊಂಡು ಹೋಗುವುದಕ್ಕಾಗುವುದಿಲ್ಲ. ಭೂಮಿಯ ಮೇಲಿನ ಒತ್ತಡವನ್ನು ಕಡಮೆಮಾಡಲು ಫ್ಯಾಕ್ಟರಿ ಮುಂತಾದುವುಗಳೂ ಬೇಕೇಬೇಕು. ಹೀಗಾದರೆಯೇ ಭೂಮಿಯಿಂದ ಹೆಚ್ಚಿಗೆ ಆದಾಯ ಪಡೆಯಬಹುದಾಗಿದೆ. ಈ ರೀತಿ ಆದಷ್ಟು ವಿದ್ಯಾವಂತ ಜನರನ್ನು ಭೂಮಿಯ ಮೇಲೆ ನೆಲೆಸುವಂತೆ ಮಾಡಿ, ಅವರ ಮುಖೇನ ಆದಷ್ಟು ಕಡಮೆ ಖರ್ಚಿನಲ್ಲಿ ಹೆಚ್ಚಿನ ಸಾಗುವಳಿಗೆ ಏರ್ಪಾಡು ಮಾಡುವುದಾದರೆ ನಾವೀಗ ಮಾಡುತ್ತಿರುವ ಖರ್ಚನ್ನೇ ಇಟ್ಟುಕೊಂಡು ಹೊರಗಡೆಯಿಂದ ಎಷ್ಟು ಆಹಾರವನ್ನು ತರಿಸುತ್ತಿದ್ದೇವೋ ಅದನ್ನು ನಿಲ್ಲಿಸುವುದಕ್ಕೆ ಸಾಧ್ಯವಾಗುತ್ತದೆಂದು ನಾನು ಧೈರ್ಯವಾಗಿ ಹೇಳಬಲ್ಲೆ.

ಕೋ-ಆಪರೇಷನ್ ವಿಷಯವಾಗಿ ಒಂದೆರಡು ಮಾತು ಹೇಳುತ್ತೇನೆ. ನಾವು ಈಗಾಗಲೇ ರೈತರಿಗೆ ಕೊಡುತ್ತಿರುವ ಸಾಲಸೋಲಗಳು ಯಾವ ರೀತಿ ಅವರಿಗೆ ಸಂದಾಯವಾಗುತ್ತಿದೆ, ಈ ಮೀಡಿಯಂ ಮತ್ತು ಷಾರ್ಟ್ ಟರ್ಮ್ ಲೋನ್‌ಗಳು ಹೇಗೆ ಸಹಾಯವಾಗುತ್ತಿವೆಯೆಂದು ಮಾನ್ಯ ಸ್ನೇಹಿತರನೇಕರು ಹೇಳಿದ್ದಾರೆ. ಒಂದು ಮುಖ್ಯವಾದ ಲೋಪವನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. ಈ ಕ್ಷೇತ್ರದಲ್ಲಿ ಕೆಲಸ ಮಾಡತಕ್ಕ ಸ್ನೇಹಿತರಿಗೆ ಮನಸ್ಸು ನೋಯಿಸಕೂಡದು. ನೀವು ಮುಂಚೆಯೇ ಸಾಲಕ್ಕೆ ಮೊಬಲಗನ್ನು ಹಂಚುವಾಗಲೇ ಯಾವಯಾವ ಸೊಸೈಟಿಗೆ ಎಷ್ಟೆಷ್ಟು ಸಾಲಗಳನ್ನು ಕೊಡುವುದಕ್ಕೆ ಅವಕಾಶವಿದೆ ಎಂಬುದನ್ನು ತಿಳಿಸಬೇಕು. ಇಲ್ಲದಿದ್ದರೆ, ಇಷ್ಟು ಷೇರು ಮೊಬಲಗನ್ನಿಟ್ಟುಕೊಂಡು, ಇಷ್ಟು ಹಣ ಸಾಲ ಕೊಡುವುದಕ್ಕೆ ಅವಕಾಶವಿದೆ ಯೆನ್ನಬೇಕು. ಹಾಗಿಲ್ಲದೆ, ಕೊನೆಯವರೆಗೂ ಸುಮ್ಮನಿದ್ದು ಸ್ಥಳೀಯ ಜನರೆಲ್ಲರಿಂದಲೂ ಸಾಲ ಕೊಡಿಸುತ್ತೇವೆಂದು ಹೇಳಿ ಅರ್ಜಿ ತೆಗೆದುಕೊಂಡು, ಕೊನೆಗೆ ರಿಸರ್ವ್ ಬ್ಯಾಂಕಿನವರು ಹಣ ಕೊಡಲಿಲ್ಲವೆಂದು ಸಾಲದ ಅರ್ಜಿಗಳನ್ನು ವಾಪಸು ಕಳುಹಿಸುವುದು ಈ ಕ್ಷೇತ್ರದಲ್ಲಿ ಕೆಲಸ ಮಾಡುವವರಿಗೆ ಬಹಳ ನಿರಾಶೆ, ನಿರುತ್ಸಾಹವನ್ನುಂಟುಮಾಡುತ್ತದೆ. ಖಾಸಗಿ ಕ್ಷೇತ್ರದಲ್ಲಿರುವವರಿಗೆ ಈ ಸೊಸೈಟಿಗಳ ವಿಷಯದಲ್ಲಿ ನಂಬಿಕೆಯಿರುವುದಿಲ್ಲ. ಆದ್ದರಿಂದ ಆರು ತಿಂಗಳ ಹಿಂದೆಯೇ ನೀವು ಪ್ರತಿಯೊಂದು ಸೊಸೈಟಿಗೂ ನೀವು ಇಷ್ಟಿಷ್ಟು ಕೆಲಸಗಳನ್ನು ಮಾಡುವುದಕ್ಕೆ ಸಾಧ್ಯವಿದೆ, ಇಂಥಾದ್ದು ಸಾಧ್ಯವಿಲ್ಲವೆಂದು ನಿರ್ದಿಷ್ಟವಾಗಿ ತಿಳಿಸಬೇಕೆಂದು ಹೇಳುತ್ತೇನೆ.

ಇದೇ ಸಂದರ್ಭದಲ್ಲಿ ನಾನು ಬೆಂಗಳೂರು ರೆಗ್ಯುಲೇಟೆಡ್ ಮಾರ್ಕೆಟ್ ವಿಷಯವನ್ನು ಪ್ರಸ್ತಾಪ ಮಾಡದೆ ವಿಧಿ ಇಲ್ಲ. ಈಗ ಐದಾರು ವರ್ಷಗಳಿಂದ

(ಶ್ರೀ ಕೆ. ವಿ. ಬೈರೇಗೌಡ)

ಒಂದೇ ರೀತಿಯಲ್ಲಿ ರೈತರಿಂದ ಫೀಸು ವಸೂಲು ಮಾಡುತ್ತಾ 75,000 ರೂಪಾಯಿಗಳನ್ನು ರೈತರಿಂದ ತೆಗೆದುಕೊಂಡಿದ್ದರೂ ಅವರಿಗೇನು ಸೌಕರ್ಯ, ಸೌಲಭ್ಯ ಕಲ್ಪಿಸಿಕೊಟ್ಟಿದ್ದೀರಿ ? ಬರೀ ರೆಗ್ಯುಲೇಟೆಡ್ ಮಾರ್ಕೆಟ್ ಮಾಡುತ್ತೇವೆಂದು ಘೋಷಣೆ ಮಾಡಿ ಫೀಸು ವಸೂಲು ಮಾಡುತ್ತಿದ್ದೀರೇ ಹೊರತು ರೈತನಿಗೇನೂ ಸಹಾಯ ವಾಗಿಲ್ಲ. ಇಂದಿಗೂ ಮಂಡಿಯವರ ಆಶ್ರಯದಲ್ಲಿ ಅವನು ಬಿದ್ದಿದ್ದಾನೆ. ಹೀಗಿರುವಾಗ 75,000 ರೂಪಾಯಿಗಳನ್ನು ತೆಗೆದುಕೊಂಡಿರುವುದು ಯಾವ ಧರ್ಮ. ಎಂಥ ಅನ್ಯಾಯ ಮಾಡುತ್ತಿದ್ದೀರಿ! ಜೊತೆಗೆ ಸೈಟಿನ ಅಕ್ವಿಸಿಷನ್ ನಡೆವಳಿಕೆ ಬೇರೆ ತೆಗೆದುಕೊಳ್ಳು ವುದಿದೆ. ಇನ್ನೊಂದು ಕಷ್ಟ ಬೇರೆ ಅಲ್ಲಿದೆ. ಕೂಡಲೆ ಆ ಸ್ಥಳ ನಮ್ಮ ಕೈಗೆ ಬಂದರೂ ಅಲ್ಲಿ Slum clearance ಬಗ್ಗೆ ಕಾರ್ಯಕ್ರಮವನ್ನು ಕೂಡ ತೆಗೆದುಕೊಳ್ಳಬೇಕು. ಇದು L.S.G. ಮಂತ್ರಿಗಳು ಗಮನಕ್ಕೆ ತೆಗೆದುಕೊಳ್ಳ ಬೇಕಾದ ವಿಷಯ. ಈಗ ಯಾವ ಜಾಗ ನೋಡಿದ್ದೇವೆ ಆ ಜಾಗ ಬಿಟ್ಟು ಬೇರೆ ಜಾಗ ಯಾವುದೂ ಸರಿಯಾಗಿಲ್ಲ. ಈ ಬಗ್ಗೆ ಸರ್ಕಾರದವರು ಕೂಡಲೆ ಗಮನ ಕೊಡುತ್ತಾ ರೆಂದು ನಂಬಿದ್ದೇನೆ. ಹೀಗೆಯೇ ದೇಶಾದ್ಯಂತ ಎಲ್ಲೆಲ್ಲಿ ರೆಗ್ಯುಲೇಟೆಡ್ ಮಾರ್ಕೆಟ್ಟು ಮತ್ತು Ware Housing ವ್ಯವಸ್ಥೆ ಮಾಡಬೇಕೆಂದು ಎರಡನೆಯ ಪಂಚವಾರ್ಷಿಕ ಯೋಜನೆಯಲ್ಲಿ ಯೋಚನೆ ಮಾಡಿದ್ದೇವೆಯೋ ಅಲ್ಲಿ ಆಗಲೇಬೇಕು. ಇಲ್ಲದಿದ್ದರೆ ಒಂದು ಭಾಗದ ಜನತೆ ಇದರ ಅನುಕೂಲವನ್ನು ಪಡೆಯುತ್ತಿರುವುದು, ಇನ್ನೊಂದು ಭಾಗದ ಜನತೆಗೆ ಅದರ ಅನುಕೂಲ ಕೊಡದಿರುವುದು ಇದರಿಂದ ಅವರಿಗೆ ಅನ್ಯಾಯಮಾಡಿದಂತಾಗುತ್ತದೆ.

ಆಮೇಲೆ N.E.S. ಬ್ಲಾಕುಗಳ ವಿಷಯ. ನಾನು ಎಸ್ಟಿಮೇಟ್ ಕಮಿಟಿಯ ಸದಸ್ಯನಾಗಿ ದೇಶಾದ್ಯಂತ ಈ ಸಂದರ್ಭದಲ್ಲಿ ಓಡಾಡಿ ನೋಡಿದ್ದೇನೆ. ಎಲ್ಲಿ ಅಸೆಂಬ್ಲಿ ಸದಸ್ಯರು ಹೆಚ್ಚಿಗೆ ನಿಗಾ ಕೊಟ್ಟು ಶ್ರದ್ಧೆ ಯಿಂದ ಕೆಲಸ ಮಾಡಿದ್ದಾರೋ ಅಲ್ಲಿ ಕೆಲಸ ಚೆನ್ನಾಗಿ ನಡೆದಿದೆ. ನಾವು ಒಂದು ಹೊಸ ರಾಷ್ಟ್ರವನ್ನು ನಿರ್ಮಾಣಮಾಡುವಾಗ, ಅಥವಾ ಒಂದು ಹೊಸ ಕಾರ್ಯವನ್ನು ಕೈಕೊಂಡಾಗ ಲೋಪದೋಷಗಳು ಬರುವುದು ಸ್ವಾಭಾವಿಕ. ನನ್ನ ಅನುಭವದಲ್ಲಿ ಗ್ರಾಮಾಂತರ ಪ್ರದೇಶಗಳಿಗೆ ಅನ್ವಯಿಸುವ ಹಾಗೆ ಯಾವ ಯೋಜನೆಯನ್ನು ಹಾಕಿದರೂ, ಅದು ಹಳ್ಳಿಯ ಜನರಿಗೆ ನೇರವಾಗಿ ಮುಟ್ಟುವಂತೆ ಮಾಡುತ್ತಿರುವ ಯಂತ್ರವೆಂದರೆ, ಅದು ರಾಷ್ಟ್ರೀಯ ವಿಸ್ತರಣಾ ಯೋಜನೆ. ಆದ್ದರಿಂದ ನಾವುಗಳೆಲ್ಲರೂ ಈ ಸಂದರ್ಭ ದಲ್ಲಿ ನಿಷ್ಪಕ್ಷಪಾತವಾಗಿ ಎಷ್ಟರಮಟ್ಟಿಗೆ ಕೆಲಸ ಮಾಡಿ ದ್ದೇವೆ ಎಂದು ಆತ್ಮ ಸಂಶೋಧನೆ ಮಾಡಿಕೊಂಡು ಕೆಲಸ ಮಾಡಬೇಕಾಗಿದೆ. ಈ ಸಂದರ್ಭದಲ್ಲಿ N.E.S. ಡೆವಲಪ್‌ಮೆಂಟ್ ಮಂತ್ರಿಗಳೂ ಮತ್ತು P.W.D. ಮಂತ್ರಿಗಳೂ ಹೆಚ್ಚಿಗೆ ಓಡಾಡಬೇಕಾಗಿದೆ. ಅವರು ಈ ವಿಷಯದಲ್ಲಿ ಹೆಚ್ಚಿಗೆ ಶ್ರದ್ಧೆ ವಹಿಸದೆ ಹೋದರೆ ಈ ಹೊಸ ಯೋಜನೆ ಕಾರ್ಯಗತವಾಗುವು ದಿಲ್ಲವೆಂದು ಖಂಡಿತ ಹೇಳುತ್ತೇನೆ. ಏಕೆಂದರೆ, ಜನರನ್ನು ಈ ಹೊಸ ಕಾರ್ಯಕ್ಕೆ ಎಚ್ಚರಗೊಳಿಸಬೇಕಾ ಗಿದೆ. ಗ್ರಾಮಾಂತರ ಜನರನ್ನೂ, ಅವರ ಮುಖಂಡರು ಗಳನ್ನೂ ತರಪೇತು ಮಾಡದ ಹೊರತು, ಈ ಯೋಜನೆ ಜನರ ಗೌರವಕ್ಕೆ ಪಾತ್ರವಾಗುವಂತೆ ಆಗುವುದಿಲ್ಲ ; ಜನರ ಪ್ರತಿನಿಧಿಯಾಗಿ ಅವರು ಹೋಗಿ ಕೆಲಸ ಮಾಡದೆ ಹೋದರೆ ಈ ಕೆಲಸ ಪೂರ್ಣವಾಗುವುದಿಲ್ಲ. ಆದ್ದರಿಂದ ಮಂತ್ರಿಗಳ ಓಡಾಟವನ್ನು ಕೇವಲ ಟೀಕೆ ಮಾಡುವ ದೃಷ್ಟಿಯಿಂದ ನೋಡಕೂಡದು. ಈ ಕೆಲಸಕಾರ್ಯದ ದೃಷ್ಟಿಯಿಂದ ಹೋಗುವಾಗ ಅಲ್ಲಿ ಎಷ್ಟರಮಟ್ಟಿಗೆ ಕೆಲಸ ನಡೆದಿದೆಯೆಂದು ನೋಡಿದರೆ ನಮಗೆ ಸಂತೋಷವಾಗುತ್ತದೆ. ಇನ್ನೂ ಕಾರ್ಯಗತ ಮಾಡ ಬೇಕಾಗಿದೆಯೆಂಬುದನ್ನು ಒಪ್ಪುತ್ತೇನೆ. ಆದರೆ ಒಂದು ಆಗಿದೆ. ಅಲ್ಲಲ್ಲೇ ಕೆಲವು ಕಡೆ ಸೋಷಿಯಲ್ ವೆಲ್ ಫೇರ್ ಸೆಕ್ಷನ್‌ಗಳು ಸ್ಥಾಪನೆಯಾಗಿವೆ. ಅದರಿಂದಾಗಿ ಕೆಲಸ ಸ್ವಲ್ಪ Duplicate ಆಗಿದೆಯೆಂದು ಕಾಣು ತ್ತದೆ. ಅವನ್ನು ತೆಗೆದು ಬೇರೆ ಬೇರೆ ಬಾಬುಗಳಲ್ಲಿ ಈ ಬಗ್ಗೆ ಖರ್ಚು ಮಾಡುವುದನ್ನು ಒಂದುಗೂಡಿಸಿ ಖರ್ಚುಮಾಡುವುದಾದರೆ ಟೀಕೆಗಳು ಸ್ವಲ್ಪಮಟ್ಟಿಗೆ ಕಡಮೆಯಾಗಬಹುದೆಂದು ಕಾಣುತ್ತದೆ.

ಇದೇ ಸಂದರ್ಭದಲ್ಲಿ ರೂರಲ್ ಡೆವಲಪ್‌ಮೆಂಟ್ ವರ್ಕ್ಸ್ ಎಂದು ಇದರ ಅಂಗವಾಗಿ ಕೆಲಸ ಮಾಡು ತ್ತಿತ್ತು. ನನಗೆ ತಿಳಿದುಬಂದಿರುವ ಹಾಗೆ, ಈಚೆಗೆ ಕೇಂದ್ರ ಸರ್ಕಾರದವರು ಇದಕ್ಕೆ ಹಣ ಕೊಡುವುದಿಲ್ಲ ವೆಂದು ಹೇಳಿದ್ದಾರೆ. ಈ ಹೊತ್ತು ರಾಷ್ಟ್ರೀಯ ವಿಸ್ತರಣಾ ಯೋಜನೆಯನ್ನು ಎಲ್ಲಾ ಕಡೆಗೂ ಕೊಡ ಬೇಕೆಂದಿದ್ದು, ನಾಳೆ ಈ ಯೋಜನೆಯನ್ನು ಕೈಬಿಟ್ಟು ರೂರಲ್ ಡೆವಲಪ್‌ಮೆಂಟ್ ವರ್ಕ್ಸನ್ನು ಮಿಕ್ಕ ಭಾಗ ಗಳಲ್ಲಿಮಾಡದೆ ಹೋದರೆ ಅಲ್ಲಿನ ಜನರು ಯಾವ ರೀತಿ ಪರಿತಪಿಸುತ್ತಾರೆಂಬುದನ್ನು ನೀವು ಮನಗಾಣಬೇಕು. ಆದ್ದರಿಂದ ಕೇಂದ್ರ ಸರ್ಕಾರದವರು ರೂರಲ್ ಡೆವಲಪ್‌ಮೆಂಟಿಗೆಂದು ಏನು ಒದಗಿಸುತ್ತಿದ್ದಾರೋ ಅದನ್ನು ಸಂಸ್ಥಾನ ಸರ್ಕಾರದವರಾದರೂ ಕೊಟ್ಟು ಈ ರೂರಲ್ ಡೆವಲಪ್‌ಮೆಂಟ್ ಕೆಲಸವನ್ನು ಮುಂದು ವರಿಸಬೇಕು ಎಂದು ಹೇಳುತ್ತೇನೆ.

ಇನ್ನು ಹಾರ್ಟಿಕಲ್ಚರ್ ವಿಚಾರದಲ್ಲಿ ಒಂದೆರಡು ಮಾತು ಹೇಳಬಯಸುತ್ತೇನೆ. ವ್ಯವಸಾಯ ಮತ್ತು ವೆಟರಿನರಿ ಭಾಗಗಳು ಬಹಳ ವರ್ಷಗಳಿಂದ ಒಂದೇ ಇಲಾಖೆಯಲ್ಲಿ ಇದ್ದು ಅವು ಹಾಗೆಯೇ ಮುಂದುವರಿದರೆ ಒಳ್ಳೆಯದಾಗುವುದಿಲ್ಲ, ಇವು ಗಳಿಂದ ಜನತೆಗೆ ಹೆಚ್ಚಿನ ಅನುಕೂಲವಾಗಬೇಕಾ ದರೆ ಬೇರ್ಪಡಿಸಬೇಕೆಂದು ಹೇಳಿ ಬೇರೆ ಬೇಗೆ ಮಾಡಿದರೋ ಹಾಗೆಯೇ ಹಾರ್ಟಿಕಲ್ಚರನ್ನೂ ವ್ಯವ ಸಾಯದ ಇಲಾಖೆಯಿಂದ ಬೇರ್ಪಡಿಸಬೇಕೆಂದು ಹೇಳು ತ್ತೇನೆ. ಈ ವರ್ಷ ಬೆಂಗಳೂರು ಜಿಲ್ಲೆಯೊಂದರಲ್ಲೇ 1,000 ಎಕರೆಯಷ್ಟು ಪ್ರದೇಶದಲ್ಲಿ ದ್ರಾಕ್ಷಿ ಬೆಳೆ ಯಾಗುತ್ತಿದೆ. ವ್ಯವಸಾಯ ಎಂದರೆ, ರಾಗಿ, ಬತ್ತ, ಜೋಳ—ಇವೇ ಕೊನೆಯೇ ? ಜೀವಕ್ಕೆ ಅತ್ಯುತ್ತಮ ವಾದ ಹಣ್ಣು ಹಂಪಲುಗಳು ನಮಗೆ ಬೇಡವೇ ? ಈ ದಿವಸ ಇಲಾಖೆಗಳನ್ನು ಒಂದುಗೂಡಿಸುವುದು ಅಥವಾ ಬೇರ್ಪಡಿಸುವ ಪ್ರಶ್ನೆಯಿಲ್ಲ. ಜನರಿಗೆ ಎಷ್ಟು ಸಹಾಯವಾಗುತ್ತದೆಂದು ಆಲೋಚಿಸಬೇಕಾಗಿದೆ. ಪಾಶ್ಚಾತ್ಯ ದೇಶಗಳಲ್ಲಿ ಹಾರ್ಟಿಕಲ್ಚರ್‌ಗೆ, ಸಂಶೋಧ ನೆಗ ಲಕ್ಷಾಂತರ ರೂಪಾಯಿಗಳನ್ನು ಖರ್ಚುಮಾಡುತ್ತಿ ದ್ದಾರೆ. ಈ ದಿವಸ ನಮ್ಮಲ್ಲಿ ಬೇಕಾದ ಗಿಡಗಳನ್ನು ಕಲ್ಕತ್ತ ಮತ್ತು ಇತರ ಕಡೆಗಳಿಂದ ತರಿಸಬೇಕಾಗಿದೆ. ನಮ್ಮಲ್ಲೇ ಅವನ್ನು ಬೆಳೆಸಿದರೆ ಲಕ್ಷಾಂತರ ರೂಪಾಯಿ ಹೊರಗಡೆ ಹೋಗುವುದನ್ನು ಉಳಿಸಲು ಅವಕಾಶವಿದೆ ಯೆಂಬುದನ್ನು ಯೋಚಿಸಬೇಕು. ಸರಿಯಾದ ವ್ಯವಸ್ಥೆ ಮಾಡಿ ಹಾರ್ಟಿಕಲ್ಚರ್ ಸರಿಯಾಗಿ ಬೆಳೆದು ಪ್ರಜಾ ಪ್ರಭುತ್ವಕ್ಕೆ ಮನ್ನಣೆ ದೊರೆಯುವಂತೆ ಇಲಾಖೆ ಕೆಲಸ ಮಾಡಬೇಕು.

ವೆಟರ್ನರಿ ಇಲಾಖೆ ಸಣ್ಣದಾದರೂ ಅದು ಮುಖ್ಯ ವಾದುದು. ಅದರಲ್ಲಿ ನನಗೆ ಆಸಕ್ತಿ ಇರುವುದರಿಂ

ಸ್ವಲ್ಪ ಮಾತನಾಡಬೇಕಾಗಿದೆ. ಆ ಇಲಾಖೆಯಿಂದ ಜನರಿಗೆಷ್ಟು ಸಹಾಯವಾಗಬೇಕೋ ಅದಾಗುವಂತೆ ಈ ದಿವಸ ಪ್ರಜಾಪ್ರಭುತ್ವದಲ್ಲಿ ಪರ್ಮನೆಂಟ್ ಎಗ್ಸಿಕ್ಯುಟೀವ್ ಏನಿದೆ ಅದು ನಿಷ್ಪಕ್ಷಪಾತವಾಗಿ ದೇಶಪ್ರೇಮದಿಂದ ಕೆಲಸಮಾಡಬೇಕು. ಯಾವ ಭಾಗದ ಜನರಿಗೆ ಏನು ಅನುಕೂಲವಾಗಬೇಕೋ ನೋಡಿ ತಕ್ಕ ಏರ್ಪಾಡು ಮಾಡಬೇಕು. ಈ ದಿವಸ ಜವಾಬ್ದಾರಿ ಹೊತ್ತಿರುವ ಜನಾನುರಾಗಿಗಳಾದ ಉಪಮಂತ್ರಿ ಶ್ರೀಮಾನ್ ಕೃಷ್ಣಪ್ಪನವರು ಈ ದೇಶಕ್ಕೆ ಬಂದರೆ ಬಹಳ ಸಂತೋಷವಾಗುತ್ತದೆ, ಅವರು ಬೇಕಾದಷ್ಟು ಹಣ ಕೊಡುತ್ತಾರೆ. ಕೊಯಮತ್ತೂರು ಡಿಸ್ಟ್ರಿಕ್ಟಿನಿಂದ ಬಂದ ದನ ನೋಡಿ, ಅಂಥ ಉತ್ತಮ ತಳಿ ನೋಡಿ ಯಾರೂ ಸಂತೋಷಪಡದೆ ಇರುವುದಿಲ್ಲ. ಅಂಥ ತಳಿ ಸರ್ಕಾರದ ಕಡೆಯಿಂದ ಮಾರುವಾಗ, ಸರ್ಕಾರಿ ಇಲಾಖೆಯಿರುವಾಗ ಬೆಂಗಳೂರಿಗೆ ಬೇಕಾದ ಹಾಲ ನ್ನೊದಗಿಸಲು ಸಾಧ್ಯವಾಗಿಲ್ಲ. ಮೊನ್ನೆ ಹೆಲ್ತ್ ಇಲಾಖೆ ಡಿಮ್ಯಾಂಡ್ ಬಂದಾಗ ಈ ವಿಚಾರ ಬೇಕಾದಷ್ಟು ಹೇಳುತ್ತಿದ್ದರು. ಇದನ್ನು ಸುಧಾರಿಸುವುದಕ್ಕೆ ಅವಕಾಶಮಾಡಬೇಕು. ಹೆಸರಘಟ್ಟದಲ್ಲಿ ಭೂಮಿ ಕೇವಲ ಮೂರು ಸಾವಿರ ಎಕರೆಗಳಷ್ಟಿದೆ. ಅದನ್ನು ಸಂಪೂರ್ಣವಾಗಿ ಉಪಯೋಗಿಸಿಕೊಂಡು ಮುತವರ್ಜಿ ವಹಿಸಿ ಹಾಲು ಸಾಕಷ್ಟು ಪ್ರಮಾಣದಲ್ಲಿ ದೊರೆಯುವಂತೆ ಮಾಡಬೇಕು. ಹೀಗೆ ದೇಶಕ್ಕೆ ಹೆಚ್ಚಿನ ಸಹಾಯವಾಗುವಂತೆ ವ್ಯವಸ್ಥೆ ಮಾಡಬೇಕೆಂದು ಹೇಳಿ ಬಹಳ ಮುಖ್ಯವಾದ ಬೇಡಿಕೆಯೇನು ನಮ್ಮ ಮುಂದಿದೆ ಅದಕ್ಕೆ ಸಮ್ಮತಿಯನ್ನು ಕೊಡುತ್ತಾ ನನಗೆ ಮಾತನಾಡಲು ಅವಕಾಶಕೊಟ್ಟಿದ್ದಕ್ಕಾಗಿ ವಂದಿಸಿ ನನ್ನ ಭಾಷಣವನ್ನು ಮುಗಿಸುತ್ತೇನೆ.

†ಶ್ರೀ ಕೆ. ಎಸ್. ಸೂರ್ಯನಾರಾಯಣರಾವ್ (ಮೈಸೂರು ಸಿಟಿ).—ಅಧ್ಯಕ್ಷರೇ, ಈ ಬೇಡಿಕೆಯ ಮೇಲೆ ಮಾತನಾಡುತ್ತಾ, ನಾಲ್ಕಾರು ವಿಷಯ ಹೇಳುತ್ತೇನೆ. ಒಂದು ಅಭಿಪ್ರಾಯ ಈ ಸಭೆಯಲ್ಲೂ ಮತ್ತು ಹೊರಗಡೆಯೂ ಇರುವಹಾಗೆ ಕಾಣುತ್ತದೆ. ಅದನ್ನು ಮೊದಲು ಹೇಳಲು ಇಚ್ಛೆಪಡುತ್ತೇನೆ. ವ್ಯವಸಾಯಕ್ಕೂ ನನಗೂ ಏನು ಸಂಬಂಧವಿದೆ, ಅದು ಗ್ರಾಮಾಂತರ ಪ್ರದೇಶಕ್ಕೆ ಸಂಬಂಧಪಟ್ಟದ್ದು ಎಂಬ ಮನೋಭಾವವನ್ನು ವ್ಯಕ್ತಪಡಿಸಲಾಯಿತು. ಅದು ಸರಿಯಲ್ಲ. ಏಕೆಂದರೆ ಗ್ರಾಮಾಂತರದವರಿಲ್ಲದಿದ್ದರೆ ನಾವಿರುವುದಕ್ಕೆ ಸಾಧ್ಯವಿಲ್ಲ, ನಾವಿಲ್ಲದಿದ್ದರೆ ಗ್ರಾಮಾಂತರಗಳವರಿಗೆ ಸಾಧ್ಯವಿಲ್ಲ, ಇಬ್ಬರೂ ಇರಬೇಕು. ನಮಗೂ ಮತ್ತು ಇತರ ಕಡೆಗಳಲ್ಲಿರುವ ಜನರಿಗೂ ತಕ್ಕ ಸೌಲಭ್ಯ ಒದಗರೇಬೇಕು. ಈಗ ಡೆವಲಪ್‌ಮೆಂಟ್ ಪ್ರೋಗ್ರಾಂ ಪ್ರಕಾರ ಬೇಕಾದಷ್ಟು ಬೆಳೆಯಬಹುದು. ಆದರೆ ಕೊಂಡುಕೊಳ್ಳುವ ನಾವಿಲ್ಲದಿದ್ದರೆ ಯಾರಿಗೆ ಅದನ್ನು ಮಾರುವುದು ! ಆದುದರಿಂದ ನಮ್ಮ ಹಿತದೃಷ್ಟಿಯನ್ನೂ ನೋಡಬೇಕು. ಆ ದೃಷ್ಟಿಯಿಂದ ಎಲ್ಲಾ ಅಭಿಪ್ರಾಯಗಳನ್ನೂ ಕ್ರೋಢೀಕರಿಸಿ ಒಂದು ಅಭಿಪ್ರಾಯಕ್ಕೆ ಬರಬೇಕು, ತೀರ್ಮಾನಕ್ಕೆ ಬರಬೇಕು. ಓರ್ಗನೈಜಡ್ ಆಗಿ ಗ್ರಾಮಾಂತರಗಳಿಗೆ ಮಾತ್ರ ವ್ಯವಸಾಯ ಸಂಬಂಧಪಟ್ಟಿದೆಯೆಂದು ಹೇಳುವ ಮನೋಭಾವನೆ ಬಿಡಬೇಕು ಎಂದು ಈ ಸಮಯದಲ್ಲಿ ಹೇಳುತ್ತೇನೆ.

ಈ ಕ್ಷೇತ್ರದಲ್ಲಿ ನಮ್ಮ ದೇಶದಲ್ಲಿ ಅನೇಕ ಕೆಲಸ ಕಾರ್ಯಗಳಾಗಿವೆ. ಆ ವಿಚಾರದಲ್ಲಿ ಹೆಮ್ಮೆಪಡಬೇಕಾಗಿದೆ. ಪ್ಲಾನಿಂಗ್ ಪೀರಿಯಡ್‌ನಲ್ಲೇನು ಕೆಲಸವಾಗಿದೆ, ಸರಿಯಾದ ಉತ್ಪತ್ತಿ ಬಂದಿಲ್ಲವೆ ಎಂದು ಸರ್ವೇಸಾಮಾನ್ಯವಾಗಿ ಟೀಕೆಬರಲು ಸಾಧ್ಯವಿದೆ. ಆದರೆ ಕೆಲಸಕಾರ್ಯ ನಡೆದಿದೆಯೆ, ಇಲ್ಲವೆ ಎಂದು ನೋಡಬೇಕು ಹೇಗಾಗಿದೆಯೆಂದು ಅರಿಯಬೇಕು. ಸಾಮಾನ್ಯವಾಗಿ ಹಣಕಾಸಿನ ಸಚಿವರು ಇದರ ಅಂಕಿಅಂಶಗಳನ್ನು ಅವರ ಬಡ್ಜೆಟ್ ಭಾಷಣದಲ್ಲಿ ತಿಳಿಸಿದ್ದಾರೆ. ಅದನ್ನು ನೋಡಿದರೆ ಗೊತ್ತಾಗುತ್ತದೆ. ವ್ಯವಸಾಯವನ್ನು ಉತ್ತಮಪಡಿಸಲು ಎಷ್ಟೋ ಕೆಲಸ ಕಾರ್ಯಗಳನ್ನು ಮಾಡಿದ್ದರೂ ಕೂಡ ನಿರೀಕ್ಷಿಸಿದಷ್ಟು ಉತ್ಪತ್ತಿಯಾಗುತ್ತಿಲ್ಲವೆಂದು ಅವರು ಹೇಳಿದ್ದಾರೆ. ಅಂಕಿಅಂಶ ನೋಡಿದರೆ, 1956–57ರಲ್ಲಿ ಏನಿತ್ತೋ ಅದನ್ನು 1957–58ಕ್ಕೆ ಹೋಲಿಕೆ ಮಾಡಿದರೆ ಬತ್ತವಾಗಲಿ, ರಾಗಿಯಾಗಲಿ, ಬಜ್ರ ಆಗಲಿ ಯಾವುದೇ ಆಗಲಿ, ಎಷ್ಟೇ ಎಕರೆ ಹೆಚ್ಚಿದ್ದರೂ ಉತ್ಪತ್ತಿ ಕಡಮೆಯಾಗಿದೆ. ಕಾರಣವೇನೆಂದು ಹೇಳಿದ್ದಾರೆ. ಮಳೆ ಸರಿಯಾಗಿ ಆಗದೆ, ಸಕಾಲದಲ್ಲಿ ಬರದೆ ಹೀಗಾಯಿತೆಂದು ಹೇಳಿದ್ದಾರೆ, ಇದರಿಂದ ಒಂದು ಕಾಣುವುದು ಹೆಚ್ಚು ಕೆಲಸಕಾರ್ಯ ನಡೆದರೂ ಕೂಡ ಒಂದೂ ಆಗದಿರುವುದಕ್ಕೆ ಕಾರಣ ಮಳೆಯನ್ನೇ ನಂಬಿಕೊಂಡಿರುವ ಪರಿಸ್ಥಿತಿ ಅದಷ್ಟು ಮಟ್ಟಿಗೆ ಕಡಮೆಯಾಗಬೇಕೆಂಬುದು. ಈ ದೃಷ್ಟಿಯಿಂದ ಕೆಲಸಕಾರ್ಯ ಈಚೆಗೆ ಆಗುತ್ತಿದೆ. ದೊಡ್ಡ ದೊಡ್ಡ ಕಾಮಗಾರಿ ಆಗುವಾಗ ಯಾವರೀತಿ ಉಪಯೋಗಿಸಬೇಕೆಂಬುದು ಕೂಡ ಜನರಿಗೆ ತಿಳಿಯಬೇಕು. ಬರೀ ಕಟ್ಟೆಕಟ್ಟಿದರೆ ಅಥವಾ ಕಾಲೋನಿ ಮಾಡಿದರೆ ಸಾಲದು, ಅದರಜೊತೆಗೆ ಆಯಾಯ ಕ್ಷೇತ್ರಗಳಲ್ಲಿರುವ ಜನರು ಸನ್ನಿವೇಶಗಳಿಗೆ ಹೊಂದಿಕೊಳ್ಳುವಂತೆ ಅವರನ್ನು ತರಪೇತು ಮಾಡುವುದು ಬಹುಮುಖ್ಯವಾದುದು. ಆದರಿಂದ ಸೈಕಲಾಜಿಕಲ್ ಡೆವಲಪ್‌ಮೆಂಟ್ ಆಗುತ್ತದೆ. ಅದಕ್ಕೆ ಪ್ರಚಾರವಾಗಬೇಕು. ಈ ದೃಷ್ಟಿಯಿಂದ ಕೂಡ ಕೆಲಸಕಾರ್ಯ ಚೆನ್ನಾಗಿ ನಡೆಯಬೇಕು. ಈಗ ಅನೇಕರೀತಿಯ ಸಂಶೋಧನೆ ನಡೆದಿದೆ. ಹ್ಯಾಂಡ್‌ಬಿಲ್ಸ್ ಈ ಸಭೆಯ ಸದಸ್ಯರಿಗೆ ಹಂಚಿದರೆ ಸಾಲದು, ಅದರಿಂದ ಅಷ್ಟು ಪ್ರಯೋಜನವಾಗಲಾರದು. ಬೆಳೆಯುವವನಿಗೆ ಅರ್ಥವಾಗುವಂತೆ ವ್ಯವಸ್ಥೆಯಾಗಬೇಕು. ಅದಾಗಬೇಕಾದರೆ ಅವನ ದೃಷ್ಟಿಕೋಣ ಬದಲಾವಣೆ ಮಾಡಬೇಕು. ಇದಕ್ಕೆ ಬಹಳಮಟ್ಟಿಗೆ ಮನಸ್ಸನ್ನು ಪರಿವರ್ತನೆ ಮಾಡುವುದು ಬಹಳ ಮುಖ್ಯ. ಆ ದೃಷ್ಟಿಯಿಂದ ಹೇಳುವುದಾದರೆ, propaganda is the major portion of the development work ಎಂದು ಹೇಳಬೇಕಾಗಿದೆ. ಎನ್.ಇ.ಎಸ್. ನವರು ಇದನ್ನು ಬಹಳ ಚೆನ್ನಾಗಿ ಮಾಡುತ್ತಿದ್ದಾರೆ. ಎಲ್ಲಾ ಕ್ಷೇತ್ರಗಳಲ್ಲೂ ಎಲ್ಲಾ ಕೆಲಸಕಾರ್ಯ ನಡೆಯಬೇಕು, ಅನುಭವವಾಗಬೇಕು ಎಂಬ ಅಭಿಪ್ರಾಯದಿಂದ ಇದನ್ನು ಮಾಡಿದ್ದಾರೆ. ಕೆಲಸಕಾರ್ಯ ಸರಿಯಾಗಿ ನಡೆಯುತ್ತಿದೆ, ನನಗೆ ಗೊತ್ತು. ಎನ್.ಇ.ಎಸ್. ನಲ್ಲೂ ಕೂಡ ಕೆಲಸಕಾರ್ಯ ಚೆನ್ನಾಗಿ ನಡೆಯುತ್ತಿದೆ. ಮನೋಭಾವನೆ ಬದಲಾವಣೆಯಾಗಬೇಕು. They look only to the physical aspect of it. ಎಷ್ಟು ಸ್ಕೂಲು ಕಟ್ಟಡ ಆಯಿತು, ಎಷ್ಟು ಭಾವಿ ಆಯಿತು ಎಂದು ನೋಡುವಾಗ, we have begun to assess values in rupees, annas and pies. ಜನರ ಮನಸ್ಸು ಪರಿವರ್ತನೆಯಾಗಿದೆ. ಐದು ವರ್ಷ ಯೋಜನೆ ನಡೆಯುವಾಗ ಜನರೆಷ್ಟು ತಯಾರಾಗಿದ್ದಾರೆಂದು ನೋಡಬೇಕು. ಈಗ ಫರ್ಟಿಲೈಜರ್ಸ್ ನೋಡೋಣ. ನಮ್ಮ ದೇಶದಲ್ಲಿ ರಾಷ್ಟ್ರೀಯ ವಿಸ್ತರಣಾಯೋಜನೆ ಕೆಲಸ ಕಾರ್ಯ ಏನು ನಡೆಯುತ್ತಿತ್ತೋ ಅದು ಈಗ ಹೆಚ್ಚಾಗಿದೆ. ಈರೀತಿ ಕೆಲಸಕಾರ್ಯ ಮಾಡಬೇಕಾಗಿದೆ.

(ಶ್ರೀ ಕೆ. ಎಸ್. ಸೂರ್ಯನಾರಾಯಣರಾವ್)

4 P.M.

ಆಹಾರ ಉತ್ಪತ್ತಿ ಜಾಸ್ತಿಮಾಡುವದಕ್ಕೆ Japanese method of cultivation ಮಾಡುವ ಕ್ರಮಒಂದು ಇದೆ. ಜಪಾನಿನದಾಗಲಿ, ಚೈನಾದಾಗಲಿ, ರಷ್ಯಾದ್ದೇ ಆಗಲಿ ಯಾವದಾದರೊಂದ ಪದ್ಧತಿಯನ್ನು ಉಪಯೋಗಿಸಿಕೊಳ್ಳೋಣ. Let us not go by the brand of it but by the utility point of it. ಚೈನಾದಾಗಲಿ, ಜಪಾನಿನದಾಗಲಿ, ರಷ್ಯಾದ್ದಾಗಲಿ, it matters very little. ಈ ದೃಷ್ಟಿಯಿಂದ ಇದನ್ನು ನಾವು ನೋಡುವಾಗ್ಗೆ ಒಂದು ಸಲಹೆ ಮಾಡುತ್ತೇನೆ. Japanese method of cultivation ಹೆಚ್ಚಿನ ರೀತಿಯಲ್ಲಿ ಆಗಬೇಕಾದರೆ, ಧಾನ್ಯ ಬೆಳೆಯುತಕ್ಕಂಥ ಜನರಿಗೆ ಒಂದು incentive ಕೊಡಬೇಕು. ಈ ಜನರಿಗೆ subsidise ಮಾಡಿ fertilisers ಕೊಡಬೇಕು. ಈ ಪದ್ಧತಿಯಿಂದ ಬೆಳೆಯತಕ್ಕ ಜನರಿಗೆ ಟ್ಯಾಕ್ಸ್‌ನಲ್ಲಿ remission ಕೊಡಬೇಕು, ಅಂದರೆ Japanese method of cultivation or improved method of cultivationಗೆ ಜನರು ಗಮನ ಕೊಡುತ್ತಾರೆ. ಆದಾಯ ಕಡಮೆಯಾದರೂ ಚಿಂತೆಯಿಲ್ಲ ಬೆಳೆ ಜಾಸ್ತಿಯಾಗುತ್ತದೆ. Subsidised fertilisers, agricultural implements ಒದಗಿಸಿಕೊಡುವುದಕ್ಕೆ ಗಮನಕೊಡಬೇಕು. ವ್ಯವಸಾಯದ ಉತ್ಪತ್ತಿ ಜಾಸ್ತಿಯಾಗುತ್ತದೆಯೋ ಇಲ್ಲವೇ ಎಂಬುದು ಮುಖ್ಯ ವಿಷಯ. ಈಗ ಒಂದು ಪರ್ವಕಾಲ ಆಗಿದೆ. ಈಗ ಭೂಸುಧಾರಣೆಯ ಕಾನೂನಿನ ಬಗ್ಗೆ ವಿಚಾರ ವಿನಿಮಯ ನಡೆದಿದೆ. ಈ land reforms ಕಾನೂನನ್ನು ಕೂಡಲೇ ಜಾರಿಗೆ ತಂದರೆ ಚೆನ್ನಾಗಿ ಆಗುತ್ತದೆ. ಈ ಕಾನೂನು ಬಗ್ಗೆ ನಡೆದ ಚರ್ಚೆಯ ಜಂಜಾಟದಲ್ಲಿ ಇದು ಎಲ್ಲಿ ಹೋಗುತ್ತದೋ ಏನೋ ಎಂಬ ಒಂದು ಶಂಕೆಬಂದಿದೆ. ಈ ಭೂಸುಧಾರಣೆಯ ಕಾನೂನನ್ನು, vested interest ಇದ್ದ big landlords ಟೀಕೆ ಮಾಡುತ್ತಿದ್ದಾರೆ ಮತ್ತು ವಿರೋಧಿಸುತ್ತಿದ್ದಾರೆ. ಜತ್ತಿ ಕಮಿಟಿಯವರು ಮಾಡಿದ ಶಿಫಾರಸುಗಳು ಬಡರೈತರ ಹಿತದ ಸಲುವಾಗಿಯೇ ಇವೆ. ಯಾರು ನಿಜವಾಗಿಯೇ ಭೂಮಿಯಲ್ಲಿ ದುಡಿಯುವದಿಲ್ಲವೋ ಅಂಥ ಶೇಕಡಾ ಐದರಷ್ಟು ಜನ ಇದಕ್ಕೆ ವಿರೋಧ ಮಾಡುತ್ತಿದ್ದಾರೆ. ಆದಕಾರಣ land reformsನ್ನು ಆದಷ್ಟು ಜಾಗ್ರತೆ ಜಾರಿಗೆ ತರಬೇಕು. ಭೂಮಿಯ ಹಿಡುವಳಿಯ ಮೇಲೆ ceiling ಹಾಕಿದರೆ ಹೆಚ್ಚು ಉತ್ಪತ್ತಿ ಬರುತ್ತದೆ. Ceiling of income on the land, 3,400, 6,700, ಅಥವಾ 10 ಸಾವಿರ ರೂಪಾಯಿ ಇದ್ದರೂ ಸಹ needs ಹೆಚ್ಚಾಗಿ ಹೆಚ್ಚು ಉತ್ಪತ್ತಿ ತೆಗೆದರೆ ಜನಗಳಿಗೆ ಕಲ್ಯಾಣವಾಗುತ್ತದೆ.

ಇನ್ನು ಕೋ-ಆಪರೇಟಿವ್ ವಿಚಾರದಲ್ಲಿ ಒಂದು ಮಾತು ಹೇಳಬೇಕಾಗಿದೆ. Service co-operative ಆಗಬೇಕು. ಅದಕ್ಕಾಗಿ ಒಂದು blue print ತಯಾರು ಮಾಡಬೇಕು. ಅದು ಹೇಗೆ ನಡೆಯುತ್ತದೆ ಎಂಬುದರ ವಿವರ ಸ್ವಲ್ಪ ಹೇಳುತ್ತೇನೆ. Service co-operative ಯಾವ ಯಾವ ದರ್ಜೆಯಲ್ಲಿ ಎಷ್ಟೆಷ್ಟು ಕೆಲಸ ನಡೆಯುತ್ತದೆ ಎಂಬುದಕ್ಕೆ working sheets ತಯಾರು ಆಗಬೇಕು. ಆಗ್ಗೆ ಜನರು ಈ ಪದ್ಧತಿಗೆ ವಿರೋಧಮಾಡುವುದಿಲ್ಲ. ಸರ್ವೆ ಸಾಮಾನ್ಯವಾಗಿ ಸರಕಾರಿ ಜಮೀನನ್ನು ಖಾಸಗೀ ಜನರಿಗೆ ಕೊಡುವುದನ್ನು ಬಿಟ್ಟು co-operative basis ಮೂಲಕ ಕೆಲಸ ಕಾರ್ಯಗಳನ್ನು ಮಾಡಲು ಸಾಧ್ಯವಿದೆ. ಯಾರು ಯಾರು cultivate ಮಾಡುತ್ತಾರೋ ಕೆಲಸಮಾಡುತ್ತಾರೋ ಅಂಥವರು ಷೇರ್ ಹೋಲ್ಡರ್ ಆಗಬೇಕು. Working sheets ಹಾಕಿದರೆ ಒಳ್ಳೆಯದಾಗುತ್ತದೆ, ಯಾವುದೂ radical change ಆಗಬಾರದು.

If we take land off from the operation of the Transfer of Property Act, the large problem in the way of co-operative farming is solved; the biggest obstacle is removed.

ಇವತ್ತು ಒಂದು ಎಕರೆ ಭೂಮಿಗೆ ಎರಡು-ಮೂರು ಸಾವಿರ ರೂಪಾಯಿ ಬೆಲೆ ಬರುತ್ತದೆ. ಆದರೆ ಜಮೀನು ಮಾರಲಿಕ್ಕೆ ಬರುವುದಿಲ್ಲವೆಂದು ಇದ್ದರೆ ಜಮೀನಿನ ಮೇಲಿನ ಆಸ್ಥೆ ಮೋಹ ಹೋಗುತ್ತದೆ.

It should not be an object to be sold in the market. He should only sell it to the co-operative society or to a service co-operative.

ಈ ರೀತಿಯಾಗಿ ಮಾಡಿ ಜಮೀನು ಅಭಿವೃದ್ಧಿಪಡಿಸುವದಕ್ಕೆ ಸರಕಾರ ಗಮನ ಕೊಡಬೇಕು.

ನನ್ನ ಇನ್ನೊಂದು ವಿಚಾರವನ್ನು ಹೇಳಬೇಕೆಂದಿದ್ದೇನೆ. ಪಟ್ಟಣಗಳಲ್ಲಿರತಕ್ಕಂಥ ಜನರಿಗೆ ಯಾವ ರೀತಿಯಲ್ಲೂ ಉಪಕಾರವಾಗಿಲ್ಲ. Food ವಿಚಾರದಲ್ಲಿ ಇವರಿಗೆ ಸಹಾಯವಾಗಿಲ್ಲ. ಅದಕ್ಕೆ ಏನೇ ಕಾರಣವಿದ್ದರೂ Food distribution ಸರಿಯಾಗಿ ಮಾಡಬೇಕು. State trading in food, monopoly trading in food is the only method. ಸರಕಾರದವರು ನೇರವಾಗಿ regulated market ಮೂಲಕ marketing society ಮೂಲಕ ಕೆಲಸ ಕಾರ್ಯಗಳನ್ನು ಮಾಡಿದರೆ ಬಹುಶಃ ಮಧ್ಯಂತರದಲ್ಲಿಯ ಖರ್ಚು ಕಡಮೆಯಾಗಿ ಧಾರಣೆವಾಸಿ ಚೆನ್ನಾಗಿ ಆಗುತ್ತದೆ. Food trading should be the State monopoly. ಇದರಿಂದ ಒಂದು ರೂಪಾಯಿಗೆ ಎರಡು ಸೇರು ಅಕ್ಕಿ ಸಿಕ್ಕುವ ಹಾಗೆ ಆಗಬಹುದು. ಜನರಿಗೆ ಅನುಕೂಲವಾಗುತ್ತದೆ.

ಕೊನೆಯದಾಗಿ ಇನ್ನೊಂದು ವಿಷಯವನ್ನು NES ಬಗ್ಗೆ ಹೇಳಿ ನನ್ನ ಭಾಷಣ ಮುಗಿಸುತ್ತೇನೆ. NES ಕೆಲಸ ಕಾರ್ಯಗಳು ಬಹಳ ಚೆನ್ನಾಗಿ ನಡೆಯುತ್ತಿವೆ. ಇದರ ವಿಚಾರದಲ್ಲಿ ಮಾತನಾಡುವಾಗ್ಗೆ ವಿರೋಧ ಪಕ್ಷದ ಸದಸ್ಯರು ಕೇವಲ ಇವಕ್ಕೆ political colour ಕೊಡಲಿಕ್ಕೆ ಪ್ರಯತ್ನಮಾಡಿದರು. ಅದು ತಪ್ಪು, ನಾನೂ ಸಹ ಒಬ್ಬ ಸದಸ್ಯನಾಗಿದ್ದೇನೆ, ನನಗೆ ಅನುಭವ ಇದೆ; ಈ ಡಿಸ್ಟ್ರಿಕ್ ಡೆವಲಪ್‌ಮೆಂಟ್ ಬೋರ್ಡ್, ಎನ್‌ಇಎಸ್ ಇವುಗಳಲ್ಲಿ ಅಸೆಂಬ್ಲಿಮೆಂಬರುಗಳು ಸದಸ್ಯರಾಗಿದ್ದಾರೆ. ಈ ಸದಸ್ಯತ್ವದ ಉಪಯೋಗವನ್ನು ಸರಿಯಾಗಿ ಮಾಡಿಕೊಳ್ಳದೆ ಈ ಸ್ಕೀಮು ಸರಿಯಾಗಿಲ್ಲವೆಂದು ಹೇಳುವುದು ತಪ್ಪು. ಅದು ಸರಿಯಲ್ಲ, ಅಲ್ಲಲ್ಲಿ ಕೆಲವು ಲೋಪದೋಷಗಳು mistakes, lapses ಇರಬಹುದು. ಅಂತಹ ತಪ್ಪನ್ನು ದೊಡ್ಡದು ಮಾಡಬಾರದು ಕೆಲಸ ಏನಾಗುತ್ತಿದೆ ಎಂಬುದನ್ನು ನೋಡಬೇಕಾಗುತ್ತದೆ. ಇನ್ನೊಂದು most important thing ಎಂದರೆ, ಈ ಎನ್.ಇ.ಎಸ್.ನಲ್ಲಿ constant vigilance is the most important work. ಹೆಚ್ಚಿನ ಮುತುವರ್ಜಿ ಬೇಕು. ಈ ರೀತಿ ಚೆನ್ನಾಗಿ ಕೆಲಸ ಆಗುತ್ತಿದೆಯೇ ಎಂದು ನೋಡಿದರೆ ಬಹುಶಃ ಚೆನ್ನಾಗಿ ಕೆಲಸವಾಗುತ್ತಿದೆ ಎಂದು ಹೇಳಬಹುದು. ಹಾಗೆಯೇ ಇದನ್ನು ನೋಡಿಕೊಳ್ಳತಕ್ಕ ಮಂತ್ರಿಗಳ ವಿಚಾರ

ಹೇಳಿದರು. ನಾನು ಅವರಿಗೆ ವಕಾಲತ್ತು ಮಾಡುತ್ತಿಲ್ಲ. The Minister for National Development must be a watch-dog of the whole show. He must see whether the work is going on well and whether there is slackness. ಅದನ್ನು ನೋಡಬೇಕಾಗುತ್ತದೆ. ಈ ದೃಷ್ಟಿಯಿಂದ ಅವರು ಹೆಚ್ಚಿನ ಟೂರ್ ಮಾಡುವುದು. ಇಂಥಾ ಸಣ್ಣ ವಿಚಾರ ಹೇಳುವುದು ಬೇಡ. ಆದರೂ ಸಹ ಅವರಿಗೆ ಇದರಲ್ಲಿ ಏನೂ ಉಳಿಯುವುದಿಲ್ಲ ಎಂದು ಕಾಣುತ್ತದೆ. ಆದ್ದರಿಂದ ಈ ವಿಷಯವನ್ನು ನಾವು ಇಲ್ಲಿಗೇ ಬಿಟ್ಟು, ಈ ಎನ್.ಇ.ಎಸ್. ಮತ್ತು ಕಮ್ಯೂನಿಟಿ ಪ್ರಾಜೆಕ್ಟ್ ಕೆಲಸಕಾರ್ಯ ನಡೆದಿದೆಯೇ, tempo of the Plan ಯಾವ ರೀತಿ ಆಗಿದೆ ಎಂಬುದನ್ನು ವಿಚಾರ ಮಾಡಿದ್ದೇ ಆದರೆ ಹೋದವರ್ಷಕ್ಕಿಂತಲೂ ಈ ವರ್ಷ ಹೆಚ್ಚಿನ ದುಡ್ಡು ಒದಗಿಸಿದ್ದಾರೆ ; ಶೇಕಡ 75 ಖರ್ಚು ಮಾಡಿದ್ದಾರೆ ಎಂಬುದು ಗೊತ್ತಾಗುತ್ತದೆ. ಶ್ರೀಮಾನ್ ಬೈರೇಗೌಡರು ಹೇಳಿದ ಹಾಗೆ, ಈ ಎನ್.ಇ.ಎಸ್.ನಿಂದ ಆಗತಕ್ಕ ಸೌಲಭ್ಯವನ್ನು ತಪ್ಪಿಸದ ಹಾಗೆ ಈಗಿನಿಂದಲೇ ಕೇಂದ್ರ ಸರ್ಕಾರದೊಡನೆ ವ್ಯವಹಾರಮಾಡಿ ಈ ಪ್ಲಾನು ಮುಂದುವರಿಯುವಂತೆ ಮಾಡಲು ಪ್ರಯತ್ನಮಾಡ ಬೇಕು. ಇದರಿಂದ Small irrigation worksಗೆ ಹೆಚ್ಚಿನ ಒಂದು ಅವಕಾಶ ಸಿಕ್ಕಿದ ಹಾಗಾಗುತ್ತದೆ. ಈ ದೃಷ್ಟಿಯಿಂದ ಕೆಲಸಕಾರ್ಯಗಳನ್ನು ಮಾಡುವುದು ಸೂಕ್ತ ಎಂದು ಸಲಹೆಮಾಡಿ ಅಧ್ಯಕ್ಷರನ್ನು ವಂದಿಸಿ ನನ್ನ ಭಾಷಣವನ್ನು ಮುಗಿಸುತ್ತೇನೆ.

ಶ್ರೀ ಜಿ. ಎನ್. ಪುಟ್ಟಣ್ಣ.—ಮಾನ್ಯ ಅಧ್ಯಕ್ಷರೇ, ಕಾಂಗ್ರೆಸ್ ಪಾರ್ಟಿಯಲ್ಲಿರತಕ್ಕ ನಮ್ಮ ಅನೇಕ ಮಿತ್ರರು ನಮ್ಮ ಪಕ್ಷದವರು ಮಾತನಾಡುತ್ತಿರುವಾಗ ನಿಮ್ಮ ಪಾರ್ಟಿ ಪಾಲಿಸಿ ಏನು ಎಂದು ಕೇಳಿದರು. ಅದನ್ನೆಲ್ಲಾ ಬಾಯಿಬಿಟ್ಟು ಹೇಳಬೇಕಾದರೆ ಬಹಳ ಕಾಲವಾಗುತ್ತದೆ. ನಮ್ಮ ಪಾರ್ಟಿ ಕಾನ್‌ಸ್ಟಿಟ್ಯೂಷನ್ ಇದೆ, ದಯವಿಟ್ಟು ನೋಡಿಕೊಳ್ಳಿ, ಪುಸ್ತಕ ಕೊಡುತ್ತೇನೆ. ನಮ್ಮ ಪಾರ್ಟಿಯ ಪಾಲಿಸಿ ಏನೆಂದರೆ—

Out with it Dunciad
Let the secret pass
That king Midas had ass's ears.

ಇದರ ಅರ್ಥ ಇಷ್ಟೆ—ಯಾವ ಸರ್ಕಾರವೇ ಇರಲಿ, ಯಾವನು ಸರ್ಕಾರಕ್ಕೆ ದ್ರೋಹ ಮಾಡುತ್ತಾನೆಯೋ, ಜನಗಳಿಗೆ ಮೋಸಮಾಡುತ್ತಾನೆಯೋ ಅಂತಹವನನ್ನು ಬಯಲಿಗೆ ಎಳೆದು ಜನಗಳಿಗೆ ತೋರಿಸಬೇಕೆಂಬುದು ನಮ್ಮ ಪಾಲಿಸಿ. ಅಂತಹವರು ಯಾರಾದರೂ ಆಗಲಿ ಮುಂದಿನ ಎಲೆಕ್ಷನ್‌ನಲ್ಲಿ ನಾವು ಕೆಲವರು ಎಲೆಕ್ಷನ್‌ಗೆ ನಿಂತುಕೊಳ್ಳದೆಯೇ ಅಂಥಾವರನ್ನು ನಾವು ಹಿಡಿದು ಹಾಕುತ್ತೇವೆ. ಅದೇ ನಮ್ಮ ಪಾಲಿಸಿ. ಸ್ವಾಮಿ ನನಗೆ ಕೊಟ್ಟಿರುವುದು 15 ನಿಮಿಷ. ಇತರರಿಗೆ 20 ನಿಮಿಷ ಕೊಟ್ಟಿದ್ದೀರಿ. ಅದು ನಿಮ್ಮ ದಯ. 15 ನಿಮಿಷದಲ್ಲಿ ಐದು ಸಬ್ಜೆಕ್ಟ್ ವಿಷಯ ಹೇಳಬೇಕೆಂದರೆ ಮೂರು ನಿಮಿಷ ಒಂದೊಂದು ಸಬ್ಜೆಕ್ಟಿಗೆ ಆಗುತ್ತದೆ. ಮೊದಲನೆಯದಾಗಿ ಫಾರೆಸ್ಟ್ ಡಿಪಾರ್ಟ್‌ಮೆಂಟ್ ತೆಗೆದುಕೊಂಡರೆ— ತುಮಕೂರಿನಲ್ಲಿ 180–200 ಮನೆಗಳವರು ಬಾಚಣಿಗೆ ಮಾಡಿ ಜೀವನ ಮಾಡುತ್ತಾ ಇದ್ದಾರೆ. ಅವರಿಗೆ ಸುಮಾರು ಎರಡು ವರ್ಷದ ರಾಗಾಯ್ತಿ ಕೇಳಿಕೊಂಡರೂ ಯಾವ ವಿಧವಾದ ಸಹಾಯವನ್ನೂ ಕೊಡಲಿಲ್ಲ ; ವಿಪರೀತ ಕಷ್ಟವಾಗಿತ್ತು. ನಾನು ಯಾವ ಆಫೀಸರನ್ನೂ ಹೊಗಳುವವನೂ ಅಲ್ಲ ತೆಗಳುವವನೂ ಅಲ್ಲ. ಶಿವಮೊಗ್ಗಾ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫೀಸರು ನೀರಿನಲ್ಲಿ ಮುಳುಗಿರುವ ಮರಗಳನ್ನು ತೆಗೆದುಕೊಳ್ಳುವಂತೆ ಆರ್ಡರ್ ಮಾಡಿದ್ದರು. ಇದು ಅಸಾಧ್ಯ ಕೆಲಸ. ನಮ್ಮ ಚೀಫ್ ಕನ್ಸರ್‌ವೇಟರ್ ಆಫ್ ಫಾರೆಸ್ಟ್ಸ್ ಅವರಲ್ಲಿ ಮನವಿ ಮಾಡಲು ಅವರು ದಯಾಕರಿಸಿ ಬಯಲಿನಲ್ಲಿರುವ ಮರಗಳನ್ನು ಬಾಚಣಿಗೆ ಮಾಡಲು ಕಡಿದುಕೊಳ್ಳಬಹುದೆಂದು ಆರ್ಡರ್‌ಮಾಡಿ 15 ನಿಮಿಷದಲ್ಲಿ ಪರ್ಮಿಟ್ ಕೊಟ್ಟರು. ಈ ರೀತಿ 150 ಜನ ಬಾಚಣಿಗೆ ಮಾಡುವವರಿಗೆ ಉಪಕಾರಮಾಡಿದರು. ಪ್ರತಿಯೊಬ್ಬ ಆಫೀಸರೂ ಈ ರೀತಿ ಕೆಲಸಮಾಡಿದರೆ ಖಂಡಿತವಾಗಿಯೂ ದೇಶದಮೇಲೆ ಒಳ್ಳೆಯ ಪರಿಣಾಮವಾಗುತ್ತದೆ. ಯಾವ ಟೀಕೆಯೂ ಇರುವುದಿಲ್ಲ ಈ ವಿಷಯದಲ್ಲಿ ಚೀಫ್‌ಕನ್ಸರ್ವೇಟರ್ ಆಫ್ ಫಾರೆಸ್ಟ್ ಅವರ ಮನೋಭಾವ ಸ್ತೋತ್ರಾರ್ಹವಾದುದು. ನಾಲ್ಕೈದು ಲಕ್ಷ ಸ್ಯಾಂಡಲ್ ಮರಗಳು ಸ್ಮಗಲ್ ಆಗುತ್ತಾ ಇವೆ. ಇಲಾಖೆಯವರಿಗೂ ಕೂಡ ಬರೆದಿದ್ದೆ. ಒಂದೊಂದು ಜೀಪನ್ನು ಡಿಸ್ಟ್ರಿಕ್ಟ್ ಫಾರೆಸ್ಟ್ ಆಫೀಸರಿಗೆ ಏಕೆ ಕೊಡಬಾರದು ! ಎನ್.ಇ.ಎಸ್. ಅದಕ್ಕೆ ಇದಕ್ಕೆ ಎಂದು ಹೇಳಿ ಅಮೆರಿಕಾದಿಂದ ಬಂದ ಸೆಕೆಂಡ್ ಹ್ಯಾಂಡ್ ಜೀಪ್‌ಗಳನ್ನು ಕೊಟ್ಟರಿ. ತುಮಕೂರು ಡಿಸ್ಟ್ರಿಕ್ಟ್ ಫಾರೆಸ್ಟ್ ಆಫೀಸರಿಗೆ ಏಕೆ ಒಂದು ಜೀಪು ಕೊಡಬಾರದು ಎಂದು ಕೇಳುತ್ತೇನೆ. ಎಷ್ಟು ಹೇಳಿದರೂ ಕೂಡ ಹೊಳೆಯಲ್ಲಿ ಹುಣಸೇಹಣ್ಣು ಕಿವುಚಿದ ಹಾಗೆ ಆಗಿದೆ. ಒಂದೊಂದು ಡಿಸ್ಟ್ರಿಕ್ಟಿಗೆ ಒಂದೊಂದು ಜೀಪು ಕೊಡಿ ಎಂದು ಹೇಳುತ್ತೇನೆ.

ಅಗ್ರಿಕಲ್ಚರಲ್ ಡಿಪಾರ್ಟ್‌ಮೆಂಟು. ಇದನ್ನು ತೆಗೆದುಕೊಂಡರೆ ನಮ್ಮ ಮಾನ್ಯ ಮಂತ್ರಿಗಳು ಪೂರ್ಣ ಅನುಭವಸ್ಥರು. ಎಷ್ಟೇ ಅನುಭವಸ್ಥರಾದರೂ ಕೂಡ ಕೆಲವು ವಿಷಯಗಳಲ್ಲಿ ದೇವರೇಗತಿ. ತುಮಕೂರು ಅಗ್ರಿಕಲ್ಚರಲ್ ಡಿಪೋದಲ್ಲಿ 43,900 ರೂಪಾಯಿ ಮಿಸ್ ಅಪ್ರೋಪ್ರಿಯೇಷನ್ ಆಗಿ ಐದಾರು ವರ್ಷಗಳಾಗಿವೆ. ಆಡಿಟ್ ಡಿಪಾರ್ಟ್‌ಮೆಂಟಿನವರು ಶೇಕಡ ಎರಡು shortage and shrinkage in iron materials ಕೊಡಬಹುದೆಂದು ಹೇಳುತ್ತಾರೆ. ಇದು ಯಾವ ದೇವರಿಗೆ ಪ್ರೀತಿ! ಕಂಡದ್ದು ಕಂಡ ಹಾಗೆ ಹೇಳಿದರೆ ಕೆಂಡದಂಥ ಕೋಪ ಅಂದ ಹಾಗೆ. ಸೂರ್ಯನಾರಾಯಣರಾಯರು ಕೋಪಮಾಡಿಕೊಳ್ಳಬಾರದು. ತುಮಕೂರಿನಲ್ಲಿ ಕೋ-ಆಪರೇಟೀವ್ ಸೊಸೈಟಿಗೆ ಐರನ್ ಮೆಟೀರಿಯಲ್ಸ್ ಕೊಟ್ಟು ಸೇಪ್‌ಮಾಡಬೇಡಿ ಎಂದು ಹೇಳಿದರೂ ಕೂಡ ಕೇಳದೆ ಇಂಡಿಯಾ ಗವರ್ನ್‌ಮೆಂಟಿನವರು ಹೇಳಿದ್ದಾರೆ ಎಂದು ಅದರ ಮೂಲಕ ಮಾರಾಟ ಮಾಡಿದರು. ಪ್ರತಿಯೊಂದಕ್ಕೂ ಇಂಡಿಯಾ ಗವರ್ನ್‌ಮೆಂಟು ಅನ್ನುತ್ತಾರೆ. ಈ ತರಹ ಇರಬಾರದು. You must fight. ಇಂಡಿಯಾ ಗವರ್ನ್‌ಮೆಂಟ್ ಪಾಲಿಸಿ ನಾವೇನು ಮಾಡೋಣ ಎಂದರೆ ಅರ್ಥವೇನು ?

ಇನ್ನು ಈ ಹಾರ್ಟಿಕಲ್ಚರಲ್ ಡಿಪಾರ್ಟ್‌ಮೆಂಟ್ ತೆಗೆದುಕೊಂಡರೆ ಅವರಿಗೆ ಸರ್ಕಾರದವರು step-motherly treatment ಕೊಡುತ್ತಾರೆ. ಹೆಚ್ಚು ವಿವರವಾಗಿ ನಾನು ಹೇಳುವುದಕ್ಕೆ ಹೋಗುವುದಿಲ್ಲ.

ಕನ್ನಂಬಾಡಿ ಕಟ್ಟೆ ಕಟ್ಟಿದ್ದಾಯಿತು. ಹೆಚ್ಚು ಆಹಾರ ಬೆಳೆಯಬೇಕೆಂದು ಸ್ಕೀಂಮಾಡಿದ್ದಾಯಿತು. ಪ್ರತಿಯೊಂದು ನದಿಯ ಪಕ್ಕದಲ್ಲೂ ವಿದ್ಯುಚ್ಛಕ್ತಿ ಲೈನ್ run ಮಾಡಿ, ಎಲೆಕ್ಟ್ರಿಕ್ ಪಂಪ್‌ಕೊಡಿ, ರೈತರಿಗೆ ಅನುಕೂಲಮಾಡಿ ಕೊಡಿ ಎಂದರೆ ಇವತ್ತು ಅರ್ಜಿಕೊಟ್ಟರೆ ಮೂರು ತಿಂಗಳಾದ ಮೇಲೆ ಕೊಡುತ್ತೀರಿ. ಇಂಥಾದ್ದಕ್ಕೆ ಮಾನಸ್ಸುಕೊಡಿ. ಇನ್ನೊಂದು ವಿಷಯ. ಗದ್ದೆಗೆ ರಾತ್ರಿ ಹೊತ್ತು ನೀರು ಹಾಯಿಸಲು ಕರೆಂಟ್‌ಕೊಡು

(ಶ್ರೀ ಜಿ. ಎನ್. ಪುಟ್ಟಣ್ಣ)

ತ್ತೀರಿ. ಇದು ಯಾವ ನ್ಯಾಯ! ದೊಡ್ಡ ದೊಡ್ಡ ಫ್ಯಾಕ್ಟರಿಗಳಿಗೆ ಹಗಲು ಹೊತ್ತು ಕರೆಂಟುಕೊಡುತ್ತೀರಿ. ಈ ರೀತಿ ಮಾಡುವುದಕ್ಕೆ ಬದಲಾಗಿ ಹಗಲು ಹೊತ್ತು ರೈತರಿಗೆ ಕರೆಂಟ್‌ಕೊಡಬೇಕು. ಅಗ್ರಿಕಲ್ಚರಲ್ ಇನ್‌ಸ್ಪೆಕ್ಟರು ಇದ್ದಾರೆ. ಅವರು ಎಲ್ಲಿ ಕೆಲಸಮಾಡುತ್ತಾರೋ ಗೊತ್ತಿಲ್ಲ. ತುಮಕೂರು ಡಿಸ್ಟ್ರಿಕ್ಟಿನಲ್ಲಿ ಯಾರೂ ಹೋಗಿ ರೈತರಿಗೆ ಸಹಾಯ ಮಾಡುತ್ತಿಲ್ಲ. ಕೊರಟಗೆರೆ ತಾಲ್ಲೂಕಿನಲ್ಲಿ ಈಶ್ವರಯ್ಯ ಎನ್ನುವವರು ಇದ್ದಾರೆ. ಇವರು ಮಾಡುವ ಕೆಲಸ ರೈತರಿಗೆ ಸಹಾಯವಾಗುವುದು ಹೋಗಲಿ, ಅವರನ್ನು ಮುಳುಗಿಸುವ ಕೆಲಸಮಾಡುತ್ತಿದ್ದಾರೆ. ಇದನ್ನು ಪ್ರತ್ಯಕ್ಷವಾಗಿ ನೋಡಿ ಹೇಳುತ್ತಾ ಇದ್ದೇನೆ.

ಅನಿಮಲ್ ಹಸ್ಬೆಂಡರಿ ಮತ್ತು ವೆಟರ್ನರಿ ಡಿಪಾರ್ಟ್‌ಮೆಂಟಿನ ವಿಷಯ ತೆಗೆದುಕೊಂಡರೆ, ಡೈರೆಕ್ಟರ್ ಆಫ್ ಅನಿಮಲ್ ಹಸ್ಬೆಂಡರಿ ಎಂದು ಯಾರು ಇದ್ದಾರೆ ಅವರು ಅಲ್ಲಿ ಯಾವ ಕೆಲಸ ಆಗುತ್ತಿಲ್ಲ, ಯಾವ ಕೆಲಸ ಆಗುತ್ತಿದೆ ಎನ್ನುವುದನ್ನು ನೋಡಬೇಕು. ಎಲ್ಲೂ ಸಹ ಮುತುವರ್ಜಿವಹಿಸಿ ಕೆಲಸಮಾಡುತ್ತಿಲ್ಲ. ಅಲ್ಲೂ ಸಹ ಕೆಲವರು ಇದ್ದಾರೆ. ನಮ್ಮಲ್ಲಿ ಕಾಂಗ್ರೆಸ್ಸಿನೊಳಗೆ ಕಾಂಗ್ರೆಸ್ ಹೇಗೆ ಮಾಡುತ್ತೀರೋ ಅದೇ ರೀತಿ ಅವರೂ ಮಾಡುತ್ತಾರೆ. ಅಂತಹವರನ್ನು ಬಲೀ ಹಾಕಬೇಕು. ಬೇಕಾದರೆ ನಿಮಗೆ ಇನ್‌ಫರ್ಮೇಷನ್ ಕೊಡುತ್ತೇನೆ. ಸತ್ಯವಾಗಿ ಕೆಲಸಮಾಡುವವರಿಗೆ ಉತ್ತೇಜನಕೊಡಬೇಕು. ಆದರೆ ಡೈರೆಕ್ಟರ್ ಆಫ್ ಅನಿಮಲ್ ಹಸ್ಬೆಂಡರಿಯವರು ನಿಪುಣರು. ಪೂರ್ಣ ಕೆಲಸಗಾರರು. ಅವರಿಗೆ ಉತ್ತೇಜನ ಕೊಟ್ಟು ಇನ್ನೂ ಹೆಚ್ಚಿಗೆ ಸೇವೆ ಮಾಡಿಸಿ. ನನಗೆ 40-50 ಎಕರೆ ಕಾವಲು ಇದೆ, ಜಮೀನು 200-250 ಎಕರೆ ಇದೆ. ಒಂದು ಒಳ್ಳೆಯ ಬ್ರೀಡಿಂಗ್ ಬುಲ್ ಕೊಡಿ ಎಂದರೆ ಸರ್ಕಾರಕ್ಕೆ ಕಷ್ಟ. ಯಾವನಾದರೂ ಕಾಂಗ್ರೆಸ್ ಪುಡಾರಿ ಬರುತ್ತಾನೆಂದರೆ, ಅವನಿಗೆ ಸಬ್ಸಿಡಿ ಕೊಡುತ್ತಾರೆ. ಯಾವನು ದ್ರೋಹ ಮಾಡುತ್ತಾನೋ ಅಂತಹವನಿಗೆ ಸಹಾಯ ಕೊಡುತ್ತಾರೆ.

ಇನ್ನು ಕೋ-ಆಪರೇಟಿವ್ ಸೊಸೈಟಿ ವಿಚಾರ ಹೇಳಬೇಕೆಂದರೆ, ಇದರ ಪೋರ್ಟ್‌ಫೋಲಿಯೋ ಮಾನ್ಯ ಮಂತ್ರಿ ಶ್ರೀ ಮಾಲಿ ಮರಿಯಪ್ಪನವರ ಕೈಲಿದೆ. ಇವರು ಒಳ್ಳೆ ಜೇನು ಇದ್ದಹಾಗೆ ಇರುತ್ತಾರೆ. ಒಬ್ಬರಿಗೂ ಮನಸ್ತಾಪವಾಗುವಹಾಗೆ ಉತ್ತರ ಕೊಡುತ್ತಿಲ್ಲ. ಅವರು ಯಾರು ಬಂದು ಏನು ಹೇಳಿದರೂ ಅದನ್ನೇ ನಂಬುತ್ತಾರೆ. ಯೋಗ್ಯರೀತಿಯಲ್ಲಿ ಉತ್ತರ ಕೊಡುತ್ತಾರೆ. ಸಹಕಾರ ಸಂಘಗಳ ಕೆಲಸಕಾರ್ಯಗಳ ಮೇಲ್ವಿಚಾರಣೆಗಾಗಿ ಒಂದು ಎನ್‌ಕ್ವೈರಿ ಕಮಿಟಿಯನ್ನು ನೇಮಕ ಮಾಡುತ್ತೇವೆಂದು ಹೇಳಿದರು. ತುಮಕೂರಿನಲ್ಲಿರುವ 66 ಕೋ-ಆಪರೇಟಿವ್ ಸೊಸೈಟಿಗಳು ಪೂರ್ತಿಯಾಗಿ ನಾಶವಾಗಿವೆ. ಅವುಗಳಲ್ಲಿ ಕಾಂಗ್ರೆಸ್ ಪುಡಾರಿಗಳನ್ನು ಹಾಕಿದ್ದಾರೆ. ಅವರನ್ನು ತೆಗೆದು ನಿಸ್ಪೃಹತೆಯಿಂದ ಕೆಲಸಮಾಡುವವರನ್ನು ಅಲ್ಲಿ ಹಾಕಬೇಕು. ಮಾನ್ಯ ಮಂತ್ರಿಗಳಾದ ಶ್ರೀ ಮಾಲ ಮರಿಯಪ್ಪನವರು ದಯವಿಟ್ಟು ದೊಡ್ಡ ಮನಸ್ಸುಮಾಡಿ ಹೇಗೆ ದೇಶವನ್ನು ಉದ್ಧಾರಮಾಡಬೇಕು, ರೈತರ ಹಣವನ್ನು ಯಾವರೀತಿ ಸದ್ವಿನಿಯೋಗವಾಗುವಂತೆ ವ್ಯವಸ್ಥೆಗೊಳಿಸಬೇಕು, ರೈತರ ಹಣವನ್ನು ಯಾವರೀತಿಯಾದರೂ ಹಾಳುಮಾಡುತ್ತಿದ್ದರೆ ಅದನ್ನು ತಪ್ಪಿಸಬೇಕು—ಎಂಬೀ ವಿಷಯಗಳ ಬಗ್ಗೆ ಹೆಚ್ಚು ಗಮನ ಕೊಡಬೇಕು. ಈ ಕೋ-ಆಪರೇಟಿವ್ ಸೊಸೈಟಿಗಳನ್ನು ಒಂದು ದಾರಿಗೆ ತಂದು ಅಗ್ರಿಕಲ್ಚರಲ್ ಕೋ-ಆಪರೇಟಿವ್ ಸೊಸೈಟಿಗಳನ್ನು ಇಂಪ್ರೂವ್ ಮಾಡಬೇಕು. ಶ್ರೀ ಲಿಂಗಾರೆಡ್ಡಿಯವರು ಒಳ್ಳೆಯ ವಂಶಸ್ಥರು. ರೈತರ ಮಕ್ಕಳು. ಚಿಕ್ಕ ವಯಸ್ಸಿನಲ್ಲಿಯೇ ಇವರಿಗೆ ಮಂತ್ರಿಪದವಿ ಸಿಕ್ಕಿದೆ. ಸಂತೋಷ. ಆದರೆ ಅವರಿಗೆ ಸ್ವಲ್ಪ ಹಿತ್ತಾಳೆ ಕಿವಿ. ತುಮಕೂರು ತಾಲ್ಲೂಕಿಗೆ ಬನ್ನಿ, ಮತ್ತು ತುರುವೇಕೆರೆ ಎನ್.ಇ.ಎಸ್. ಬ್ಲಾಕಿಗೆ ಬರಬೇಕೆಂದು ಆರು ತಿಂಗಳ ಹಿಂದೆಯೇ ಒಂದು ಕಾಗದವನ್ನು ಅವರಿಗೆ ಬರೆದೆ. ಅಲ್ಲಿ ಎಷ್ಟೋ ದುಡ್ಡು ಖರ್ಚುಮಾಡಿದ್ದಾರೆ. ಕೆಲಸಮಾಡಿದ್ದು ಅದರ ಕಾಲುಭಾಗದಷ್ಟು ಇಲ್ಲ. ಖರ್ಚೇನೋ ಆಗಿದೆ. ಅದನ್ನು ನೋಡಿದರೆ "ಸಿಕ್ಕಿದವರಿಗೆ ಸೀರುಂಡೆ," "ಹುಚ್ಚಪ್ಪನ ಮದುವೇಲಿ ಉಂಡವನೇ ಜಾಣ" ಎಂದು ಹೇಳುವಹಾಗೆ ಇದೆ. ಅಜ್ಜಿ ನೂತಿದ್ದೆಲ್ಲಾ ಅಜ್ಜನ ಉಡಿದಾರಕ್ಕೆ ಸರಿ ಎಂಬಂತೆ ಎನ್.ಇ.ಎಸ್. ಹಣವೆಲ್ಲಾ ಸಂಬಳಕ್ಕೆ ಸರಿಹೋಯ್ತು. "ಏನೋ ನಂಜಣ್ಣ ಅಂದರೆ ಬಂದದ್ದೇ ಗುಂಜಣ್ಣ" ಎಂಬಂತೆ ಈ ಎನ್.ಇ.ಎಸ್. ಬ್ಲಾಕ್‌ಗಳ ಸ್ಥಿತಿ ಇದೆ. ಅದಕ್ಕೆ ನನಗೊಂದು ಶ್ಲೋಕ ಜ್ಞಾಪಕಕ್ಕೆ ಬರುತ್ತದೆ. ಅದು ಈ ರೀತಿ ಇದೆ:—

> ಉತ್ತರದ ದಿಕ್ಕಿನಲ್ಲಿ । ಹತ್ತೀತು ಹೆಬ್ಬೇಗೆ ।
> ಸುತ್ತ ಬರಕೊಂಡು । ಬರುವಾಗ ಜಗವೆಲ್ಲ
> ಕತ್ತಲಾದೀತು, ಸರ್ವಜ್ಞ ॥

ನಮ್ಮ ಸ್ಕೀಮುಗಳು, ಎನ್.ಇ.ಎಸ್. ಸೋಷಿಯಲ್ ವೆಲ್‌ಫೇರ್ ಆರ್ಗನೈಜೇಷನ್ ಇವೆಲ್ಲಾ ಉತ್ತರ ದಿಕ್ಕಿನಲ್ಲಿ ಹುಟ್ಟುತ್ತವೆ. ಇಲ್ಲಿಗೆ ಬಂದು ನಮ್ಮ ದೇಶವನ್ನು ನಾಶಮಾಡುತ್ತವೆ. ಈಗ ಯಾವ ಕೆಲಸವನ್ನೂ ಮಾಡುವುದಕ್ಕಾಗುವುದಿಲ್ಲ. ಯಾವೊಂದು ಸ್ಕೀಮಿನಲ್ಲೂ ನೀವು ಸರಿಯಾಗಿ ಕೆಲಸಮಾಡುವುದಿಲ್ಲ. ತಾವೇ ಖುದ್ದುಹೋಗಿ ಕೆಲಸಗಳನ್ನು ಪರಿಶೀಲಿಸಬೇಕು. ಎಲ್ಲಾ ಕೆಲಸಗಳಿಗೂ ಸರ್ಕಾರೀ ನೌಕರರನ್ನು ಜವಾಬ್ದಾರರನ್ನಾಗಿ ಮಾಡಬೇಡಿ. ಸರ್ಕಾರದಲ್ಲಿ ನೌಕರಿಯಲ್ಲಿರತಕ್ಕವರು ಆ ಪಾರ್ಟಿ, ಈ ಪಾರ್ಟಿ ಎಂದು ಪಾರ್ಟಿಗಳ ವೈಷಮ್ಯವನ್ನಿಟ್ಟುಕೊಂಡು ಹೋಗಕೂಡದು. ಆ ರೀತಿ ಹೋದವರನ್ನು ಕಂಡರೆ ಬಲಿಹಾಕಿ. ಕಾಂಗ್ರೆಸ್ ಪ್ರಚಾರಕ್ಕಾಗಿ ನೀವು ಜೀಪ್‌ಗಳನ್ನು ಉಪಯೋಗಿಸುತ್ತಿದ್ದೀರಿ. ನಿಮ್ಮ ಊರಿನಲ್ಲಿ ಏನೂ ಮಾಡುವುದಿಲ್ಲ, ನೀವು ಕಾಂಗ್ರೆಸ್ಸಿಗೆ ಓಟು ಕೊಟ್ಟಿಲ್ಲ ಎಂದು ಆಗಾಗ್ಗೆ ಹೇಳುತ್ತೀರಿ. ನಿಮ್ಮಲ್ಲಿ ನಾವು ಪೂರ್ಣ ನಂಬಿಕೆಯನ್ನಿಟ್ಟಿದ್ದರೂ ನಿಮಗೆ ಹಿತ್ತಾಳೆ ಕಿವಿ ಇದೆ. ಆದ್ದರಿಂದ ನೀವು ಸತ್ಯಕ್ಕೆ ಮತ್ತು ಧರ್ಮಕ್ಕನುಗುಣವಾಗಿ ನಡೆಯಬೇಕಾದುದು ನಿಮ್ಮ ಕರ್ತವ್ಯ. ದೇವರು ನಿಮಗೂ ನಮಗೂ ಎರಡು ಹೊತ್ತಿಗೆ ಅನ್ನ ಬಟ್ಟೆ ಕೊಟ್ಟಿದ್ದಾನೆ. ಮಕ್ಕಳು ಮರಿಗಳನ್ನೂ ಸಹ ಕೊಟ್ಟಿದ್ದಾನೆ. ಆದ್ದರಿಂದ ತಪ್ಪುದಾರಿಗೆ ಹೋಗುವುದು ಸರಿಯಲ್ಲ. ಕಣ್ಣಿಲ್ಲದವನು, ದಿಕ್ಕಿಲ್ಲದವನು ಧರ್ಮ ಕೊಡಿ ಎಂದು ಭಿಕ್ಷೆ ಬೇಡಬೇಕಾಗಿ ಬಂದಿರುವಾಗ ಅಂಥವನಿಗೆ ಯಾರಾದರೂ ಏನಾದರೂ ಅನ್ಯಾಯಮಾಡಿದರೆ ರೌರವ ನರಕ ತಪ್ಪುವುದಿಲ್ಲ. ಆದ್ದರಿಂದ ನೀವೂ ಸಹ ತಪ್ಪುದಾರಿಗೆ ಹೋಗಬೇಡಿ ಎಂದು ನಾನು ಸೂಚನೆಮಾಡುತ್ತೇನೆ. ನಿಮಗೂ ನಮಗೂ ಪರಸ್ಪರ ದ್ವೇಷವೇನೂ ಇಲ್ಲ.

ಇನ್ನು ತುಮಕೂರು ತಾಲ್ಲೂಕಿನಲ್ಲಿ ಎರಡು ಬ್ಲಾಕ್‌ಗಳನ್ನು ಮಾಡಿದ್ದಾರೆ. ಒಂದು ಬ್ಲಾಕಿಗೆ ದುಡ್ಡು ಖರ್ಚಾಗುತ್ತಿದೆ; ಇನ್ನೊಂದು ಬ್ಲಾಕಿಗೆ ದುಡ್ಡು ಖರ್ಚಾಗುತ್ತಿಲ್ಲ. ಇದಕ್ಕೆ ಕಾರಣವೇನು? ಈ ಬಗ್ಗೆ ಇಂಟರ್‌ಪೆಲೇಷನ್ ನಾನು ಕಳುಹಿಸಿದ್ದರೆ, ಅದನ್ನು

ಡಿಸ್‌ಅಲೊ ಮಾಡಿದ್ದಾರೆ. ಬಹಳ ಚಮತ್ಕಾರವಾಗಿ ಉತ್ತರ ಕೊಟ್ಟಿದ್ದಾರೆ. It is a criminal waste of time and energy. I am prepared to cut my tongue if what I say is wrong. Otherwise you accept the challenge. ಎನ್.ಇ.ಎಸ್. ಬ್ಲಾಕ್ ಡೆವಲಪ್‌ಮೆಂಟ್ ಕಮಿಟಿಗಳಲ್ಲಿ ಯೋಗ್ಯರಾದವರು ಬಂದೇಬರಬೇಕು.

Sri H. C. LINGA REDDY.—Are you a member of the Committee ?

Sri G. N. PUTTANNA.—I am one of the members of the Committee. ಆದರೆ ಕಮಿಟಿಯಲ್ಲಿರತಕ್ಕ ಪ್ರತಿಯೊಬ್ಬ ಸದಸ್ಯರೂ ಬಿಳೀ ಟೋಪಿಯವರೇ. ಎಲ್ಲಾ ಕಾಂಗ್ರೆಸ್ಸಿನವರೇ. ಯಾವುದಾದರೂ ಒಂದು ವಿಷಯಕ್ಕೆ ನಾನು ಒಬ್ಬ ಕುಳಿತುಕೊಂಡರೆ ಎಲ್ಲರೂ ಕೈ ಎತ್ತುತ್ತಾರೆ. ಆದ್ದರಿಂದ what is the good of your Committee ! ಈಗ ಇಲ್ಲಿ ಎರಡು ಜೀಪುಗಳನ್ನು ಕೊಟ್ಟಿದ್ದಾರೆ. ಒಂದಕ್ಕೆ ಸ್ಪೀಡಾಮೀಟರೇ ಇಲ್ಲ. ಎಷ್ಟು ಪೆಟ್ರೋಲ್ ಖರ್ಚಾಯಿತು ಎಂಬುದೇ ಗೊತ್ತಿಲ್ಲ. ಪ್ರತಿಯೊಬ್ಬ ಕಮಿಟಿ ಮೆಂಬರ್ ಮನೆಗೂ ಜೀಪು ಹೋಗಬೇಕು. ಏತಕ್ಕೋಸ್ಕರ ಈ ಜೀಪುಗಳನ್ನು ಈರೀತಿ ಖಾಸಗೀ ಸದಸ್ಯರ ಓಡಾಟಕ್ಕೆಲ್ಲಾ ಉಪಯೋಗಿಸುತ್ತೀರಿ ಎಂದು ಕೇಳಿದರೆ ಸದಸ್ಯರು ನಮ್ಮ ಮೇಲೆ ಚಾಡಿ ಹೇಳುತ್ತಾರೆಂದು ಹೇಳುತ್ತಾರೆ. ಕುಂಬಳಕಾಯಿ ಕಳ್ಳ ಎಂದರೆ ಹೆಗಲು ತಡಕಿ ನೋಡಿಕೊಂಡ" ಎಂದು ಹೇಳಿದಹಾಗೆ ಇದೆ. ಎನ್.ಇ.ಎಸ್. ಬ್ಲಾಕಿಗೆ ಕೊಟ್ಟಿರತಕ್ಕ ಜೀಪಿನ ಲೆಖ್ಖ ತೆಗೆದುಕೊಂಡರೆ, ಎಕ್ಸ್‌ಟೆನ್‌ಷನ್ ಆಫೀಸರ್ಸ್ ಎಷ್ಟು ದಿವಸ ಜೀಪುಗಳನ್ನು ಉಪಯೋಗಿಸಿದ್ದಾರೆ, ಯಾರುಯಾರಿಗೆ ಜೀಪುಗಳನ್ನು ಕೊಟ್ಟಿದ್ದಾರೆಂಬುದು ಚೆನ್ನಾಗಿ ವ್ಯಕ್ತವಾಗುತ್ತದೆ. ಅಲ್ಲಿ 1:6 ಕೆಲಸ ಮಾಡುತ್ತಿದೆ ಎಂದು ಹೇಳುತ್ತಾರೆ. ಕೆಲಸವೇನೋ ನಡೆಯುವುದಿಲ್ಲ. ನಾನು ಇದನ್ನು ಹತ್ತು ಸಾರಿ ಹೇಳಿದ್ದೇನೆ. I never wear the white cap in my life time. An M.L.A. is a contractor privately ; a contractor is an M.L.A ; an M.L.A. is the Member of the Advisory Committee ; the Advisory Committee Member is a contractor. ಇನ್ನು ಮೊನ್ನೆ ನಡೆದ ಅಗ್ರಿಕಲ್‌ಚರಲ್ ಎಗ್ಜಿಬಿಷನ್ನಿಗೆ ದೆಹಲಿಗೆ ನಮ್ಮ ಸಂಸ್ಥಾನದಿಂದ ಇಬ್ಬರು ಪ್ರತಿನಿಧಿಗಳನ್ನು ಕಳುಹಿಸುವಾಗ ನಮ್ಮ ಸರ್ಕಾರದವರು ಸರಿಯಾಗಿ ಯೋಚನೆಮಾಡಲಿಲ್ಲವೆಂದು ಕಾಣುತದೆ. ನಮ್ಮಲ್ಲಿ ಶ್ರೀ ಕೆ. ಪಿ. ಸಿದ್ದರಾಮಣ್ಣನವರು ಎಂಬ ಒಬ್ಬ ದೊಡ್ಡ ವ್ಯವಸಾಯಗಾರರು ಇದ್ದರು. ಅಂತಹವರನ್ನು ಕಳುಹಿಸಲಿಲ್ಲ. ಯಾವನೋ ಒಬ್ಬ ಕಂಟ್ರಾಕ್ಟರನ್ನು ಮತ್ತು ವ್ಯಾಪಾರಸ್ಥನನ್ನು ಕಳುಹಿಸಿದರು.

N. E. S. ಎಂದರೆ ಇದ New Earning Scheme ಎಂದು ಮಾಡಿದ್ದಾರೆ. It is intended for the *Pudharis* to make their living ; it is not in the interest of the common man and this scheme will never be helpful, ಎಂದು ನಾನು ಧೈರ್ಯವಾಗಿ ಹೇಳುತ್ತಿದ್ದೇನೆ. ನೀವು ವಿಚಾರ ಚೆನ್ನಾಗಿ ತಿಳಿದುಕೊಂಡು ಕೆಲಸಮಾಡಿ. ಯಾವ ಪುಡಾರಿಗಳಿಗೂ ಪಾರ್ಟಿಗಳಿಗೂ ಅವಕಾಶ ಕೊಡಬೇಡಿ. ಅದರಿಂದ ಖಂಡಿತ ಆಫೀಸರುಗಳು ಅಲ್ಲಿ ಕೆಲಸಮಾಡುವುದಕ್ಕಾಗುವುದಿಲ್ಲ.

4-30 P.M.

ದೊಡ್ಡ ದೊಡ್ಡ ಆಫೀಸರುಗಳು ಹೇಳುವುದು ಕೇಳಿದ್ದೇನೆ. "ಅಪ್ಪ, ನೀವು ಹೇಳುತ್ತೀರಿ. ಒಂದುವೇಳೆ ನಾವು ಕುಳಿತುಕೊಂಡು ಸ್ಟ್ರಿಕ್ಟ್ ಆಗಿ ಕೆಲಸ ಮಾಡಿದರೆ, ಚಾಡಿ ಹೇಳುತ್ತಾರೆ ; ಒಳ್ಳೆಯ ಚೈಮಿನಲ್ಲಿ ಟ್ರಾನ್ಸ್‌ಫರ್ ಮಾಡಿಬಿಡುತ್ತಾರೆ. ಮಕ್ಕಳು ಮರಿಗೆ ಓದುವುದೇ ಕಷ್ಟವಾಗುತ್ತದೆ.' ಹಾಗೆ ಹೇಳುತ್ತಾರೆ. ಅವರಲ್ಲಿ ಭಯ ಹುಟ್ಟಿಸಿ ಬಿಟ್ಟಿದ್ದಾರೆ. ಈ ಸ್ಥಿತಿ ನಮ್ಮ ದೇಶದಲ್ಲಿದೆ. ಕಾಂಗ್ರೆಸ್ ಸರ್ಕಾರ ಹೋಗಬೇಕೆಂದು ಹೇಳುವುದಿಲ್ಲ. ಆದರೆ ಯೋಗ್ಯ ಸರ್ಕಾರ ಬರಲಿ. ರೈತರ ಮನೆ ಹಾಳುಮಾಡುತ್ತಾ ಇದ್ದೀರಿ. ಬೆಳೆದ ಬೆಳೆಯನ್ನು ಮಿಲ್ಲಿಗೆ ತೆಗೆದುಕೊಂಡು ಹೋದರೆ, ಅದರಲ್ಲಿ ಅರ್ಧಕೊಡಬೇಕು. ಮಕ್ಕಳ ಮದುವೆ, ಹೊಟ್ಟೆಪಾಡಿಗೆ ತೆಗೆದುಕೊಂಡು ಹೋದರೂ ಅದನ್ನು ಕೊಡಬೇಕು. ದೇವರು, ಮಂತ್ರಿಗಳಿಗೆ ಏಕೆ ಹೀಗೆ ಬುದ್ಧಿ ಕೊಟ್ಟಿರುತ್ತಾನೆಯೋ ಗೊತ್ತಿಲ್ಲ. ರೈತರಿಗೆ ಕೊಡುವ ಹಿಂಸೆ ನೋಡಿದರೆ ಕಣ್ಣಲ್ಲಿ ನೀರು ಬರುತ್ತದೆ. ಸೂರ್ಯನಾರಾಯಣರಾಯರು ಹೇಳಿದರು : "ಆ ಸ್ಕೀಮು ಹಾಕಿ ಬೆಳೆದು, ಬೆಳೆದುದನ್ನು ಪಟ್ಟಣಕ್ಕೆ ತಂದು ಪಟ್ಟಣಿಗರ ಹೊಟ್ಟೆ ತುಂಬಿ ; ರೈತರಮನೆ ಹಾಳಾಗಲಿ" ಎಂದು. ರೈತರ ಮೇಲೆ ದಯೆಯಿಲ್ಲ. ದೇಶ ಉಳಿಯುವುದಿಲ್ಲ. ಕಾಂಗ್ರೆಸ್ ಸರ್ಕಾರ ಉಳಿಯುವುದಿಲ್ಲ. ಯಾವ ಮಂತ್ರಿಗಳೇ ಬರಲಿ, ಪ್ರೈವೇಟ್ ಆಗಿ ಮಾತನಾಡುವುದಕ್ಕೆ ಸಿದ್ಧ ; ಶ್ರೀ ಲಿಂಗಾರೆಡ್ಡಿಯವರ ಹತ್ತಿರವೂ ಪ್ರೈವೇಟಾಗಿ ಮಾತನಾಡುವುದಕ್ಕೆ ಸಿದ್ಧ. ಸತ್ಯ ಹೇಳುತ್ತೇನೆ. ದೇಶದ ಹಿತದೃಷ್ಟಿಯಿಂದ, ನಮ್ಮ ಮಂತ್ರಿಗಳಿಗೆ ದೇವರು ಒಳ್ಳೆಯ ಬುದ್ಧಿ ಕೊಟ್ಟು, ದೇಶಕ್ಕೆ ಒಳ್ಳೆಯದು ಮಾಡಲಿ ಎಂದು ಪ್ರಾರ್ಥಿಸುತ್ತೇನೆ.

ಶ್ರೀ ಜಿ. ಬಿ. ಶಂಕರರಾವ್ (ಹಿರೆಕೆರೂರ್).—ನಾಲ್ಕು ದಿವಸದಿಂದ ಮಾತನಾಡಲು ಕಾಯುತ್ತಾ ಇದ್ದೆ.

ಅಧ್ಯಕ್ಷರು.—ಮೂರುಜನ ಮಂತ್ರಿಗಳು ಮೂರು ದಿವಸಗಳಿಂದ ನಡೆಯುತ್ತಿರುವ ಭಾಷಣಗಳ ಮೇಲೆ ಸೂಕ್ತವಾದ ಉತ್ತರಗಳನ್ನು ಕೊಡಬೇಕಾಗಿದೆ. ಅದಕ್ಕೆಯೇ ಸಾಧಾರಣವಾಗಿ ಒಂದೂವರೆ ಎರಡು ಘಂಟೆಕಾಲ ಬೇಕಾಗುವುದು. ಅದಕ್ಕೋಸ್ಕರ ಮಂತ್ರಿಗಳಿಗೆ ಕಾಲಾವಕಾಶವನ್ನು ಕೊಡಬೇಕು,

ಶ್ರೀ ಕೆ. ಎಫ್. ಪಾಟೀಲ್ (ವ್ಯವಸಾಯ ಶಾಖೆಯ ಮಂತ್ರಿಗಳು).—ಸಭಾಪತಿಗಳೆ, ಕಳೆದ ಮೂರುದಿನಗಳಿಂದ ವ್ಯವಸಾಯ, ಪಶುಸಂಗೋಪನೆ ಮತ್ತು ಅರಣ್ಯ ಶಾಖೆಗಳ ಸಂಬಂಧದಲ್ಲಿ ಈ ಸಭೆಯ ಎರಡು ಪಕ್ಷಗಳ 21 ಜನ ಸದಸ್ಯರು ಮಾತನಾಡಿ ಅನೇಕವಾದ ಸೂಕ್ತ ಸಲಹೆಗಳನ್ನು ಕೊಟ್ಟಿದ್ದಾರೆ. ಕೆಲಕೆಲವು ಪ್ರಸಂಗಗಳಲ್ಲಿ ಸ್ವಲ್ಪ ಕಟುವಾದ ಟೀಕೆ ಬಂದಿದ್ದರೂ ಕೂಡ, ನಿಜವಾದ ಪರಿಸ್ಥಿತಿಯ ಕಲ್ಪನೆ ಬಂದಮೇಲೆ ಆ ಕಟುತನ ಅದರಲ್ಲಿ ಹೋಗುತ್ತದೆ ಎನ್ನುವ ಭಾವನೆ ಇದೆ. ನನ್ನ ಮಟ್ಟಿಗೆ ಸದಸ್ಯರು ಹೇಳಿದ ಮಾತುಗಳ ಸಂಬಂಧದಲ್ಲಿ ಸ್ಥೂಲವಾಗಿ ಕೆಲವು ಮಾತುಗಳನ್ನು ಹೇಳುತ್ತೇನೆ.

ಆಹಾರಧಾನ್ಯ ಅಥವಾ ಇತರ ಉತ್ಪತ್ತಿಯ ಸಂಬಂಧದಲ್ಲಿ ಏನೇನು ಪ್ರಗತಿಯಾಗಿದೆ, ಮತ್ತು ಮುಂದಿನ ವರ್ಷ ಏನುಮಾಡಬೇಕೆಂದಿದೆ ಎನ್ನುವುದನ್ನು ಹೇಳಬಯಸುತ್ತೇನೆ.

(ಶ್ರೀ ಕೆ. ಎಫ್. ಪಾಟೀಲ್)

ಮೊದಲನೆಯದಾಗಿ ವಿರೋಧ ಪಕ್ಷದ ನಾಯಕರಾದ ಶ್ರೀ ಶ್ರೀನಿವಾಸಶೆಟ್ಟರು ಹೇಳಿದ ಮಾತುಗಳ ವಿಷಯದಲ್ಲಿ ಎರಡು ಮಾತುಗಳನ್ನು ನಾನು ಹೇಳಬಯಸುತ್ತೇನೆ. ಅವರು ಹೇಳಿದಂಥ ಮಾತುಗಳಲ್ಲಿ ಮೊದಲನೆಯದು ಎಂದರೆ ನಮ್ಮಲ್ಲಿ ಸಿನ್ಸಿಯಾರಿಟಿ ಇಲ್ಲ ಎಂದು ಹೇಳಿದರು. ಅದೇನೇ ಇರಲಿ sincerity ಇರುವುದು ಬಿಡುವುದು ಇದನ್ನು ನಾನು ಸಮರ್ಥನೆ ಮಾಡುವುದಕ್ಕೆ ತಯಾರಾಗಿಲ್ಲ; ನಾವು ಮಾಡಿರುವ ಕೃತಿಗಳಿಂದ ಅಳೆಯಬೇಕೆ ಹೊರತು ನಮ್ಮ ಮಾತುಗಳಿಂದ ಅಳೆಯಬೇಕಾಗಿಲ್ಲ. ಕೃತಿಯ ವಿಷಯದಲ್ಲಿ ಕೂಡ ಕಂಡೂ ಕಾಣದಂತೆ ಹೋಗಬೇಡಿ; ಪೂರ್ಣ ಪರಿಶೀಲನೆಮಾಡಿ ಅದನ್ನು ಅಳೆಯಿರಿ ಎಂದು ಹೇಳುತ್ತೇನೆ.

ಸೀಡ್ ಫಾರಮ್ಮುಗಳು ಸಾಕಷ್ಟು ಪ್ರಮಾಣದಲ್ಲಿ ಇಲ್ಲ ಎನ್ನುವುದನ್ನು ಅವರು ಹೇಳಿದ್ದಾರೆ. ನಾನು ಈದಿವಸ ಪ್ರಶ್ನೋತ್ತರ ಕಾಲದಲ್ಲಿ ಸೀಡ್ ಫಾರಂಗಳ ವಿಷಯದಲ್ಲಿ ಅವರಿಗೆ ಉತ್ತರವನ್ನು ಕೊಟ್ಟಿದ್ದೇನೆ. ಸೌತ್ ಕೆನರಾದಲ್ಲಿ ಐದು ಸೀಡ್ ಫಾರಂಗಳನ್ನು ಸ್ಥಾಪಿಸಬೇಕೆಂಬ ಉದ್ದೇಶವಿದ್ದರೂ ಕೂಡ, ಮೊದಲನೆಯ ಪಾಂಚವಾರ್ಷಿಕ ಯೋಜನೆ ಮಾಡುವಾಗಲೂ ಕೂಡ ಕೆಲವು ಸ್ಥೂಲವಾದ ಅಂಕಿ ಅಂಶಗಳನ್ನು ತೆಗೆದ ಕೊಂಡು ಮಾಡಿದ್ದುಂಟು. ಪೂರ್ಣ ಪರಿಶೀಲನೆ ಮಾಡುವಾಗ ಒಂದು ಸೀಡ್ ಫಾರಮ್ಮಿನಿಂದ ಎಷ್ಟು ಎಕರೆ ಭೂಮಿಗೆ ಬೀಜ ಸಿಕ್ಕುತ್ತದೆ ಎಂದು ಲೆಕ್ಕ ತೆಗೆದುಕೊಂಡು, ಸೀಡ್ ಫಾರಮ್ಮುಗಳ ಸಂಖ್ಯೆ 50 ಬೇಕಾಗುತ್ತದೆಯೋ, 60 ಬೇಕಾಗುತ್ತದೆಯೋ ಅಥವಾ 70 ಬೇಕಾಗುತ್ತದೆಯೋ ಎನ್ನುವುದನ್ನು ಕೂಡ ನಾವು ನಿರ್ದಿಷ್ಟವಾಗಿ ಕಂಡುಹಿಡಿದಿದ್ದೇವೆ. ಸಿಂಡ್‌ಫಾರಂಗಳ ವಿಷಯವನ್ನು ಅನೇಕ ಸದಸ್ಯರು ಹೇಳಿರುವುದರಿಂದ, ಅದರ ಕಲ್ಪನೆಗಳನ್ನು ಸ್ವಲ್ಪ ವಿವರವಾಗಿ ಕೊಟ್ಟುಬಿಟ್ಟರೆ, ಎಲ್ಲಾ ಸದಸ್ಯರಿಗೂ ಸ್ವಲ್ಪ ಭಾವನೆ ಬಂದೀತೆಂದು ಹೇಳುತ್ತೇನೆ.

ಈ ದಿವಸ ಒಂದು ಸೀಡ್‌ಫಾರಮ್ಮಿನಲ್ಲಿ ಒಂದು ಎಕರೆ ಉತ್ತಮ ಬೀಜವನ್ನು ತಯಾರು ಮಾಡಿದರೆ, ಯಾವುಯಾವುದಕ್ಕೆ ಎಷ್ಟೆಷ್ಟು ಬೇಕೆಂದು ಹೇಳಬಹುದು. ಬ್ರೀಡ್ ಪ್ಯಾಡಿ 40 ಪೌಂಡುಗಳನ್ನು ಒಂದು ಎಕರೆಗೆ ಬಿತ್ತುವುದಾದರೆ, ಅದು ಎಷ್ಟು ಎಕರೆಗಳಿಗೆ ಸಾಕಾಗುತ್ತದೆ ಎನ್ನುವ ಲೆಕ್ಕ ತೆಗೆದುಕೊಳ್ಳಬೇಕು. ಅದೇ ಪ್ರಕಾರ, ಟ್ರಾನ್ಸ್‌ಪ್ಲಾಂಟೆಡ್ ಪ್ಯಾಡಿ ಹತ್ತು ಪೌಂಡುಗಳ ಬೀಜ ಒಂದು ಎಕರೆಗೆ ಸಾಕಾಗುತ್ತದೆ. ಜಪಾನೀಸ್ ಮೆಥೆಡ್ಡಿನಿಂದ, ಆರು ಪೌಂಡು ಬೀಜ ಒಂದು ಎಕರೆಗೆ ಸಾಕಾಗುವಷ್ಟು ತನಕ ಇಳಿಸಿದ್ದೇವೆ. ಆದರೂ ಕೂಡ ಎಷ್ಟೋ ಮಾರ್ಜಿನ್ ಬಿಟ್ಟು 20 ಪೌಂಡುಗಳು ಒಂದು ಎಕರೆಗೆ ಬೇಕಾಗುತ್ತದೆ ಎಂದು ಲೆಕ್ಕ ಹಿಡಿದಿದೆ. ರಾಗಿ, ಜೋಳ ಎಲ್ಲಾ ಅದೇ ಪ್ರಕಾರವಿದೆ. ಅದರ ಲೆಕ್ಕ ತೆಗೆದರೆ, ಈ ದಿವಸ ಒಂದು ಎಕರೆ ಸೀಡ್ ಫಾರಂ ಮಾಡುವುದರಿಂದ, 3,750 ಎಕರೆವರೆಗೆ ಆಗುವಷ್ಟು ಬೀಜ ಸಪ್ಲೈ ಮಾಡುತ್ತಾ ಇದ್ದೇವೆ. ಒಂದು ಎಕರೆ ಸೀಡ್‌ಫಾರಮ್ಮಿನಿಂದ 600 ಜನ ಸೀಡ್ ಗ್ರೋಯರ್ಸ್‌ಗೆ ಕೊಡುತ್ತಾರೆ. ಬೆಳೆದಂಥ ಬೀಜವನ್ನು ಎಲ್ಲಾ ರೈತರಿಗೂ ಕೊಡುವುದಿಲ್ಲ. 25 ಎಕರೆಗೆ ಒಂದೊಂದು ಸೀಡ್‌ಫಾರಂ ಇಟ್ಟುಕೊಂಡಿದ್ದೇವೆ. ಅದರಲ್ಲಿ ಬೆಳೆದಂಥ ಎಲ್ಲಾ ಬೀಜವನ್ನು ಕೆಟ್ಟದ್ದು ಬರುತ್ತದೆ, ಅದಕ್ಕೆ ಮಾರ್ಜಿನ್ ಬಿಟ್ಟರೆ 600 ಸೀಡ್ ಗ್ರೋಯರುಗಳಿಗೆ ಒಂದು ಎಕರೆ ಸೀಡು ಫಾರಮ್ಮಿನಿಂದ ಕೊಡುತ್ತಾರೆ. ಈ 600 ಸೀಡ್ ಗ್ರೋಯರುಗಳು ಒಬ್ಬೊಬ್ಬರೂ ಕನಿಷ್ಠ ಪ್ರಮಾಣ ಆರು ಎಕರೆಯಲ್ಲಿ ಬೀಜವನ್ನು ಇಟ್ಟರೂ ಕೂಡ, ಅದು ಎಷ್ಟು ಎಕರೆಗೆ ಸಿಕ್ಕುತ್ತದೆ ಎಂದರೆ, 3,600 ಎಕರೆ ತನಕ ಸಾಕಾಗುತ್ತದೆ. ಈ ಪ್ರಕಾರ ಲೆಕ್ಕ ಹಾಕಿದರೆ, ಜೋಳದ ಸಲುವಾಗಿ ಎಷ್ಟು ಫಾರಂ ಬೇಕು, ಭತ್ತದ ಸಲುವಾಗಿ ಎಷ್ಟು ಫಾರಂಬೇಕು ಎಂದು ಗೊತ್ತಾಗುತ್ತದೆ. ಐದು ಫಾರಂ ಎಂದು ನಮ್ಮ ಸೆಕೆಂಡ್ ಫೈವ್ ಇಯರ್ ಪ್ಲಾನಿನಲ್ಲಿದ್ದರೂ ಕೂಡ, ನಾಲ್ಕು ಬಂದರೆ ಮತ್ತೊಂದು ಬಿಡುತ್ತೇವೆಂದು ತಾವು ತಿಳಿಯಬಾರದು, ನಾಲ್ಕಕ್ಕೆ ಇಳಿಸಿದೆ ಎನ್ನುವ ಭಾವನೆ ಮಾಡಬಾರದು.

ಇರ್ರಿಗೇಷನ್ ಸ್ಕೀಮುಗಳನ್ನು ಬಿಡು, ಪೊಲಿಟಿಕಲ್ ಗ್ರೌಂಡ್ಸ್ ಮೇಲೆ ಮಾಡುತ್ತೇವೆ ಎನ್ನುವ ಭಾವನೆ ಬರುವ ಹಾಗೆ ಹೇಳಿದ್ದು ನೋಡಿದರೆ ಆಶ್ಚರ್ಯವಾಗುತ್ತದೆ. ಇರ್ರಿಗೇಷನ್ ಪಂಪುಗಳ ಸಲುವಾಗಿ ಸಾಲ ಕೊಡುವುದರಲ್ಲಾಗಲಿ, ಪಂಪುಗಳನ್ನು ಒದಗಿಸಿ ಕೊಡುವುದರಲ್ಲಿಯಾಗಲಿ, ಸೌತ್ ಕೆನರಾದಲ್ಲಿ ಏನು ಕೆಲಸವಾಗಿದೆ ಎನ್ನುವುದನ್ನು ಹೇಳುತ್ತೇನೆ.

ಶ್ರೀ ಜಿ. ಬಿ. ಶಂಕರ್‌ರಾವ್.—ಈಗ ಎಷ್ಟು ಸೀಡ್ ಫಾರಮ್ಮುಗಳನ್ನು ಕಾರ್ಯಗತ ಮಾಡಿದ್ದೀರಿ? ಇನ್ನು ಎರಡು ವರ್ಷಗಳು ಮಾತ್ರ ಉಳಿದಿವೆ.

ಶ್ರೀ ಕೆ. ಎಫ್. ಪಾಟೀಲ್.—ಈಗ ಮೊದಲನೆಯ ವರ್ಷದಲ್ಲಿ ಏಳು ಸೀಡು ಫಾರಂಗಳನ್ನು ಮಾಡಿದ್ದೇವೆ. ಎರಡನೆಯ ವರ್ಷದಲ್ಲಿ 13 ಸೀಡ್ ಫಾರಂಗಳು ಆಗಿವೆ. ಈ ವರ್ಷ 47 ಸೀಡ್ ಫಾರಂಗಳವರೆಗೂ ಮಾಡಿದ್ದೇವೆ. ಐದು ವರ್ಷಗಳೊಳಗೆ ಕಂಪ್ಲೀಟ್ ಆಗಬೇಕಾಗಿದ್ದರೂ ಕೂಡ ಮುಂದಿನ ವರ್ಷದಲ್ಲಿ 56 ಸೀಡ್‌ಫಾರಮ್ಮುಗಳನ್ನು ಮಾಡಬೇಕಾದುದನ್ನು ಕಂಪ್ಲೀಟ್ ಮಾಡುತ್ತೇವೆ. ಹೊಸದಾಗಿ ಒಂದು ಸೀಡ್‌ಫಾರಂ ಒಪ್ಪಮಾಡಿದೆವು ಅಂದರೆ, ಯಾವ ಭೂಮಿ ಈಗಾಗಲೆ ವ್ಯವಸಾಯದ ಕೆಳಗೆ ಇರುವುದಿಲ್ಲವೋ ಅಂಥ ಭೂಮಿಯನ್ನು ತೆಗೆದುಕೊಂಡರೆ ಒಂದು ವರ್ಷ ಸರಿಪಡಿಸುವುದರಲ್ಲಿ ಹೋಗುತ್ತದೆ. ಈ ಕಾರಣದಿಂದ ಸ್ವಲ್ಪ ತಡವಾಗುತ್ತದೆ. ಈಗಾಗಲೆ ಎಲ್ಲಿ ಸಾಗುವಳಿಯಾದ ಭೂಮಿಯನ್ನು ತೆಗೆದುಕೊಂಡಿರುತ್ತೇವೆಯೋ, ಅಲ್ಲಿ ಕೂಡಲೆ ಪ್ರಾರಂಭ ಮಾಡಿರುತ್ತೇವೆ, ಪ್ರಾರಂಭವಾಗದ ಸೀಡ್‌ಫಾರಂಗಳನ್ನು ಸೀಡ್ ಗ್ರೋಯರುಗಳಿಗೆ ಕೊಟ್ಟು, ಈ ಪ್ರಕಾರ ಮಾಡಬೇಕಾದರೆ, ಕನಿಷ್ಠ ಮೂರು ವರ್ಷಗಳು ಬೇಕಾಗುತ್ತವೆ. ಎಷ್ಟು ಎಕರೆಗಳಿಗೆ ಸೀಡ್‌ಗಳನ್ನು ಹಂಚಿದ್ದೇವೆ ಎನ್ನುವುದನ್ನು ಕೂಡ ಹೇಳುತ್ತೇನೆ. 42 ಅಪ್ಲಿಕೇಷನ್ನುಗಳು ಸೌತ್‌ಕೆನರಾದಿಂದ ಪಂಪುಸೆಟ್ಟುಗಳಿಗೋಸ್ಕರ ಬಂದಿದ್ದುವು. ಅವುಗಳಲ್ಲಿ ಕಂಡೀಷನ್ ಪರಿಯಾಗಿ ಫುಲ್‌ಫಿಲ್ ಮಾಡಲಿಲ್ಲವೆಂದು,-16ನ್ನು ರಿಜೆಕ್ಟ್ ಮಾಡಿದೆವು. ಮೂರು ಆಯಿಲ್ ಎಂಜಿನ್ ಪಂಪು ಸೆಟ್ಟುಗಳನ್ನೂ, 184 ಎಲೆಕ್ಟ್ರಿಕ್ ಪಂಪ್‌ಸೆಟ್ಟುಗಳನ್ನೂ ಕೊಟ್ಟಿದ್ದೇವೆ.

ಒಬ್ಬ ಸದಸ್ಯರು.—ಮೂರು ಆಯಿಲ್ ಎಂಜಿನ್ ಪಂಪು ಸೆಟ್ಟುಗಳನ್ನು ಯಾವಾಗ ಕೊಟ್ಟಿದ್ದೀರಿ?

ಶ್ರೀ ಕೆ. ಎಫ್. ಪಾಟೀಲ್.—ಇದೇ ವರ್ಷ ಒಟ್ಟು 187 ಪಂಪು ಸೆಟ್ಟುಗಳನ್ನು ಈ ಜಿಲ್ಲೆಯಲ್ಲಿ ಕೊಟ್ಟಿದ್ದಾಗಿದೆ ಎಂದು ಹೇಳಬಯಸುತ್ತೇನೆ.

ಇದರಂತೆಯೇ shortage of power ಬಗ್ಗೆ ಅನೇಕ ಮಾನ್ಯ ಸದಸ್ಯರು ಹೇಳಿದ್ದಾರೆ. ಸರ್ಕಾರದವರು ಈ ದಿವಸ ರೈತರಿಗೆ ವ್ಯವಸಾಯ ಮಾಡಲು ರಾತ್ರಿ ಹೊತ್ತು ವಿದ್ಯುಚ್ಛಕ್ತಿಯನ್ನು ಒದಗಿಸುತ್ತೇವೆಂದು ಹೇಳುತ್ತಿದ್ದಾರೆ. ಹೀಗೆ ಹೇಳುತ್ತಿರುವುದರಿಂದ ಅವರಿಗೇನಾದರೂ ಬುದ್ಧಿ ಇದೆಯೇ

ಎಂದೂ ಸಹ ಕೇಳಿದ್ದಾರೆ. ನಾನು ಅವರಿಗೆಲ್ಲ ಈಗ ನಮ್ರತೆಯಿಂದ ವಿನಂತಿ ಮಾಡಿಕೊಳ್ಳುವುದಿಷ್ಟೆ: ವ್ಯವಸಾಯಗಾರರಿಗೆ ರಾತ್ರಿ ವೇಳೆಯಲ್ಲೇ ಈ ಪವರನ್ನೂ ಒದಗಿಸಬೇಕೆಂಬ ಕಲ್ಪನೆ ಇಲ್ಲ. ಹಗಲು ವೇಳೆಯಲ್ಲಿ ಅವರಿಗೆ ಪವರನ್ನು ಒದಗಿಸಲು ಸಾಧ್ಯವಾಗದೆ ಇದ್ದುದರಿಂದ ಯಾರುಯಾರಿಗೆ ರಾತ್ರಿ ವೇಳೆಯಲ್ಲೇ ಇದರ ಉಪಯೋಗ ಮಾಡಿಕೊಳ್ಳಲು ಅವಕಾಶವಿದೆಯೋ ಅಂಥ ಜನರಿಗಾದರೂ ಒಂದು ಅನುಕೂಲ ಕಲ್ಪಿಸೋಣವೆಂಬ ಉದ್ದೇಶದಿಂದ ಯಾರುಯಾರು ರಾತ್ರಿ ವೇಳೆಯಲ್ಲಿ ಈ ಪವರನ್ನು ತೆಗೆದುಕೊಳ್ಳಲು ಮುಂದೆ ಬಂದಿದ್ದಾರೋ ಅಂಥವರಿಗೆ ಮಾತ್ರ ನಾವೀಗ ಪವರನ್ನು ಸರಬರಾಯಿ ಮಾಡುತ್ತಿದ್ದೇವೆ ಎಂಬುದನ್ನು ಅವರು ಲಕ್ಷಿಸಬೇಕೆಂದು ಕೇಳಿಕೊಳ್ಳುತ್ತೇನೆ. ನಮಗೆ ಈ ವಿದ್ಯುಚ್ಛಕ್ತಿಯನ್ನು ವ್ಯವಸಾಯಗಾರರಿಗೆ ಒದಗಿಸಲು 1962-63ರ ವರೆಗೂ ನಮಗೆ ಪೂರೈಕೆ ಆಗುವುದಿಲ್ಲ. ಆದರೆ ಈಗ ಯಾರು ಯ್ಯಾರು ರಾತ್ರಿ ವೇಳೆಯಲ್ಲಿ ಪವರ್ ಮೂಲಕ ವ್ಯವಸಾಯ ಮಾಡಲು ಮುಂದೆ ಬರುತ್ತಾರೋ ಅಂಥ ಜನರಿಗೊಂದು ಅನುಕೂಲ ಕಲ್ಪಿಸಿದ್ದೇವೆ. ಈ ವಿಚಾರದಲ್ಲಿ ನಾನು ಸಂಬಂಧಪಟ್ಟ ವಿದ್ಯುಚ್ಛಕ್ತಿ ಇಲಾಖೆಯ ಅಧಿಕಾರಿಗಳೊಡನೆ ಎಲ್ಲವನ್ನೂ ಚರ್ಚೆ ಮಾಡಿದ್ದೇನೆ. ಆದರೆ ಈಗ ಆ ಇಲಾಖೆಯವರು ಕೆಲವರಿಗೆ ಹಗಲು ಹೊತ್ತಿನಲ್ಲೇ ಪವರನ್ನೊದಗಿಸತಕ್ಕ ಬಗ್ಗೆ ಅಗ್ರಿಮೆಂಟುಗಳನ್ನು ಮಾಡಿಕೊಂಡು ಅದರಲ್ಲಿ ಸಿಕ್ಕಿಬಿದ್ದಿರುವುದರಿಂದ ಈ ದಿವಸ ಅವರಿಗೆ ಹಗಲು ಸರಬರಾಯಿ ಮಾಡಬೇಕಾದ ಪವರನ್ನು ಕಡಮೆಮಾಡಲು ಅವಕಾಶವಿಲ್ಲ. ಪರಿಸ್ಥಿತಿ ಹೀಗಿರುವುದರಿಂದ ರಾತ್ರಿಯಾಲ್ಲಾದರೂ ಕೊಟ್ಟು ಕೆಲವರಿಗೆ ಅನುಕೂಲ ಮಾಡೋಣ ಎನ್ನುವ ಉದ್ದೇಶದಿಂದ ರಾತ್ರಿ ಪವರನ್ನು ಈಗ ಕೊಡುತ್ತಿದ್ದೇವೆ. ಆದರೆ ಸರ್ಕಾರದವರಿಗೆ ಯಾವತ್ತೂ ರಾತ್ರಿ ವೇಳೆಯಲ್ಲೇ ವ್ಯವಸಾಯಗಾರರಿಗೆ ಪವರನ್ನು ಕೊಡಬೇಕೆಂಬ ಆಕಾಂಕ್ಷೆಯೇನಿಲ್ಲ. ಯಾವತ್ತು ಈ ಪರಿಸ್ಥಿತಿ ಸುಧಾರಣೆಯಾಗುವುದೋ ಆ ಹೊತ್ತು ಇದನ್ನು ಹಗಲಿಗೆ ಸರ್ಕಾರದವರು ಬದಲಾವಣೆ ಮಾಡಿಕೊಡಲು ತಯಾರಿದ್ದಾರೆ.

ಇನ್ನು ರಿಕ್ಲಮೇಷರ್ ಆಫ್ ಲ್ಯಾಂಡ್ ವಿಚಾರದಲ್ಲಿ ನಮ್ಮಲ್ಲಿ ಈ ದಿವಸ ಎಷ್ಟು ಬುಲ್‌ಡೋಜರುಗಳು ಮತ್ತು ಎಷ್ಟು ಟ್ರಾಕ್ಟರುಗಳು ಪ್ರತ್ಯಕ್ಷವಾಗಿ ಕೆಲಸ ಮಾಡುತ್ತಿವೆಯೆಂದರೆ 45 ಬುಲ್‌ಡೋಜರುಗಳೂ ಮತ್ತು 33 ಟ್ರಾಕ್ಟರುಗಳೂ ಕೆಲಸ ಮಾಡುತ್ತಿವೆ. ಈ ಪೈಕಿ ಎರಡು ಬುಲ್‌ಡೋಜರ್ಸ್ ಮತ್ತು ಒಂದು ಟ್ರಾಕ್ಟರು ಸೌತ್-ಕೆನರಾದಲ್ಲೇ ಕೆಲಸ ಮಾಡುತ್ತಿವೆಯೆಂಬುದನ್ನೀಗ ನಾನು ಹೇಳಬಯಸುತ್ತೇನೆ.

ಇನ್ನು ಎಕ್ಸ್‌ಪೆರಿಮೆಂಟಲ್ ಮತ್ತು ಡೆಮಾನ್‌ಸ್ಟ್ರೇಷನ್ ಫಾರಂಗಳ ವಿಚಾರದಲ್ಲಿ ಕೆಲವರು......

Sri V. SRINIVAS SHETTY.—Sir, I would like to have one clarification with regard to subsidy given to certain areas and hire—charges fcr tractors and bulldozers.

ಶ್ರೀ ಕೆ. ಎಫ್. ಪಾಟೀಲ್.—ಈ ವಿಚಾರಕ್ಕೆ ನಾನು ಮುಂದೆ ಬರುತ್ತೇನೆ. ಆದರೆ ರಿಕ್ಲಮೇಷನ್ ಆಫ್ ಲ್ಯಾಂಡ್ ವಿಚಾರದಲ್ಲಿ ಮಾತನಾಡುತ್ತ ಕೆಲವು ಸದಸರು ಸರ್ಕಾರದವರೀಗ ಆ ಹೈದರಾಬಾದ್ ಕರ್ಣಾಟಕ ಪ್ರದೇಶಕ್ಕೆ ಸಬ್‌ಸಿಡಿಯನ್ನು ಕೊಡುತ್ತಿಲ್ಲವೇ ಎಂದು ಕೇಳಿದರು. 1958ರಿಂದೀಚೆಗೆ ಸರ್ಕಾರದವರು ಯಾರಿಗೂ ಸಬ್ ಸಿಡಿಯನ್ನು ಕೊಡುತ್ತಿಲ್ಲ. ಸದ್ಯದಲ್ಲಿ ತಮ್ಮ ಮುಂದೆ ಈ ಬಗ್ಗೆ ಒಂದು ಲ್ಯಾಂಡ್ ಇಂಪ್ರೂವ್‌ಮೆಂಟ್ ಎಂಬ ಹೆಸರಿನ ಒಂದು ಬಿಲ್ ಬರುತ್ತದೆ. ಅದು ಪಾಸಾದ ಅ ನಂತರ ಎಲ್ಲರಿಗೂ ಅನುಕೂಲ ದೊರೆಯುತ್ತದೆಂದು ಹೇಳಬಯಸುತ್ತೇನೆ. ಬೊಂಬಾಯಿನಲ್ಲಿ ಭೂಮಿಯನ್ನು ಸಮನಾಗಿ ಮಾಡುವುದಕ್ಕೆ, ಕಾಂಟೂರು ಬಂಡಿಂಗ್ ಹಾಕುವುದಕ್ಕೆ ಇತ್ಯಾದಿ ಅನೇಕ ಕಾರ್ಯಕ್ರಮಗಳನ್ನು ಕೈಗೊಳ್ಳುವಂಥ ಒಂದು ಸನ್ನಿವೇಶ ಅಲ್ಲಿ ಉಂಟಾಗಿದೆ. ಆದರೆ ಈ ದಿವಸ ಇಲ್ಲಿನ ಜನತೆಗೆ ನಾವೂ ಸಹ ಅದೇ ರೀತಿಯ ಅನುಕೂಲತೆಗಳನ್ನು ಮಾಡಿಕೊಡಬೇಕಾಗಿದ್ದರೆ ಇಲ್ಲಿ ನಾನಾಗಲೇ ಹೇಳಿದಂಥ ಒಂದು ಆಕ್ಟ್ ಜಾರಿಗೆ ಬಂದರೆ ಮಾತ್ರವೇ ಇದು ಸಾಧ್ಯವಾಗುತ್ತದೆಂದು ಹೇಳುತ್ತೇನೆ. ಇನ್ನು ಸೌತ್-ಕೆನರಾದಲ್ಲಿರತಕ್ಕ ಆ ಪ್ಯಾಡಿ ಫಾರಂಗಳನ್ನು ಸರ್ಕಾರದವರು ಮುಚ್ಚಿಬಿಡುತ್ತಾರೆಂಬ ಒಂದು ಕಲ್ಪನೆ ಕೆಲವು ಸದಸ್ಯರಿಗೆ ಉಂಟಾಗಿದ್ದಂತೆ ಭಾಸವಾಗುತ್ತದೆ. ಆದರೆ ಅಲ್ಲಿರತಕ್ಕ ಪ್ಯಾಡೀ ಫಾರಂಗಳನ್ನೇ ಅಲ್ಲ, ಅಲ್ಲಿರತಕ್ಕ ಎಲ್ಲ ಎಕ್ಸ್‌ಪೆರಿಮೆಂಟಲ್ ಮತ್ತು ಡೆಮಾನ ಸ್ಟ್ರೇಷನ್ ಫಾರಂಗಳನ್ನು ಮುಚ್ಚಿಬಿಡಬಾರದೆಂಬುದೇ ಅಲ್ಲ—ಅಲ್ಲಿ ಈಗಿರತಕ್ಕ ಬಾವಿಗಳನ್ನೇ ಇನ್ನೂ ಆಳವಾಗಿ ತೆಗೆಸಿ ನೀರಿನ ಸರಬರಾಯಿ ಮಾಡಿ ಅಲ್ಲಿರತಕ್ಕ ಹಣ್ಣು ಹಂಪಲು ಮತ್ತು ಹೂವಿನ ಗಿಡಗಳನ್ನು ಇನ್ನೂ ಅಭಿವೃದ್ಧಿಗೊಳಿಸಿ, ಅಲ್ಲಿರತಕ್ಕ ಫಾರಂ ಮಾನೇಜರ್ ಅವರಿಗೆ ಅಲ್ಲೆಲ್ಲಾ ಒಂದೊಂದು ಸರಿಯಾದ ಹೂವಿನ ಆರಾಮು ತೋಟಗಳನ್ನು ಮಾಡಬೇಕೆಂಬುದಾಗಿ ನಾನೇ ಅಲ್ಲಿಗೆ ಹೋಗಿದ್ದಾಗ ಮುದ್ದಾಂ ಸಲಹೆ ಕೊಟ್ಟು ಬಂದಿದ್ದೇನೆ. ಹೀಗಿರುವುದರಿಂದ ಅವುಗಳನ್ನು ಮುಚ್ಚುತ್ತಾರೆಂಬ ಕಲ್ಪನೆ ಸರಿಯಾದುದಲ್ಲ.

ಆ ಕನಕ ನಾಡಿ ಕ್ಷೇತ್ರದ ಸೀ ಐಲ್ಯಾಂಡ್ ಹತ್ತಿ ಬೆಳೆ ಬಹಳ ಯಶಸ್ವಿಯಾಗಿ ಆಗುತ್ತಿದೆ. ಆದರೆ ಅದನ್ನು ಕೆಲವರು ಏನೋ ಕಾರಣದಿಂದ ನಿರುಪಯೋಗ ಎಂದು ಹೇಳುತ್ತಿದ್ದಾರೆ. ಆದರೆ ಆ ಫಾರಂನಲ್ಲಿ ಹತ್ತಿ ಬೆಳೆ ಕೆಟ್ಟಿದೆ. ಅದಕ್ಕೆ ಬೇರೆ ಕಾರಣಗಳಿರಬಹುದು. ಈ ಹತ್ತಿಯಲ್ಲಿ ಬರುವಷ್ಟು ಉದ್ದವಾದ ಫೈಬರ್ ಮತ್ತೆ ಯಾವ ಹತ್ತಿಯಿಂದಲೂ ಬರುವುದಿಲ್ಲ. ಇದನ್ನು ಅಭಿವೃದ್ಧಿ ಮಾಡಿದರೆ ನಮಗೆ ಪರದೇಶದಿಂದ ಉದ್ದವಾದ ಫೈಬರ್ ತರಿಸತಕ್ಕ ಅಗತ್ಯ ತಪ್ಪಿಹೋಗುತ್ತದೆ. ಈ ಹತ್ತಿಯನ್ನು ಮಂಗಳೂರು ಮತ್ತು ಕೊಡಗು ಪ್ರದೇಶಗಳಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಬೆಳೆಯಬೇಕೆಂಬ ಸಂಕಲ್ಪವನ್ನು ಇಟ್ಟುಕೊಂಡಿದ್ದೇವೆ. ಈ ಫಾರಂಗಳಲ್ಲಿ ಎಲೆಕ್ಟ್ರಿಕಲ್ ಪಂಪುಗಳನ್ನು ಇನ್‌ಸ್ಟಾಲ್ ಮಾಡಿ ಇದರ ಪೂರ್ಣ ಪ್ರಯೋಗವನ್ನಿನ್ನೂ ನಾವು ಪೂರೈಸಿಲ್ಲ. ಇದರ ಪೂರ್ಣ ಪ್ರಾಸ್ಪೆಕ್ಟ್ ಏನೆಂಬುದಿನ್ನೂ ಖಚಿತವಾಗಿಲ್ಲ. ಈ ಕಾರ್ಯಗಳನ್ನೆಲ್ಲಾ ಇನ್ನೂ ಪೂರ್ಣಗೊಳಿಸಬೇಕಾಗಿರುವಾಗಲೇ ಇದರ ಉಪಯೋಗವಿಲ್ಲ, ಇದನ್ನು ತೆಗೆದುಬಿಡಿ ಎಂದು ಹೇಳತಕ್ಕದ್ದು ಸರಿಯಲ್ಲವೆಂದು ಹೇಳುತ್ತೇನೆ.

ಕ್ಯಾಷ್ಯೂಯಾನಟ್ ಮತ್ತು ಅಗ್ರಿಕಲ್‌ಚರ್ ಕಾಲೇಜುಗಳ ದೃಷ್ಟಿಯಿಂದ ಎರಡು ಮಾತುಗಳನ್ನು ಹೇಳುತ್ತಿದ್ದೇನೆ. ಈಗ ನಮ್ಮಲ್ಲಿ ಸೀ ಐಲ್ಯಾಂಡ್ ಹತ್ತಿ ಬೆಳೆ ಎಷ್ಟು ಪ್ರಮಾಣದಲ್ಲಿ ಒಟ್ಟು ಬೆಳೆಯಲಾಗುತ್ತಿದೆಯೆಂದು ಕೇಳಿದರೆ 190 ಎಕರೆಗಳಲ್ಲಿ ಬೆಳೆಯಲಾಗುತ್ತಿದೆ. ಅದು ಎಲ್ಲೆಲ್ಲಿ ಎಂದು ಕೇಳಿದರೆ—ಕೊಡಗಿನಲ್ಲಿ 40 ಎಕರೆ; ಹಾಸನದಲ್ಲಿ 54 ಎಕರೆ, ಚಿಕ್ಕಮಗಳೂರಿನಲ್ಲಿ 24 ಎಕರೆ; ನಾರ್ತ್ ಕೆನರಾದಲ್ಲಿ 32 ಎಕರೆ; ಶಿವಮೊಗ್ಗಾದಲ್ಲಿ 20 ಎಕರೆ, ಮೈಸೂರಿನಲ್ಲಿ 20 ಎಕರೆ—ಹೀಗೆ ಒಟ್ಟು 190 ಎಕರೆಗಳಲ್ಲಿ ಈ ಹತ್ತಿಯನ್ನು ಬೆಳೆಯಲಾಗು

(ಶ್ರೀ ಕೆ. ಎಫ್. ಪಾಟೀಲ್)

ತ್ತಿದೆ. ನಾರ್ಥ್ ಕೆನರಾದಲ್ಲಿ ಈ ಹತ್ತಿ ಎಕರೆಯೊಂದಕ್ಕೆ ಎಷ್ಟು ಪ್ರಮಾಣದಲ್ಲಿ ಬೆಳೆಯುತ್ತಿದೆಯೆಂದು ಕೇಳಿದರೆ ಒಂದು ವರ್ಷದಲ್ಲಿ ಒಂದು ಎಕರೆಯಲ್ಲಿ 500 ಪೌಂಡು ದಾಮಾಷದಲ್ಲಿ ಹತ್ತಿ ಉತ್ಪತ್ತಿ ಆಗಿದೆ. ಹೀಗೆ ಒಂದು ವರ್ಷದಲ್ಲಿ 3,853 ಪೌಂಡ್ ಹತ್ತಿ ಬಂದಿದೆ. ಆದರೆ ನನಗಿನ್ನೂ ಇದರ ಪೂರ್ಣ ಅಂಕಿ ಅಂಶಗಳಿನ್ನೂ ದೊರೆತಿಲ್ಲ. ಆದುದರಿಂದ ಪೂರ್ಣ ಫಲಿತಾಂಶವನ್ನು ನಾನೀಗ ತಮಗಿನ್ನೂ ಕೊಡಲಿಕ್ಕೆ ಸಾಧ್ಯವಾಗಿಲ್ಲ. ಸೌತ್-ಕೆನರಾದಲ್ಲಿ ಎಕರೆಗೆ 400 ಪೌಂಡುಗಳಿಂದ 1,100 ಪೌಂಡುಗಳವರೆಗೂ ಹತ್ತಿ ಬೆಳೆ ತೆಗೆಯುತ್ತಿದ್ದಾರೆ. ಈ ದಿವಸ ಆ ರೈತರಿಗೆ 11 ನೂರು ರೂಪಾಯಿಗಳ ತನಕ ಬೆಳೆ ಸಿಕ್ಕುತ್ತಿದೆ. ಇಂಥ ಹಣ ದೊರಕಿಸುವ ಬೆಳೆ ಮತ್ತೆ ಯಾವುದಾದರೂ ಇದೆಯೇ ಎಂದು ನೋಡಿದರೆ ಮತ್ತೊಂದಿಲ್ಲವೆಂದು ಯಾರುಬೇಕಾದರೂ ಹೇಳಬಹುದು. ಗೇರುಬೀಜದ ಫಾರಂಗಳ ಬಗ್ಗೆ ಈಗಿನ್ನೂ ಪಿಕಿಂಗ್ ಆಗುತ್ತಿರುವುದರಿಂದ ಆ ಅಂಕಿಅಂಶಗಳಿನ್ನೂ ನನ್ನ ಕಡೆಗೆ ಬಂದಿಲ್ಲ. ಅದನ್ನು ನೋಡದೆ ಯಾರೊಬ್ಬರೂ ಯಾವ ಒಂದು ಭಾವನೆಯನ್ನೂ ಮಾಡಬಾರದೆಂದು ಹೇಳುತ್ತೇನೆ. ಸಿರ್ಸಿ ಮತ್ತು ಮಂಗಳೂರು ಫಾರಂಗಳಿಂದ 636 ಪೌಂಡು ಬಂದಿದೆ. ಎಕರೆಗೆ 800 ಪೌಂಡುಗಳಿಂದ 11 ನೂರು ಪೌಂಡುಗಳವರೆಗೂ ಉತ್ಪತ್ತಿ ಬಂದಿದೆ. ಕುರುಡಿಗೆ, ಮತ್ತು ಪೊನ್ನಾಂಪೋಲೆಯಲ್ಲಿ ಕೆಲವು ಕಡೆ 800 ಪೌಂಡಿಗಿಂತ ಸ್ವಲ್ಪ ಕಡಮೆ ಬೆಳೆ ಬಂದಿದೆ. ಈ ಗೇರುಪಪ್ಪಿನ ವ್ಯವಸಾಯವನ್ನು ರಾಜ್ಯ ಸರ್ಕಾರಗಳು ಎಲ್ಲೆಲ್ಲಿ ಸ್ಥಾಪನೆ ಮಾಡುವುದಾದರೂ ಈ ಬಗ್ಗೆ ಕೇಂದ್ರ ಸರ್ಕಾರದವರು ಇದರ ವೆಚ್ಚದಲ್ಲಿ ಅರ್ಧವನ್ನು ವಹಿಸುತ್ತಾರೆ. ಇಂಥ ಪ್ರಯೋಗಗಳನ್ನು ನಡೆಸಲು ಜನತೆ ಎಲ್ಲಾ ಕಡೆಗಳಿಂದಲೂ ಮುಂದೆ ಬಂದರೆ ಬಹಳ ಒಳ್ಳೆಯದಾಗುತ್ತದೆಂದು ಹೇಳುತ್ತೇನೆ. ಈ ವರ್ಷ ಈ ಬೆಳೆಯನ್ನು ಐದು ಸಾವಿರ ಎಕರೆಗಳಲ್ಲಿ ಪ್ರಯೋಗ ಮಾಡಿ ನೋಡಬೇಕೆಂದು ಮಾಡಿಕೊಂಡಿದ್ದೇವೆ. ಇದು ಅನುಕೂಲವಾಗಿ ಕಂಡುಬಂದರೆ ಮುಂದಿನ ವರ್ಷ 20 ಸಾವಿರ ಎಕರೆಗಳಲ್ಲಿ ಈ ಬೆಳೆ ತೆಗೆಯಬೇಕೆಂದು ಆಲೋಚನೆ ಮಾಡಿದ್ದೇವೆ. ಈ ಒಂದು ವರ್ಷದಲ್ಲಿ ಇಲ್ಲಿಯ ವರೆಗೂ 3,682 ಎಕರೆಗಳಲ್ಲಿ ಗೇರುಬೀಜದ ಸಸಿಗಳನ್ನು ಹಾಕಿಸಲು 8 ನರ್ಸರಿಗಳಿಂದ 3 ಲಕ್ಷ 50 ಸಾವಿರ ಸೀಡ್ಲಿಂಗುಗಳನ್ನು ಒದಗಿಸಲಾಗುತ್ತಿದೆ. 28 ಸಾವಿರ ಸಲೆಕ್ಟೆಡ್ ಸೀಡ್ಲಿಂಗ್ಸನ್ನು ಒದಗಿಸಲು ಇಲ್ಲಿಯವರೆಗೆ ಹತ್ತು ಸಾವಿರ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ಹಾಗೆ ಮುಂದೆ ಉಮೇದುವಾರರಾಗಿ ಬರತಕ್ಕ ಜನರಿಗೆ ಭೂಮಿಯನ್ನು ಒದಗಿಸಿಕೊಟ್ಟಿದ್ದೇವೆ. ಸಾಲಗಳನ್ನೂ ಒದಗಿಸಿಕೊಟ್ಟಿದ್ದೇವೆ. ಸಾಲದ ಹಣ ಒಟ್ಟಿಗೆ ಒಂದು ಲಕ್ಷ 50 ಸಾವಿರದವರೆಗೆ ಇತ್ತು, ಅದರಲ್ಲಿ ಕೊಟ್ಟದ್ದು ಹತ್ತು ಸಾವಿರ ಮಾತ್ರ. ಈ ವರ್ಷ ನಮ್ಮ ಟಾರ್ಗೆಟ್ ಇದ್ದುದು ಒಂದು ಸಾವಿರ ಎಕರೆ.

Sri V. SRINIVAS SHETTY.—Have the Government any intention of disbursing these loans ?

Sri K. F. PATIL.—This is meant for disbursing. But if there are difficulties there may be delay. It may be on the part of Government or on the part of the party or parties also.

ಪೇಸ್ಕೇಲ್ಸ್ ವಿಚಾರದಲ್ಲಿ ಅಗ್ರಿಕಲ್ಚರಲ್ ಡಿಪಾರ್ಟ್‌ಮೆಂಟಿನಲ್ಲಿ, ಅದರಲ್ಲಿಯೂ ವ್ಯವಸಾಯದ ಕಾಲೇಜಿನಲ್ಲಿ ಬಹಳ ಕಡಮೆ ಸಂಬಳಸಾರಿಗೆಗಳಿವೆ ಎಂದು ಹೇಳಿದರು. ಆ ಮಾತನ್ನು ಕೂಡ ನಾನು ಕೆಲಮಟ್ಟಿಗೆ ಒಪ್ಪುತ್ತೇನೆ. ಬೇರೆ ಬೇರೆ ಇಲಾಖೆಯವರ ಸಂಗಡ ಇವನ್ನು ಹೋಲಿಸಿ ನೋಡಿದಾಗ ಕೆಲಮಟ್ಟಿಗೆ ವ್ಯವಸಾಯ ಇಲಾಖೆಯಲ್ಲಿನ ಸಂಬಳಗಳು ಕಡಮೆ ಇವೆ ಎಂಬುದು ನಮಗೆ ಮನವರಿಕೆಯಾಗಿದೆ. ಈ ಇಲಾಖೆಗೆ ಸಂಬಂಧಪಟ್ಟವರ ಸಂಬಳಗಳನ್ನು ಸಾಧ್ಯವಾದಷ್ಟು ಮಟ್ಟಿಗೆ ಸಮಸಮಾನವಾಗಿ ಮಾಡಬೇಕೆಂಬ ದೃಷ್ಟಿಯಿಂದ ಕೇಂದ್ರ ಸರ್ಕಾರದವರು ನಲಗರ್ ಸಮಿತಿಯನ್ನು ನೇಮಿಸಿದರು. ಆ ಸಮಿತಿಯವರು ತಮ್ಮ ವರದಿಯಲ್ಲಿ ಸಿಫಾರಸುಗಳನ್ನು ಮಾಡಿದ್ದಾರೆ. ಆ ವರದಿಯಲ್ಲಿ ಎಲ್ಲೆಲ್ಲಿ ಶಕ್ಯವಿದೆ, ಯಾವ ಯಾವ ಪ್ರಮಾಣದಲ್ಲಿ ಅವರ ಸಂಬಳಗಳನ್ನು ಏರಿಸಬೇಕು, ಟೆಂಪೊರರಿ ಇದ್ದದ್ದನ್ನು ಪರ್ಮನೆಂಟ್ ಮಾಡಬೇಕು, ಈ ಇಲಾಖೆಗೆ ಇತರ ಇಲಾಖೆಗಳಿಗಿಂತ ಹೆಚ್ಚಿನ ಮಹತ್ವ ಸ್ಥಾನವನ್ನು ಹೇಗೆ ಕಲ್ಪಿಸಿಕೊಡಬೇಕೆಂಬ ವಿವರಗಳನ್ನು ಕೊಟ್ಟಿದ್ದಾರೆ, ಅದು ಸರ್ಕಾರದ ಪರಿಶೀಲನೆಯಲ್ಲಿದೆ.

ಶ್ರೀ ಪರಮೇಶ್ವರಯ್ಯನವರು ಮಾತನಾಡುವಾಗ ವ್ಯವಸಾಯದ ಸಿಬ್ಬಂದಿಯ ಮೇಲೆ ಖರ್ಚು ಹೆಚ್ಚಾಗಿದೆ ಎಂದು ಹೇಳಿದರು. ಕೆಲವು ಕಡೆಗೆ ಹಾಗೆ ಅನಿವಾರ್ಯವಾಗಿ ಆಗಿದೆ. ನಮ್ಮಲ್ಲಿ 33 ಸಂಶೋಧನಾಲಯಗಳಿವೆ. ಸಂಶೋಧನಾಲಯಗಳಲ್ಲಿ ಸ್ವಲ್ಪಮಟ್ಟಿಗೆ ಹೆಚ್ಚು ಖರ್ಚಾಗುತ್ತದೆ. ಅವರು ಹೊರಗೆ ಹೋಗಿ ಕೆಲಸ ಮಾಡುವುದಿಲ್ಲ. ಪ್ರಯೋಗದಲ್ಲಿ ತೊಡಗಿರುತ್ತಾರೆ. ಈ ಕಾರಣದಿಂದ ಶೇಕಡ ಐವತ್ತರವರೆಗೂ ಸಿಬ್ಬಂದಿಯ ಮೇಲೆ ಖರ್ಚಾಗುತ್ತದೆ. ಇತರ ಕಡೆಗಳಲ್ಲಿ ನೂರಕ್ಕೆ 33ರವರೆಗೂ ಖರ್ಚಾಗುತ್ತದೆಂದು ಹೇಳುತ್ತೇನೆ.

Sri K. L. NARASIMHAIAH.—Cannot the Government reduce the number of research stations ?

ಶ್ರೀ ಕೆ. ಎಫ್. ಪಾಟೀಲ್.—ಸಂಶೋಧನಾಲಯಗಳನ್ನು ಕಡಮೆಮಾಡುವುದನ್ನು ಒಪ್ಪುವುದಿಲ್ಲ; ಆದರೆ ಪುನರ್ವ್ಯವಸ್ಥೆ ಮಾಡಬೇಕು ಎಂಬ ಮಾತನ್ನು ಒಪ್ಪುತ್ತೇನೆ. Research ಎನ್ನುವುದನ್ನು higher level ನಲ್ಲಿ ನೋಡಿದರೆ ಅದರಿಂದ ಹೆಚ್ಚಿನ ಅನುಕೂಲವಿದೆ, ಒಳ್ಳೆಯ ಬಿತ್ತನೆ ವಗೈರೆ ಒದಗುವುದಕ್ಕೆ ಸಾಧ್ಯವಿದೆ ಎನ್ನುವ ಭಾವನೆ ಇರುವುದರಿಂದ ಅದನ್ನು ಸರಿಯಾಗಿ ನಡೆಸಬೇಕಾಗಿದೆ. ಸಂಶೋಧನಾ ಕಾರ್ಯವು ಕಾಲೇಜುಗಳಿಗೂ ಸಂಬಂಧಪಟ್ಟದ್ದಾಗಿರುವಂತೆ ಏರ್ಪಾಡು ಮಾಡಿ, ಸಂಶೋಧನಾ ಕಾರ್ಯವನ್ನು ಮಾಡುವುದಕ್ಕೆ experimental farms ಮತ್ತು nurseries ಇವುಗಳನ್ನು ಹೆಚ್ಚಾಗಿ ಬೆಳಸಿಕೊಂಡು ಬರಬೇಕು. ಆದರೆ ಒಂದೊಂದು ಜಿಲ್ಲೆಗೆ ಒಂದೊಂದು ಸಂಶೋಧನಾಲಯ ಅನಿವಾರ್ಯವಾಗಿರುವುದರಿಂದ ಅಂಥದರಲ್ಲಿ ಮಾತ್ರ ಕನಿಷ್ಠ ಪ್ರಮಾಣದಲ್ಲಿ ಒಂದೊಂದನ್ನು ಇಟ್ಟು, ವ್ಯವಸಾಯದ ಕಾಲೇಜುಗಳಲ್ಲಿ ಹೆಚ್ಚಿನ ತಜ್ಞರು ಇರುವುದರಿಂದ ಅವರು ತಮ್ಮ ಟೀಚಿಂಗ್ ಜೊತೆಗೆ ಸಂಶೋಧನೆಯನ್ನು ಮಾಡಲು ಹೆಚ್ಚು ಅನುಕೂಲಗಳನ್ನು ಕಲ್ಪಿಸಿಕೊಡುವುದು ಒಳ್ಳೆಯದೆನ್ನುವ ಭಾವನೆ ಇದೆ. ಆರೀತಿ ಪುನರ್ವ್ಯವಸ್ಥೆ ಮಾಡಬೇಕು ಎಂದು ತಜ್ಞರ ಕೂಡ ವಿಚಾರ ವಿನಿಮಯವನ್ನು ನಡೆಸಿದ್ದೇವೆ. ಡಾಕ್ಟರ್ ಲಾನ್ ಮತ್ತು ಮೆಕ್ಲಾ ಅವರ ಸಲಹೆಯನ್ನು ಪಡೆದಿದ್ದೇವೆ. ತೀವ್ರದಲ್ಲಿಯೇ ಇದು ಜಾರಿಗೆ ಬರತಕ್ಕದ್ದಿದೆ ಎಂದು ಹೇಳುತ್ತೇನೆ.

Sri G. B. SHANKAR RAO.—Sir, are the Government aware that many more research stations are to be started in respect of many other agricultural commodities like chillies?

ಶ್ರೀ ಕೆ. ಎಫ್. ಪಾಟೀಲ್.—ಮೆಣಸಿನಕಾಯಿಯ ಸಲುವಾಗಿ ಈ ವರ್ಷ ಮಾಡುತ್ತೇವೆ. ಸ್ಥಳವನ್ನು ನೋಡಿಕೊಂಡು ಬಂದಿದ್ದೇವೆ. ಜೋಳ, ಭತ್ತ, ರಾಗಿ, ತೆಂಗಿನಕಾಯಿ, ಅಡಕೆ, ಏಲಕ್ಕಿ ಹೀಗೆ ಬೇರೆ ಬೇರೆ ಬೆಳೆಗಳಿಗೆಲ್ಲ ಸಂಶೋಧನಾಲಯಗಳನ್ನು ತೆರೆಯಬೇಕೆಂದಿದ್ದೇವೆ. ಅದನ್ನು ತಮಗೆ ತಿಳಿಸುತ್ತೇನೆ. ಹಿರೇಕೆರೂರಿನಲ್ಲಿ ಮೆಣಸಿನಕಾಯಿಗೆ ಸಂಶೋಧನಾಲಯವನ್ನು ಈ ವರ್ಷ ಪ್ರಾರಂಭ ಮಾಡಬೇಕು ಎಂದು ಇದ್ದೇವೆ.

ಶ್ರೀ ಜಿ. ಬಿ ಶಂಕರರಾವ್.—ಈ ವರ್ಷವೇ ಮಾಡುತ್ತೀರಾ?

ಶ್ರೀ ಕೆ. ಎಫ್. ಪಾಟೀಲ್.—ಈ ವರ್ಷವೇ ಮಾಡುತ್ತೇವೆ.

ಶ್ರೀ ಎಸ್. ಆರ್. ರಾಮಯ್ಯ.—ಆಲೂಗೆಡ್ಡೆಯ ಸಲುವಾಗಿ ಎಲ್ಲಿ ತೆರೆಯುತ್ತೀರಿ?

ಶ್ರೀ ಕೆ. ಎಫ್. ಪಾಟೀಲ್.—ಆಲೂಗೆಡ್ಡೆಯ ಸಲುವಾಗಿ ಸಂಶೋಧನಾಲಯವಿಲ್ಲವೆ ಇದ್ದರೂ ಒಂದು experimental farm ಮಾಡಬೇಕೆಂಬ ದೃಷ್ಟಿಯಿಂದ ಜಮೀನನ್ನು ದೊರಕಿಸಿಕೊಳ್ಳುವುದಕ್ಕೆ......

5 P.M.

ಶ್ರೀ ಡಿ. ಮೂಕಪ್ಪ (ಸಾಗರ).—ಶಿವಮೊಗ್ಗದಲ್ಲಿ ವ್ಯವಸಾಯದ ಕಾಲೇಜನ್ನು ತೆರೆಯುತ್ತೀರಾ?

ಶ್ರೀ ಕೆ. ಎಫ್. ಪಾಟೀಲ್.—ಈಗಾಗಲೇ ಇರುವ ಕಾಲೇಜುಗಳನ್ನು ಹೆಚ್ಚು ಉಪಯುಕ್ತವಾಗುವ ದೃಷ್ಟಿಯಿಂದ ಅಭಿವೃದ್ಧಿಪಡಿಸಿ, ಇನ್ನೂ ಹೆಚ್ಚು ಸೌಲಭ್ಯಗಳು ಇಲ್ಲಿ ದೊರೆಯುವ ಹಾಗೆ ಮಾಡಿ ಈ ಮೂಲಕ ದೇಶದಲ್ಲಿ ವ್ಯವಸಾಯಕ್ಕೆ ಅನುಕೂಲ ಪರಿಸ್ಥಿತಿಯನ್ನುಂಟು ಮಾಡಬೇಕೆಂಬುದು ನಮ್ಮ ಉದ್ದೇಶ......

ಶ್ರೀ ಡಿ. ಮೂಕಪ್ಪ.—ಬಡ್ಜೆಟ್‌ನಲ್ಲಿ ಆರು ವ್ಯವಸಾಯದ ಸ್ಕೂಲುಗಳು ನಮೂದಾಗಿವೆ. ಅವುಗಳನ್ನು ಎಲ್ಲೆಲ್ಲಿ ಪ್ರಾರಂಭ ಮಾಡುತ್ತೀರಿ?

ಶ್ರೀ ಕೆ. ಎಫ್. ಪಾಟೀಲ್.—ಅದು ಇನ್ನೂ ತೀರ್ಮಾನವಾಗಿಲ್ಲ. ಎಲ್ಲೆಲ್ಲಿ ಅನುಕೂಲ ಸಿಕ್ಕುತ್ತದೆಯೋ ಅದರ ಪ್ರಕಾರ ಬೇರೆ ಬೇರೆ ಜಿಲ್ಲೆಗಳಲ್ಲಿ ತೆರೆಯಬೇಕೆಂದಿದೆ.

ಸಂಬಳಗಳನ್ನು ಉತ್ತಮಮಾಡಬೇಕೆಂದು ಹೇಳಿದ್ದಾರೆ. ಅದು ಪರಿಶೀಲನೆಮಾಡುವ ವಿಷಯ. ಇಲಾಖೆಯಲ್ಲೇ ಸಾಕಷ್ಟು ಜನರಿದ್ದುದರಿಂದ ಅವರಿಗೇ ಪ್ರಮೋಷನ್ ಕೊಟ್ಟಿದ್ದೇವೆ......

Sri C. M. ARUMUGHAM.—So far as promotions are concerned, there is a rule prescribed that 60 per cent should be by promotion and 40 per cent by direct recruitment.

Sri K. F. PATIL.—Rules have changed from time to time. Every department has its own quota. I am telling that 10 per cent have been recruited and others promoted.

ಶ್ರೀ ಜಿ. ಎನ್. ಪುಟ್ಟಣ್ಣ.—ತಮ್ಮ ಕಾಲದಲ್ಲಿ ಆರೀತಿ ರೂಲ್ಸ್ ಬದಲಾವಣೆ ಮಾಡಬೇಡಿ.

ಶ್ರೀ ಕೆ. ಎಫ್. ಪಾಟೀಲ್.—ತಾವು ತಪ್ಪೆಂದು ಹೇಳುವುದನ್ನು ಮಾಡುವುದಿಲ್ಲ.

Sri M. C. NARASIMHAN.—Is it not a fact that Recruitment Committee has fixed a definite ratio in regard to direct recruitment and promotions?

Sri K. F. PATIL.—From time to time rules change.

Sri C. M. ARUMUGHAM.—Kindly give us information from 1950.

Sri K. F. PATIL.—Ten per cent have been directly recruited.

ಭದ್ರಾವತಿಯಲ್ಲಿ Seed multiplication farm ಬೇಕೆಂದು ಹೇಳಿದರು. Implements ಸಲುವಾಗಿ ಸೂಕ್ತ ಸಲಹೆಯನ್ನು ಕೊಟ್ಟಿದ್ದಾರೆ. ಅರಣ್ಯದಲ್ಲಿ ಹೋಗಿ ತೆಗೆದುಕೊಳ್ಳುವುದಕ್ಕೆ ಅವಕಾಶ ಕೊಡುವುದಕ್ಕಿಂತ ಡಿಪೋಗಳನ್ನು ಮಾಡಿ ಅಲ್ಲಿ ಸಲಕರಣೆಗಳನ್ನಿಡಬೇಕೆಂದು ಸಲಹೆಮಾಡಿದ್ದಾರೆ. ಇದನ್ನು ಜಾರಿ ಮಾಡಲು ಸಾಧ್ಯವೆ ಎನ್ನುವುದನ್ನು ಪರಿಶೀಲನೆ ಮಾಡುತ್ತೇವೆ ಜಿಲ್ಲೆಗೆ ಒಂದೊಂದು fruit cultivation ಫಾರಂ ಮಾಡಬೇಕೆಂದು ಹೇಳಿದ್ದಾರೆ; ಅದನ್ನು ಪರಿಶೀಲನೆ ಮಾಡುತ್ತೇವೆ. ಇದು ಸೂಕ್ತವಾದ ಸಲಹೆ.

ಶ್ರೀ ಜಿ. ಎನ್. ಪುಟ್ಟಣ್ಣ.—ದೊಡ್ಡ ದೊಡ್ಡ ಪಟ್ಟಣಗಳಲ್ಲಿ, ಲಾಲ್‌ಬಾಗ್‌ನಲ್ಲಿ ಮಾಡಿದರೆ ಪ್ರಯೋಜನವಿಲ್ಲ. ಹಳ್ಳಿಗಳಿಗೇನು ಮಾಡುತ್ತೀರಿ?

ಶ್ರೀ ಕೆ. ಎಫ್. ಪಾಟೀಲ್.—ಪ್ರತಿ ಹಳ್ಳಿಯಲ್ಲಿಯೂ ಒಂದು ಹಾರ್ಟಿಕಲ್‌ಚರಲ್ ಇಲಾಖೆಯ ಸಿಬ್ಬಂದಿಯನ್ನಿಟ್ಟು ನೌಕರರನ್ನು ನೇಮಕಮಾಡುವುದಕ್ಕೆ ಸಾಧ್ಯವಿಲ್ಲ. ಅಗ್ರಿಕಲ್‌ಚರಲ್ ಅಸಿಸ್ಟೆಂಟ್ ಯಾರು ಇರುತ್ತಾರೋ ಅವರಿಗೆ ದನಗಳ ಅಭಿವೃದ್ಧಿ, ಹಣ್ಣುಕಾಯಿಗಳ ಅಭಿವೃದ್ಧಿಯ ವಿಚಾರ ತಿಳಿದಿರುವುದರಿಂದ ಈ ಕೆಲಸದಲ್ಲಿ ಅವರಿಗೆ ತಕ್ಕಷ್ಟು ತಜ್ಞತೆ ಇರುತ್ತದೆ. ಅನೇಕರಿಗೆ ಅದರ ಕಲ್ಪನೆ ಇಲ್ಲವೆಂದು ಹೇಳಿದರು, ಇದೊಂದು ದೋಷ. ಅವರಿಗೆ first aid training ಕೊಡುವ ಹಾಗೆ ಈ ವಿಷಯಗಳಲ್ಲಿ ಸರಿಯಾದ ಶಿಕ್ಷಣ ಕೊಟ್ಟು, ಹಳ್ಳಿಗಳಲ್ಲಿ ಗೊಬ್ಬರ, ಬೀಜಗಳ ವಿಷಯದಲ್ಲಿ ಸಹಾಯ ಮಾಡುವಷ್ಟು ಶಿಕ್ಷಣ ಕೊಡುತ್ತೇವೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಎನ್.ಇ.ಎಸ್. ಇಲ್ಲದೇಇರುವ ಕಡೆ?

ಶ್ರೀ ಕೆ. ಎಫ್. ಪಾಟೀಲ್.—ಈ ಕೆಲಸವನ್ನು ಅಗ್ರಿಕಲ್‌ಚರಲ್ ಡೆಮಾನ್‌ಸ್ಟ್ರೇಟರ್ ಮಾಡುತ್ತಾರೆ. ಎಲ್ಲಿ ಮಾಡುವುದಿಲ್ಲವೆಂಬುದನ್ನು ನನ್ನ ಗಮನಕ್ಕೆ ತಂದರೆ, ಅವರಿಗೆ ತಾಕೀತು ಕೊಟ್ಟು ಮಾಡಿಸುತ್ತೇವೆ.

ಭದ್ರಾ ರೆಫ್ಟ್ ಬ್ಯಾಂಕು ಮತ್ತು ರೈಟ್‌ಬ್ಯಾಂಕ್‌ನ ಲೋಪದೋಷಗಳನ್ನು ಹೇಳಿದ್ದಾರೆ. ಇದನ್ನು ಪಬ್ಲಿಕ್ ವರ್ಕ್ಸ್ ಇಲಾಖೆಗೆ ತಿಳಿಸಿ ಸರಿಮಾಡುವಂತೆ ಹೇಳುತ್ತೇನೆ.

ಶ್ರೀಮಾನ್ ಗಜಾನನಪಂಡಿತರು ಕೆಲವು ಸೂಕ್ತ ಸಲಹೆಗಳನ್ನಿತ್ತಿದ್ದಾರೆ. Yield per acre ವಿಷಯ ಹೇಳಿದರು. ತೆಂಗು, ಸೀ ಐಲೆಂಡ್ ಕಾಟನ್ ಮುಂತಾದುವುಗಳ ಅಭಿವೃದ್ಧಿಯ ದೃಷ್ಟಿಯಿಂದ

(ಶ್ರೀ ಕೆ. ಎಫ್. ಪಾಟೀಲ್)

ಹೇಳಿದ್ದಾರೆ. ಇವುಗಳ ಉತ್ಪತ್ತಿ average yield ವಿಷಯ ನ್ನು ಹೇಳುತ್ತೇನೆ. 1949-50 ರಿಂದ 1957-58ರ ವರೆಗಿನ ಅಖಿಲಭಾರತಕ್ಕೆ ಸಂಬಂಧಪಟ್ಟ ಅಂಕಿ ಅಂಶಗಳನ್ನು ಹೇಳುತ್ತೇನೆ.

1949-50ರ average—1896 ; Yield per acre—771 ಪೌಂಡು ಬತ್ತ. 1957-58ರಲ್ಲಿ average yield per acre 1,110 ಪೌಂಡು. Average ಅಥವಾ ಕ್ಷೇತ್ರ 22 ಲಕ್ಷ 57 ಸಾವಿರಕ್ಕೆ ಮೇಲ್ಪಟ್ಟಿದೆ. ಹಿಂದೆ 18 ಲಕ್ಷವಿತ್ತು. ಎಂದರೆ, ಕ್ಷೇತ್ರ ಹೆಚ್ಚಾಗಿದೆ. ಸಾಮಾನ್ಯವಾಗಿ ಹಿಂದೆ average yield per acre 771 ಪೌಂಡಿತ್ತು. ಈಗ 11,000 ಪೌಂಡ್‌ವರೆಗೆ ಹೋಗಿರುವುದರಿಂದ ಇದುವರೆಗೆ ಮಾಡಿದ ಪ್ರಯೋಗಗಳಿಂದ ಬೆಳೆ ಹೆಚ್ಚಾಗಿದೆ ಎನ್ನುವುದು ಗೊತ್ತಾಗುತ್ತದೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ನಿಮ್ಮ ಅನುಭವದ ಮೇಲೆ ಹೇಳಿ ; ಅವರ ಅಂಕಿಅಂಶ ಹಾಗಿರಲಿ.

ಶ್ರೀ ಕೆ. ಎಫ್. ಪಾಟೀಲ್.—ಒಬ್ಬೊಬ್ಬರ ಅನುಭವ, ಒಂದೊಂದು ಜಿಲ್ಲೆ ಅಥವಾ ತಾಲ್ಲೂಕು, ಹಳ್ಳಿಯಲ್ಲಿ ಒಂದೊಂದು ರೀತಿ ಇರುತ್ತದೆ. ಎಲ್ಲರ ಅನುಭವದ ಮೇಲೆ ಸರಾಸರಿ ಅಂಕಿಅಂಶಗಳನ್ನು ಕೊಟ್ಟಿದ್ದೇನೆ.

ಇನ್ನು ಪ್ರತಿಯೊಂದು ಹಳ್ಳಿಗೂ ಯೋಜನೆ ಇರಬೇಕೆಂದು ಹೇಳಿದರು. ಎರಡನೆಯ ಪಂಚವಾರ್ಷಿಕ ಯೋಜನೆಯ ಗುರಿ ಮತ್ತು ಸಾಧನೆ ಎಷ್ಟಾಗಿದೆ ಎಂದು ಆಗಲೇ ತಿಳಿಸಿದ್ದಾರೆ......

ಶ್ರೀ ಎಂ. ರಾಮಪ್ಪ.—ಪ್ರತಿ ಹಳ್ಳಿಗೂ ಯೋಜನೆ ಇಲ್ಲವೆಂದು ಒಪ್ಪಿಕೊಂಡಿದ್ದಾರೆ.

ಶ್ರೀ ಕೆ. ಎಫ್. ಪಾಟೀಲ್.—ಪ್ರತಿ ಜಿಲ್ಲೆಗೂ ಇರುತ್ತದೆ, ಪ್ರತಿಹಳ್ಳಿಗೂ ಇಲ್ಲದೇಇರಬಹುದು. ಇದರಿಂದ ಪ್ರತಿಹಳ್ಳಿಗೂ ಇಷ್ಟೆಂದು ಗೊತ್ತಾಗುತ್ತದೆ.

ಶ್ರೀಮಾನ್ ಹುಚ್ಚಮಾಸ್ತಿಗೌಡರು ಅನೇಕ ಸಲಹೆಗಳನ್ನು ಕೊಟ್ಟಿದ್ದಾರೆ. ಅವುಗಳನ್ನು ಸರ್ಕಾರ ಲಕ್ಷ್ಯದಲ್ಲಿಟ್ಟಿದೆ ; ಅನೇಕ ಸಾರಿ ಅವರೊಡನೆ ಈ ವಿಷಯದಲ್ಲಿ ಮಾತನಾಡಿದ್ದೇನೆ. ಯಾವ ಯಾವುದನ್ನು ಕಾರ್ಯರೂಪಕ್ಕೆ ತರುವುದು ಸಾಧ್ಯವೋ ಅವನ್ನು ಮಾಡುತ್ತೇವೆ.

ಆಮೇಲೆ ಕಬ್ಬಿಣ ಮತ್ತು ಫರ್ಟಿಲೈಸರುಗಳು ಎಷ್ಟೋ ದಿವಸಗಳಿಂದಲೂ ಸರಿಯಾಗಿ ಬರುತ್ತಿಲ್ಲವೆಂದು ಹೇಳಿದರು. ಈ ಬಗ್ಗೆ ಒಟ್ಟಿನಲ್ಲಿ ಎಲ್ಲ ಕಡೆಗಳಲ್ಲಿಯೂ ಸಾಕಷ್ಟು ದಾಸ್ತಾನಿಡಬೇಕೆಂದು ಏನು ಟೀಕೆ ಮಾಡಿದ್ದೀರೋ ಅದರಂತೆ ಸಾಕಷ್ಟು ಕಬ್ಬಿಣ, ಗುಳಗಳು, ಗಾಡಿ ಪಟ್ಟಿಗಳು ಇವುಗಳನ್ನು ತರಿಸಲು ಏರ್ಪಾಡು ಮಾಡಿದ್ದೇವೆ. ಈಗಿರತಕ್ಕ ದೋಷವೇನು ಎನ್ನುವುದನ್ನೂ ಒಪ್ಪಿಕೊಂಡಿದ್ದೇವೆ. ಅದರಂತೆ ಈ ವರ್ಷವೇ ಎಂತೆಂತಹ ಜಾಗಗಳಲ್ಲಿ ಕಬ್ಬಿಣಗಳು, ಗುಳಗಳು, ಇತ್ಯಾದಿ ಎಷ್ಟು ಬೇಕೆನ್ನುವುದನ್ನು ತಿಳಿದು ಅದರಂತೆ ತರಿಸಿ ಸಾಕಷ್ಟು ಸ್ಟಾಕು ಮಾಡಿದ್ದೇವೆ. ಈ ವರ್ಷದಿಂದ ಅಷ್ಟು ತೊಂದರೆಯಾಗಲಿಕ್ಕಿಲ್ಲ. ತಾವು ಯಾವ ಯಾವ ಸಹಕಾರ ಸಂಘಗಳಲ್ಲಿ ಬೇಕಾದರೂ ಇಂಡೆಂಟನ್ನು ಹಾಕಬಹುದು. ಇದನ್ನು ತರಿಸಿಕೊಳ್ಳಬಹುದು.

ಶ್ರೀ ಜಿ. ಬಿ. ಶಂಕರರಾವ್.—ಈ ಕಬ್ಬಿಣದ ಗುಳಗಳನ್ನು ಹಳೆಯ ಮೈಸೂರಿನಲ್ಲಿ ಸೊಸೈಟಿಗಳ ಮುಖಾಂತರ ತರಿಸಿಕೊಳ್ಳಬಹುದು. ಆದರೆ ನಮ್ಮಲ್ಲಿ ಡೆಪ್ಯುಟೀ ಕಮೀಷನರವರ ಮುಖಾಂತರ ತರಿಸಿಕೊಳ್ಳಬೇಕಾಗಿದೆ. ಇದರಿಂದ ರೈತರಿಗೆ ಹೇಗೆ ಸಹಾಯವಾಗುತ್ತದೆ ?

ಶ್ರೀ ಕೆ. ಎಫ್. ಪಾಟೀಲ್.—ಧಾರವಾಡ ಜಿಲ್ಲೆಯ ಪದ್ಧತಿಗೂ ಹಳೆಯ ಮೈಸೂರಿನ ಪದ್ಧತಿಗೂ ಸ್ವಲ್ಪ ವ್ಯತ್ಯಾಸವಿದೆ. ಆದರೂ ಅಲ್ಲಿ ತಾಲ್ಲೂಕಾ ಬೋರ್ಡಿದೆ. ಅದರ ಚೇರ್ಮನ್ನರಿಂದ ಡೆಪ್ಯುಟೀ ಕಮೀಷನರವರ ಕಡೆಗೆ ಬರೆಸಿದರೆ ನಿಮಗೆ ಬೇಕಾದಷ್ಟು ಗುಳಗಳನ್ನು ಮತ್ತು ಇತರ ಉಪಕರಣಗಳನ್ನು ತರಿಸಿಕೊಳ್ಳಬಹುದು. ಅಲ್ಲಿ ಸಿಕ್ಕುತ್ತವೆ.

ಶ್ರೀ ಜಿ. ಬಿ. ಶಂಕರರಾವ್.—ಡೆಪ್ಯುಟೀ ಕಮೀಷನರವರ ಇಂಡೆಂಟು ವರ್ಷಗಟ್ಟಲೆಯಾದರೂ ಬಾರದಿದ್ದರೆ ಅದರಿಂದ ರೈತರಿಗೇನು ಉಪಕಾರವಾಗುತ್ತದೆ ?

ಶ್ರೀ ಕೆ. ಎಫ್. ಪಾಟೀಲ್.—ಅಲ್ಲೇನೋ ಲೋಪದೋಷಗಳಿರಬಹುದು. ಅದನ್ನು ನಾನು ತನಿಖೆ ಮಾಡದೆ ಇಲ್ಲೇನೂ ಹೇಳುವುದಕ್ಕಾಗುವುದಿಲ್ಲ.

ಇನ್ನು Prices to be fixed in advance ಎನ್ನುವ ಬಗೆಗೆ ಶ್ರೀಮಾನ್ ಹುಚ್ಚಮಾಸ್ತಿಗೌಡರು, ಬೈರೇಗೌಡರು ಮತ್ತು ಇನ್ನೂ ಅನೇಕ ಸದಸ್ಯರು ಅನೇಕ ಸಲಹೆಗಳನ್ನು ಕೊಟ್ಟಿದ್ದಾರೆ, ಮತ್ತು ಸರಿಯಾದ ಬೆಳೆ ಬೆಳೆಯುವುದಕ್ಕೆ ಒಂದು ಇನ್‌ಸೆಂಟೀವ್ ಇರುವುದಿಲ್ಲ ಎಂದು ಸಲಹೆಮಾಡಿದರು. ಇದರಿಂದಾಗಿ ಕೇಂದ್ರ ಸರಕಾರದವರು ಮತ್ತು ನಾವು ಕೂಡ ಏನನ್ನೂ ಮಾಡಲಿಕ್ಕೆ ಸಾಧ್ಯವಾಗಿಲ್ಲ. ಕೊಳ್ಳುವವನಿಗೂ ಮತ್ತು ಬೆಳೆಯನ್ನು ಮಾಡುವವನಿಗೂ ಇಬ್ಬರಿಗೂ ಸೇರಿರುವ ಪ್ರಶ್ನೆಯಾಗಿರುವುದರಿಂದ ಇದು ಬಹಳ ಸೂಕ್ತವಾಗಿ ಪರಿಶೀಲಿಸಬೇಕಾದ ಸಲಹೆ ಎಂದು ಇದನ್ನು ಸರಿಪಡಿಸಲಿಕ್ಕೆ ಅನುಕೂಲ ಮಾಡಬೇಕು ಎಂದು ನನಗೂ ಅನಿಸಿದೆ.

ಇನ್ನು Cattle Breeding, Sheep Breeding, Poultry Keeping, Piggery, etc., ಎನ್ನುವ ಬಗ್ಗೆ ಕೇಂದ್ರದ ಉಪ-ಮಂತ್ರಿಗಳಾದ ಶ್ರೀಮಾನ್ ಕೃಷ್ಣಪ್ಪನವರು ಕೊಟ್ಟಿರತಕ್ಕ ಸಲಹೆಗಳು ಮತ್ತು ನಮ್ಮ ರಾಜ್ಯದ ಬಗ್ಗೆ ಅಭಿಮಾನವಿಟ್ಟು ಮಾಡುತ್ತಿರುವ ಕೆಲಸಗಳನ್ನು ನಾನೂ ಒಪ್ಪುತ್ತೇನೆ. ನಾನೂ ಸಹ ಒಂದು ಸಾರಿ ಅವರನ್ನು ಸಂದರ್ಶಿಸಿ ಅವರು ಹೇಳಿದಂತಹ ಮಾತುಗಳನ್ನು ಮಾಡುವುದಕ್ಕೆ ಈಗಾಗಲೇ ಪ್ರಯತ್ನ ಮಾಡುತ್ತಿದ್ದೇನೆ. ಅದರಂತೆ ಕಾರ್ಯರೂಪಕ್ಕೆ ತರಲು ಮುಂದಿನ ವರ್ಷದಿಂದ ಎಷ್ಟು ಶಕ್ಯವೋ ಅಷ್ಟನ್ನೂ ಮಾಡಲು ಪ್ರಯತ್ನ ಮಾಡೋಣ.

ಇನ್ನು ಬೇರೆ ಬೇರೆ ರೀತಿಯಾಗಿರುವ ತಳಿಗಳನ್ನು ಅಭಿವೃದ್ಧಿಮಾಡುವ ದೃಷ್ಟಿಯಿಂದ, ಎಮ್ಮೆ ಮತ್ತು ಕುರಿಗಳನ್ನು ಸಾಕುವ ದೃಷ್ಟಿಯಿಂದ ಎಲ್ಲೆಲ್ಲಿ ಯಾವ ಯಾವ ಭಾಗದಲ್ಲಿ ಮತ್ತು ಯಾವ ಯಾವ ಪ್ರದೇಶದಲ್ಲಿ ಮಾಡಲು ಶಕ್ಯವೋ ಅವನ್ನೆಲ್ಲ ಮಾಡಬೇಕೆಂದು ಇಟ್ಟೇವೆ ಎಂದು ಹೇಳಲು ಬಯಸುತ್ತೇನೆ.

ನಮ್ಮ ಮಾನ್ಯ ಸದಸ್ಯರಾದ ಶ್ರೀಮಾನ್ ಮುಕ್ಕಣ್ಣಪ್ಪನವರು ಈ ಅಗ್ರಿಕಲ್ಚರು ಆಫೀಸರುಗಳಿಗೆ ಜೀಪನ್ನು ಕೊಡುವಂತೆ ಏರ್ಪಾಡು ಮಾಡಬೇಕಾಗಿತ್ತು ಎಂದು ಸಲಹೆ ಮಾಡಿರುವುದು ಸೂಕ್ತವಾದುದು ಎಂದು ನಮ್ಮ ಫೈನಾನ್ಸ್ ಮಿನಿಸ್ಟರು ಒಪ್ಪುವಂತೆ ಸಲಹೆಯನ್ನೂ ಕೊಡಲಾಗಿದೆ ; ಮತ್ತು ಇನ್ನೂ ಅನೇಕ ಸ್ನೇಹಿತರೂ ಸಹ ಇದನ್ನು ಒಪ್ಪಿದ್ದಾರೆ. ಇದರಂತೆ ಎಲ್ಲ ಜೀಪುಗಳನ್ನೂ, ಕಾರುಗಳನ್ನೂ ಮತ್ತು ಎಲ್ಲ ರೀತಿಯ ವ್ಯಾನುಗಳನ್ನೂ ಪೂಲುಮಾಡಿ ಡೆಪ್ಯುಟೀ ಕಮೀಷನರಲ್ಲಿ ಇಟ್ಟು ಯಾರು ಯಾರಿಗೆ ಬೇಕಾಗುತ್ತದೆಯೋ ಅವರು

ಇಂಡೆಂಟುಮಾಡಿ ಇವನ್ನು ಉಪಯೋಗಿಸಿಕೊಳ್ಳಬಹುದು. ಈ ರೀತಿಯಾದ ಎಲ್ಲ ವಾಹನಗಳೂ ಒಂದೇ ಕಡೆಯಲ್ಲಿದ್ದರೆ ಎಲ್ಲರಿಗೂ ಅನುಕೂಲವಾಗುತ್ತದೆ ಎನ್ನುವ ಸೂಕ್ತವಾದ ಸಲಹೆಯನ್ನು ಕೊಟ್ಟಿದ್ದಾರೆ. ಇದನ್ನು ಪರಿಶೀಲನೆಮಾಡುತ್ತೇವೆ ಎಂದು ಇಲ್ಲಿ ಹೇಳಬಯಸುತ್ತೇನೆ.

ನಮ್ಮ ಮಾನ್ಯ ಸದಸ್ಯರಾದ ಶ್ರೀಮಾನ್ ನರಸಿಂಹಯ್ಯನವರು ತುಂಬಾ ಉಪಯುಕ್ತವಾದ ಸಲಹೆಗಳನ್ನು ಕೊಡುತ್ತ ಸ್ವಲ್ಪ ಕಟುವಾಗಿಯೇ ಹೇಳಿದರು. ಅವರೇನೋ ಬಹಳ ಒಳ್ಳೆಯವರು. ಆದರೆ ಬೇಗ ಸುಧಾರಣೆಯಾಗಬೇಕು ಎಂದು ಹೇಳುತ್ತ ನಮ್ಮ ಅಗ್ರಿಕಲ್ಚರು ಆಫೀಸರುಗಳು ಮಾಡತಕ್ಕ ಕೆಲಸಗಳನ್ನು ಸರಿಯಾಗಿ ಮಾಡುತ್ತಿಲ್ಲ ಮತ್ತು ಪ್ಲ್ಯಾಂಟುಗಳನ್ನು ಹಾಕಿಕೊಂಡು ಸುಮ್ಮನೆ ಅಲ್ಲಲ್ಲೇ ಓಡಾಡುತ್ತಿರುತ್ತಾರೆ ಎಂದು ಹೇಳಿದರು. ಇದನ್ನು ಸರಿಯಾಗಿ ಕೆಲಸ ಮಾಡುವ ದೃಷ್ಟಿಯಿಂದ ಹೇಳಿದ್ದಾರೆ; ಮತ್ತು ಯಾರು ಒಳ್ಳೆಯ ಕೆಲಸವನ್ನು ಮಾಡಿದ್ದಾರೋ ಅವರ ಕೆಲಸದ ಬಗ್ಗೆ ಮೆಚ್ಚುಗೆಯನ್ನೂ ಕೊಟ್ಟಿದ್ದಾರೆ. ಹೀಗೆ ಅವರು ಹೇಳಿದಂತಹ ಸಲಹೆಗಳನ್ನೆಲ್ಲ ಗಮನದಲ್ಲಿಟ್ಟುಕೊಂಡು ನಾವು ಕೆಲಸಗಳನ್ನು ಮಾಡಲು ಯತ್ನಿಸುತ್ತೇವೆ ಎಂದು ಹೇಳಬಯಸುತ್ತೇನೆ.

"ಸಬ್‌ಸಿಡಿ ಫಾರ್ ವೆಲ್ಸ್" ಬಗ್ಗೆ ಈಗ 250 ರೂಪಾಯಿಗಳನ್ನು ಕೊಡುವುದನ್ನು ಹೆಚ್ಚುಮಾಡಬೇಕೆಂದು ಕೇಂದ್ರ ಸರಕಾರವನ್ನು ಮತ್ತು ಪ್ಲಾನಿಂಗ್ ಕಮೀಷನ್ನಿನವರನ್ನು ಕೇಳುತ್ತಿದ್ದೇವೆ. ಅವರು ಇನ್ನೂ ಒಪ್ಪಿಲ್ಲ. ಅದೇ ರೀತಿಯಾಗಿ ಈಗ ಕೊಡುತ್ತಿರುವ ಸಾಲವನ್ನು 1,000 ದಿಂದ 3,000ಕ್ಕೆ ಏರಿಸಬೇಕೆಂದು ಪ್ರಯತ್ನವನ್ನು ಮಾಡುತ್ತಿದ್ದೇವೆ. ಈಗ ಹೈದರಾಬಾದು ಕರ್ನಾಟಕದಲ್ಲಿ ಈ ರೀತಿ ಕೊಡುವುದಕ್ಕೆ ಒಪ್ಪಿದ್ದಾರೆ. ಆದರೆ ಮೈಸೂರಿನ ಭಾಗಗಳಲ್ಲಿ ಒಪ್ಪಿಲ್ಲ. ಈ ರೀತಿಯಾದ ಭೇದಗಳು ಒಂದೇ ಕಡೆಯಲ್ಲಿ ಇರುವುದು ಸರಿಯಾದುದಲ್ಲ ಎಂದು ನಾವು ಪ್ಲಾನಿಂಗ್ ಕಮೀಷನ್ನಿಗೆ ಪತ್ರವನ್ನು ಕೂಡ ಬರೆಸಲಾಗಿದೆ. ಎರಡನೆಯ ತಾರೀಖು ಈ ಸಂಬಂಧದಲ್ಲಿ ಇವರನ್ನು ಭೇಟಿ ಮಾಡಿ ಪುನಃ ಚರ್ಚೆಮಾಡಿ ಇವರನ್ನು ಒಪ್ಪಿಸಬೇಕೆಂದು ಪ್ರಯತ್ನ ಮಾಡೋಣವೆಂದಿದ್ದೇವೆ. ಲೋನನ್ನು ಮೂರು ಸಾವಿರದಷ್ಟು ಮತ್ತು ಸಬ್‌ಸಿಡಿಯನ್ನು ಐದುನೂರು ರೂಪಾಯಿಗಳಷ್ಟನ್ನು ಕೊಡಿಸಬೇಕೆಂಬ ಸಲಹೆಗೆ ಇನ್ನೂ ಪ್ರಯತ್ನಮಾಡುತ್ತಿದ್ದರೂ ಅದು ಸಾಧ್ಯವಾಗಿಲ್ಲ. ಇದರ ಕಡೆಗೆ ಪ್ರಯತ್ನ ನಡೆಸಬೇಕೆಂದು ಇದ್ದೇವೆ.

ಈಗ ನಮ್ಮ ಮುಂದಿರುವ ಬಡ್ಜೆಟ್ಟನ್ನು ತಾವು ಮಂಜೂರುಮಾಡಿಹೋದನಂತರ ಎಲ್ಲ ಸ್ಕೀಮುಗಳಲ್ಲಿರುವ ಪ್ರತಿಯೊಂದು ಡೀಟೇಲುಗಳನ್ನೂ ಪರಿಶೀಲನೆಮಾಡಿ Administrative sanction and Financial sanction ದೊರಕಿಸಿಕೊಡಬೇಕಾದರೆ ಸುಮಾರು ನವೆಂಬರು ಅಥವಾ ಡಿಸೆಂಬರುವರೆಗೆ ಕಾಲ ಬೇಕಾಗುತ್ತದೆ. ನಾವು ಎಷ್ಟೇ ಸೂಕ್ಷ್ಮವಾಗಿ ಪ್ರತ್ಯೇಕವಾಗಿ ಮಾಡಿದ್ದರೂ ಹೀಗಾಗುತ್ತಿದೆ. ಇದನ್ನು ತಪ್ಪಿಸುವ ದೃಷ್ಟಿಯಿಂದ ನಾವು ಇಲ್ಲಿರುವ ಡಿಪಾರ್ಟ್‌ಮೆಂಟುಗಳಂತೆ ಕೆಲಸಮಾಡಲು ಅಡ್ಮಿನಿಸ್ಟ್ರೇಟೀವ್ ಸ್ಯಾಂಕ್ಷನ್ನು ಮತ್ತು ಫೈನಾನ್‌ಷಿಯಲ್ಲು ಸ್ಯಾಂಕ್ಷನ್ನು ಅದರಂತೆ ಕೊಟ್ಟರೆ ಕೆಲಸಗಳನ್ನು ಯಶಸ್ವಿಯಾಗಿ ಮಾಡಲು ಸಾಧ್ಯವಾಗುತ್ತದೆ. ಈ ದೃಷ್ಟಿಯಿಂದ ನಾನು, ಫೈನಾನ್ಸ್ ಮಿನಿಸ್ಟರು ಮತ್ತು ಇತರ ಕ್ಯಾಬಿನೆಟ್ಟು ಸದಸ್ಯರು ಆಸಕ್ತಿಯಿಂದ ಆಲೋಚನೆ ಮಾಡಿ ಇದರ ಬಗೆಗೆ ಒಂದು ನಿರ್ಣಯವನ್ನು ತೆಗೆದುಕೊಂಡು ಈ ತೊಂದರೆಗಳನ್ನು ತಪ್ಪಿಸುವ ಪ್ರಯತ್ನ ಮಾಡುತ್ತೇವೆ ಎಂದು ಹೇಳಬಯಸುತ್ತೇನೆ.

ಶ್ರೀ ಎಸ್. ಪಿ. ತಲ್‌ವಲ್‌ಕರ್.—ಈಗ ಐದು ವರ್ಷಗಳವರೆಗೂ ಹಣದ ಬೆಳೆಗಳನ್ನು ಬೆಳೆಯಕೂಡದೆಂದು ಹೇಳಿದ್ದೀರಲ್ಲವೇ?

ಶ್ರೀ ಕೆ. ಎಫ್. ಪಾಟೀಲ್.—ಹಾಗೆ ನಿರ್ಬಂಧ ಹಾಕಿದ್ದು ನನಗೆ ಗೊತ್ತಿಲ್ಲ.

ಶ್ರೀ ಜಿ. ಬಿ. ಶಂಕರರಾವ್.—ಗ್ರೋ ಮೋರ್ ಫುಡ್ ಸಂಬಂಧದಲ್ಲಿ ತೆಗೆದುಕೊಂಡ ಸಾಲದ ವಿಷಯದಲ್ಲಿ ಹಾಗಿಲ್ಲ; ತಕಾವಿ ಸಾಲದ ವಿಷಯದಲ್ಲಿ ಆರೀತಿ ಇದೆ.

ಶ್ರೀ ಕೆ. ಎಫ್. ಪಾಟೀಲ್.—ತಕಾವಿ ಲೋನ್ ವಿಷಯದಲ್ಲಿ ಹಾಗಿರಬಹುದು. ಇರಿಗೇಷನ್ ಲೋನ್‌ಕೊಡುವುದರಲ್ಲಿ ಹಾಗಿರುವುದು ಗೊತ್ತಿಲ್ಲ.

ಶ್ರೀ ಜಿ. ಬಿ. ಶಂಕರರಾವ್.—ತಕಾವಿ ಲೋನ್ ವಿಷಯವಲ್ಲ. ಇರಿಗೇಷನ್ ಲೋನ್ ಕೊಡುವುದರಲ್ಲಿ ಲೋನ್ ಮತ್ತು ಸಬ್ಸಿಡಿಕೊಡುವುದಕ್ಕೆ ಸಾಕಷ್ಟು ಹಣವಿಲ್ಲದೆ ಅನೇಕ ರೈತರಿಗೆ ಕೊಟ್ಟಿಲ್ಲ. ಅರ್ಧ ಸಾಲ, ಅರ್ಧ ಸಬ್ಸಿಡಿ ಎಂಬುದು ಈಗ financial year ಮುಗಿಯುತ್ತಾ ಬಂದರೂ ರೈತರಿಗೆ ಹಣ ಸಿಕ್ಕಿಲ್ಲ.

ಶ್ರೀ ಕೆ. ಎಫ್. ಪಾಟೀಲ್.—ಇರಿಗೇಷನ್ well ಗಳ ಬಗ್ಗೆ ಸಾಲಕೊಡುವುದಕ್ಕೆ ಹಣ ಕಡಮೆಯಿದೆಯೆಂದು ಹೇಳಿ ಮೈನರ್ ಇರಿಗೇಷನ್ ಬಾಬಿನಿಂದ 15ಲಕ್ಷ ರೂಪಾಯಿಗಳ ವರೆಗೂ ಸರ್ಕಾರ ಒದಗಿಸಿದೆ ಆದ್ದರಿಂದ ನಿಮಗೆ ಏಕೆ ಸಿಕ್ಕಲಿಲ್ಲವೋ ಗೊತ್ತಿಲ್ಲ.

ಒಬ್ಬ ಸದಸ್ಯರು.—ನಮ್ಮ ಕ್ಷೇತ್ರದಲ್ಲಿ 40 ಬಾವಿಗಳಿಗೆ ಕೊಟ್ಟಿಲ್ಲ.

ಶ್ರೀ ಡಿ. ಟಿ. ಸೀತಾರಾಮರಾವ್.—Well subsidy ಬಗ್ಗೆ ಹಣ ಒದಗಿಸಿರುವುದು ಈ ವರ್ಷ ಲ್ಯಾಪ್ಸ್ ಆಗಿಲ್ಲವೇ?

Mr. SPEAKER.—If the Minister goes on yielding like this it will be 8 o'clock

ಶ್ರೀ ಕೆ. ಎಫ್. ಪಾಟೀಲ್.—Plant protection ವಿಷಯದಲ್ಲಿ ಅನೇಕಸಲಹೆಗಳನ್ನು ಕೊಟ್ಟರು. ಸಾಕಷ್ಟು ಪ್ರಮಾಣದಲ್ಲಿ insecticide ಮತ್ತು dusterಗಳನ್ನು, ಈಗಾಗಲೇ 600 ಡಸ್ಟರುಗಳನ್ನು 1,000 ಸ್ಪ್ರೇಯರುಗಳನ್ನು, 50 ಸೈನೋಗ್ಯಾಸ್ ಪಂಪುಗಳನ್ನು ಮತ್ತು 200ಸೀಡ್ ಡ್ರೆಸಿಂಗ್‌ಗಳನ್ನು ಮತ್ತು ಇತರ ಸಲಕರಣೆಗಳನ್ನು ತರಿಸಿ ಒಬ್ಬೊಬ್ಬ ವಿಲೇಜ್ ವರ್ಕರಿಗೂ ಒಂದೊಂದು equipment ಕೊಟ್ಟಿದ್ದೇವೆ. ರೈತರಿಗೆ ಯಾರಿಗಾದರೂ ಬೇಕಾದರೆ ಕೋ-ಆಪರೇಟಿವ್ ಸೊಸೈಟಿಗಳ ಮುಖಾಂತರ ತರಿಸಿಕೊಳ್ಳಬಹುದಾಗಿದೆ. ಒಂದೊಂದು ವಿಲೇಜ್ ಪಂಚಾಯಿತಿಗೆ ಹತ್ತು ಹತ್ತು ಕೊಡಬೇಕೆಂದು ಮಾಡಿದ್ದೇವೆ. ಯಾವಕಡೆಯಲ್ಲಾದರೂ ರೋಗ ಬಂದರೆ, ಬೇಗ ಇನ್ನೊಂದು ಕಡೆಯಿಂದ ತರಿಸಿಕೊಂಡು ಅದನ್ನು ನಿವಾರಣೆ ಮಾಡುತ್ತೇವೆ. ಆದರೆ, ಮಾನ್ಯ ಸದಸ್ಯರು ಹೇಳಿದಂತೆ ಎಲ್ಲರಿಗೂ ಒಂದೊಂದು ಒದಗಿಸಿಕೊಡುವುದು ಸಾಧ್ಯವಿಲ್ಲವೆಂದು ನಾನು ಹೇಳಬಯಸುತ್ತೇನೆ.

ರಿಸರ್ಚ್ ಸ್ಟೇಷನ್‌ಗಳ ವಿಚಾರ ಹೇಳುತ್ತೇನೆ. ಏಲಕ್ಕಿಗೆ ಮೂಡಿಗೆರೆಯಲ್ಲೂ, ಮೆಣಸಿಗೆ ಕುಶಾಲನಗರದಲ್ಲೂ, ಎಣ್ಣೆಯ ಬೀಜಗಳಿಗೆ ರಾಯಚೂರಿನಲ್ಲೂ, ಹತ್ತಿಗೆ ಧಾರವಾಡದಲ್ಲೂ, ಅಡಕೆಗೆ ತೀರ್ಥಹಳ್ಳಿ ಮತ್ತು ತುಮಕೂರಿನಲ್ಲೂ, ತೆಂಗಿಗೆ ಅರಸೀಕೆರೆಯಲ್ಲೂ ಬತ್ತಕ್ಕೆ ನಾಗನಹಳ್ಳಿ, ಮಂಗಳೂರಿನಲ್ಲೂ, ರಾಗಿಗೆ (fish farm) ಹೆಬ್ಬಾಳನಲ್ಲೂ, ಗೋಡಂಬಿಗೆ ದಕ್ಷಿಣ ಕನ್ನಡದ ಉಳ್ಳಾಳ್‌ನಲ್ಲೂ ರಿಸರ್ಚ್ ಸ್ಟೇಷನ್‌ಗಳನ್ನು ಏರ್ಪಡಿ

(ಶ್ರೀ ಕೆ. ಎಫ್. ಪಾಟೀಲ್)

ಸಿವೆ. ತೆಂಗಿನ ನರ್ಸರಿಯನ್ನು ಹೆಚ್ಚಿಗೆಮಾಡಬೇಕೆಂದು ಮಾನ್ಯ ಸದಸ್ಯರು ಹೇಳಿದರು. ಹಾಲಿ ಹೆಬ್ಬಾಳ್, ಮಂಡ್ಯ, ಸೋಮನಹಳ್ಳಿ, ಹರಪನಹಳ್ಳಿ, ಹಿರಿಯೂರು, ಸಾನೂರು, ಕುಂಟ ಈ ಪ್ರದೇಶಗಳಲ್ಲೆಲ್ಲಾ ತೆಂಗಿನ ನರ್ಸರಿಗೆ ಏರ್ಪಾಡಾಗಿದೆ. ಅಡಕೆ ನರ್ಸರಿಯನ್ನು ಹಿರಿಯೂರು, ಸಿರಸಿ, ಲಿಂಗದಹಳ್ಳಿಗಳಲ್ಲಿ ಮಾಡಿದ್ದೇವೆ. ಇದಲ್ಲದೆ ಕಾಂಪೋಸ್ಟನ್ನು ಹೆಚ್ಚಿಸುವ ದೃಷ್ಟಿಯಿಂದ ನಾನಾ experimental ಕಾರ್ಯಕ್ರಮಗಳನ್ನೂ ಯೋಜನೆಗಳನ್ನೂ ಕೈಕೊಳ್ಳಲಾಗಿದೆ. ಜೊತೆಗೆ ಪ್ರತಿಯೊಂದು ವಿಲೇಜ್ ಪಂಚಾಯಿತಿಗೂ 2,000ರೂಪಾಯಿಗಳ ಸಾಲವನ್ನು ಒದಗಿಸಿಕೊಟ್ಟು ಕಂಪೋಸ್ಟ್ ತಯಾರು ಮಾಡುವುದಕ್ಕೆ ಅನುಕೂಲ ಮಾಡಬೇಕೆಂದು ಯೋಚನೆಮಾಡಿದ್ದೇವೆ. ಮುಂದಿನ ವರ್ಷದಿಂದ ಇದು ಜಾರಿಗೆ ಬರಲಿದೆ. ಹಸುರು ಎಲೆ ಗೊಬ್ಬರದ ಬೀಜಗಳನ್ನು ಹೆಚ್ಚುಮಾಡುವ ದೃಷ್ಟಿಯಿಂದ ಅನೇಕ ಸೀಡ್ ಫಾರಮ್ಮುಗಳಿಗೆ ಬೀಜವನ್ನು ಒದಗಿಸಿ ಶೇಖರಿಸಬೇಕೆಂದು ಮಾಡಿದ್ದೇವೆ. ಈ ವರ್ಷ ಕೊನೆಯ ಪಕ್ಷ ಒಂದು ಕೋಟಿ ಸಸಿಗಳನ್ನು ಕೂಡ ಹಂಚಬೇಕೆಂದಿದ್ದೇವೆ.

ವ್ಯವಸಾಯದ ಇಲಾಖೆಯಲ್ಲಾಗಲಿ, ದನ ಸಾಂಗೋಪನಾ ಇಲಾಖೆಯಲ್ಲಾಗಲಿ ಅಥವಾ ಅರಣ್ಯ ಇಲಾಖೆಯಲ್ಲಾಗಲಿ ಮುಂದೆ ಎಷ್ಟೆಷ್ಟು ಸಿಬ್ಬಂದಿ ಬೇಕೆಂದು ನೋಡಿ ಅವರುಗಳನ್ನು ತರಪೇತು ಮಾಡುವುದಕ್ಕೆ ಏನಾದರೂ ಯೋಜನೆಯಿದೆಯೇ ಎಂದು ಮಾನ್ಯ ಸದಸ್ಯರು ಕೇಳಿದರು. ಈಗಾಗಲೇ Man-power ಯೋಜನೆಯೆಂದು ಆಗಿ, ಮುಂದಿನ ಯೋಜನೆಗಾಗಿ ಎಷ್ಟು ಜನಬೇಕು, ಅವರನ್ನು ಹೇಗೆ ತರಪೇತು ಮಾಡಬೇಕು ಎಂಬುದೆಲ್ಲಾ ತೀರ್ಮಾನವಾಗುತ್ತಿದೆ. ಇನ್ನು ಒಂದೆರಡು ತಿಂಗಳುಗಳಲ್ಲಿಯೇ ಇವರುಗಳ ಶಿಕ್ಷಣದ ವಿಷಯವನ್ನು ಯೋಚನೆ ಮಾಡುವವರಾಗಿದ್ದೇವೆ.

Animal Husbandry ವಿಷಯದಲ್ಲಿ ಮಾತನಾಡುತ್ತಾ cattle breederಗಳನ್ನೇಕೆ ಇಟ್ಟುಕೊಂಡಿದ್ದೀರಿ ಎಂದು ಕೆಲವರು ಪ್ರಶ್ನಿಸಿದ್ದಾರೆ. ಈಗ ನಮ್ಮ ಸಂಸ್ಥಾನದಲ್ಲಿ 14ಜನ Cattle Breeders ಇದ್ದಾರೆ. 11,561 ಎಕರೆಗಳನ್ನು ದನಗಳನ್ನು breed ಮಾಡುವುದಕ್ಕೆಂದು ಅಮೃತ ಮಹಲ್ ಕಾವಲಿನಿಂದ ಬಿಡಿಸಿಕೊಟ್ಟಿದೆ. ಆ ಅಗ್ರಿಮೆಂಟ್ ಪ್ರಕಾರ 1960-61ನೆಯ ಇಸವಿಯವರೆಗೂ ಅವರು ಷರತ್ತಿನ ಮೇರೆಗೆ ಅದನ್ನು ಅನುಭವಿಸಬಹುದಾಗಿದೆ. ಅವರೇನಾದರೂ ಬೇರೆಯವರಿಗೆ ಗುತ್ತಿಗೆಗೆ, ಲಾವಣಿಗೆ ಕೊಟ್ಟಿದ್ದರೆ ಮಾನ್ಯ ಸದಸ್ಯರು ಹೇಳಿದಂತೆ ಷರತ್ತಿಗೆ ವಿರೋಧವಾಗಿ ವರ್ತಿಸಿದ್ದರೆ ಅಂಥಾದ್ದನ್ನು ಕಂಡು ಹಿಡಿದು ನ್ಯೂನತೆಯನ್ನು ನಿವಾರಣೆಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಈ ಇಲಾಖೆಯವರ ಸಂಬಳದ ಸ್ಕೇಲುಗಳನ್ನು ಮಾನ್ಯ ಸದಸ್ಯರು ಹೆಚ್ಚಿಸಬೇಕೆಂದು ಕೇಳಿದ್ದಾರೆ. ಇತ್ತೀಚಿಗೆ 1957ರಲ್ಲಿ ತಾನೆ 100 ರೂಪಾಯಿ starting ಇದ್ದುದನ್ನು 120 ರೂಪಾಯಿಗಳಿಗೆ ಏರಿಸಿದ್ದೇವೆ. ಬೊಂಬಾಯಿನಲ್ಲಿ ಕೂಡ 120 ರೂಪಾಯಿಯಿದೆ. ಇನ್ನೊಂದು ಪ್ರಸಂಗ ಬಂದಾಗ ಇನ್ನೂ ಏನಾದರೂ ಸಂಬಳ ಹೆಚ್ಚುಮಾಡಲು ಸಾಧ್ಯವಿದೆಯೋ ಇಲ್ಲವೋ ಎಂಬುದನ್ನು ಯೋಚನೆಮಾಡುತ್ತೇವೆ. ನಮ್ಮ cattle farms ನಿಂದ ಬೇರೆ ಬೇರೆ ಕಡೆಗೆ ಉತ್ತಮ ತಳಿಯ ಹೋರಿ (breeding bulls)ಗಳನ್ನು ಒದಗಿಸುವ ಏರ್ಪಾಡು ಮಾಡಿದ್ದೇವೆ. ಕುರಿಯ ಸಾಕಾಣಿಕೆಯ ಅಭಿವೃದ್ಧಿಗಾಗಿ ಷೀಪ್‌ಫಾರಂಗಳೆಂದು ಹೊಸಪೇಟೆ, ಜಮಖಂಡಿ ಮತ್ತು ಕೊಳ್ಳೆಗಾಲದಲ್ಲಿ Rearing centreಗಳನ್ನು sanction ಮಾಡಿದ್ದೇವೆ. ಇದರಿಂದಾಗಿ ಉತ್ತಮ ತರದ ಉಣ್ಣೆ ಹೆಚ್ಚಿನ ಪ್ರಮಾಣದಲ್ಲಿ ದೊರೆಯುವಂತಾಗುತ್ತದೆ.

ಶ್ರೀ ಜಿ. ವೆಂಕಟೇಗೌಡ.—ಕೊಳ್ಳೇಗಾಲದಲ್ಲಿ ಎಲ್ಲಿ ಮಾಡಿದ್ದೀರಿ?

ಶ್ರೀ ಕೆ. ಎಫ್. ಪಾಟೀಲ್.—ಈಗ ಈ ಮೂರು ಜಾಗಗಳಿಗೂ ಸ್ಯಾಂಕ್ಷನ್ ಮಾಡಿದ್ದೇವೆ.

ಶ್ರೀ ಪರಮೇಶ್ವರಪ್ಪ.—ಹಳೆಯ ಮೈಸೂರಿನಲ್ಲಿದ್ದ ಷೀಪ್ ಫಾರಮ್ಮುಗಳು ಏನಾದುವು?

ಶ್ರೀ ಕೆ. ಎಫ್. ಪಾಟೀಲ್.—ಯಾವ ಕಾರಣದಿಂದಲೋ ಏನೋ ಅವೆಲ್ಲಾ 1951ನೆಯ ಇಸವಿಯಲ್ಲೇ ಮುಚ್ಚಲ್ಪಟ್ಟಿವೆ. ಕುರಿಗಳು ಯಾವ ಯಾವ ಕ್ಷೇತ್ರದಲ್ಲಿ ಹೆಚ್ಚಿಗೆ ಇವೆಯೋ ಅಲ್ಲಿ ಅವುಗಳನ್ನು ಅಭಿವೃದ್ಧಿಮಾಡಬೇಕು ಮತ್ತು ಉತ್ತಮ ಉಣ್ಣೆಯನ್ನು ತಯಾರಿಸಬೇಕೆಂದು ನಾವು ಈಗ ಈ ಮೂರು ಷೀಪ್ ಫಾರಮ್ಮುಗಳನ್ನು sanction ಮಾಡಿದ್ದೇವೆ.

ಶ್ರೀ ಪರಮೇಶ್ವರಪ್ಪ.—ಹಳೆಯ ಮೈಸೂರಿನಲ್ಲಿದ್ದ sheep farmಗಳ ಲೆಕ್ಕಪತ್ರಗಳೆಲ್ಲಾ ಆಡಿಟ್ ಆಗಿವೆಯೇ?

ಶ್ರೀ ಕೆ. ಎಫ್. ಪಾಟೀಲ್.—ಆಡಿಟ್ ಆಗಿವೆಯೋ ಇಲ್ಲವೋ ಆ ಮಾಹಿತಿ ನನಗೆ ಸಿಕ್ಕಿಲ್ಲ. ಆ ಮೇಲೆ ನೋಡಿ ಹೇಳುತ್ತೇನೆ. 1951ನೆಯ ಇಸವಿಯಲ್ಲಿ close ಮಾಡಿರುವುದರಿಂದ ಈಗ ನಾನು ಹೇಳಲಾರೆ.

5.30 P.M.

ಕುಣಿಗಲ್ ಸ್ಟಡ್ ಫಾರಂ ವಿಚಾರದಲ್ಲಿ ಒಂದು ಕಂಪೆನಿ ಮಾಡಿ ಅವರಿಗೆ ಅದನ್ನು ವಹಿಸಬೇಕೆಂದು ವಿಚಾರ ಮಾಡಿದ್ದೇವೆಂದು ಹೇಳಿದರು. ಈ ವಿಷಯದಲ್ಲೇನೂ ನಿರ್ಣಯ ಮಾಡಿಲ್ಲ. ಅನೇಕ ಸಲಹೆ, ಸೂಚನೆಗಳು ಸುಧಾರಿಸುವ ದೃಷ್ಟಿಯಿಂದ ಬಂದಿವೆ. ಕಂಪೆನಿ ಮಾಡಿದರೆ ಉಪಯೋಗವಾದೀತೆಂಬ ವಿಚಾರವಿದೆಯೇ ಹೊರತು ನಿರ್ಣಯ ಮಾಡಿಲ್ಲ ಎಂದು ಸ್ಪಷ್ಟವಾಗಿ ಹೇಳುತ್ತೇನೆ.

ಹಾಲಿನ ಡೈರಿ ಡೆವಲಪ್‌ಮೆಂಟ್ ವಿಷಯದಲ್ಲಿ ಆಡಳಿತ ಬೇಗ ಆಗುತ್ತಿಲ್ಲವೆಂಬ ವಿಚಾರ ಸ್ಪಷ್ಟವಾಗಿದೆ. ಆಗಲೇ ಇದನ್ನು ಸ್ಪಷ್ಟಪಡಿಸಿದ್ದೇನೆ. ಪ್ಲಾನ್ ಮತ್ತು ಎಸ್ಟಿಮೇಟ್ ರಿವೈಜ್ ಆಗಬೇಕಾಗಿರುವುದರಿಂದ ಅದು ಬರಲು ತಡವಾಗಿದೆ. ಬೇರೆ ಯಾವ ಕಡೆಯೂ ಮೈಸೂರಿನಲ್ಲಿ ಹಾಲಿನ ಕೇಂದ್ರ ತೆರೆಯಬೇಕೆಂಬ ಯೋಜನೆ ನಮ್ಮಲ್ಲಿಲ್ಲ, ಅಲ್ಲಲ್ಲಿ ಇರಬಹುದು. ಭದ್ರಾವತಿಯಲ್ಲಿ ತೆರೆಯುವುದು ಎರಡನೆಯ ಪಂಚವಾರ್ಷಿಕ ಯೋಜನೆಯಲ್ಲಿ ಅಡಕವಾಗಿದೆ. ಮೂರನೆಯ ವರ್ಷ ಮಾಡಬೇಕೆಂದಿತ್ತು, ಈ ವರ್ಷ ಅದು ಅಸ್ತಿತ್ವಕ್ಕೆ ಬರುವುದಕ್ಕೆ ಪೂರ್ವಸಿದ್ಧತೆ ಏಪ್ರಿಲ್ ಅನಂತರ ಮಾಡುತ್ತೇವೆ.

ಶ್ರೀ ಜಿ. ಬಿ. ಶಂಕರರಾವ್.—ಬಡ್ಜೆಟ್ಟಿನಲ್ಲಿ ಹತ್ತು ಪಶುವೈದ್ಯ ಸಂಸ್ಥೆಗಳನ್ನು ಸ್ಥಾಪಿಸುವುದಾಗಿ ಹೇಳಿದೆ. ಹಳೆಯ ಮೈಸೂರು ಮತ್ತು ಇತರ ಭಾಗಗಳನ್ನು ನೋಡಿದರೆ ಹಳೆಯ ಮೈಸೂರಿನಲ್ಲಿರುವುದರಲ್ಲಿ ಅರ್ಧ ಭಾಗ ಕೂಡ ಇತರಕಡೆ ಇಲ್ಲ. ಇಲ್ಲದಿರುವ ಕಡೆ ಹೆಚ್ಚು ಪ್ರಾರಂಭಿಸುವುದನ್ನು ಗಮನಿಸುತ್ತೀರಾ?

ಶ್ರೀ ಕೆ. ಎಫ್. ಪಾಟೀಲ್.—ಮಾನ್ಯ ಸದಸ್ಯರು ಹೇಳಿದ ಮಾತನ್ನು ಅಂಕಿ ಸಂಖ್ಯೆಗಳಿಂದ ನೋಡುವು

ದಾದರೆ ಹಳೆಯ ಮೈಸೂರಿನಲ್ಲಿ ದನಗಳ ಸಂಬಂಧದಲ್ಲಿ ಆಗಿರುವಷ್ಟು ಅನುಕೂಲ ಇತರ ಭಾಗಗಳಲ್ಲಿ ಆಗಿಲ್ಲ. ದನಗಳ ರೋಗ ನಿವಾರಣೆಗೆ ಬೇಕಾದ ಸೌಕರ್ಯ ಮುಂಬಯಿ ಮತ್ತು ಹೈದರಾಬಾದು ಕರ್ಣಾಟಕ ಗಳಲ್ಲಿ ಬಹಳ ಕಡಮೆಯಿದೆಯೆಂದು ಒಪ್ಪುತ್ತೇನೆ. ಇಲ್ಲಿ ಒಂದೊಂದು ತಾಲ್ಲೂಕಿಗೆ ಮೂರು ನಾಲ್ಕು ಕೇಂದ್ರಗಳಿದ್ದರೆ ಅಲ್ಲಿ ಒಂದೇ ಇದೆ. ಕೊರತೆಯನ್ನು ನೋಡಿ ಹೊಸದಾಗಿ ಎಲ್ಲಿ ತೆರೆಯಬೇಕೆಂದು ನಿರ್ಣಯ ಮಾಡುವಾಗ 25 ಸಾವಿರ ದನಗಳಿದ್ದು ಜನರು ಸಹಾಯ ಮಾಡಲು ಮುಂದೆ ಬರುವ ಕಡೆಗೆ ಪ್ರಾಶಸ್ತ್ಯ ಕೊಡಲಾಗುತ್ತದೆ. ಹಳೆಯ ಮೈಸೂರಿನಲ್ಲಿ ಜನರು ಬೇಗ ಮುಂದೆ ಬರುತ್ತಾರೆ. ಇತರಕಡೆ ಹಾಗೆ ಮುಂದೆ ಬರುವುದು ಕಷ್ಟ. ಮುಂಬಯಿ ಮತ್ತು ಹೈದರಾಬಾದು ಕರ್ಣಾಟಕಗಳಲ್ಲಿ ಹೆಚ್ಚು ಪಶುವೈದ್ಯ ಶಾಲೆಗಳನ್ನು ಒದಗಿಸುವ ವಿಚಾರವನ್ನು ಪರಿಶೀಲಿಸುತ್ತೇವೆ.

ಶ್ರೀ ಡಿ. ಟಿ. ಸೀತಾರಾಮರಾವ್.—ಎಲ್ಲಿ ಪಶುಗಳ ಸಾವು ಜಾಸ್ತಿಯೋ ಅಂತಹಕಡೆ ಜಾಸ್ತಿ ಪಶುವೈದ್ಯ ಶಾಲೆಗಳನ್ನು ಸ್ಥಾಪಿಸುತ್ತೀರೋ ಅಥವಾ ಸಾಯು ವುದು ಕಡಮೆಯಿರುವ ಕಡೆಯೂ ಮಾಡುತ್ತೀರೋ !

ಶ್ರೀ ಕೆ. ಎಫ್. ಪಾಟೀಲ್.—ಎಲ್ಲೆಲ್ಲಿ ದನಗಳಿಗೆ ವೈದ್ಯದ ಅನುಕೂಲತೆ ಬೇಕೋ ಅಲ್ಲೆಲ್ಲಾ ಮಾಡ ಬೇಕಾದ್ದು ಆವಶ್ಯಕ. ಶಿವಮೊಗ್ಗ ಜಿಲ್ಲೆಗೆ ಈ ವರ್ಷ ಮೂರು ಕೊಟ್ಟಿರುವುದರಿಂದ ತಾವು ಹಟ್ಟಿಗೆ ಕೇಳುವ ಕಾರಣವಿಲ್ಲ.

ಅರಣ್ಯಗಳ ವಿಷಯದಲ್ಲಿ ಗಿಡಗಳನ್ನು ಹೆಚ್ಚಾಗಿ ಬೆಳೆಸುತ್ತಿಲ್ಲವೆಂದು ಹೇಳಿದರು.

Sri G. VENKATAI GOWDA.—When are the Government getting the different Forest Laws unified ?

ಶ್ರೀ ಕೆ. ಎಫ್. ಪಾಟೀಲ್.—ಹೋದಸಲ ಬಾಳಿಗಾ ರವರು ಹೇಳಿದಾಗ ಅದನ್ನು ಈ ಸಲ ಹೇಳುತ್ತೇನೆಂದು ತಿಳಿಸಿದ್ದೆ. ಆದರೂ ಕೂಡ ಇನ್ನೂ ಮಸೂದೆಯನ್ನು ಮಂಡಿಸಲು ಸಾಧ್ಯವಾಗಿಲ್ಲ. ಏಪ್ರಿಲ್ ಆಖೈರಿನೊಳ ಗಾಗಿ ಈ ಅಧಿವೇಶನ ಮುಗಿಯುವುದರೊಳಗಾಗಿ ಇಂಟ್ರೊಡ್ಯೂಸ್ ಮಾಡಲು ಸಾಧ್ಯವೇ ಎಂದು ಯೋಚಿಸುತ್ತಿದ್ದೇವೆ. ಆದಷ್ಟು ಬೇಗ ಮಾಡುತ್ತೇವೆ.

1956-57 ರಲ್ಲಿ 16 ಸಾವಿರ ಎಕರೆ ನಾವು ಅಫಾರೆಸ್ಟ್ ಮಾಡಿದ್ದುಂಟು. 1957-58 ರಲ್ಲಿ 22 ಸಾವಿರ, 1958-59 ರಲ್ಲಿ 22,300, 1959-60 ರಲ್ಲಿ 35 ಸಾವಿರ ಗಿಡಗಳನ್ನು ಹಾಕಿವೆ. ಗುಲ್ಬರ್ಗ, ರಾಯಚೂರು ಮುಂತಾದ ಹೈದರಾಬಾದು ಕರ್ಣಾ ಟಕ ಪ್ರಾಂತದಲ್ಲಿ ಅರಣ್ಯ ಬೆಳೆಸಬೇಕೆಂದು ಶ್ರೀ ದೇಸಾಯಿಯವರು ಹೇಳಿದರು. ಅಲ್ಲಿ ಕೇವಲ 750 ಎಕರೆಯಲ್ಲಿ ಬೆಳೆಸುವುದಕ್ಕೆ ಹೋದ ವರ್ಷ ಸಾಧ್ಯ ವಾಗಿದೆ. ಹೆಚ್ಚು ಕ್ಷೇತ್ರ ದೊರೆಯಲಿಲ್ಲ. ಫಲವತ್ತಾದ ಕ್ಷೇತ್ರವನ್ನು ಅರಣ್ಯಕ್ಕಾಗಿ ಅಲ್ಲಿ ಕೊಡುತ್ತಿಲ್ಲ. ಸರ್ಕಾರದ ಕಡೆ ಭೂಮಿ ವ್ಯವಸಾಯಕ್ಕೆ ಬೇಕೆಂದು ಬೇಡಿಕೆ ಬಹಳವಾಗಿರುವುದರಿಂದ ಅಲ್ಲಿ ಅರಣ್ಯ ಹೆಚ್ಚಾಗಿ ಬೆಳೆಸುವುದಕ್ಕಾಗುವುದಿಲ್ಲ.

ಅನೇಕರಿಗೆ ಶರಾವತಿ ಮುಳುಗಡೆ ವಿಷಯದಲ್ಲಿರುವ ಅನುಮಾನವನ್ನು ನಿವಾರಣೆ ಮಾಡುತ್ತೇನೆ. ಮೊದಲು 1790 ಸಮುದ್ರ ಭಾಗಕ್ಕಿಂತ ಎತ್ತರವಿರುವ ಪ್ರದೇಶ ಮುಳುಗಡೆಯಾಗುತ್ತದೆ ಎಂದು ಗೊತ್ತಾಗಿತ್ತು. ಆಮೇಲೆ 1820 ರವರೆಗೆ ಮುಳುಗಡೆಯಾಗುವುದೆಂದು ಕಂಡುಬಂತು. ಮೊದಲು 1790 ರಲ್ಲಿ ಮುಳುಗಡೆ ಯಾಗುವುದರಲ್ಲಿರುವ ಗಿಡ ಕಡಿಯಲು ಟೆಂಡರ್ ಮಂಜೂರು ಮಾಡಿತ್ತು. ಆ ಬಗ್ಗೆ ಹಣ ಬಂದಿತ್ತು. ಕನ್ಸರ್ವೇಟರು ಮಾರ್ಕ್ ಮಾಡಿಕೊಡಬೇಕಾಗಿತ್ತು, ಲೈನು ಎಲ್ಲಿ ಹೋಗುತ್ತವೆಂದು ಹಳ್ಳ, ದಾರಿ, ದಿಣ್ಣೆ ನೋಡಿ ಮಾರ್ಕ್ ಮಾಡುವಾಗ್ಗೆ 23 ಚದರ ಮೈಲಿ ಕ್ಷೇತ್ರದಲ್ಲಿ ಸ್ವಲ್ಪ ತಪ್ಪಾಗಿರುವುದುಂಟು. ಆದ್ದರಿಂದ ಕಡಿಯುವಾಗ ಮಧ್ಯೆ ಇದ್ದ ಸಾಫ್ಟ್ ವುಡ್ ಕಡಿದಿರು ವುದುಂಟು. ಹಾಗೆ ಮಾಡಿದಾಗ ತಕ್ಕ ಡಿಪಾಜಿಟ್ ಇಟ್ಟಿಲ್ಲ, ಒಪ್ಪಂದದ ಷರತ್ತಿನ ಪ್ರಕಾರ ನಡೆದು ಕೊಂಡಿಲ್ಲ ಎಂದು ಕಟ್ಟಿಗೆ ಕೊಡಲಿಲ್ಲ. ಅಲ್ಲದೆ ಕಡಿದ ಮಾಲನ್ನು ಪುಕ್ಕಟ್ಟೆಯಾಗಿ ಕೊಟ್ಟಿಲ್ಲ. ಚೀಫ್ ಕನ್ಸರ್ವೇಟರು ಸ್ಥಳಕ್ಕೆ ಹೋಗಿ ನೋಡಿದ ಮೇಲೆ ಅಲ್ಲಿಂದ ಮಾಲನ್ನು ಸಾಗಿಸಬೇಕಾದರೆ ಬಹುದೂರ ಸಾಗಿಸಬೇಕಾಗುತ್ತದೆ, ಅದರಿಂದ ಲಾಭವಿಲ್ಲ, ಈಗ ಟೆಂಡರ್ ಯಾರಿಗೆ ಕೊಟ್ಟಿದೆ ಅವರಿಗೇ ವಹಿಸಿದರೆ ಲಾಭ ಎಂದು ಕಂಡುಬಂತು. ಅನಂತರ ಕಡಿದ ಮರವನ್ನು ಮೊದಲಿನ ದರದ ಪ್ರಕಾರ ಕಡಿದವರು ತೆಗೆದುಕೊಂಡರೇ ವಿನಾ ಮತ್ತೇನೂ ಇಲ್ಲ. 1959-60 ರಲ್ಲಿ ಕಡಿಯುವುದನ್ನು ನಿನ್ನೆ ವರ್ಷ ಕಡಿದರು, ಅಷ್ಟೆ. ಹೆಚ್ಚು ಕಡಮೆ ಇನ್ನೇನೂ ಇಲ್ಲ ಎಂದು ಸ್ಪಷ್ಟವಾಗಿ ತಿಳಿಸಬಯಸುತ್ತೇನೆ.

ಶ್ರೀ ಕೆ. ಪಿ. ರೇವಣ್ಣಸಿದ್ಧಪ್ಪ.—1,25,000 ರೂಪಾಯಿಗಳನ್ನು ಅವರಿಗೆ ಸರ್ಕಾರ ಸಾಲವಾಗಿ ಕೊಟ್ಟು ರೈತರ ಪರವಾಗಿ ಅವರನ್ನು ಅಮೇರಿಕಾಕ್ಕೆ ಕಳುಹಿಸಿತು. ಅವರು ಮಂಡಲ ಸಮಿತಿ ಸೆಕ್ರೆಟರಿಗಳು ಎಂಬುದು ಗಮನಕ್ಕೆ ಬಂದಿದೆಯೇ ?

ಶ್ರೀ ಕೆ. ಎಫ್. ಪಾಟೀಲ್.—ಅರಣ್ಯ ಇಲಾಖೆಯಿಂದ ಕೊಟ್ಟಿಲ್ಲ, ಬೇರೆ ಕಡೆಯಿಂದ ಕೊಟ್ಟಿರುವುದು ಗೊತ್ತಿಲ್ಲ.

ಶ್ರೀ ಜಿ. ವೆಂಕಟೇಗೌಡ.—ಸಾಯಿಲ್ ಕನ್ಸರ್ವೇಷನ್ ಸ್ಕೀಂ 75 ಸಾವಿರ ಎಕರೆಗಳಲ್ಲಿ ಜಾರಿಗೆ ಬರಬೇ ಕೆಂದು ಹೇಳಿದರೆ 19 ಸಾವಿರ ಎಕರೆಗಳಲ್ಲಿ ಕೂಡ ಬಂದಿಲ್ಲ.

ಶ್ರೀ ಕೆ. ಎಫ್. ಪಾಟೀಲ್.—ಅದು ಇಡಿಯ ಸಂಸ್ಥಾ ನಕ್ಕೆ ಅನ್ವಯಿಸುವುದಿಲ್ಲ. ಮುಂಬಯಿ ಪ್ರದೇಶದಲ್ಲಿ ಮಾತ್ರ ಈ ದಿವಸ ಹಳೆಯ ಕಾನೂನು ಪ್ರಕಾರ ಕೆಲಸ ವಾಗುತ್ತಿದೆ. ಸರ್ವೆ ಮಾಡಿ, ಕಾಂಟೂರ್ ಬಂಡ್ ಹಾಕಲು ಕಾನೂನಿನ ನೆರವು ಬೇಕು. ಕಾನೂನಿಲ್ಲದೆ ಮಾಡುವುದಕ್ಕಾಗುವುದಿಲ್ಲ. ಕಾನೂನು ಸಭೆಯ ಮುಂದಿದೆ. ಅಂಗೀಕಾರವಾದ ಕೂಡಲೇ ಕೆಲಸ ಮಾಡಬಹುದು. ತುಮಕೂರು, ಚಿತ್ರದುರ್ಗ ಜಿಲ್ಲೆ ಗಳಲ್ಲಿ ನಾವು ನೇಮಿಸಿರುವ ಆಫೀಸರುಗಳು ಸರ್ವೆಗೆ ಸಿದ್ಧಮಾಡಿ ಕಾನೂನು ಜಾರಿಗೆ ಬಂದಮೇಲೆ ಒಡ್ಡು ಹಾಕುತ್ತಾರೆ.

ಶ್ರೀ ಸಿ. ಕೆ. ರಾಜಯ್ಯಶೆಟ್ಟಿ.—23 ಲಕ್ಷ fallow land ಇವೆ ; ಅವಕ್ಕೆ ಮಾಡಬಹುದಲ್ಲವೆ ?

ಶ್ರೀ ಕೆ. ಎಫ್. ಪಾಟೀಲ್.—Fallow lands ಮತ್ತು forest lands ಇದಕ್ಕೆ soil conservation ಮಾಡುವದಕ್ಕೆ contour trenches ಮಾಡಿ soil conservationಕ್ಕಾಗಿ ಗಿಡಗಳನ್ನು ಹಚ್ಚುವ ಕೆಲಸವನ್ನು ಫಾರೆಸ್ಟ್ ಡಿಪಾರ್ಟ್‌ಮೆಂಟಿನವರು ಮಾಡುತ್ತಾರೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ವೆಟರಿನರಿ ಕಾಲೇಜನ್ನು ಎಷ್ಟು ದಿವಸಗಳಲ್ಲಿ ಮುಗಿಸುತ್ತೀರಿ ?

ಶ್ರೀ ಕೆ. ಎಫ್. ಪಾಟೀಲ್.—ಅದೇ ಚಿಂತೆ ನಮಗೂ ಆಗಿದೆ. ಹಾಗೂ ಹೀಗೂ ಪ್ರಯತ್ನಮಾಡಿ ಎರಡು ಟೆಂಪರರಿ ಹಾಲ್ಸ್ ಕಟ್ಟಿಸುವುದಕ್ಕೆ ಪ್ರಯತ್ನ ಮಾಡಿದ್ದೇವೆ. ಈ ಬಿಲ್ಡಿಂಗ ಕಟ್ಟುವದಕ್ಕೆ ಸೈಟ್ ಸೆಲೆಕ್ಷನ್ ಆಗಿದೆ. ಏಳು ಲಕ್ಷ ರೂಪಾಯಿಗಳವರೆಗೆ ಇರುವ plans and estimates ಬಂದಿವೆ. ಇದು ಒಟ್ಟು ಇಪ್ಪತ್ತಾರು ಲಕ್ಷ ರೂಪಾಯಿಗಳ ಸ್ಕೀಮ್ ಇದೆ. ಕೇಂದ್ರ ಸರಕಾರದವರು ಶೇಕಡಾ ಇಪ್ಪತ್ತರಷ್ಟು ಹಣ ಕೊಡುತ್ತಾರೆ. ಈ ಯೋಜನೆಯನ್ನು ಕಾರ್ಯ ರೂಪದಲ್ಲಿ ತರುವುದಕ್ಕೆ ಪ್ಲಾನ್ಸ್ ಅಂಡ್ ಎಸ್ಟಿಮೇಟ್ಸು ತಯಾರಾಗುವುದು ತಡವಾಗಿದೆ. ಅವು ಬಂದನಂತರ ಮಾಡುತ್ತೇವೆ.

ಶ್ರೀ ಜಿ. ಬಿ. ಶಂಕರರಾವ್.—Afforestation ಮಾಡುವಂಥಾ ಧೋರಣೆ ಏನು ಇದೆಯೋ ಅದನ್ನು ಯಾವ ಭಾಗದಲ್ಲಿ ಮಾಡುತ್ತೀರಿ?

ಶ್ರೀ ಕೆ. ಎಫ್. ಪಾಟೀಲ್.—ಈ afforestation ಬಗ್ಗೆ ಯಾವ ದೃಷ್ಟಿಯಿಂದ ಮಾಡಲಾಗುವುದು ಎಂಬುದನ್ನು ಹೇಳುವುದಾದರೆ ಎಲ್ಲಿ ಅರಣ್ಯ ಕ್ಷೇತ್ರ ಕಡಮೆಯಾಗಿದೆಯೋ ಎಲ್ಲಿ ಬೋಳಗುಡ್ಡ ಇದ್ದು ಗಿಡಗಳು ಬೆಳೆಯುತ್ತಾ ಇಲ್ಲವೋ ಅಂಥ ಪ್ರದೇಶದಲ್ಲಿ ಗಿಡಗಳನ್ನು ಹೆಚ್ಚಾಗಿ ಬೆಳೆಸಲು ಪ್ರಯತ್ನಿಸಲಾಗುವುದು. ಗಿಡಗಳು ಇಲ್ಲದೇ ಇದ್ದರೆ ಬಿಸಿಲು ಹೆಚ್ಚಾಗಿ ಪೈರು ಕೆಟ್ಟು ಹೋಗುತ್ತದೆ. ಎಲ್ಲಿ fuel ಇರುವುದಿಲ್ಲವೋ ಅಂಥಲ್ಲಿ ಗಿಡಗಳನ್ನು ಹೆಚ್ಚಾಗಿ ಬೆಳೆಸಲಾಗುವುದು. ಅರಣ್ಯವಿದ್ದಲ್ಲಿ exploit ಮಾಡಲಾಗುವುದು. ಉದಾಹರಣೆಗಾಗಿ ಶಿವಮೊಗ್ಗ, ಕೊಡಗು ಮತ್ತು ಉತ್ತರ ಕನ್ನಡ ಜಿಲ್ಲೆಗಳ ಅರಣ್ಯದಲ್ಲಿ ಒಳ್ಳೆಯ ಮರಗಳನ್ನು ಎಂದರೆ ಟೀಕ್ ಗಿಡಗಳನ್ನು ಬೆಳೆಸುತ್ತೇವೆ. ಈ ವರ್ಷ ಕಪ್ಪದಗುಡ್ಡದಲ್ಲಿ ಒಂದು ಸಾವಿರ ಎಕರೆ afforestation ಮಾಡುತ್ತೇವೆ. ಧಾರವಾಡ ಜಿಲ್ಲೆಗೆ ಹೋದರೆ ಇದನ್ನು ನೋಡಬಹುದು. ಬೋಳಗುಡ್ಡದಲ್ಲಿ ಎಲ್ಲಿ ಮಣ್ಣು ಹರಿದು ಹೋಗುತ್ತದೆಯೋ ಅಂಥಲ್ಲಿ ಮಾಡುತ್ತೇವೆ. ಈ afforestation ಮಾಡುವುದರಲ್ಲಿ soial conservation ಮಾಡುವುದು ಒಂದು ದೃಷ್ಟಿ ಇದ್ದು climatic conditions ಮತ್ತು fuel supply ಈ ದೃಷ್ಟಿಯನ್ನು ಇಟ್ಟುಕೊಂಡು ಮಾಡಲಾಗುತ್ತದೆ.

ಶ್ರೀ ಜಿ. ಬಿ. ಶಂಕರರಾವ್.—ಎಲ್ಲಿ ಬೋಳ ಭೂಮಿ ಇದೆಯೋ ಅಲ್ಲಿ climatic conditions suit ಆಗುವುದಿಲ್ಲ. ಅಲ್ಲಿ ಅರಣ್ಯವಿರುವುದಿಲ್ಲ.

ಶ್ರೀ ಕೆ. ಎಫ್. ಪಾಟೀಲ್.—ಮಾನ್ಯ ಸದಸ್ಯರು ಯಾವುದೋ ಕಾಲಕ್ಕೆ ಅಲ್ಲಿ ಅರಣ್ಯವಿತ್ತು ಎಂದು ಹೇಳುವದಾದರೆ ಶ್ರೀ ದೇಸಾಯಿಯವರು ಹೇಳಿದ ಹಾಗೆ ಒಂದು ಗಿಡ ಇಲ್ಲ ಆದರೆ ಅರಣ್ಯ ಇದ್ದಿತು ಎಂಬುದನ್ನು ನಾನು ಒಪ್ಪುತ್ತೇನೆ.

Sri M. RAMAPPA.—I would like to know what is the policy of Government in the matter of State Trading?

ಶ್ರೀ ಕೆ. ಎಫ್. ಪಾಟೀಲ್.—Food production ಮತ್ತು food distributicn ಇವೆರಡೂ ಬೇರೆ ಬೇರೆ ವಿಷಯವಾಗಿವೆ. ಈ ಡಿಮ್ಯಾಂಡು 30ನೆಯ ತಾರೀಖಿನ ದಿನ ಬರುತ್ತದೆ. ಆಗ್ಗೆ ಈ ವಿಷಯದ ಬಗ್ಗೆ ಹೇಳುತ್ತೇನೆ.

ಇನ್ನು ಅನೇಕ ವಿಷಯಗಳು ಇದ್ದರೂ ಕೂಡ ವೇಳೆಯ ಅಭಾವದ ಮೂಲಕ, ಇಷ್ಟುಹೇಳಿ, ನನ್ನ ಭಾಷಣವನ್ನು ಮುಗಿಸುತ್ತೇನೆ.

Sri V. SRINIVAS SHETTY.—The Hon'ble Minister was pleased to say that the number of seed farms has been reduced to 56, and we find that each region has got a certain number of seed farms allotted. Is the Government going to stick to the plan or is it going to make any variation in it?

Sri K. F. PATIL.—As I told the Hon'ble member it is only a rough plan, ಅದರಲ್ಲಿ ಹೆಚ್ಚು ಆಗಬಹುದು ಅಥವಾ ಕಡಮೆಯೂ ಆಗಬಹುದು.

ಶ್ರೀ ಜಿ. ಎನ್. ಪುಟ್ಟಣ್ಣ.—ತುಮಕೂರಿನಲ್ಲಿರುವ ಫರ್ನಿಚರ್ ತಯಾರುಮಾಡುವಂತಹದರ ಬಗ್ಗೆ ವಿವರಗಳನ್ನು ಹೇಳುತ್ತೀರಾ?

ಶ್ರೀ ಕೆ. ಎಫ್. ಪಾಟೀಲ್.—ಇದರ ಬಗ್ಗೆ ಸಹಕಾರ ಮಂತ್ರಿಗಳಿಗೆ ಸೂಚನೆ ಮಾಡುತ್ತೇನೆ. ಸಹಕಾರಿ ದೃಷ್ಟಿಯಿಂದ ಈ ಉದ್ಯಮವನ್ನು ಬೆಳೆಸಿಕೊಂಡು ಹೋಗಬೇಕು. ಅರಣ್ಯದಲ್ಲಿ ಮರಗಳನ್ನು ಬೆಳೆಸುವುದು ಒಂದು ಉದ್ಯಮವಾದರೆ ಅಂಥ ಮರದಿಂದ finished goods ನಾವೇ ತಯಾರು ಮಾಡುವುದು ಒಳ್ಳೆಯದಲ್ಲ. ಕೋ-ಆಪರೇಟಿವ್ ದೃಷ್ಟಿಯಿಂದ ಈ ಉದ್ಯಮವನ್ನು ಬೆಳೆಸುವುದಕ್ಕೆ ವಿಚಾರ ಮಾಡಬೇಕು. ತುಮಕೂರಿನ ಈ ಉದ್ಯಮವನ್ನು ಮುಚ್ಚುವುದಿಲ್ಲ ಎಂದು ಭರವಸೆಯನ್ನು ಕೊಡುತ್ತೇನೆ. ಈ ಉದ್ಯಮವನ್ನು ಯಾರು ನಡೆಸಬೇಕು ಎಂಬುದು ಅದೊಂದು ಬೇರೆ ವಿಷಯ. ಸಹಕಾರಿ ಸಂಘಗಳ ಮುಖಾಂತರ ಇದನ್ನು ನಡೆಸುವುದು ಒಳ್ಳೆಯದೆಂದು ಹೇಳುತ್ತೇನೆ.

Sri GAJANANA PANDIT.—Will the Hon'ble Minister please explain the position regarding fisheries?

Sri K. F. PATIL.—The Hon'ble Member has referred to four points: introduction of improved methods of fishing; exploitation of deep water fishing; development of fishing harbours; providing facilities of storage, transport, etc.

Ice ಮತ್ತು cold storage ವ್ಯವಸ್ಥೆಯನ್ನು ಕಾರವಾರ ಮತ್ತು ಮಂಗಳೂರಿನಲ್ಲಿ ಮಾಡಿದ್ದೇವೆ. Ice ಮತ್ತು cold storage supplyನ್ನು ಬೆಲೇಕೆರೆ, ಕುಂದಾಪುರ ಮಲ್ಪೆಯಲ್ಲಿ ಮಾಡುತ್ತೇವೆ. ಡೀಜೆಲ್ ಟ್ರಾಕ್ಟರ್ ಫಿಷ್‌ರೀಜ ಒಂದೊಂದು ಟ್ರಾಕ್ಟರ್ ಕೊಡಬೇಕೆಂದು ವಿಚಾರ ಮಾಡಿದ್ದೇವೆ. ಬೊಂಬಾಯಿನಲ್ಲಿ ಆರುನೂರು ಬೋಟ್ಸ್ ತಯಾರು ಮಾಡಿದ್ದಾರೆ. ನಮ್ಮಲ್ಲಿ ಈ ಕೆಲಸ ತಡವಾಗುತ್ತಿದೆ. ಇಲ್ಲಿಯವರೆಗೆ ಐದು ಬೋಟ್ಸ್ ಕಟ್ಟುವುದಕ್ಕೆ ಸಾಧ್ಯವಾಗಿದೆ. ರೊಕ್ಕದ ಕೊರತೆಯಿಲ್ಲದಿದ್ದರೂ ಹೆಚ್ಚು ಬೋಟ ಕಟ್ಟುವುದಕ್ಕೆ ಆಗಿಲ್ಲ, ತಡವಾಗುತ್ತಿದೆಂದು ಹೇಳಬಯಸುತ್ತೇನೆ.

ಫಿಷರೀಜ್ ಸಲುವಾಗಿ ರೋಡ ಸೌಕರ್ಯ ಒದಗಿಸಿಕೊಡುವುದರ ಸಲುವಾಗಿ ಸರ್ವೆ ಮಾಡಿಸಲಾಗಿದೆ. ಒಟ್ಟು ಇಪ್ಪತ್ತೆಂಟು ಲಕ್ಷ ರೂಪಾಯಿಗಳವರೆಗೆ ಸರ್ವೆ

ಯಾಗಿದೆ. ಈ ವರ್ಷ ಮಾಡತಕ್ಕ ಕೆಲಸದಲ್ಲಿ ಅರ್ಧದಷ್ಟು ಮಾತ್ರ ಆಗಿದೆ. ಇನ್ನೂ ಅರ್ಧದಷ್ಟು ಉಳಿದಿದೆಂದು ವಿಷಾದದಿಂದ ಹೇಳುತ್ತೇನೆ.

ನಮ್ಮ ರಾಜ್ಯದ ಪಶ್ಚಿಮ ಕರಾವಳಿಯಲ್ಲಿ ಬಹು ದೊಡ್ಡ ಕ್ಷೇತ್ರ ಮೀನುಗಾರಿಕೆಯ ಸಂಪತ್ತಿನಿಂದ ಕೂಡಿದೆ. ಈ ಮತ್ಸ್ಯ ಸಂಪತ್ತನ್ನು ಉಪಯೋಗಿಸಿ, ಅದನ್ನು ಪರದೇಶಕ್ಕೆ ಕಳಿಸಿದರೆ ಡಾಲರ್ ಸಂಪಾದನೆ ಮಾಡತಕ್ಕಂಥ ಒಂದು ಸವಲತ್ತು ಇದೆ. ಇದನ್ನು ಪೂರ್ಣವಾಗಿ ಉಪಯೋಗಿಸಿಕೊಳ್ಳುವುದು ಆಗಿಲ್ಲವೆಂದು ವಿಷಾದದಿಂದ ಹೇಳುತ್ತೇನೆ. ಈ ಮತ್ಸ್ಯ ಸಂಪತ್ತು ಬೇಗ ಉಪಯೋಗವಾಗುವ ಹಾಗೆ ಪ್ರಯತ್ನ ಮಾಡುತ್ತೇವೆ. ಇನ್ನು fishing harbour ಮಾಡುವ ವಿಷಯದಲ್ಲಿ ತಜ್ಞರಿಂದ ಅದನ್ನು ಸರ್ವೆ ಮಾಡುವುದು ನಡೆದಿದೆ. ಮಂಗಳೂರು ಮತ್ತು ಮಾರ್ಪೆಯಲ್ಲಿ ಮಾಡಬಹುದು. ಸರ್ವೆ ಮಾಡಿದ್ದಾರೆ. ಆದರೆ ಮಂಗಳೂರಿನಲ್ಲಿ ಸರ್ವೆ ಮಾಡುವುದಕ್ಕೆ ಹೋದಾಗ ಅದನ್ನು ಬೇರೆ ಕಡೆಗೆ ಹಾಕುವ ಪ್ರಶ್ನೆ ಬಂದಿತ್ತು. ಮಾರ್ಪೆ ಸರ್ವೆ ಇನ್ನೂ ಆಗಿಲ್ಲ. ಈ Fishing Harbour ಎಲ್ಲಿ ಮಾಡಬೇಕು ಎಂಬುದು ಮತ್ತು major port ಯಾವುದನ್ನು ಮಾಡಬೇಕು ಎಂಬುದು ಒಂದಕ್ಕೊಂದು ಸಂಬಂಧವಿದೆ. ಒಂದೇ ಕ್ಷೇತ್ರದಲ್ಲಿ ಎರಡೂ ಬರಬಾರದು ಎನ್ನುವ ದೃಷ್ಟಿಯಿಂದ ಕೊನೆಯ ನಿರ್ಣಯವಾಗುವುದು ತಡವಾಗಿದೆ. ಕೆಲಸ ಪೂರ್ತಿಯಾಗದೆ ಉಳಿದಿದೆ.

ಅಲ್ಲದೆ ಹುಬ್ಬಳ್ಳಿಯಲ್ಲಿ ಮತ್ತು ಮಂಡ್ಯದಲ್ಲಿ ಒಂದೊಂದು ಕೋಲ್ಡ್ ಸ್ಟೋರೇಜ್ ಏರ್ಪಡಿಸಬೇಕೆಂಬ ವಿಚಾರವೂ ಕೂಡ ನಡೆದಿದೆ ಎಂದು ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ.

ಶ್ರೀ ಆಲೂರು ಹನುಮಂತಪ್ಪ.—ಬೆಂಗಳೂರು ಪಟ್ಟಣದಲ್ಲಿ ಹಾಲಿನ ಕ್ಷೇತ್ರವನ್ನು ಏರ್ಪಡಿಸಬೇಕೆಂದು ಮಾಡಿದ ಯೋಚನೆ ಯಾವ ಮಟ್ಟದವರೆಗೂ ಕಾರ್ಯರೂಪದಲ್ಲಿ ನಡೆದಿದೆ?

ಶ್ರೀ ಕೆ. ಎಫ್. ಪಾಟೀಲ್.—ಆಗಲೇ ಹೇಳಿದೆ plant ಕೊಳ್ಳುವ ಸಲುವಾಗಿ correspondence ನಡೆದದ್ದು ಉಂಟು. ಮತ್ತು ಕಟ್ಟಡದ ಕೆಲಸ ಸ್ವಲ್ಪ ತಡವಾಗಿದೆ. Revised plan and estimate ಆಗಿದೆ ಎಂದು ಆಗಲೇ ಹೇಳಿದೆ.

Sri A. S. PATIL.—All the research farms in Bombay Karnatak have been neglected by the Agricultural Department. I want to know what action Government has taken to rehabilitate them.

ಶ್ರೀ ಕೆ. ಎಫ್. ಪಾಟೀಲ್.—ಮುಂಬೈ ಕರ್ನಾಟಕದಲ್ಲಿ ಕೆಲವು ಮಟ್ಟಿಗೆ ಅಲಕ್ಷ್ಯವಾಗಿದೆ ಎಂಬ ದೂರನ್ನು ನಾವು ಲಕ್ಷಿಸಿ ಒಂದು ತಜ್ಞರ ಸಮಿತಿಯನ್ನು ಏರ್ಪಾಡು ಮಾಡಿ ಕಳುಹಿಸುತ್ತೇವೆ. ಪೇಲ್ಮನೆಯಲ್ಲೂ ಕೂಡ ಸಲಹೆ ಬಂದಿದೆ. ಒಂದು ಸಮಿತಿಯನ್ನು ಬೇಗ ನಿಯಮಿಸಿ ಮುಂಬೈ ಕರ್ನಾಟಕ, ಮತ್ತು ಹೈದರಾಬಾದು ಕರ್ನಾಟಕದಲ್ಲಿ ಯಾವ ರೀತಿ ಕೆಲಸ ಆಗಬೇಕೆಂಬುದನ್ನೂ ಪರಿಶೀಲನೆ ಮಾಡುತ್ತೇವೆ.

†ಶ್ರೀ ಮಾಲ ಮರಿಯಪ್ಪ (ಸಹಕಾರ ಮಂತ್ರಿಗಳು).—ಸ್ವಾಮಿ, ಸಹಕಾರ ಇಲಾಖೆಯ ಬೇಡಿಕೆಯ ಸಂಬಂಧದಲ್ಲಿ ಮಾನ್ಯ ಸದಸ್ಯರು ಕೆಲವು ರಚನಾತ್ಮಕವಾದ ಸಲಹೆಗಳನ್ನು ನೀಡಿದ್ದಾರೆ. ಹಾಗೂ ಕೆಲವು ಹೊಸ ವಿದ್ಯಮಾನಗಳ ವಿಚಾರದಲ್ಲಿ ತುಂಬ ಶಂಕೆಯನ್ನು ವ್ಯಕ್ತಪಡಿಸುತ್ತಾ ಕೊಂಚ ಟೀಕೆಗಳನ್ನು ಸಹ ಮಾಡಿದ್ದಾರೆ.

ಒಬ್ಬ ಸದಸ್ಯರು.—ನಿಮಗೂ ಶಂಕೆ ಇದೆ.

ಶ್ರೀ ಮಾಲ ಮರಿಯಪ್ಪ.—ಇಲ್ಲಿ ನಾನು ಹೇಳುವುದನ್ನು ಕೇಳಿದರೆ ನನಗೆ ಏನೂ ಶಂಕೆ ಇಲ್ಲ ಎನ್ನುವುದು ತಮಗೇ ಗೊತ್ತಾಗುತ್ತದೆ. ಸುಮಾರು 55 ವರ್ಷಗಳಿಂದ ಈ ದೇಶದಲ್ಲಿ ಸಹಕಾರ ಇಲಾಖೆ ಕೆಲಸ ಮಾಡಿಕೊಂಡು ಬಂದಿದೆ. ಈ ದೇಶದಲ್ಲಿ ನಾನಾ ವಿಧವಾದ ಸಹಕಾರ ಸಂಘಗಳು ಸುಮಾರು 12,000 ಚಿಲ್ಲರೆ ಸಹಕಾರ ಸಂಘಗಳು ಇವೆ. ಈ ಸಹಕಾರ ಸಂಘಗಳಲ್ಲಿ ಕೈಗಾರಿಕೆಗೆ ಸಂಬಂಧಪಟ್ಟವು, ಗೃಹ ನಿರ್ಮಾಣಕ್ಕೆ ಸಂಬಂಧಪಟ್ಟವು, ಹಾಗೂ ನೇಕಾರರಿಗೆ ಸಂಬಂಧಪಟ್ಟವು ಇತ್ಯಾದಿ ಎಲ್ಲಾ ಸೇರಿವೆ. ಸುಮಾರು ಎಂಟುಸಾವಿರ ಚಿಲ್ಲರೇ ಸೊಸೈಟಿಗಳು ಗ್ರಾಮದಲ್ಲಿ ವಾಸಮಾಡತಕ್ಕ ರೈತರ ಉಪಯೋಗಕ್ಕೋಸ್ಕರ ಉದ್ದೇಶವನ್ನು ಇಟ್ಟುಕೊಂಡು ಕೆಲಸಮಾಡುತ್ತಾ ಇವೆ. ಸುಮಾರು 8,000 ಆರೀತಿಯಾದ ಸೊಸೈಟಿಗಳಲ್ಲಿ ಈ ಸಭೆಯ ಮಾನ್ಯ ಸದಸ್ಯರಿಗೆ ಗೊತ್ತಿರುವ ಹಾಗೆ ಕೆಲವು ಸೊಸೈಟಿಗಳು ಕೆಲಸ ಮಾಡುತ್ತಿವೆ. ಕೆಲವು ಸೊಸೈಟಿಗಳ ಕಾರ್ಯಭಾಗ ಅನೇಕ ವರ್ಷಗಳಿಂದ ನಿಂತುಹೋಗಿದೆ. ಸುಮಾರು 6,000 ಗ್ರಾಮಗಳಿಗೆ ಈ ಸೊಸೈಟಿಗಳು ಸೇವೆಯನ್ನು ಸಲ್ಲಿಸುತ್ತಾ ಇವೆ. ಎರಡನೆಯ ಪಂಚವಾರ್ಷಿಕ ಯೋಜನೆಯಲ್ಲಿ ರೂರಲ್ ಕ್ರೆಡಿಟ್ ಸರ್ವೇ ಕಮಿಟಿ ಅವರ ಶಿಫಾರಸಿನ ಪ್ರಕಾರ ಈ ನಮ್ಮ ದೇಶದಲ್ಲಿ ಈ ಮೂರುವರ್ಷಗಳಿಂದ ಸುಮಾರು 496 ದೊಡ್ಡ ಪ್ರಮಾಣದ ಸಹಕಾರ ಸಂಘಗಳನ್ನು ಸ್ಥಾಪನೆ ಮಾಡಿದ್ದು ಆಗಿದೆ. ಈ 496 ಸಹಕಾರ ಸಂಘಗಳೂ ಕೂಡ ಬಹಳ ಯಶಸ್ವಿಯಾಗಿ ಕೆಲಸ ಮಾಡುತ್ತಾ ಇವೆ. ಹಾಗೆಯೇ ಸುಮಾರು 91 ತಾಲ್ಲೂಕು ಅಗ್ರಿಕಲ್ಚರಲ್ ಪ್ರಾಡ್ಯೂಸ್ ಮಾರ್ಕೆಟಿಂಗ್ ಸೊಸೈಟಿಗಳನ್ನು ಸಿದ್ಧ ಮಾಡಿದ್ದಾಗಿದೆ. ಇವುಗಳೂ ಸಹ ಬಹಳ ಚೆನ್ನಾಗಿ ಕೆಲಸ ಮಾಡುತ್ತಾ ಇವೆ. ಹಾಗೆಯೇ ಸುಮಾರು 2,000 ಸಣ್ಣ ಪ್ರಮಾಣದ ಸೊಸೈಟಿಗಳೂ ಸಹ ಬಹಳ ಯಶಸ್ವಿಯಾಗಿ ಕೆಲಸ ಮಾಡುವಂತೆ ಅವಕ್ಕೆ ಕೊಂಚ ಸರ್ಕಾರದ ಧನಸಹಾಯವನ್ನು ಸಹ ಕೊಡುವುದಕ್ಕೆ ಈ ಎರಡನೆಯ ಪಂಚವಾರ್ಷಿಕ ಯೋಜನೆಯಲ್ಲಿ ಅವಕಾಶವಿದೆ. ಆ ಸಹಾಯವನ್ನು ತೆಗೆದುಕೊಂಡು ಸುಮಾರು 2,000 ಸಣ್ಣ ಪ್ರಮಾಣದ ಸಹಕಾರ ಸಂಘಗಳೂ ಸಹ ಈ ರೈತರ ಅಭ್ಯುದಯವನ್ನು ಮತ್ತು ಅಭಿವೃದ್ಧಿಯನ್ನು ಸಾಧನೆ ಮಾಡುತ್ತವೆ. ಪುನಃ ಹೇಳತಕ್ಕದ್ದು ಅಗತ್ಯವಿಲ್ಲದೆ ಹೋದರೂ ಸಹ ಸದ್ಯಕ್ಕೆ ಅಗತ್ಯವಾದುದನ್ನು ಮಾತ್ರ ನಾನು ಹೇಳುತ್ತೇನೆ. ಈ ಮೂರು ವರ್ಷಗಳಿಂದ ಈ ಸಹಕಾರ ಸಂಘಗಳೂ ಸುಮಾರು ಆರುಕೋಟಿ ರೂಪಾಯಿಗಳ ಅಲ್ಪಾವಧಿ ಸಾಲ, ಸುಮಾರು ಒಂದು ಕೋಟಿ ರೂಪಾಯಿಗಳ ಮಧ್ಯವರ್ತಿಸಾಲ ಮತ್ತು ಸುಮಾರು 75ಲಕ್ಷ ರೂಪಾಯಿಗಳ ದೀರ್ಘಾವಧಿ ಸಾಲಗಳನ್ನು ಹಂಚಿವೆ. ಅಷ್ಟೇ ಅಲ್ಲ ಅಲ್ಪಾವಧಿ ಸಾಲವನ್ನು ಹಂಚಿ ಸಕಾಲಕ್ಕೆ ವಸೂಲು ಮಾಡತಕ್ಕಂಥ ವ್ಯವಸ್ಥೆಯನ್ನು ಬೆಳಸಿಕೊಂಡು ಬಂದಿದೆ. ಹಾಗೂ ತೆಗೆದುಕೊಂಡಂಥ ಹಣವನ್ನು ಸಲೀಸಾಗಿ ಸಕಾಲಕ್ಕೆ ಕೊಡತಕ್ಕಂಥ ಒಂದು ನಡವಳಿಕೆಯನ್ನು ಸಹ ರೈತರಲ್ಲಿ ಅವು ಸಾಧನೆ ಮಾಡಿವೆ. ಹಿಂದಿನ ಸಹಕಾರ ಸಂಘಗಳ ಅನುಭವವಿರತಕ್ಕವರೆಲ್ಲರಿಗೂ ಗೊತ್ತಿದೆ. ಈ

(ಶ್ರೀ ಮಾಲಿ ಮರಿಯಪ್ಪ)

ಸೊಸೈಟಿಗಳಲ್ಲಿ ಬಾಕಿಗಳು ಸಲೀಸಾಗಿ ಪಾವತಿಯಾಗುತ್ತಾ ಇರಲಿಲ್ಲ. ಎರಡನೆಯ ಪಂಚವಾರ್ಷಿಕ ಯೋಜನೆಯಲ್ಲಿ ಈ ವಿಧವಾದ ಸಾಲಗಳ ವಿಚಾರದಲ್ಲಿ ರೈತರ ಸಹಕಾರವನ್ನು ನೋಡಿದರೆ ಬಹಳ ಚೆನ್ನಾಗಿ ರೈತರು ಈ ಸಹಕಾರ ಸಂಘಗಳಲ್ಲಿ ಹೊಂದಾವಣಿಕೆ ಆಗಿ ಕೆಲಸಕಾರ್ಯಗಳನ್ನು ಮಾಡುತ್ತಾ ಇದ್ದಾರೆ. ಅವರು ತಮ್ಮ ಅಭಿವೃದ್ಧಿಯನ್ನೂ ಸಹ ಸಾಧಿಸಿಕೊಳ್ಳುತ್ತಾ ಇದ್ದಾರೆ. ಇಷ್ಟೇ ಅಲ್ಲ ಎರಡನೆಯ ಪಂಚವಾರ್ಷಿಕ ಯೋಜನೆಯಲ್ಲಿ ಗೃಹನಿರ್ಮಾಣ ಸಂಘಗಳಿಗೂ ಸಹ ಸುಮಾರು 12 ಕೋಟಿ ರೂಪಾಯಿಗಳವರೆಗೂ ಈ ದೇಶದಲ್ಲಿ ಹಂಚಿದ್ದಾರೆ.

6-00 P.M.

ಬಾಕಿಗಳು ಸಲೀಸಾಗಿ ಬರುತ್ತಿವೆ. ಆದರೂ ಸಹ ಅನೇಕ ಮಾನ್ಯ ಸದಸ್ಯರು ಸೊಸೈಟಿಗಳು ಸಮರ್ಪಕವಾಗಿ ಕೆಲಸ ಮಾಡುತ್ತಿಲ್ಲ ಎನ್ನುವ ಒಂದು ಮಾತನ್ನು ಹೇಳಿ ಅಭಿಪ್ರಾಯವನ್ನು ಸರಿಯಾಗಿ ವಿಶದೀಕರಿಸದೆ ಇರತಕ್ಕ ವಿಷಯವನ್ನು ಹಾಗೆಯೇ ಇಟ್ಟುಕೊಂಡ ಹಾಗೆ ಕಾಣುತ್ತದೆ. ಅದರಲ್ಲೂ ಮಾನ್ಯ ಸ್ನೇಹಿತರಾದಂಥ ಶ್ರೀ ಪುಟ್ಟಣ್ಣನವರು ತುಮಕೂರು ಜಿಲ್ಲೆಯಲ್ಲಿರತಕ್ಕ ಸೊಸೈಟಿಗಳೆಲ್ಲಾ ಸರಿಯಾಗಿ ಕೆಲಸ ಮಾಡುತ್ತಾ ಇಲ್ಲ; ತುಮಕೂರು ಜಿಲ್ಲೆಯಲ್ಲಿ ಸೊಸೈಟಿಗಳು ಕೆಟ್ಟಿರುವಷ್ಟು ಇನ್ನೆಲ್ಲಿಯೂ ಕೆಟ್ಟಿಲ್ಲವೆಂದು ಹೇಳಿದರು.

ಶ್ರೀ ಜಿ. ಎನ್. ಪುಟ್ಟಣ್ಣ.—ಇನ್ನೂ ಬೇರೆ ಬೇರೆ ಕಡೆಗಳಲ್ಲಿಯೂ ಕೆಟ್ಟಿವೆ.

ಶ್ರೀ ಮಾಲಿ ಮರಿಯಪ್ಪ.—ನಾನು ಹೇಳುವುದನ್ನು ಪೂರ್ತಿ ಕೇಳಿದರೆ ಚೆನ್ನಾಗಿರುತ್ತದೆ. ತುಮಕೂರು ಜಿಲ್ಲೆಯಲ್ಲಿ ಸೊಸೈಟಿಗಳು ಬಹಳವಾಗಿ ಕೆಟ್ಟಿವೆ ಎಂದು ಮಾನ್ಯ ಸದಸ್ಯರು ಆ ಒಂದು ಅಭಿಪ್ರಾಯಕ್ಕೆ ಬರುವುದಕ್ಕೆ ಮುಂಚೆ, ಸಂಸ್ಥಾನದಲ್ಲಿ ಅವುಗಳ ಅಂಕಿ ಅಂಶಗಳನ್ನು ತಮ್ಮ ಮುಂದೆ ಇಟ್ಟುಕೊಂಡು ಆ ತೀರ್ಮಾನಕ್ಕೆ ಬಂದಿದ್ದಾರೆಂದು ನಾನು ಹೇಳುವುದಕ್ಕಾಗುವುದಿಲ್ಲ. ಏಕೆಂದರೆ ತುಮಕೂರಿನಲ್ಲಿ ಕೇವಲ 16 ಸೊಸೈಟಿಗಳಿವೆ. ಅವುಗಳ ಆಡಳಿತದಲ್ಲಿ ಲೋಪದೋಷಗಳು ಕಂಡುಬಂದಿವೆ. ಆದರೆ ಸುಮಾರು 500 ಚಿಲ್ಲರೆ ಸೊಸೈಟಿಗಳು ತುಮಕೂರು ಜಿಲ್ಲೆಯೊಂದರಲ್ಲೇ ಇವೆ. ಆದ್ದರಿಂದ ಸಂಸ್ಥಾನದ ಇತರ ಜಿಲ್ಲೆಗಳಲ್ಲಿನ ಸೊಸೈಟಿಗಳನ್ನೆಲ್ಲಾ ದಾಮಾಷಾ ಪ್ರಕಾರ ಲೆಕ್ಕಹಾಕಿದರೆ ಇವೇನೂ ಅಷ್ಟು ಪ್ರಮಾದವಲ್ಲ. ನಾನಾದರೂ ಈ ಸೊಸೈಟಿಗಳ ವಿಚಾರದಲ್ಲಿ........

Sri G. N. PUTTANNA.—If the Hon'ble Minister yields, I want to say Sir, you have given a reply to my interpellation No. 114 and the statement you have furnished I have got with me. You may kindly go through that statement and after verification of your answers, you may reply tomorrow, if you have no time now.

Sri MALI MARIAPPA.—If you can contradict me in material particulars it will be useful. What is the use of simply drawing my attention to some answer given ?

Mr. SPEAKER.—Mr. Puttanna wants the reply to continue tomorrow.

Sri G. N. PUTTANNA.—I am sorry. Sir, I rise to a point of order. The Speaker had promised that he would close the proceedings by six everyday. Most of the peons and others who come here, take their food early in the day. Most of the people who come here are generally disgusted, and we are also done up.

Mr. SPEAKER.—There is no point of order in this. ಈ ರೀತಿ ಮಾಡಿದರೆ ಪಾಯಿಂಟ್ ಆಫ್ ಆರ್ಡರಿಗೆ ಬೆಲೆ ಇಲ್ಲದ ಹಾಗೆ ಆಗುತ್ತದೆ.

ಶ್ರೀ ಮಾಲಿ ಮರಿಯಪ್ಪ.—ಹಾಗೂ ಮಾನ್ಯ ಶ್ರೀ ಪುಟ್ಟಣ್ಣನವರ ಆಲೋಚನೆಯ ಬಗ್ಗೆ ಹೇಳಬಹುದಾದರೆ, ಈ 16 ಸೊಸೈಟಿಗಳಲ್ಲಿ ವ್ಯತ್ಯಾಸವಾಗಿರತಕ್ಕ ಮೊಬಲಗನ್ನು ಶೇಕಡ 85ರಷ್ಟು ಈಗಾಗಲೇ ವಸೂಲು ಮಾಡಿ ಕೊಳ್ಳಿ ಎಂದು ಅವರು ಹೇಳಿದರು. 1954ನೆಯ ಇಸವಿಯಲ್ಲಿ ಹಿಂದೆ ಹೇಳಿದ ಹಾಗೆ ಸಂಸ್ಥಾನದಲ್ಲಿ ಆಡಿಟ್ ಇಲಾಖೆಯನ್ನು ಪ್ರತ್ಯೇಕವಾಗಿ ವ್ಯವಸ್ಥೆಮಾಡಿ ಅನಂತರ ಆ ಇಲಾಖೆಯವರು ಆಯಾ ವರ್ಷದಲ್ಲಿದ ಸೊಸೈಟಿ ಲೆಕ್ಕಗಳನ್ನು ಪರಿಶೀಲನೆಮಾಡಿ ಸುಮಾರು ಶೇಕಡ 95 ಅಥವಾ 97ರಷ್ಟು ಸೊಸೈಟಿಗಳನ್ನು ಆಡಿಟ್ ಮಾಡುತ್ತಾ ಬಂದಿದ್ದಾರೆ. ಈ ಎಲ್ಲ ಕಾರಣಗಳಿಂದಲೂ ಸೊಸೈಟಿಗಳು ಬಹು ಚುರುಕಾಗಿ ಕೆಲಸ ಮಾಡುತ್ತಿವೆ ಮತ್ತು ರೈತರಿಗೆ ಸಹಾಯಕವಾಗಿ ನಡೆದುಕೊಂಡು ಬರುತ್ತಿವೆ. ಅಂತಹವರಲ್ಲಿ ಇವುಗಳ ಬಗ್ಗೆ ಮಾನ್ಯ ಸದಸ್ಯರು ಅಷ್ಟು ಸುಲಭವಾಗಿ ಅವೇನೂ ಕೆಲಸ ಮಾಡಲಿಲ್ಲವೆಂದು ಹೇಳತಕ್ಕದ್ದು ಸರಿಯಲ್ಲ. ಇನ್ನು ಕೆಲವು ಮಾನ್ಯ ಸದಸ್ಯರು ಈಗ ಹಂಚಲಾಗುತ್ತಿರುವ ಮಧ್ಯಮಾವಧಿ ಸಾಲದ ವಿಷಯದಲ್ಲಿ ಒಂದೆರಡು ಉಪಯುಕ್ತವಾದ ಸಲಹೆಗಳನ್ನು ಕೊಟ್ಟಿದ್ದಾರೆ. ಅಲ್ಲದೆ ಈಗ ಒದಗಿಸುತ್ತಾ ಇರತಕ್ಕ ಮೊತ್ತದ ಪ್ರಮಾಣ ಕಡಮೆ ಮತ್ತು ಇನ್ನೂ ಇದನ್ನು ಬಹಳ ಸುಲಭವಾಗಿ ಒದಗಿಸತಕ್ಕಂಥ ಪ್ರೊಸೀಜರ್‌ನಲ್ಲಿ ಸೊಸೈಟಿಗಳ ಹಣದ ಭದ್ರತೆಯನ್ನು ಕಾಪಾಡಿಕೊಂಡು ಸುಧಾರಣೆ ಮಾಡುವುದಕ್ಕೆ ಸಾಧ್ಯವಿದ್ದರೆ ಒಳ್ಳೆಯದು ಎಂದು ಹೇಳಿದರು. ಇದನ್ನು ಪರಿಶೀಲನೆ ಮಾಡತಕ್ಕದ್ದೇನೋ ಸರಿ. ಈ ಮೊತ್ತವನ್ನು ಒದಗಿಸುವ ವಿಚಾರದಲ್ಲಿ ಸಾರ್ವಜನಿಕರ ಜವಾಬ್ದಾರಿ ಬಹುಭಾಗ ಹೆಚ್ಚಿದೆ ಎಂದು ನಾನು ಈ ಸಂದರ್ಭದಲ್ಲಿ ಹೇಳಬೇಕಾಗಿದೆ. ರಿಜರ್ವ್ ಬ್ಯಾಂಕಿನವರು ಆಯಾ ಜಿಲ್ಲಾ ಬ್ಯಾಂಕುಗಳ ಷೇರು ಮೊತ್ತದಷ್ಟು ಮೊತ್ತವನ್ನು ಮಾತ್ರ ಮಧ್ಯಮಾವಧಿ ಸಾಲದ ರೂಪದಲ್ಲಿ ಕೊಡುವುದಕ್ಕೆ ಹೋಗುತ್ತಾರೆ. ಆದರೂ ಸಹ ಮೈಸೂರನ್ನು ಒಂದು ವಿಶೇಷ ಭಾಗವಾಗಿ ಪರಿಗಣಿಸಿ ಇರತಕ್ಕ ನಿಬಂಧನೆಯನ್ನು ಮೀರಿ ಹೆಚ್ಚು ಹಣವನ್ನು ನಮ್ಮ ಸಂಸ್ಥಾನದ ಜಿಲ್ಲಾ ಬ್ಯಾಂಕುಗಳಿಗೆ ಒದಗಿಸಿದ್ದಾರೆ. ಮೊನ್ನೆ ತಾನೇ ನಾಲ್ಕು ಜಿಲ್ಲೆಗಳಿಗೆ ಸುಮಾರು ಐದು ಲಕ್ಷ ರೂಪಾಯಿಗಳನ್ನು ಸ್ವಂತ ಬಂಡವಾಳದಿಂದ ಕೊಟ್ಟಿದ್ದಾರೆ. ನಾನು ಈ ಸಂದರ್ಭದಲ್ಲಿ ಹೇಳತಕ್ಕದ್ದು ಏನೆಂದರೆ, ಸಾರ್ವಜನಿಕರು ಅವರವರ ಪ್ರೈಮರಿ ಸೊಸೈಟಿಗಳಲ್ಲಿ ಹೆಚ್ಚು ಷೇರು ಮೊತ್ತವನ್ನು ವಸೂಲುಮಾಡತಕ್ಕಂಥ ನಡೆವಳಿಕೆಯನ್ನು ಸ್ವಲ್ಪಮಟ್ಟಿಗೆ ಅಭಿವೃದ್ಧಿಪಡಿಸಿಕೊಂಡು ಹೋಗುವುದಾದರೆ. ಈ ಮಧ್ಯಮಾವಧಿ ಸಾಲದ

ಪ್ರಮಾಣ ತಾನಾಗಿಯೇ ಬೆಳೆಯುತ್ತದೆ. ಸಾಧಾರಣವಾಗಿ ಮಧ್ಯಮಾವಧಿ ಸಾಲ ಒದಗಿಸುವುದರಲ್ಲಿ ಹಿಂದೆ ಬೇರೆ ಬೇರೆ ಸಾಲಗಳನ್ನು ಒದಗಿಸುತ್ತಾ ಇದ್ದಂಥ ಕಾಲದಲ್ಲಿ ಆಗುತ್ತಿದ್ದಂಥ ಕಾಲವಿಳಂಬ ಇದರಲ್ಲಿ ಆಗುತ್ತಾ ಇಲ್ಲ. ಇದನ್ನು ಮಾನ್ಯ ಸದಸ್ಯರು ಒಪ್ಪಿಕೊಳ್ಳಬೇಕು. ಏಕೆಂದರೆ ಸುಮಾರು ಒಂದು ಕೋಟಿ ರೂಪಾಯಿಗಳನ್ನು ಮೂರು ವರ್ಷಗಳಲ್ಲಿ ಮಧ್ಯಮಾವಧಿ ಸಾಲದ ರೂಪದಲ್ಲಿ ಒದಗಿಸಿದ್ದೇವೆ. ಇದರಿಂದರೇ ರೈತರಿಗೆ ಕಾಲ ವಿಳಂಬವಿಲ್ಲದೆ ಸಾಲಗಳು ಚೆನ್ನಾಗಿ ಸಿಕ್ಕುತ್ತಿವೆ ಎಂದು ಗೊತ್ತಾಗುದೆ. ಅಷ್ಟೇ ಅಲ್ಲ. ಮಧ್ಯಮಾವಧಿ ಸಾಲಗಳನ್ನೂ ಕೂಡ ರೈತರು ತೆಗೆದುಕೊಂಡು ತಮ್ಮ ಬೆಳೆಗಳನ್ನು ಅಭಿವೃದ್ಧಿಪಡಿಸಿಕೊಳ್ಳುವುದು, ಪಂಪ್ ಹಾಕಿಸುವುದು, ಬಾವಿ ತೆಗೆಸುವುದು, ಇಂತಹ ಕೆಲಸಗಳಿಗೆ ಉಪಯೋಗಿಸಿಕೊಂಡು ಅವರು ಹೆಚ್ಚು ಬೆಳೆಯನ್ನು ಬೆಳೆಯುವುದಕ್ಕೆ ಸಹಾಯಕವಾದ ಕೆಲಸ ಕಾರ್ಯಗಳಲ್ಲಿ ನಿರತರಾಗಿದ್ದಾರೆ. ಆದರೆ ಅಲ್ಲಿ ಇಲ್ಲಿ ಶೇಕಡ ಐದು-ಹತ್ತು ಕಡೆಗಳಲ್ಲಿ ಕೊಂಚ ವ್ಯತ್ಯಾಸ ಇರಬಹುದು. ಅದನ್ನೇ ನಾವು ಬಹಳ ದೊಡ್ಡದಾಗಿ ಪರಿಗಣಿಸಿದರೆ, ನಿಜವಾಗಿ ಸಮಾಜಕ್ಕೆ ಸೇವೆ ಸಲ್ಲಿಸತಕ್ಕ ಸೊಸೈಟಿಗಳ ವಿಚಾರದಲ್ಲಿ ಮತ್ತು ಅವರ ಉತ್ತೇಜನದ ಬಗ್ಗೆ ಹೀನವಾದ ಮಾತುಗಳನ್ನೂ, ಅಭಿಪ್ರಾಯಗಳನ್ನೂ ಹೇಳತಕ್ಕದ್ದು ಈ ಸನ್ನಿವೇಶದಲ್ಲಿ ಅಷ್ಟೊಂದು ಸರಿಹೋಗಲಾರದು.

ಶ್ರೀ ಜಿ. ಎಚ್. ಪುಟ್ಟಣ್ಣ.—ಸೊಸೈಟಿಗಳು ಕೆಲಸ ಮಾಡಲಿಲ್ಲವೆಂದು ಹೇಳುವುದಕ್ಕೆ ಅಲ್ಲ ದುಡ್ಡು ಬಹಳವಾಗಿ ಮಿಸ್‌ಅಪ್ರೋಪ್ರಿಯೇಟಾಗಿ ವೇಸ್ಟ್ ಆಗುತ್ತಿದೆಯೆಂದು ನಾನು ಹೇಳಿದ್ದೇನೆ.

ಶ್ರೀ ಮಾಲ ಮರಿಯಪ್ಪ.—ಅಂಕಿಅಂಶಗಳ ಆಧಾರವನ್ನು ಬಿಟ್ಟು ಮಾತನಾಡಿದರೆ ಜವಾಬು ಹೇಳುವುದು ಬಹಳ ಕಷ್ಟ.

ಶ್ರೀ ಜಿ. ಎಚ್. ಪುಟ್ಟಣ್ಣ.—ಇವೊತ್ತೇ ಒಂದು ಎಂಕ್ವೈರಿ ಕಮಿಟಿ ಇಡಿ. ಎಲ್ಲಾ ಗೊತ್ತಾಗುತ್ತದೆ.

ಶ್ರೀ ಮಾಲ ಮರಿಯಪ್ಪ.—ಅಂಕಿ ಅಂಶಗಳ ಆಧಾರದ ಮೇಲೆ ವಿಚಾರಮಾಡಬೇಕು. ಮಾನ್ಯ ಸದಸ್ಯರ ಅಭಿಪ್ರಾಯದ ಪ್ರಕಾರ ಅದಕ್ಕೆ ಇನ್ನೊಂದು ಎಂಕ್ವೈರಿ ಕಮಿಟಿ ಮಾಡುವುದು ಒಂದು ತರೆ ಶಿರೋಭಾರವಾಗುವ ಮಾತು. ಹಾಗೆಯೇ ರೈತರ ವಿಚಾರದಲ್ಲಿಯೂ ಕೂಡ ಸಹಾನುಭೂತಿಯನ್ನು ತೋರಿಸಿದ್ದೇವೆಂದು ಬರಿಯ ಬಾಯಿಮಾತಿನಿಂದ ಹೇಳಿಕೊಂಡರೆ ರೈತರ ಹಿತವನ್ನು ಸಾಧನೆಮಾಡಿದ್ದೇನೆಂಬುದಾಗಿ ಯಾರಾದರೂ ತಿಳಿದಿದ್ದರೆ ಅದು ಒಳ್ಳೆಯದಾಗುವುದಿಲ್ಲ. ಹೀಗಿರುವಾಗ ನಾಲ್ಕು ಜನರುಳ್ಳ ಇನ್ನೊಂದು ಕಮಿಟಿ ಬೇಕು ಎಂದರೆ ಏನು! ಹಾಗೆಯೇ ವಿರೋಧ ಪಕ್ಷದ ಕೆಲವು ಸದಸ್ಯರೂ ಕೂಡ ಸೊಸೈಟಿಗಳ ವಿಚಾರದಲ್ಲಿ ರಚನಾತ್ಮಕವಾದಂಥ ಟೀಕೆಗಳನ್ನು ಮಾಡಬಹುದಾಗಿತ್ತು. ಅವರಿಗೆ ಹಾಗೆ ಹೇಳುವುದಕ್ಕೆ ಮನಸ್ಸು ಇಲ್ಲ. ಅದು ನಿಜವಾಗಿ ವಿಷಾದಕರವಾದ ಸಂಗತಿಯಾಗಿದೆ. ಇನ್ನೊಂದು ವಿಷಯ. ತಿಪಟೂರಿನ ಮಾನ್ಯ ಪ್ರತಿನಿಧಿಗಳು ಒಬ್ಬರು ಹೀಗೆ ಹೇಳಿದರು: ಅವರ ಕ್ಷೇತ್ರದಲ್ಲಿ ಒಂದು ರೆಗ್ಯುಲೇಟೆಡ್ ಮಾರ್ಕೆಟ್ ಇದೆ. ಅದಕ್ಕೆ ಒಬ್ಬ ಸೆಕ್ರೆಟರಿ ಇದ್ದಾರೆ. ಆ ಸೆಕ್ರೆಟರಿಗೂ, ಒಬ್ಬ ವರ್ತಕನಿಗೂ ಮಾತು ಕತೆ ನಡೆದು ವಿಪರೀತವಾಯಿತು. ಈ ಸಂದರ್ಭದಲ್ಲಿ ಅವರ ಮೇಲೆ ಕೇಸು ಹಾಕಿದರೆ ಆ ಕೇಸನ್ನು ಸರ್ಕಾರದವರು ತಡೆ ಹಿಡಿದಿದ್ದಾರೆ ಎಂದು ನಿಜವಾಗಿಯೂ ಆ ಮಾತನ್ನು ಹೇಳುವುದಕ್ಕೆ ಮುಂಚೆ ಮಾನ್ಯ ಸದಸ್ಯರು ಈ ಕೇಸಿನ ಬಗ್ಗೆ ಪೂರ್ವೋತ್ತರ ವಿಷಯಗಳನ್ನು ತಿಳಿದುಕೊಂಡಿದ್ದರೆ ಬಹಳ ಚೆನ್ನಾಗಿತ್ತು ಎಂದು ಕಾಣುತ್ತದೆ. ನನಗೆ ತಿಳಿದುಬಂದಿರುವ ಪ್ರಕಾರ, ಕೇಸು ಇದೆ; ವಿಚಾರಣೆ ಕೂಡ ಆಗಿದೆ, ಇಷ್ಟರಲ್ಲಿಯೇ ಅದರಬಗ್ಗೆ ಜಡ್ಜ್‌ಮೆಂಟ್ ಆಗಲಿದೆ. ಸರ್ಕಾರದವರು ಯಾವತ್ತೇ ಆಗಲಿ ಕೋರ್ಟಿಗೆ ಸಂಬಂಧಪಟ್ಟ ವಿಷಯಗಳಲ್ಲಿ, ಕೋರ್ಟಿನಲ್ಲಿ ಕೇಸು ವಿಚಾರಣೆಯಲ್ಲಿರುವಾಗ ಆ ಬಗ್ಗೆ ಒಂದು ಸ್ಟೇ ಆರ್ಡರನ್ನು ಕೊಡಲು ಅವಕಾಶವೇ ಇಲ್ಲ ಎಂಬತಕ್ಕ ಮೂಲಸೂತ್ರವನ್ನು ಅವರು ತಿಳಿದುಕೊಂಡಿದ್ದರೆ ಬಹುಶಃ ಆ ರೀತಿ ಮಾತನಾಡುತ್ತಿರಲಿಲ್ಲವೆಂದು ನಾನು ತಿಳಿದುಕೊಂಡಿದ್ದೇನೆ. ಆದರೆ ಆ ವಿಚಾರ ಅವರಿಗೆ ತಿಳಿಯದೆ ಹಾಗೆ ಮಾತನಾಡಿದ್ದಾರೆ. ಆದರೆ ಅವರು ಹೇಳುವರೀತಿಯಲ್ಲಿ ಸರ್ಕಾರಕ್ಕೆ ಸ್ಟೇ ಆರ್ಡರನ್ನು ಕೊಡುವುದಕ್ಕಾಗುವುದಿಲ್ಲ. ನಾನು ಈಗ ಇಷ್ಟೆಲ್ಲಾ ವಿಚಾರವನ್ನು ಏತಕ್ಕಾಗಿ ಹೇಳುತ್ತಿದ್ದೇನೆಂದರೆ ಯಾರೇ ಆಗಲಿ ತಾವು ಹೇಳತಕ್ಕ ವಿಚಾರವನ್ನು ಅವರು ಸರಿಯಾಗಿ ಪೂರ್ಣವಾಗಿ ತಿಳಿದುಕೊಳ್ಳದೆ ಹಾಗೆಲ್ಲಾ ಮಾತನಾಡತಕ್ಕದ್ದು ಸರಿಯಲ್ಲವೆಂಬುದನ್ನು ಅವರಿಗೆ ಮನದಟ್ಟು ಮಾಡಿಕೊಡಲು ಈ ವಿಚಾರ ಹೇಳಬೇಕಾಗಿ ಬಂತು.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಸ್ವಾಮಿ ಅಧ್ಯಕ್ಷರೆ, ಈಗ ಮಂತ್ರಿಗಳು ಹೇಳುತ್ತಿರುವುದನ್ನು ನೋಡಿದರೆ ನಮಗೇನೂ ಅರ್ಥವಾಗದೆ ಇಲ್ಲಿ ಮಾತನಾಡುತ್ತಿದ್ದೇವೆಂಬ ರೀತಿಯಲ್ಲಿ ಹೇಳುತ್ತಿದ್ದಾರೆ. ನಾನು ಈ ದಿವಸ ಆ ತಿಪಟೂರು ರೆಗ್ಯುಲೇಟೆಡ್ ಮಾರ್ಕೆಟ್ ಸಮಿತಿಯ ಒಬ್ಬ ಸದಸ್ಯನಾಗಿದ್ದೇನೆ. ನಾನು ಎಂದೂ ಹಾಗೆ ಬೇಜವಾಬ್ದಾರಿಯಿಂದ ಮಾತನಾಡತಕ್ಕವನಲ್ಲ. ಈ ದಿವಸ ಡೆಪ್ಯುಟಿ ಕಮಿಷನರು ಅದೇ ಮನುಷ್ಯನ ಮೇಲೆ ಇರತಕ್ಕ ಒಂದು ಕೇಸಿನಲ್ಲಿ ಸ್ಟೇ ಮಾಡಿದ್ದಾರೆ. ಆ ವಿಷಯ ಹೇಳದೆ ಈಗ ಮಂತ್ರಿಗಳು ಅದನ್ನು ಬೇರೆ ಯಾವುದೋ ಒಂದಕ್ಕೆ ಗಂಟುಹಾಕಿಕೊಂಡು ಮಾತನಾಡುತ್ತಿದ್ದಾರೆ. ಅಲ್ಲಿರತಕ್ಕ ಸೆಕ್ರೆಟರಿಯವರಿಗೂ ನನಗೂ ಯಾವ ಸಂಬಂಧವಾಗಲಿ ಸ್ನೇಹವಾಗಲಿ ಇಲ್ಲ. ಆತನು ಬೇರೆ ಅಂಗಡಿಗಳಲ್ಲಿ ಹೋಗಿ ಅಳತೆ, ತೂಕಗಳನ್ನು ನೋಡುವುದಕ್ಕೆ ಹೋದರೆ ಜನರು ಆತನನ್ನು ಹೊಡೆಯಲು ಓಡಿಸಿಕೊಂಡು ಬರುತ್ತಾರೆ...

ಶ್ರೀ ಮಾಲ ಮರಿಯಪ್ಪ.—ಮಾನ್ಯ ಸದಸ್ಯರು ಹೇಳುತ್ತಿರುವಂಥ ಸಂದರ್ಭದಲ್ಲಿ ಡೆಪ್ಯುಟಿ ಕಮಿಷನರೂ ಕೂಡ ಸ್ಟೇ ಆರ್ಡರ್ ಕೊಡಲು ಸಾಧ್ಯವಿಲ್ಲ ಎನ್ನುವುದು ನನ್ನ ಭಾವನೆ. ಅದು ಏನೇ ಇರಲಿ ಈಗ ಇಲ್ಲಿ ಸರ್ಕಾರದವರು ಸಭೆಯಲ್ಲಿ ಕೊಡತಕ್ಕ ಉತ್ತರವೇ ಸರಿಯಾದುದೆಂದು ಅವರು ತಿಳಿದುಕೊಳ್ಳಬೇಕು.

ಇನ್ನು ಸೊಸೈಟಿಗಳಿಗೆ ಸರ್ಕಾರದವರು ನಾಮಿನೇಷನ್ ಮಾಡತಕ್ಕ ಪದ್ಧತಿ ಅಷ್ಟು ಸರಿಯಾದುದಲ್ಲ ಇದನ್ನು ಬಿಟ್ಟುಬಿಡಬೇಕು ಎಂದು ಕೆಲವರು ಅಭಿಪ್ರಾಯಪಟ್ಟಿದ್ದಾರೆ. ಈ ಎರಡನೆಯ ಪಂಚವಾರ್ಷಿಕಯೋಜನೆಯಲ್ಲಿ ಸ್ಥಾಪಿತವಾಗಿರುವ ಹೊಸ ಸೊಸೈಟಿಗಳಲ್ಲಿ ಅವರು ಒಬ್ಬ ಸಾಮಾನ್ಯ ಷೇರ್‌ಹೋಲ್ಡರ್ ರಾಗಿದ್ದಿದ್ದರೆ ಆಗ ಅವರು ಇಂಥ ಮಾತನ್ನು ಖಂಡಿತ ಹೇಳುತ್ತಿರಲಿಲ್ಲ. ಆದರೆ ಅವರು ಈ ದಿವಸ ಸೊಸೈಟಿಗಳು ಹೇಗೆ ಕೆಲಸ ಮಾಡುತ್ತಿವೆ ಎಂಬುದನ್ನು ನೋಡದೇನೋ ಅಥವಾ ನೋಡಿದ್ದರೂ ಅದನ್ನು ಮರೆತೋ ಏನೋ ಹಾಗೆ ಹೇಳಿದ್ದಾರೆ. ಒಂದು ತಾಲ್ಲೂಕು ಮಾರ್ಕೆಟಿಂಗ್ ಸೊಸೈಟಿ ಯಾವುದಾದರೂ ಹೊಸದಾಗಿ ಪ್ರಾರಂಭವಾದಾಗ ಅದು ಮುಂದುವರಿದಿರತಕ್ಕ ಸೊಸೈಟಿಗಳ ಬೈಲಾಗಳನ್ನು ಆ ಸೊಸೈಟಿಯ ಎಲ್ಲಾ ಷೇರ್‌ಹೋಲ್ಡರುಗಳೂ ಸೇರಿ ಯಾವುದು ಮಾಡಲ್ ಬೈಲಾ ಆಗಿರುತ್ತದೆಂಬುದನ್ನು ನೋಡಿ ಅದ

(ಶ್ರೀ ಮಾಲಿ ಮರಿಯಪ್ಪ)

ರಂತೆ ತಮ್ಮ ಬೈಲಾಗಳನ್ನೂ ರಚಿಸಿಕೊಳ್ಳುತ್ತಾರೆ. ಅದಕ್ಕೆ ತಕ್ಕಂತೆ ಸರ್ಕಾರದವರೂ ಸಹ ಅವರಿಗೆ ಒಂದು ಹೆಚ್ಚಿನ ರೀತಿಯಲ್ಲಿ ಸಹಾಯವನ್ನು ನೀಡುತ್ತಾರೆ. 20ಸಾವಿರ ರೂಪಾಯಿಗಳ ಬೆಲೆಬಾಳತಕ್ಕ ಒಂದು ಗೋಡೌನ್ ಕಟ್ಟಿಸಿಕೊಡಲಾಗುತ್ತದೆ; ಷೇರ್ ಕ್ಯಾಪಿಟಲ್, ಪ್ರಾಡ್ಯೂಸ್ ಲೋನ್ ಮತ್ತಿತರ ಕ್ಯಾಷ್ ಲೋನ್‌ಗಳಿಗೆಲ್ಲ ಸಾಲದ ರೂಪದಲ್ಲಿ ಹಣ ಸಹಾಯ ನೀಡಲಾಗುತ್ತಿದೆ. ಇಂಥ ಸೊಸೈಟಿಯಲ್ಲಿ 15ಜನ ಡೈರೆಕ್ಟರಿರುತ್ತಾರೆ. ಅಂಥ ಕಡೆ ಇಬ್ಬರನ್ನು ಸರ್ಕಾರದವರು ನಾಮಿನೇಟ್ ಮಾಡುತ್ತಾರೆ. 15ಜನ ಡೈರೆಕ್ಟರುಗಳಿರುವ ಕಡೆ ಇಬ್ಬರನ್ನು ಸರ್ಕಾರದವರು ನಾಮಿನೇಟ್ ಮಾಡಿದರೂ ಇವರ ದಾಮೂಷಾ ಯಾವ ರೀತಿ ಇರುತ್ತದೆ ಎನ್ನುವುದನ್ನು ಸಭೆಯವರೇ ಊಹಿಸಿಕೊಳ್ಳಬಹುದು. ಆದರೆ ಇಷ್ಟನ್ನೂ ಕೂಡ ಇಡಬಾರದು, ಇದು ಸರಿಯಲ್ಲ ಎಂದು ಹೇಳಿದರೆ ಸರ್ಕಾರದವರು ಗೋಡೌನ್‌ಗಾಗಿ 20 ಸಾವಿರ ರೂಪಾಯಿಗಳನ್ನು ಕೊಟ್ಟಿರುತ್ತಾರೆ; ಷೇರ್ ಕ್ಯಾಪಿಟಲ್ ಬಗ್ಗೆ 20-30 ಸಾವಿರ ರೂಪಾಯಿಗಳನ್ನು ಕೊಟ್ಟಿರುತ್ತಾರೆ ; ಹೀಗೆಯೇ ಇನ್ನೂ ಇತರ ಸಾಲಗಳ ಬಗ್ಗೆ ಸಹಾಯಮಾಡುತ್ತಾರೆ. ಇಂಥಕಡೆ 10–20 ಷೇರುಗಳನ್ನಿಟ್ಟುಕೊಳ್ಳದಿದ್ದವರೂ ಕೂಡ ಒಬ್ಬ ಡೈರೆಕ್ಟರಾಗಿರಬಹುದಂತೆ ಸಹಸ್ರಾರು ರೂಪಾಯಿಗಳ ಬಂಡವಾಳ ಹಾಕಿರತಕ್ಕ ಸರ್ಕಾರದವರು 15ಜನ ಡೈರೆಕ್ಟರುಗಳಿರುವ ಕಡೆ ಇಬ್ಬರನ್ನು ತಮ್ಮ ಪರವಾಗಿ ನಾಮಿನೇಟ್ ಮಾಡುವುದು ಅನ್ಯಾಯವೆಂದು ಹೇಳಿದರೆ ಏನು ಅರ್ಥ! ಆದರೆ ಅವರು ವಿಚಾರಗಳನ್ನು ಸರಿಯಾಗಿ ತಿಳಿದುಕೊಳ್ಳದೆ ಹೇಳಿದ್ದಾರೆಂದು ಹೇಳುತ್ತೇನೆ. ಏನೂ ವಿಚಾರ ತಿಳಿಯದವರು ಮಾತ್ರ ಈ ರೀತಿ ಹೇಳಬಹುದು. ಆದರೆ ಇನ್ನೊಬ್ಬ ಮಾನ್ಯ ಸದಸ್ಯರು ಹೇಳಿದರು ಕಾಂಗ್ರೆಸ್ ಮಂತ್ರಿಗಳು ಹೊರಗಡೆ ಎಲ್ಲಾದರೂ ಹೋದಾಗ ನಾನ್-ಕಾಂಗ್ರೆಸ್ ಸದಸ್ಯರು ಬಂದಿರತಕ್ಕ ಚುನಾವಣೆಕ್ಷೇತ್ರಗಳಿಗೆ ಯಾವ ಸಹಾಯವನ್ನು ಮಾಡಬೇಡಿ ಎಂದು ಪ್ರಚಾರ ಮಾಡುತ್ತಿದ್ದಾರೆ ಎಂದು. ಆದರೆ ಅವರು ಆ ರೀತಿ ಹೇಳುತ್ತಿರುವುದಕ್ಕೆ ಕಾರಣ ಅವರ ಕ್ಷೇತ್ರದಲ್ಲೇ ಏನು ಬದಲಾವಣೆ ಆಗಿದೆ ಎನ್ನುವುದೇ ಅವರಿಗೆ ಗೊತ್ತಿಲ್ಲ. ಇತ್ತೀಚೆಗೆ ಯಾರು ಮಾನ್ಯ ಸದಸ್ಯರು ಈ ರೀತಿ ಟೀಕೆಮಾಡಿದರೋ ಅವರ ಊರಿಗೆ ಒಂದು ದೊಡ್ಡ ಪ್ರಮಾಣದ ಸೊಸೈಟಿಯನ್ನು ಕೊಟ್ಟಿದ್ದೇವೆ. ಆ ವಿಚಾರ ಅವರಿಗೇ ಗೊತ್ತಿಲ್ಲ ಮೊದಲು ಅಲ್ಲಿ ಹತ್ತು ಸಾವಿರ ರೂಪಾಯಿಗಳ ಗೋಡೌನ್ ಮಾಡಿಸಬೇಕೆಂದಿತ್ತು. ಈಚೆಗೆ ಅದಕ್ಕೆ ಇನ್ನೂ ಎರಡು ಸಾವಿರ ರೂಪಾಯಿಗಳನ್ನು ಜಾಸ್ತಿ ಒದಗಿಸಿದ್ದೇವೆ. ಅದರ ಜೊತೆಗೆ ಹತ್ತುಸಾವಿರ ರೂಪಾಯಿಗಳ ಷೇರ್ ಮೊತ್ತವನ್ನೂ ಮತ್ತು ಗೊಬ್ಬರ ಇತ್ಯಾದಿಗಳಿಗೆಲ್ಲ ಜಿಲ್ಲಾ ಬ್ಯಾಂಕಿನಿಂದ ಕ್ಯಾಷ್ ಅಕಾಮಡೇಷನ್ನಿಗೆ, ಲೋನಿಗೆ ಅವಕಾಶ ಮಾಡಿಸಿಕೊಟ್ಟಿದ್ದೇವೆ. ಇಷ್ಟೆಲ್ಲಾ ಸಹಾಯಗಳನ್ನು ಮಾಡುತ್ತಿದ್ದರೂ ಕಾಂಗ್ರೆಸ್ ಸ್ಪರ್ಧಿಗಳನ್ನು ಎದುರಿಸಿ ಬಂದಿರತಕ್ಕಂಥ ಸ್ವತಂತ್ರ ಸದಸ್ಯರ ಕ್ಷೇತ್ರಗಳಲ್ಲಿಯ ಜನರಿಗೆ ಸರ್ಕಾರ ಏನೂ ಸಹಾಯ ಮಾಡುತ್ತಿಲ್ಲ ಎಂದು ಹೇಳುತ್ತಿದ್ದಾರೆ. ಅಂದ ಮೇಲೆ ಅವರಿಗೆ ಈಗ ನಾನು ಹೇಳಿದಂಥ ಸೊಸೈಟಿ ಯಾವುದೆಂಬುದೇ ಅವರಿಗಿನ್ನೂ ಗೊತ್ತಿಲ್ಲವೆಂದಾಯಿತು. ನಾನು ಈ ವಿಚಾರಗಳನ್ನೆಲ್ಲಾ ಈಗ ಏತಕ್ಕಾಗಿ ಹೇಳುತ್ತಿದ್ದೇನೆಂದರೆ ಅವರು ಯಾವುದೋ ಒಂದು ಕಾರಣವನ್ನು ಮನಸ್ಸಿನಲ್ಲಿಟ್ಟುಕೊಂಡು ಆ ಒಂದು ಕಾರಣದ ಮೇಲೆ ಈ ರೀತಿ ಕನ್‌ಕೂಷನ್‌ಡ್ರಾಪುಮಾಡಬಾರದು ; ಅದು ಸರಿಯಾದುದಲ್ಲ ಎಂದು ಹೇಳುತ್ತೇನೆ. ಈ ದಿವಸ ಅವರ ಊರಿಗೆ ಸರ್ಕಾರದವರು ಏನು ಸೌಲಭ್ಯವನ್ನೊದಗಿಸಿಕೊಟ್ಟಿದ್ದಾರೆಂಬುದು ಅವರಿಗೇ ಇನ್ನೂ ಗೊತ್ತಿಲ್ಲ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ದೇಶದಲ್ಲಿ ಎಲ್ಲರಿಗೂ ಕೊಡುವಂತೆ ಅವರಿಗೂ ಕೊಟ್ಟಿದ್ದೀರಿ. ಅದರಲ್ಲಿ ಏನು ಒಂದು ಅಂಥ ಸ್ಪೆಷ್ಯಾಲಿಟಿ ಇದೆ!

ಶ್ರೀ ಮಾಲಿ ಮರಿಯಪ್ಪ.—ಹೀಗೆಯೇ ಇನ್ನೂ ಅನೇಕ ಆಕ್ಷೇಪಣೆಗಳು ಬಂದಿವೆ. ಆ ಪೈಕಿ ಶಿರಾತಾಲ್ಲೂಕಿಗೆ ಸಂಬಂಧಪಟ್ಟದು ಒಂದು. ಯಾರೋ ಒಬ್ಬರು ಒಂದು ಸೊಸೈಟಿಯಲ್ಲಿ ಎರಡು ಸಾವಿರ ರೂಪಾಯಿಗಳನ್ನು ಲೆಕ್ಕದಲ್ಲಿ ಸ್ವಲ್ಪ ವ್ಯತ್ಯಾಸಮಾಡಿದ್ದಾರೆ, ಅವರಿಗೆ ಇಲ್ಲಿ ಯಾವ ಒಂದು ರಕ್ಷಣೆಯೂ ದೊರೆಯುತ್ತಿಲ್ಲ ಎನ್ನುವ ಅರ್ಥ ಬರುವ ರೀತಿಯಲ್ಲಿ ಮಾತನಾಡಿದುದನ್ನು ನಾವೆಲ್ಲರೂ ನೋಡಿದ್ದೇವೆ. ಆದರೆ ಅದರ ಅಂಕಿ ಅಂಶಗಳೇನೆಂಬುದನ್ನು ನಾನೀಗ ತಮ್ಮಲ್ಲಿ ತಿಳಿಸಬಯಸುತ್ತೇನೆ. ಶಿರಾತಾಲ್ಲೂಕಿನಲ್ಲಿ ಒಂದು ಮಲ್ಟಿಪರ್ಪಸ್ ಕೋ-ಆಪರೇಟೀವ್ ಸೊಸೈಟಿ ಎಂಬುದು ಇತ್ತು. ಅದು ಕಂಟ್ರೋಲ್ ಕಾಲದಲ್ಲಿ ಚುರುಕಾಗಿ ಕೆಲಸಮಾಡಿತು. ಆಮೇಲೆ ಕೆಲವು ಕಾಲ ಹಾಗೆಯೇ ಇತ್ತು. ಅದರ ಛಾರ್ಜಿನಲ್ಲಿ ಒಬ್ಬ ಅಸಿಸ್ಟೆಂಟ್ ಸೆಕ್ರೆಟರಿಗಳಿದ್ದರು. ಆದರೆ ಅಲ್ಲಿಯತನಕ ಅದರ ಲೆಕ್ಕಗಳನ್ನು ಆಡಿಟ್‌ಮಾಡಿಸಲು ಅವಕಾಶವಾಗಿರಲಿಲ್ಲ. ಅನಂತರ ಅಲ್ಲಿಗೆ ಆಡಿಟ್ ಮಾಡಲು ಒಬ್ಬ ಆಡಿಟರು ಹೋದರು. ಅವರಿಗೆ ಆಡಿಟ್ ಮಾಡಲು ಸಂಬಂಧಪಟ್ಟ ಪುಸ್ತಕಗಳೊಂದೂ ಸಿಕ್ಕಲಿಲ್ಲ. ಅಂದರೆ ಸೊಸೈಟಿಯವರು ಹಾಜರ್ಮಾಡಲಿಲ್ಲ. ಆದರೆ ಅವರು ಯಾವುದೋ ಒಂದು ರಶೀದಿ ಪುಸ್ತಕವನ್ನು ಹಾಜರ್ಮಾಡಿದರು. ಆ ರಶೀದಿ ಪುಸ್ತಕದಲ್ಲಿ ಎರಡು ಸಾವಿರ ರೂಪಾಯಿಗಳನ್ನು ಆ ಸೊಸೈಟಿಗೆ ಸಂಬಂಧಪಟ್ಟ ಯಾರೋ ಒಬ್ಬ ಅಧ್ಯಕ್ಷರ ಹೆಸರಿನಲ್ಲಿ ಒಂದು ಚೀಟಿ ಬರೆದಿಟ್ಟು ಅವರು ಆ ಹಣವನ್ನು ಶಿರಾ ತಾಲ್ಲೂಕ್ ಖಜಾನೆಗೆ ಜಮಾ ಮಾಡಿಸಲು ತೆಗೆದುಕೊಂಡಿರುತ್ತಾರೆಂದು ಅವರ ಹೆಸರಿನಲ್ಲಿ ಆ ಹಣವನ್ನು ನಮೂದಿಸಿದ್ದ ಒಂದು ಸಣ್ಣ ಚೀಟಿ ಇತ್ತು. ಅದನ್ನು ಆ ಅಸಿಸ್ಟೆಂಟ್ ಸೆಕ್ರೆಟರಿ ಹಾಜರ್ಮಾಡಿದ. ಆ ಸೊಸೈಟಿಯ ಸೆಕ್ರೆಟರಿಗಳೊಬ್ಬರನ್ನು ಬಿಟ್ಟರೆ ಆ ಸೊಸೈಟಿಗೆ ಯಾರ ಹೆಸರಿನಲ್ಲಿ ಆ ಎರಡು ಸಾವಿರ ರೂ. ಗಳನ್ನು ಅಧ್ಯಕ್ಷರು ತಗೆದುಕೊಂಡಿದ್ದಾರೆಂದು ಚೀಟಿಯಲ್ಲಿ ಗುರುತು ಹಾಕಿತ್ತೋ ಅಂಥ ಮನುಷ್ಯ ಆ ಸೊಸೈಟಿಗೆ ಅಧ್ಯಕ್ಷರೂ ಆಗಿಲ್ಲ, ಒಬ್ಬ ಡೈರೆಕ್ಟರ್ ಸಹಾ ಆಗಿರಲಿಲ್ಲ. ಆ ಸಂಬಂಧದಲ್ಲಿ ಲೆಕ್ಕಗಳನ್ನೆಲ್ಲಾ ಹಾಜರ್ಮಾಡಲು ಎಷ್ಟೋ ಪ್ರಯತ್ನಗಳನ್ನು ಮಾಡಿದರೂ ಅವರು ಹಾಜರ್ಮಾಡಲಿಲ್ಲ. ಆದರೆ ಕೆಲವು ದಿನಗಳ ಅನಂತರ ಆ ಲೆಕ್ಕಪತ್ರಗಳನ್ನೆಲ್ಲಾ ಹಾಜರ್ಮಾಡಿದರು. ತನಿಖೆ ಮಾಡುವ ಮುನ್ನ ಆ ಹಾಜರ್ಮಾಡಿದ ಲೆಕ್ಕದ ಪುಸ್ತಕಗಳೂ ಸುಮಾರು ಮೂರುವರ್ಷಗಳ ಲೆಕ್ಕಗಳನ್ನೂ ಒಂದೇ ದಿವಸದಲ್ಲಿ ಕುಳಿತು ಬರೆದಂತೆ ಒಂದೇ ಇಂಕು ಉಪಯೋಗಿಸಿ ಬರೆದ ಹಾಗಿರುವುದರಿಂದ ಇಂಥ ಪ್ರಸಂಗದ ಬಗ್ಗೆ ನಾನು ಏನು ಹೇಳಬಹುದು! ಈ ಲೆಕ್ಕದ ಪುಸ್ತಕಗಳನ್ನು ನಮ್ಮ ಕಡೆಗೆ ತೆಗೆದುಕೊಳ್ಳುವುದಕ್ಕೆ ಬಹಳ ಕಷ್ಟವಾಯಿತು. ಕೊನೆಗೆ ಲೆಕ್ಕಗಳನ್ನು ವಶಕ್ಕೆ ತೆಗೆದುಕೊಳ್ಳಬೇಕಾದರೆ ಎಷ್ಟೋ ಕಷ್ಟವಾಯಿತು. ಅಲ್ಲಿಂದ ಆ ಲೆಕ್ಕದ ಪುಸ್ತಕವನ್ನು ತೆಗೆದು ನೋಡಿದರೆ ಮೊದಲನೆಯ ಪೇಜಿನಲ್ಲಿ 1956ನೆಯ ಇಸವಿ ಇದೆ, ಮೂರು ನಾಲ್ಕು ಹಾಳೆಗಳನ್ನು ತಿರುವಿಹಾಕಿದರೆ 1954ನೆಯ ಇಸವಿ ಇದೆ. ಬಹುಶಃ ಎಲ್ಲೋ ಅವಸರದಲ್ಲಿ ಅದನ್ನು ಬರೆದ ಹಾಗೆ ಕಾಣಿಸುತ್ತದೆ. ಅದರ ಜೊತೆಗೆ ಅಲ್ಲಿ ಏನಾಗಿದೆ ಎಂದರೆ ಯಾರೋ ಒಬ್ಬರು ಶ್ಯಾನುಭೋಗರು ಇದ್ದ

ರಂತೆ. ಅವರು ಆ ಲೆಕ್ಕವನ್ನು ಬರೆದದ್ದು. ಅವರು ಒಂದು ಅರ್ಜಿಯನ್ನು ಸಹ ಬರೆದಿದ್ದಾರೆ. ನನಗೆ ಸಸ್ಪೆನ್ಷನ್ ಆಗಿತ್ತು, ಆ ಸಸ್ಪೆನ್ಷನ್ ವಜಾಮಾಡಿಸುತ್ತೇವೆ, ಈ ಲೆಕ್ಕ ಬರೆಯಿರಿ ಎಂದು ಕೆಲವರು ಪ್ರೇರೇಪಣೆ ಮಾಡಿದರು ಎಂದು ಬರೆದಿದ್ದಾರೆ. ಅವರ ಹೆಸರನ್ನು ಹೇಳುವುದು ಈಗ ಅನಾವಶ್ಯಕ. ಆತನಿಂದ ಒಂದು ಅರ್ಜಿ ಬಂದಿದೆ. ಇದನ್ನೆಲ್ಲ ನೋಡಿದರೆ ಇದರಲ್ಲಿ ಸ್ವಲ್ಪ local politics ಇದೆ ಎಂದು ಮಾತ್ರ ಈ ಸಂದರ್ಭದಲ್ಲಿ ಹೇಳಬಹುದು.

Sri C. J. MUCKANNAPPA.—I take a challenge.........

Sri MALI MARIAPPA.—I am not yielding, Sir. (*Interruption*)

ಆದುದರಿಂದ ಈ facts ಈ ಸಭೆಯ ಗಮನಕ್ಕೆ ತರತಕ್ಕದ್ದು ನನ್ನ ಕರ್ತವ್ಯ. ಇನ್ನೂ ಒಂದು ಹೆಚ್ಚಿನ ಸಂಗತಿಯನ್ನು ಬೇಕಾದರೂ ಸಹ ಹೇಳುತ್ತೇನೆ. ಇದರಲ್ಲಿ ನನ್ನ ಪಾತ್ರವೇನಿದೆ ಎಂಬುದನ್ನು ಮಾನ್ಯ ಸದಸ್ಯರು ತಿಳಿದುಕೊಳ್ಳಲಿ ಎಂದು ಹೇಳುತ್ತೇನೆ. ಇಂಥ ಒಂದು ಫೈಲ್.........

(*Interruption*)

ಈ ಸಂದರ್ಭದಲ್ಲಿ ಇನ್ನೊಂದು ಮಾತನ್ನು ಮಾತ್ರ ಸಮಂಜಸವಾಗಿ, ಈ ಸಭೆಗೆ ಅರ್ಥವಾಗುವ ದೃಷ್ಟಿಯಿಂದ ಹೇಳಲೇಬೇಕು ಎಂದೆನಿಸುತ್ತದೆ. ಅದು ಏನೆಂದರೆ ಅವರಿಗೂ ಈ ವಿಚಾರವನ್ನು ಪ್ರಸ್ತಾಪ ಮಾಡಿದಂಥ ಮಾನ್ಯ ಸದಸ್ಯರಿಗೂ ಸಹ ಸಂಬಂಧ ಅಷ್ಟು ಚೆನ್ನಾಗಿಲ್ಲ. ನನಗೂ ಕೂಡ ಆ ಊರಿನ ಕೆಲವು ಡೈರೆಕ್ಟರುಗಳು ಇವರುಗಳೆಲ್ಲ ಪರಿಚಯವಿದ್ದರು, ಬಳಕೆಯಾಗಿದ್ದರು. ಈ ಎಲ್ಲ ಸನ್ನಿವೇಶಗಳಿಂದ ಇದಕ್ಕೆ ಸಂಬಂಧಪಟ್ಟ ಫೈಲ್ ನನ್ನ ಬಳಿಗೆ ಬಂದಾಗ ನಾನು ಚೀಫ್ ಮಿನಿಸ್ಟರ್ ಹತ್ತಿರ ಹೇಳಿದೆ. ಇದರ ವಿಚಾರದಲ್ಲಿ ಕೆಲವು ವ್ಯಕ್ತಿಗಳು ನನಗೆ ಪರಿಚಯಸ್ಥರಾಗಿದ್ದಾರೆ, ಅದಕ್ಕೋಸ್ಕರವಾಗಿ ನಾನು ಈ ಫೈಲ್ deal ಮಾಡುವುದಿಲ್ಲ ಎಂದು. ಅವರು ಆ ಫೈಲನ್ನು ನನ್ನಲ್ಲಿ ಕಳುಹಿಸಿ ಎಂದರು. ನಾನು ಅವರಲ್ಲಿಗೆ ಕಳುಹಿಸಿದ್ದೇನೆ. ಅದನ್ನು ಬೇರೆ ಮಂತ್ರಿಗಳಿಗೆ ಕಳುಹಿಸಿ ಅದರ ವಿಚಾರವಾಗಿ ತೀರ್ಮಾನ ಮಾಡಿಸುತ್ತೇನೆಂದು ಹೇಳಿದರು. ಫೈಲ್ ಕಳೆದು ಹೋಗಿದೆ ಅಥವಾ ಮಾಯವಾಗಿದೆ ಎಂದು ಹೇಳತಕ್ಕದ್ದು ಸರಿಯಾದುದಲ್ಲ. ನಿಧಾನವಾಗಿ ವಿಚಾರಗಳನ್ನು ತಿಳಿದುಕೊಂಡು ಮಾತನಾಡುವುದರಿಂದ ಈ ಸಭೆಗೆ ಒಳ್ಳೆಯದಾಗುತ್ತದೆ, ಮಾನ್ಯ ಸದಸ್ಯರಿಗೂ ಒಳ್ಳೆಯದಾಗುತ್ತದೆ. ಇದರಲ್ಲಿ ಸ್ಕೀಮಿಂಗ್ ಬೇಕಾಗಿಲ್ಲ. ಈ ವಿಚಾರಗಳನ್ನೆಲ್ಲ ಅರ್ಥಮಾಡಿಕೊಂಡರೆ ಇದರಲ್ಲಿ ಏನಿದೆ ಎನ್ನುವುದು ಗೊತ್ತಾಗುತ್ತದೆ. ಆದುದರಿಂದ ಆ ಫೈಲ್ ಎಲ್ಲಿಯೂ ಹೋಗಿಲ್ಲ; ಸೆಕ್ರೆಟೇರಿಯಟ್ಟಿನಲ್ಲಿಯೇ ಇದೆ. ಬಹುಶಃ ಒಬ್ಬ ಮಾನ್ಯ ಮಂತ್ರಿಗಳ ಅಧೀನದಲ್ಲಿ ಇರಬಹುದು.

ಸ್ವಾಮಿ, ನಾನಾದರೂ ಗಟ್ಟಿಯಾಗಿ ಮಾತನಾಡಿದರೆ ಅದರಲ್ಲಿ ನಿಜಾಂಶವಿಲ್ಲದೇ ಇದ್ದರೂ ನಿಜವಾಗುತ್ತದೆಂದು ತಿಳಿದುಕೊಂಡಿಲ್ಲ.

(*Interruptions*)

ಹೀಗೆ ವಿರೋಧಪಕ್ಷದಲ್ಲಿ ಕೆಲವು ಸದಸ್ಯರು ಯಾವುದಾದರೂ ಒಂದು ವಿಷಯವನ್ನು ಹೇಳುವಾಗ ಮನಸ್ಸಿನಲ್ಲಿಟ್ಟುಕೊಂಡು, ಅಂಕಿಅಂಶಗಳನ್ನು ಗ್ರಹಿಸಿಕೊಂಡು, ಅವುಗಳನ್ನು ತಾಳೆ ಹಾಕಿಕೊಂಡು ಹೇಳುವುದು ಒಳ್ಳೆಯದೆನ್ನುವುದನ್ನು ಮಾತ್ರ ಹೇಳಿ ಆ ಪ್ರಸ್ತಾಪವನ್ನು ಅಲ್ಲಿಗೇ ಬಿಡುತ್ತೇನೆ.

ಈ ಸಭೆಯಲ್ಲಿ ಇನ್ನೊಂದು ಬಹಳ ಮುಖ್ಯವಾದ ವಿಚಾರ, ಸ್ವಲ್ಪ ಚರ್ಚಾಸ್ಪದವಾದಂಥ ವಿಚಾರವನ್ನು ಸ್ವಲ್ಪ ಮಟ್ಟಿಗೆ ಪ್ರಸ್ತಾಪ ಮಾಡಬೇಕಾಗಿದೆ. ಅದೇನೆಂದರೆ, ಕೋ-ಆಪರೇಟಿವ್ ಫಾರ್ಮಿಂಗ್ ವಿಚಾರದಲ್ಲಿ ಸದಸ್ಯರು ಶಂಕೆಗಳನ್ನು ವ್ಯಕ್ತಪಡಿಸಿದರು, ಕೆಲವರು ನಮಗೆ ನಂಬಿಕೆ ಇಲ್ಲವೆನ್ನುವ ರೀತಿಯಲ್ಲಿ ಹೇಳಿದರು. ಆದರೆ co-operative farming ಈ ದೇಶದಲ್ಲಿ ಜಾರಿಗೆ ಬರಬೇಕು ಎನ್ನತಕ್ಕದ್ದರಲ್ಲಿ ದಿನೇ ದಿನೇ ಆ ರೀತಿಯಲ್ಲಿ ಆಗತಕ್ಕದ್ದೇ ಸರಿ ಎನ್ನುವ ರೀತಿಯಲ್ಲಿ ರೂಪುಗೊಳ್ಳುತ್ತಿದೆ. ಅದನ್ನು ಯಾರೂ ನಿರ್ಲಕ್ಷಿಸಬಾರದು. ಇದರ ಜೊತೆಗೆ ನಮ್ಮ ದೇಶದಲ್ಲಿ ಕೋ-ಆಪರೇಟಿವ್ ಫಾರ್ಮಿಂಗಿಗೆ ಒಂದು ಒಳ್ಳೆಯ ವಾತಾವರಣ ಸಹ ಇದೆ. ಹಿಂದೆ ನಮ್ಮ ದೇಶದಲ್ಲಿ ದೊಡ್ಡ ದೊಡ್ಡ ವ್ಯವಸಾಯದ ಅವಿಭಕ್ತ ಕುಟುಂಬಗಳಲ್ಲಿ ಇದರ ಒಂದು ಮೂಲ ಸಿದ್ಧಾಂತದ ಆಧಾರದ ಮೇಲೆ ವ್ಯವಸಾಯವನ್ನು ಬಹಳ ವರ್ಷಗಳಿಂದ ನಡೆಸಿಕೊಂಡು ಬಂದಿದ್ದಾರೆ. ಗ್ರಾಮಾಂತರ ಜೀವನದಲ್ಲಿ ಸಹ ಒಬ್ಬರಿಗೊಬ್ಬರು ಸಹಾಯಕರಾಗಿ ಉಳುಮೆ ಮಾಡತಕ್ಕದ್ದು, ಕಟಾವು ನಡೆಸತಕ್ಕದ್ದು; ಕಳೆ ತೆಗೆಯುವುದು ಇತ್ಯಾದಿ ಕೆಲಸಗಳಲ್ಲಿ ಪರಸ್ಪರ ಸಹಾಯವನ್ನು ಕೊಡುತ್ತ ಬಂದಿದ್ದಾರೆ. ಪಾರ್ಟಿಗಳಿಂದ ಕೂಡಿರುವ ಗ್ರಾಮಗಳಲ್ಲಿ ಸಹ ಈ ತರಹ ನಡವಳಿಕೆಗಳು ಪ್ರಾರಂಭವಾದರೆ ಪಾರ್ಟಿಗಳು ಕೂಡ ಹೋಗಲೂಬಹುದು. ಆದುದರಿಂದ ಈ ಪದ್ಧತಿಯನ್ನು ಪ್ರಯೋಗ ಮಾಡಿ ನೋಡತಕ್ಕದ್ದು ಒಳ್ಳೆಯದು. ದೊಡ್ಡ ದೊಡ್ಡ ಕೋ-ಆಪರೇಟಿವ್ ಫಾರ್ಮಿಂಗ್ ಸೊಸೈಟಿಗಳು ಯಾವ ರೀತಿ ನಡೆಯುತ್ತಿವೆ ಎಂದರೆ ಸರಿಯಾಗಿ ಮತ್ತು ಸಮಂಜಸವಾಗಿ ನಡೆಯುತ್ತಿವೆ ಎಂದು ಹೇಳಬಹುದು.

ಈಗ ನಡೆಯುತ್ತಿರತಕ್ಕ ಕೋ-ಆಪರೇಟಿವ್ ಸೊಸೈಟಿಗಳು ಚೆನ್ನಾಗಿ ನಡೆಯುತ್ತಿವೆ ಎಂದು ನಾನಂತೂ ಅಭಿಪ್ರಾಯಪಡುತ್ತೇನೆ. ಕೋ-ಆಪರೇಟಿವ್ ಸೊಸೈಟಿಗಳಲ್ಲಿರತಕ್ಕ ಒಂದೆರಡು ಲೋಪದೋಷಗಳ ವಿಚಾರವನ್ನು ಹೇಳಬಹುದಾದರೆ ಅವರಿಗೆ ಸಕಾಲದಲ್ಲಿ ಸಹಾಯವನ್ನು ಒದಗಿಸತಕ್ಕ ವ್ಯವಸ್ಥೆಯನ್ನು ಮಾಡಿಕೊಡಬೇಕು. ಸಕಾಲದಲ್ಲಿ ಅವರಿಗೆ ಹಣದ ಸಹಾಯ, ಇತರ ಸಾಮಾನುಗಳ ಸಹಾಯವನ್ನು ಒದಗಿಸಿಕೊಟ್ಟದ್ದೇ ಆದರೆ ಚೆನ್ನಾಗಿ ನಡೆಯಬಹುದು.

ಶ್ರೀ ವಿ. ಶ್ರೀನಿವಾಸ ಶೆಟ್ಟಿ.—ಒಂದಾದರೂ ಚೆನ್ನಾಗಿ ನಡೆದದ್ದು ಇದೆಯೇ ಎಂದು ಕೇಳುತ್ತೇನೆ.

ಶ್ರೀ ಮಾಲಿ ಮರಿಯಪ್ಪ.—ಗೌರಿಬಿದನೂರು ತಾಲ್ಲೂಕು ಅಲಗನಹಳ್ಳಿ ಗ್ರಾಮಕ್ಕೆ ತಾವು ಹೋಗಿ ನೋಡಿಕೊಂಡು ಬಂದರೆ ತಮ್ಮ ಅಭಿಪ್ರಾಯವನ್ನು ಬದಲು ಮಾಡಿದರೂ ಮಾಡಬಹುದು. ಅಲ್ಲಿಯ ಜನರ ಶ್ರದ್ಧೆಯಿಂದ ಕೆಲಸ ಚೆನ್ನಾಗಿ ನಡೆದಿದೆ. ಆ ರೀತಿ ಸ್ವಲ್ಪ ಶ್ರದ್ಧೆಯನ್ನು ವಹಿಸಿದರೆ, ಬೇರೆ ಕಡೆಗಳಲ್ಲಿಯೂ ಅದೇ ರೀತಿಯ ಪ್ರತಿಫಲ ಬರಲೂಬಹುದು.

ಅಧ್ಯಕ್ಷರು.—ಕಲಘಟಗಿಯಲ್ಲಿ ಒಂದು ಫಾರ್ಮಿಂಗ್ ಸೊಸೈಟಿ ಇದೆ. ಅದೂ ಚೆನ್ನಾಗಿ ಕೆಲಸ ಮಾಡುತ್ತಿದೆ.

Sri MALI MARIAPPA.—I have no experience of that society. I know this society.

(SRI MALI MARIAPPA)

6-30 P.M.

ಆದರೂ ಸಹ ಇದರಲ್ಲಿ ಸ್ವಲ್ಪ ನಿಧಾನವಾಗಿ ಹೋಗೋಣ ಎನ್ನುವುದು ಹಿರಿಯ ರಾಜಕಾರಣಿಗಳ ಆಶಯವಾಗಿದೆ. ಮೊದಲು ಜನರನ್ನೂ ವಾತಾವರಣವನ್ನೂ ಸರಿಯಾಗಿ ತರಬೇತು ಮಾಡಬೇಕು, ಅನಂತರ ಪ್ರಾರಂಭ ಮಾಡೋಣ, ಮೊದಲೇ ಒತ್ತಾಯ ಹಾಕುವುದು ಬೇಡವೆಂಬ ಅಭಿಪ್ರಾಯವನ್ನು ಕೆಲವರು ವ್ಯಕ್ತಪಡಿಸಿದ್ದಾರೆ. ನಮ್ಮ ದೇಶದಲ್ಲಿ ವಾತಾವರಣ ಚೆನ್ನಾಗಿದೆ. ಈಗಿರತಕ್ಕ ಪರಿಸ್ಥಿತಿಯಲ್ಲಿ ಒಂದು fair trial ಕೊಟ್ಟಿದ್ದೇವೆಂದು ಹೇಳುವ ಹಾಗಿಲ್ಲ. ಈಗ ಎಲ್ಲರಿಗೂ ಸಾಕಷ್ಟು ಜಮೀನು ಸಿಕ್ಕುವುದಿಲ್ಲವೆಂಬುದು ತಿಳಿದಿದೆ. ಈ ಕೋ-ಆಪರೇಟಿವ್ ಫಾರ್ಮಿಂಗ್ ತರುವುದು ಸರಿಯಲ್ಲ ಅಥವಾ ಉಚಿತವಲ್ಲ, ಎಂದು ಹೇಳುವ ಸ್ಥಿತಿಯಲ್ಲಿಲ್ಲ. ಆದರೆ ಇದಕ್ಕೆ ಒಂದು fair trial ಕೊಡಬೇಕೆಂದು ಮಾತ್ರ ಅರಿಕೆ ಮಾಡಿಕೊಳ್ಳುತ್ತೇನೆ. ಈ ಬೇಡಿಕೆಗೆ ಸಭಾಸದಸ್ಯರ ಒಪ್ಪಿಗೆ ದೊರೆಯುತ್ತದೆಂದು ನನ್ನ ನಂಬಿಕೆ.

ಶ್ರೀ ಡಿ. ಟಿ. ಸೀತಾರಾಮರಾವ್.—ಭದ್ರಾವತಿ ಸೊಸೈಟಿಯಲ್ಲಿ ರೈತರಿಗೆ 20 ಸಾವಿರ ರೂಪಾಯಿ ನಷ್ಟವಾಗಿದೆ, ಅವರಿಗೇನಾದರೂ ಪರಿಹಾರ ಕೊಡುತ್ತೀರಾ ? ಕೇವಲ 600 ರೂಪಾಯಿ ಬಾಕಿ ಇದೆ, ಮಿಕ್ಕದುದೆಲ್ಲಾ ವಸೂಲಾಗಿದೆ. ಈ ಆರುನೂರೂ ವಸೂಲಾಗುತ್ತದೆ. I am asking on a matter of policy.

ಶ್ರೀ ಮಾಲಿ ಮರಿಯಪ್ಪ.—ಇದಕ್ಕೆ ಕಾರಣವೇನೆಂಬುದನ್ನು ವಿವರಿಸಬೇಕಾಗಿಲ್ಲ, ಮಾನ್ಯ ಸದಸ್ಯರಿಗೇ ಗೊತ್ತಿದೆ. ಅಲ್ಲಿ ಜವಾಬ್ದಾರಿ ತೆಗೆದುಕೊಂಡು ಯಾರು ನಡೆಸುತ್ತಿದ್ದರೋ ಅವರು ತಂದ ಹಣವನ್ನು ಪಾವತಿ ಮಾಡಲಿಲ್ಲ. ಕೂಡಲೇ ಅಧಿಕಾರಿಗಳು ಕ್ರಮ ತೆಗೆದುಕೊಂಡು ವಸೂಲು ಮಾಡಿದ್ದಾರೆ. ಕೃತ್ಯ ನಡೆದ 40 ದಿವಸದೊಳಗೆ ವಸೂಲು ಮಾಡಿದ್ದಾರೆ. ರೈತರಿಗೆ ಯಾವ ನಷ್ಟವೂ ಆಗುವುದಿಲ್ಲ.

ಶ್ರೀ ಎ. ಮುನಿಯಪ್ಪ (ಚಿಕ್ಕಬಳ್ಳಾಪುರ).—ತಾಲ್ಲೂಕು ಮಟ್ಟದಲ್ಲಿ ಸಹಕಾರ ಸಂಘಗಳ ಮೇಲ್ವಿಚಾರಣೆ ನೋಡಿಕೊಳ್ಳುವುದಕ್ಕೆ ಒಂದು ವರ್ಷದ ಹಿಂದೆ ಸಮಿತಿ ಮಾಡಿದರು. ಆ ಸಮಿತಿಯ ವಿಚಾರದಲ್ಲಿ ಸರ್ಕಾರದ ಅಭಿಪ್ರಾಯವೇನು ? ಸಣ್ಣ ಪ್ರಮಾಣದ ಸಂಘಗಳಿಗೆ ಷೇರು ಬಂಡವಾಳ ಕಡಮೆಯಾಗಿರುವುದರಿಂದ ಅವಕ್ಕೆ ಪರಮಾವಧಿ ಸಾಲವನ್ನು ಕೊಡುವುದಕ್ಕಾಗುವುದಿಲ್ಲವೆಂದು ಹೇಳಿದಿರಿ. ಸರ್ಕಾರವೇ ಅಂಥ ಸಂಘಗಳಿಗೆ ಷೇರು ಹಾಕಿ ಉತ್ತೇಜನ ಕೊಡುವ ವಿಷಯದಲ್ಲಿ ಸರ್ಕಾರದ ಅಭಿಪ್ರಾಯವೇನು ?

ಶ್ರೀ ಮಾಲಿ ಮರಿಯಪ್ಪ.—ಅದರಲ್ಲಿ ಸರ್ಕಾರದ ಷೇರು ಹಾಕುವುದೂ ಅಡಕವಾಗಿದೆ. ಷೇರು ರೂಪದಲ್ಲಿ ಕೊಡುತ್ತಿದ್ದಾರೆ. ಸಾರ್ವಜನಿಕರೂ ಕೂಡ ಷೇರು ಮೊತ್ತವನ್ನು ಹೆಚ್ಚಾಗಿ ಕೊಡುವುದರಿಂದ ಪ್ರತಿ ವರ್ಷವೂ ಉದ್ಭವಿಸಬಹುದಾದ ಅಗತ್ಯಗಳನ್ನು ಪೂರೈಸಿಕೊಳ್ಳುವುದಕ್ಕೆ ಸಾಕಷ್ಟು ಹಣ ಒದಗುತ್ತದೆ. ಆದುದರಿಂದ ಸರ್ಕಾರದ ಜೊತೆಯಲ್ಲಿ ಸಾರ್ವಜನಿಕರೂ ಹೆಚ್ಚು ಹಣ ಕೊಡುವುದಕ್ಕೆ ಪ್ರಯತ್ನ ಮಾಡಬೇಕು.

ಶ್ರೀ ಎ. ಮುನಿಯಪ್ಪ.—ವೇಲೂರಿನಲ್ಲಿರತಕ್ಕ ಸಹಕಾರ ಸಂಘಕ್ಕೆ ಮೇಲ್ವಿಚಾರಣೆಗೆ ಸಮಿತಿ ಮಾಡಿದ್ದರು; ಅದು ಏನಾಯಿತು ?

ಶ್ರೀ ಮಾಲಿ ಮರಿಯಪ್ಪ.—ಒಂದು ಸಮಿತಿ ಮಾಡಿದ್ದರು; ಆ ಸಮಿತಿಯವರು ಕೆಲವು ಶಿಫಾರಸುಗಳನ್ನು ಕೊಟ್ಟಿದ್ದಾರೆ, ಅವನ್ನು ಪರಿಶೀಲನೆ ಮಾಡುತ್ತಿದ್ದೇವೆ. ಈ ಮಾನ್ಯ ಸಭೆಯಲ್ಲಿ ಸಹಕಾರ ಕ್ಷೇತ್ರದಲ್ಲಿ ಪರಿಶ್ರಮ ಹೊಂದಿರುವ ಸದಸ್ಯರೊಡನೆ ಸಮಾಲೋಚನೆ ಮಾಡಬೇಕೆಂದು ನಿನ್ನೆಯ ದಿವಸ ಇಟ್ಟುಕೊಂಡಿತ್ತು, ಅದನ್ನು ನಾಳೆ ಇಟ್ಟುಕೊಂಡಿದ್ದೇನೆ. ಆಗ ಅವರು ಏನು ಸಲಹೆ ಕೊಟ್ಟಿದ್ದಾರೆಂಬುದು ಗೊತ್ತಾಗುತ್ತದೆ, ಅದರ ಮೇಲೆ ಮಾನ್ಯ ಸದಸ್ಯರ ಸಲಹೆಯನ್ನೂ ಪಡೆಯಲು ಅವಕಾಶವಾಗುತ್ತದೆ.

Sri G. B. SHANKAR RAO.—May I know whether the Hon'ble Minister is referring to the committee constituted last year under the Chairmanship of Sri K. Mallappa to consider the re-organisation of the system of Co-operative movement in the State ? I believe the report is before the Government. May I know whether they have accepted the recommendations and if so whether they are going to implement them ?

Sri K. F. PATIL.—Before making up its mind, Government is also anxious to have the views of such of those members as are interested in co-operation and also of those who have got experience in co-operative institutions and that report is going to come up for discussion also.

Sri G. B. SHANKAR RAO. I want to know specifically whether the Hon'ble Minister has understood the correct position. In Bombay Karnatak area societies are working as if they are one man's company. I am reminded of a case Solomon *vs.* Solomon in which many of the institutions were nothing but one man's company—father, grandfather, sons and grandsons. May I know whether the Hon'ble Minister has in mind the regular membership candidature as well as the election to the co-operative institutions to check monopolisation in these institutions ?

Sri MALI MARIAPPA.—I do not entirely agree that there is a monopolistic tendency there. Secondly, as the Hon'ble Member knows the Co-operative Soceities Bill as reported by the Select Committee will be before the House very shortly and if he has in mind that that system is not suitable or conducive, the Bill could be so modified as to suit the circumstances.

†ಶ್ರೀ ಎಚ್. ಸಿ. ಲಿಂಗಾರೆಡ್ಡಿ (ಯೋಜನೆ ಶಾಖಾ ಉಪ-ಸಚಿವರು).—ಮಾನ್ಯ ಅಧ್ಯಕ್ಷರೆ, ಸಾಮುದಾಯಿಕ ಅಭಿವೃದ್ಧಿ ಯೋಜನೆ, ರಾಷ್ಟ್ರೀಯ ವಿಸ್ತರಣಾ ಯೋಜನೆ ಮತ್ತು ಸ್ಥಳೀಯ ಅಭಿವೃದ್ಧಿ ಕಾರ್ಯಗಳ ಸಂಬಂಧವಾಗಿ ಅನೇಕ ಸಲಹೆಗಳನ್ನು ಮಾನ್ಯ ಸದಸ್ಯರು ಕೊಟ್ಟಿದ್ದಾರೆ. ಅನೇಕರು ಬಹಳ ಉಪಯುಕ್ತವಾದ ಸಲಹೆಗಳನ್ನು ಕೊಟ್ಟಿದ್ದಾರೆ. ಇದಕ್ಕಾಗಿ ನಾನು ಅವರೆಲ್ಲರನ್ನೂ ಹೃತ್ಪೂರ್ವಕವಾಗಿ ವಂದಿಸುತ್ತೇನೆ. ನಮ್ಮ ರಾಷ್ಟ್ರೀಯ ವಿಸ್ತರಣಾ ಯೋಜನೆ ಒಂದು ಇಲಾಖೆಯಲ್ಲ, ಇದೊಂದು ಚಳವಳಿ. ಈ ಚಳವಳಿಯಲ್ಲಿ ವ್ಯವಸಾಯ ಸಹಕಾರ ವಿಸ್ತರಣೆ ಮತ್ತು ಇನ್ನೂ ಅನೇಕ ಅಭಿವೃದ್ಧಿ ಕೆಲಸಗಳೂ ಸೇರಿರುವಾಗ ಮಾನ್ಯ ಸದಸ್ಯರೊಬ್ಬರು ನಾನು ಹದಿನೈದು ನಿಮಿಷಗಳಲ್ಲಿ ನನ್ನ ಮಾತನ್ನು ಮುಗಿಸಬೇಕೆಂದು ಹೇಳಿರುವುದು ನನಗೆ ಆಶ್ಚರ್ಯವಾಗಿದೆ. ರಾಷ್ಟ್ರೀಯ ವಿಸ್ತರಣೆ ಮತ್ತು ಸಾಮುದಾಯಿಕ ಅಭಿವೃದ್ಧಿ ಯೋಜನೆಗಳ ವಿಷಯದಲ್ಲಿ ಇದು ವರೆಗೂ ನಮ್ಮ ವ್ಯವಸಾಯ ಮಂತ್ರಿಗಳೂ ಸಹಕಾರ ಮಂತ್ರಿಗಳೂ ವ್ಯವಸಾಯ ಮತ್ತು ಸಹಕಾರಕ್ಕೆ ಸಂಬಂಧಪಟ್ಟ ಹಾಗೆ ಅನೇಕ ವಿವರಗಳನ್ನು ಕೊಟ್ಟಿದ್ದಾರೆ. ಈ ರಾಷ್ಟ್ರೀಯ ವಿಸ್ತರಣಾ ಯೋಜನೆ ಚಳುವಳಿ ಹೊಸದಾಗಿ ಬಂದಿದೆ. 1952ನೆಯ ಇಸವಿಯಿಂದಲೂ ನಮ್ಮ ಸಂಸ್ಥಾನದಲ್ಲಿ ಇದು ಜಾರಿಗೆ ಬಂದು ಅನೇಕ ಪ್ರಾಂತಗಳಲ್ಲಿ ಈ ಯೋಜನೆ ಕೆಲಸ ಮಾಡುತ್ತಿದೆ. ಇದರ ವಿಷಯದಲ್ಲಿ ವಿವಿಧ ಅಭಿಪ್ರಾಯಗಳನ್ನು ಮಾನ್ಯ ಸದಸ್ಯರು ಕೊಟ್ಟಿದ್ದಾರೆ. ಬಹುಭಾಗದ ಸದಸ್ಯರು ಕೆಲಸ ಚೆನ್ನಾಗಿ ನಡೆಯುತ್ತಿದೆ ಎಂದು ಹೇಳಿದರು. ಇನ್ನೂ ಕೆಲವರು ಬಹು ಭಾಗದ ಸದಸ್ಯರು ಕೆಲಸ ಚೆನ್ನಾಗಿ ನಡೆಯುತ್ತಿದೆ ಎಂದು ಹೇಳಿದರು. ಇನ್ನೂ ಕೆಲವರು, ಸದಸ್ಯರು ನಿರೀಕ್ಷಿಸಿದಷ್ಟು ಕೆಲಸವಾಗಿಲ್ಲ ಎಂದರು. ಒಬ್ಬ ಸದಸ್ಯರು ಇದರಿಂದೇನೂ ಪ್ರಯೋಜನವಿಲ್ಲ, ಅದರಿಂದ ಇದನ್ನು ತೆಗೆದು ಹಾಕಿಬಿಡಬೇಕೆಂದು ಹೇಳಿದರು. ಮತ್ತೆ ಕೆಲವು ಸದಸ್ಯರಿಂದ ಅನೇಕ ಅಭಿಪ್ರಾಯಗಳು ಬಂದಿವೆ. ಇನ್ನೂ ಅನೇಕ ಸದಸ್ಯರು ಯೋಜನೆ ಕೆಲಸ ಮಾಡಿರತಕ್ಕ ಪ್ರದೇಶಗಳಿಂದ ಬಂದಿರುವ ಮುಖಂಡರು ಹೇಳುತ್ತ ಅಲ್ಲಿನ ಅಧಿಕಾರಿಗಳಲ್ಲಿ ಒಂದು ರೀತಿಯಾದ ಉತ್ಸಾಹ ಮತ್ತು ಹುರುಪು ಚೆನ್ನಾಗಿರುವುದರಿಂದ ಕೆಲಸ ಚೆನ್ನಾಗಿ ನಡೆದಿದೆ ಎಂದು ಹೇಳಿದರು. ಹೀಗೆ ಬಹುಭಾಗದ ಸದಸ್ಯರು ಹೇಳಿದ್ದಾರೆ. ಇನ್ನೂ ಕೆಲವು ವಿರೋಧಪಕ್ಷದ ಸದಸ್ಯರು ಈ ರಾಷ್ಟ್ರೀಯ ವಿಸ್ತರಣಾ ಯೋಜನೆ ಬಂದಾಗ ಏನೋ ಒಂದು ರೀತಿಯಾಗಿ ಹೇಳೋಣವೆಂದು, ಇದರ ವಿಷಯ ಗೊತ್ತಿಲ್ಲದ ಮನೋಭಾವವುಳ್ಳವರಂತೆ ಅಭಿಪ್ರಾಯವನ್ನು ಕೂಡ ಕೊಟ್ಟರು. ಮೊದಲು ರಾಷ್ಟ್ರೀಯ ವಿಸ್ತರಣಾ ಯೋಜನೆ ಬೇಕು ಎಂದು ಕೇಳುತ್ತಾರೆ. ಕೊಟ್ಟಮೇಲೆ ಟೀಕೆ ಮಾಡಲು ಪ್ರಯತ್ನ ಮಾಡುತ್ತಾರೆ. ಹೀಗೆ ಟೀಕೆಯನ್ನು ಮಾಡುವಾಗ ಈ ರಾಷ್ಟ್ರೀಯ ವಿಸ್ತರಣಾ ಯೋಜನೆಯಲ್ಲಿ ರಾಜಕೀಯ ದೃಷ್ಟಿಯಿಂದ ಕೆಲಸ ನಡೆಯುತ್ತಿದೆ ಎಂದು ನಮ್ಮ ವಿರೋಧಪಕ್ಷದ ಸದಸ್ಯರು ಇದನ್ನೇ ಬಹಳ ದೊಡ್ಡದಾಗಿ ಹೇಳಿದರು. ಹೀಗೆ ನಮ್ಮ ಕೊಳ್ಳೆಗಾಲದಿಂದ ಬಂದಿರುವ ಶ್ರೀ ವೆಂಕಟೇಗೌಡರು, ನಮ್ಮ ಹೊಸದುರ್ಗದಿಂದ ಬಂದಿರುವ ಶ್ರೀ ಶಂಕರಪ್ಪನವರು, ಹಾಗೆಯೆ ಸಿರಾದಿಂದ ಬಂದಿರುವ ಶ್ರೀ ಮುಕ್ಕಣ್ಣಪ್ಪನವರು ಮತ್ತು ಇನ್ನೂ ಅನೇಕ ವಿರೋಧಪಕ್ಷದ ಮಾನ್ಯ ಸದಸ್ಯರು ಹೇಳಿದ್ದಾರೆ. ಅವರವರ ತಾಲ್ಲೂಕಿನಲ್ಲಿ ಈ ರೀತಿಯಾದ ಬ್ಲಾಕುಗಳಿಲ್ಲ ಎಂದು ನಮ್ಮ ವಿರೋಧಪಕ್ಷದ ನಾಯಕರಾದ ಶ್ರೀ ಶ್ರೀನಿವಾಸಶೆಟ್ಟರು, ಶ್ರೀ ರಾಜಯ್ಯ ಶೆಟ್ಟರು, ಶ್ರೀ ಪುಟ್ಟಣ್ಣನವರು, ಶ್ರೀ ಚಾಮಯ್ಯನವರು, ಶ್ರೀ ಬಸವೇಗೌಡರು ಮತ್ತು ಹಾಗೂ ಶ್ರೀ ರಾಮಪ್ಪನವರು, ಹೇಳುತ್ತ ಈ ಬ್ಲಾಕುಗಳನ್ನು ಕೆಲವು ತಾಲ್ಲೂಕುಗಳಲ್ಲಿ ಕೊಟ್ಟಿದ್ದರೂ ಅವು ಸರಿಯಾಗಿ ಮುಂದುವರಿಯುತ್ತಿಲ್ಲ ಎಂದು ಹೇಳಿದರು. ಈ ಬ್ಲಾಕುಗಳಲ್ಲಿ ಕೆಲಸಗಳು ಹೊಸದಾಗಿ ಏನೂ ಆಗಿಲ್ಲ ಎಂದರು ಮತ್ತೆ ಕೆಲವು ಕಡೆಗಳಲ್ಲಿ ಈಗ ತಾನೇ ಹೊಸ ಬ್ಲಾಕುಗಳನ್ನು ಕೊಡುವಾಗ ವಿರೋಧ ಪಕ್ಷದ ಸದಸ್ಯರು ಅದಕ್ಕೆ ಒಂದು ರೀತಿಯಾದ ಬಣ್ಣವನ್ನು ಕಟ್ಟಿ ಕೇವಲ ಕಾಂಗ್ರೆಸ್ಸಿನ ಸದಸ್ಯರು ಆರಿಸಿ ಬಂದಿರುವ ಕ್ಷೇತ್ರಗಳಿಗೆ ಮಾತ್ರ ಇಂತಹ ಬ್ಲಾಕುಗಳನ್ನು ಕೊಡುತ್ತಿದ್ದಾರೆ, ಇತರ ಪಕ್ಷಗಳವರ ಕ್ಷೇತ್ರಗಳಿಗೆ ಕೊಡುತ್ತಿಲ್ಲ ಎಂದು ಹೇಳಿದರು. ಇದರಲ್ಲಿ ಸತ್ಯಾಂಶವಿಲ್ಲ ಎಂದು ನಾನು ಮಾನ್ಯ ಸದಸ್ಯರಲ್ಲಿ ವಿನಂತಿ ಮಾಡಲು ಇಷ್ಟಪಡುತ್ತೇನೆ.

ಈ ರಾಷ್ಟ್ರೀಯ ವಿಸ್ತರಣಾ ಸಂಬಂಧವಾಗಿ ನಮ್ಮ ಅನೇಕ ಸದಸ್ಯರ ಕ್ಷೇತ್ರಗಳಿಗೆ ನಾನೂ ಹೋಗಿದ್ದೆ. ವಿರೋಧ ಪಕ್ಷದವರಾದ ಶ್ರೀ ಪುಟ್ಟಣ್ಣನವರ ಕ್ಷೇತ್ರಕ್ಕೆ ಹೋಗಿದ್ದೆ. ನಾವುಅಲ್ಲಿಗೆ ಹೋದಾಗ ಕೆಲಸ ನಡೆಯುತ್ತಿದೆ ಎಂದು ಹೇಳುತ್ತಾರೆ. ಮಾನ್ಯ ಶ್ರೀ ಮುಕ್ಕಣ್ಣಪ್ಪನವರ ಕ್ಷೇತ್ರದಲ್ಲಿರುವ ಅವರ ಬ್ಲಾಕಿನ ಕಡೆಗೂ ಹೋಗಿ ಬಂದಿದ್ದೆ. ಒಂದು ಸಮಿತಿಯ ಸಭೆಗೂ ಹೋಗಿ ಅಲ್ಲಿ ಹೇಗೆ ಕೆಲಸಗಳು ನಡೆಯುತ್ತಿವೆ ಎನ್ನುವುದನ್ನೂ ವಿಚಾರಿಸಿಕೊಂಡು ಬಂದೆ. ಆದರೆ ಅವತ್ತಿನ ದಿವಸ ಶ್ರೀ ಮುಕ್ಕಣ್ಣಪ್ಪನವರು ಅಲ್ಲಿಗೆ ಬಂದಿರಲಿಲ್ಲ. ಅವರು ಇನ್ನೂ ಕೆಲವು ವಿಷಯಗಳನ್ನು ಹೇಳುವುದಿದೆ : ಬನ್ನಿ, ಎಂದು ಅವರನ್ನು ಕರೆದರೆ ಅವರು ನಾನು ಬರುವುದಿಲ್ಲ, ಬಂದರೆ ಇಲ್ಲಿ ಟೀಕೆ ಮಾಡುವುದಕ್ಕಾಗುವುದಿಲ್ಲ, ಅದಕ್ಕೋಸ್ಕರ ನಾನು ಬರುವುದಿಲ್ಲ ಎಂದು ಹೇಳಿದರು.

ಆಮೇಲೆ ನನ್ನ ವಿಷಯದಲ್ಲಿ ಮತ್ತು ಇನ್ನಿತರ ವಿಷಯದಲ್ಲಿ ಅನೇಕ ಅಭಿಪ್ರಾಯಗಳನ್ನು ಕೊಟ್ಟಿದ್ದಾರೆ. ಅವರು ತಮ್ಮ ಅಭಿಪ್ರಾಯಗಳನ್ನು ಹೇಳುವಾಗ ಬಹಳ ಕಟುವಾಗಿಯೇ ಹೇಳಿದರು. ಅದಕ್ಕೆ ಕಾರಣವನ್ನೂ ಕೂಡ ಹೇಳಿದರು. ನನ್ನಲ್ಲಿಗೆ ಅವರು ಬಂದಿದ್ದಾಗ ಈ ಅಭಿವೃದ್ಧಿ ಕ್ಷೇತ್ರಗಳ ಸಮಿತಿಯ ಸದಸ್ಯರುಗಳನ್ನು ನೇಮಕ ಮಾಡುವ ವಿಷಯದ ಫೈಲು ಮಾಲ ಮರಿಯಪ್ಪನವರಲ್ಲಿದೆ ಎಂದು ನಾನು ಹೇಳಿದೆ ಎಂದು ಒಂದು ತರಹ ಬಹಳ ಕೋಪ ಮಾಡಿಕೊಂಡು ಹೇಳಿದರು. ಅವರು ನನ್ನ ಹತ್ತಿರ ಬಂದಿದ್ದೂ ನಿಜ. ನಾವು ಯಾರನ್ನು ಮೆಂಬರುಗಳನ್ನಾಗಿ ಮಾಡಬೇಕು ಎಂದು ಇದ್ದೇವೋ ಅವರ ಹೆಸರುಗಳನ್ನು ಕೊಡಿ ಎಂದು ಅವರು ಹೇಳಿದರು. ಮತ್ತು ಜಿಲ್ಲಾಧಿಕಾರಿಗಳು ಯಾವ ಹೆಸರುಗಳನ್ನು ಈ ಸಂಬಂಧದಲ್ಲಿ ಕೊಟ್ಟಿದ್ದಾರೋ ಅದನ್ನು ಕೊಡಬೇಕೆಂದು ನನ್ನಲ್ಲಿ ಹೇಳಿದರು. ಆಗ ನಾನು ಆ ರೀತಿ ಕೊಡುವುದಕ್ಕಾಗುವುದಿಲ್ಲ, ಏಕೆಂದರೆ ನಾವು ಓಥ್ ಆಫ್ ಸೀಕ್ರೆಸಿ ತೆಗೆದುಕೊಂಡಿರುವುದರಿಂದ ಈ ರೀತಿಯಾಗಿ ಕೊಡುವುದು ವಿರೋಧವಾಗುತ್ತದೆ ಎಂದು ಹೇಳಿದಾಗ ಅವರು ನನ್ನನ್ನು ಹೆಚ್ಚು ಒತ್ತಾಯ ಮಾಡಲಿಲ್ಲ. ಅನಂತರ ನಮ್ಮ ಮುಖ್ಯ ಮಂತ್ರಿಗಳಿಗೆ ಒಂದು ಪತ್ರವನ್ನು ಬರೆದು ಅದರ ಕಾಪಿಯನ್ನೂ ನನಗೂ ಕಳುಹಿಸಿಕೊಟ್ಟರು. ಅದರಲ್ಲಿ ಸದಸ್ಯರ ಅಭಿಪ್ರಾಯಗಳು ಏನು ಎನ್ನುವುದನ್ನು ತಿಳಿದುಕೊಂಡು ಈ ಸಮಿತಿಗಳನ್ನು ಮಾಡಬೇಕೆಂದು ಹೇಳಿ ನನ್ನ ವಿಷಯದಲ್ಲಿಯೂ ಬಹಳ ಸ್ವಾರ್ಥತೆಯ

(ಶ್ರೀ ಎಚ್. ಸಿ. ಲಿಂಗಾರೆಡ್ಡಿ)

ಅಧಿಕಾರ ಮನೋಭಾವದಿಂದ ವರ್ತಿಸುತ್ತಿದ್ದಾರೆ ಎಂದು ಬರೆದಿದ್ದರು. ಅದೇ ರೀತಿ ನನಗೆ ಬಂದಿರುವ ಕಾಪಿಯಲ್ಲಿಯೂ ಇತ್ತು. ಆದುದರಿಂದ ಶ್ರೀ ಮುಕ್ಕಣ್ಣಪ್ಪನವರು ಒಂದು ದೊಡ್ಡ ಕೋಪವನ್ನು ಮಾಡಿಕೊಂಡು ನನ್ನಮೇಲೆ ಅನೇಕ ಆರೋಪಣೆಗಳನ್ನೂ ಸಹ ಮಾಡಿದ್ದಾರೆ. ಅವರೂ ನನ್ನ ಸ್ನೇಹಿತರು. ಆ ಆರೋಪಣೆಗಳಿಗೆ ಪ್ರತಿಯಾಗಿ ಆರೋಪಣೆಗಳನ್ನು ಮಾಡುವಷ್ಟು ಶಕ್ತಿ ಇದ್ದರೂ ಇದಕ್ಕಿಂತ ಹೆಚ್ಚಿಗೆ ಏನನ್ನೂ ಹೇಳಬಯಸುವುದಿಲ್ಲ.

ಈ ರಾಷ್ಟ್ರೀಯ ವಿಸ್ತರಣಾ ಯೋಜನೆಗಳ ಸಂಬಂಧವಾಗಿ ಎರಡನೆಯ ಪಂಚವಾರ್ಷಿಕ ಯೋಜನೆಯಲ್ಲಿ ಮೊದಲನೆಯ ಪಂಚವಾರ್ಷಿಕ ಯೋಜನೆಯಲ್ಲಿ ಎಷ್ಟರಮಟ್ಟಿಗೆ ಕಡಮೆಯಾಗಿ ನಡೆದಿವೆ, ಮತ್ತು ಇದರಿಂದ ಹೆಚ್ಚಿನ ಸಹಾಯಗಳು ಸಿಕ್ಕಲಿಲ್ಲ ಎಂದು ತಿಳಿಸಿದ್ದರೋ ಮತ್ತು ಈ ವಿಧವಾದ ಇನ್ನೂ ಅನೇಕ ದೂರುಗಳನ್ನು ಮಾಡಿದ್ದರೋ ಅವೆಲ್ಲ ಸ್ವಲ್ಪ ಮಟ್ಟಿಗೆ ಈಗ ಹಿಂದಕ್ಕೆ ಹೋಗಿವೆ ಎನ್ನುವುದು ತಿಳಿದು ಬರುತ್ತದೆ. ಮಾನ್ಯ ಸದಸ್ಯರ ಉಳಿದ ಟೀಕೆಗಳಿಗೆ ಆ ಮೇಲೆ ಉತ್ತರವನ್ನು ಕೊಡುತ್ತೇನೆ. ನಮ್ಮ ಸಂಸ್ಥಾನದಲ್ಲಿ ಒಟ್ಟು

No. of Blocks allotted: 143,

No. of Blocks to be allotted: 125.

ಒಟ್ಟು 180 ತಾಲ್ಲೂಕುಗಳಲ್ಲಿ 106 ತಾಲ್ಲೂಕುಗಳಲ್ಲಿ ಈಗಾಗಲೇ ಈ ರಾಷ್ಟ್ರೀಯ ವಿಸ್ತರಣಾ ಯೋಜನೆಯ ಬ್ಲಾಕುಗಳು ಬಂದಿವೆ. 194 ಲಕ್ಷ ಪ್ರಜಾ ಸಂಖ್ಯೆಯ ಪೈಕಿ 106·32 ಪ್ರಜಾ ಸಂಖ್ಯೆಯವರೆಗೆ ಈಗಾಗಲೇ ಪೂರ್ತಿಯಾಗಿ ರಾಷ್ಟ್ರೀಯ ವಿಸ್ತರಣಾ ಯೋಜನೆಗಳು ಬಂದಿವೆ. ಎಂದರೆ ಪ್ರಜಾಸಂಖ್ಯೆಯ ದೃಷ್ಟಿಯಿಂದ 59 per cent of the total population ಆಗುತ್ತದೆ. ನಮ್ಮ ಸಂಸ್ಥಾನದ ವಿಸ್ತೀರ್ಣದ ದೃಷ್ಟಿಯಿಂದ Area of the State 74,861 miles, ಇದರ ಪೈಕಿ 45,938 ಚದರ ಮೈಲಿಗಳ ಪ್ರದೇಶ ಎಂದರೆ 62 per cent of the total area has been covered. ಶೇಕಡಾ 62 ರಷ್ಟು ವಿಸ್ತೀರ್ಣದಲ್ಲಿ ಯೋಜನೆಗಳು ಪೂರ್ತಿಯಾಗಿವೆ. ನಮ್ಮ ಸಂಸ್ಥಾನದಲ್ಲಿ ಒಟ್ಟು 25,888 ಹಳ್ಳಿಗಳಿವೆ. ಇವುಗಳ ಪೈಕಿ 18,881 ಹಳ್ಳಿಗಳಿಗೆ ಯೋಜನೆ ಈಗಾಗಲೇ ಪೂರ್ತಿಯಾಗಿವೆ. ಯೋಜನೆಯನ್ನು ನಾವು ವಿಮರ್ಶೆ ಮಾಡುವಾಗ ಎಷ್ಟು ಹಣ ಖರ್ಚು ಮಾಡಿದ್ದಾರೆ, ಎಷ್ಟನ್ನು ಕೊಟ್ಟಿದ್ದಾರೆ, ಯಾವ ಯಾವ ಸ್ಟೇಜಿನಲ್ಲಿ ಎಷ್ಟೆಷ್ಟು ಹಣವಿದೆ, ಎನ್ನುವ ಕಡೆಗೆ ಮತ್ತು ಯೋಜನೆಯ ಉದ್ದೇಶಗಳು ಎಷ್ಟರಮಟ್ಟಿಗೆ ಸಫಲವಾಗಿವೆ ಎನ್ನುವುದನ್ನೆಲ್ಲ ಸ್ವಲ್ಪ ಯೋಚನೆ ಮಾಡುವುದು ಒಳ್ಳೆಯದು. ಈ ಯೋಜನೆಗೆ ಎರಡು ಮಟ್ಟಗಳಿವೆ. ಮೊದಲನೆಯ ಸ್ಟೇಜು, ಐದು ವರ್ಷ ಮತ್ತು ಎರಡನೆಯ ಸ್ಟೇಜು ಐದು ವರ್ಷ. ಒಬ್ಬೊಬ್ಬರಿಗೆ ಪರ್ ಕ್ಯಾಪಿಟಾ ಸುಮಾರು 200 ರೂಪಾಯಿಗಳಾಗುತ್ತವೆ ಎಂದು ಖರ್ಚು ಮಾಡುತ್ತಿದ್ದೇವೆ. ಮೊದಲನೆಯ ಸ್ಟೇಜಿನಲ್ಲಿ ಒಬ್ಬ ಮನುಷ್ಯನಿಗೆ ಮೂರರಿಂದ ಆರು ರೂಪಾಯಿಗಳು, ಎರಡನೆಯ ಸ್ಟೇಜಿನಲ್ಲಿ ಒಬ್ಬ ಮನುಷ್ಯನಿಗೆ ಒಂದು ರೂಪಾಯಿ ಹೀಗೆ ಖರ್ಚನ್ನು ಮಾಡುತ್ತಿದ್ದೇವೆ.

ಆಮೇಲೆ ನಮ್ಮ ಮೈಸೂರು ಸಂಸ್ಥಾನದ ರಾಷ್ಟ್ರೀಯ ವಿಸ್ತರಣಾ ಯೋಜನೆಯ ಕಾರ್ಯಕ್ರಮಗಳು ಎಷ್ಟರಮಟ್ಟಿಗೆ ಆಗಿದೆ, ಮತ್ತು ಬೇರೆ ಸಂಸ್ಥಾನಗಳಲ್ಲಿರುವ ಈ ರೀತಿಯ ಯೋಜನೆಗಳು ಎಷ್ಟರಮಟ್ಟಿಗೆ ಕೆಲಸ ಮಾಡುತ್ತಿವೆ ಎನ್ನುವುದನ್ನು ನಾವು ಸ್ವಲ್ಪ ಮಟ್ಟಿಗೆ ಗಮನಿಸಿದರೆ ನಮ್ಮ ಸಂಸ್ಥಾನದಲ್ಲಿ 668 ಲಕ್ಷ ರೂಪಾಯಿಗಳ ಪೈಕಿ 517 ಲಕ್ಷ ರೂಪಾಯಿಗಳಷ್ಟು ಹಣವನ್ನು ನಾವು ಖರ್ಚು ಮಾಡಿದ್ದೇವೆ. ಇನ್ನು ಟಾರ್ಗೆಟ್ ಅಮೌಂಟಿನಲ್ಲಿ ಸುಮಾರು ನೂರಕ್ಕೆ ಎಪ್ಪತ್ತೈದು ಭಾಗದಷ್ಟು ಖರ್ಚಾಗಿದೆ. ಯಾವ ಯಾವ ರೀತಿಯಾಗಿ ಖರ್ಚಾಗಿದೆ ಎಂಬ ವಿಷಯದಲ್ಲಿ ಟೀಕೆಯನ್ನು ನಮ್ಮ ಶ್ರೀ ಶಂಕರಪ್ಪನವರು ಮಾಡಿದರು ಮತ್ತು ಬೇರೆ ಸದಸ್ಯರೂ ಸಹ ಮಾಡಿದ ಹಾಗೆ ಇದೆ. ಸಿಬ್ಬಂದಿಯ ಮೇಲೆ, ಮೋಟಾರು ಜೀಪುಗಳ ಮೇಲೆ, ಹೀಗೆ ಬಹಳ ಹೆಚ್ಚಾಗಿ ಖರ್ಚು ಮಾಡಿದ್ದಾರೆ ಎನ್ನುವಂತಹ ಟೀಕೆಗಳನ್ನು ಈಗ ಮಾಡಿದ್ದಾರೆ. ಮೊದಲನೆಯ ಸ್ಟೇಜಿನಲ್ಲಿ 3.27 ಲಕ್ಷ ರೂಪಾಯಿಗಳನ್ನು ಐದು ವರ್ಷಗಳಲ್ಲಿ ನಾವು ಖರ್ಚು ಮಾಡಬೇಕಾಗುತ್ತದೆ. ಎಂದರೆ ಈ ಹಣದಲ್ಲಿ 68,100 ರೂಪಾಯಿಗಳು, ಹೆಲ್ತ್ ಯೂನಿಟ್ಟೂ ಸೇರಿ, ಈಗ ಬಡ್ಜೆಟ್ಟಿನಲ್ಲಿದೆ. ಇದರಲ್ಲಿ 2.59 ಲಕ್ಷದಷ್ಟು ಐದು ವರ್ಷಗಳಲ್ಲಿ ಎಂದರೆ ವರ್ಷಕ್ಕೆ ಸುಮಾರು ಎರಡು ಸಾವಿರ ರೂಪಾಯಿಗಳಷ್ಟು ಹಣವನ್ನು ನಾವು ಸಿಬ್ಬಂದಿಯ ಮೇಲೆ ಖರ್ಚು ಮಾಡುತ್ತಿದ್ದೇವೆ. ಎಂದರೆ ನೂರಕ್ಕೆ 18 ರಷ್ಟು, ಪ್ರತಿಯೊಂದು ಬ್ಲಾಕಿನಲ್ಲಿಯೂ ಖರ್ಚು ಮಾಡಲಾಗುತ್ತಿದೆ. ಇದರಿಂದ ನಾವು ಯಾವ ರೀತಿಯಾಗಿ ಸಿಬ್ಬಂದಿಯ ಮೇಲೆ ಖರ್ಚನ್ನು ಮಾಡುತ್ತಿದ್ದೇವೆ ಎನ್ನುವುದನ್ನು ಗಮನಿಸಬೇಕು.

ಈ ಹಣ ಏತಕ್ಕಾಗಿ ಖರ್ಚಾಗಿದೆ ಎಂದರೆ, ಹತ್ತು ಜನ ಗ್ರಾಮಸೇವಕರು, ಒಬ್ಬ ಬ್ಲಾಕ್ ಡೆವಲಪ್‌ಮೆಂಟ್ ಆಫೀಸರು, ಎಕ್ಸ್‌ಟೆನ್‌ಷನ್ ಆಫೀಸರು, ಸಬ್ ಇಂಜನಿಯರು, ಪಂಚಾಯತಿ ಆಫೀಸರು (ಇದುವರೆಗೂ ಅಪಾಯಿಂಟ್ ಮಾಡಿಲ್ಲ) ಸಿಬ್ಬಂದಿಗಾಗಿ. ಈ ಅಧಿಕಾರಿಗಳು ಕಲೆಕ್ಟಿಂಗ್ ಆಫೀಸರುಗಳಲ್ಲ. ಇವರು ಎಕ್ಸ್‌ಟೆಂಷನ್ ಆಫೀಸರುಗಳು, ಅಂದರೆ ವಿಸ್ತರಣಾ ಅಧಿಕಾರಿಗಳು ಅನ್ನುವುದನ್ನು ಈ ಖರ್ಚನ್ನು ಯೋಚನೆ ಮಾಡುವಾಗ ಗಮನದಲ್ಲಿ ಇಟ್ಟುಕೊಳ್ಳಬೇಕಾಗಿದೆ. ಸಹಕಾರ ಇಲಾಖೆಯ ಇನ್‌ಸ್ಪೆಕ್ಟರವರು, ವ್ಯವಸಾಯ ಇಲಾಖೆಯ ಇನ್‌ಸ್ಪೆಕ್ಟರು, ಪಿ.ಡಬ್ಲ್ಯು.ಡಿ. ಅಸಿಸ್ಟೆಂಟ್ ಇಂಜನಿಯರು, ಅವರು ಕೂಡ ಬ್ಲಾಕ್ ಡೆವಲಪ್‌ಮೆಂಟ್ ಆಫೀಸರ ಕೈಕೆಳಗೆ ಕೆಲಸಮಾಡುತ್ತಾರೆ. ಅವರ ಖರ್ಚು ಆಯಾ ಇಲಾಖೆಗೆ ಸಂಬಂಧಪಟ್ಟಿದ್ದು, ಇದರಲ್ಲಿ ಸೇರಿಲ್ಲ. ಈಗ ನಾನು ಆಗಲೇ ಹೇಳಿದ. 517 ಲಕ್ಷ ರೂಪಾಯಿಗಳನ್ನು ಖರ್ಚುಮಾಡಿದ್ದೇವೆ. ಪೀಪಲ್ಸ್ ಕಂಟ್ರಿಬ್ಯೂಷನ್ (ಜನಗಳ ಒಂದು ಭಾಗದ ಹಣ) ಮತ್ತು ಅವರ ಕೆಲಸದ ರೂಪವಾಗಿ ಬಂದಿರತಕ್ಕ ಮೊಬಲಗು ಅದರಲ್ಲಿ 111 ಲಕ್ಷ ರೂಪಾಯಿಗಳು. ಇದರ ಪೈಕಿ 57 ಲಕ್ಷ ರೂಪಾಯಿಗಳು ಜನಗಳ ಲೇಬರ್ ರೂಪವಾಗಿ ಮತ್ತು ಉಳಿದ ಸುಮಾರು 54 ಲಕ್ಷ ರೂಪಾಯಿಗಳು ನಗದು ರೂಪವಾಗಿ ಜನಗಳಿಂದ ಬಂದಿದೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಸ್ಕೂಲ್ ಎಷ್ಟು, ರಸ್ತೆ ಎಷ್ಟು ಹೇಳುತ್ತೀರ?

ಶ್ರೀ ಎಚ್. ಸಿ. ಲಿಂಗಾರೆಡ್ಡಿ.—ಆದ್ದರಿಂದ ಮಾನ್ಯ ಸದಸ್ಯರು ಯೋಚನೆ ಮಾಡಬೇಕಾದದ್ದು, 111 ಲಕ್ಷ ರೂಪಾಯಿಗಳ ಕೆಲಸ ಎಂದು ಹೇಳುವಾಗ, ಇದು ಕೇವಲ ಪ್ರಯೋಜನವಿಲ್ಲ, ಇದರಿಂದ ಏನೇನೂ ಆಗಿಲ್ಲ, ಎಲ್ಲಾ ಕಡೆ ಹಾಳಾಗಿದೆ, ಅಪಾಯವಾಗಿದೆ ಎನ್ನುವ ಟೀಕೆಟಿಪ್ಪಣಿಗಳಿಗೆ ಏನೂ ಆಧಾರವಿಲ್ಲ ಎಂದು ಮಾನ್ಯ ಸದಸ್ಯರು ಗಮನಿಸಬೇಕೆಂದು ನನ್ನ ಪ್ರಾರ್ಥನೆ.

ಮೈನರ್ ಇರಿಗೇಷನ್ ಬಗ್ಗೆ 105 ಲಕ್ಷ ರೂಪಾಯಿಗಳ ಹಣವನ್ನು ಖರ್ಚುಮಾಡಿದೆ, ಈ ಹಣದಲ್ಲಿ ನೀರಾವರಿ ಬಾವಿಗಳನ್ನು ತೆಗೆಯುವುದು, ಜಮೀನು ಆಬಾದು ಮಾಡುವುದು, ಕೆರೆ ಮತ್ತು ಕಾಲುವೆಗಳನ್ನು ಕಟ್ಟಿಸಿಕೊಡುವುದು ಮುಂತಾದ ಅನೇಕ ಕೆಲಸಗಳು ಸೇರಿವೆ. ಅಗ್ರಿಕಲ್ಚರ್, ಅಡ್ಮಿನಿಸ್ಟ್ರೇಷನ್, ಹೆಲ್ತ್, ಈ ಮೂರನ್ನೂ ಹೆಚ್ಚಿಗೆ ಉತ್ತಮ ರೀತಿಯಲ್ಲಿ ಮಾಡಬೇಕು.

ಶ್ರೀ ಸಿ. ಕೆ. ರಾಜಯ್ಯಶೆಟ್ಟಿ.—105 ಲಕ್ಷ ರೂಪಾಯಿ ಮೈನರ್ ಇರಿಗೇಷನ್ನಿಗೆ ಆಯಿತು.

ಶ್ರೀ ಎಚ್. ಸಿ. ಲಿಂಗಾರೆಡ್ಡಿ.—ನಾನು ಕೊಡುತ್ತಾ ಇರತಕ್ಕ ಮೊಬಲಗು ಈಗಾಗಲೆ ಕೆಲಸವಾಗಿರುವಂಥಾದ್ದು. ಇದು ನಾನು ಮೊದಲೆ ಹೇಳಿದ ಹಾಗೆ ಎನ್.ಇ.ಎಸ್. ಮತ್ತು ಸಿ. ಡಿ. ಸ್ಟೇಜಿನಲ್ಲಿ ಮೈನರ್ ಇರಿಗೇಷನ್ನಿಗೆ ಸ್ವಲ್ಪ ಹಣ ಮಾತ್ರ ಇತ್ತು—ಕೇವಲ ಸಾಲ ಕೊಡುವಂಥಾದ್ದು, ಬಾವಿ ತೆಗೆಯುವಂಥಾದ್ದು. ಈಗ ಫಸ್ಟ್, ಸೆಕೆಂಡ್ ಸ್ಟೇಜ್ ಆದಮೇಲೆ, ಫಸ್ಟ್ ಸ್ಟೇಜಿನಲ್ಲಿ ಮೂರು-ನಾಲ್ಕು ಲಕ್ಷ ರೂಪಾಯಿಗಳ ಹಣ ಮೈನರ್ ಇರಿಗೇಷನ್ನಿಗೆ ಇದೆ. ಈಗ ಪಬ್ಲಿಕ್ ವರ್ಕ್ಸ್ ಇಲಾಖೆಯಲ್ಲಿ ಬೇಕಾದಷ್ಟು ಹಣವಿರುವುದರಿಂದ ಅನೇಕ ಕಡೆಗಳಲ್ಲಿ ನಮ್ಮ ಕಮ್ಯೂನಿಟಿ ಡೆವಲಪ್‌ಮೆಂಟ್ ಯೋಜನೆಯಲ್ಲಿ ಇರತಕ್ಕಂಥ ಮೈನರ್ ಇರಿಗೇಷನ್ ಹಣವನ್ನು, ಹೆಚ್ಚಿಗೆ ಬಾವಿಗಳನ್ನು ತೆಗೆಯುವುದಕ್ಕೆ ಸಬ್‌ಸಿಡಿಯಾಗಿ, ಸಾಲದ ರೂಪವಾಗಿ ವ್ಯವಸಾಯಗಾರರಿಗೆ ಕೊಡುವುದಕ್ಕೆ ಹೆಚ್ಚಿಗೆ ಖರ್ಚುಮಾಡುತ್ತಿದ್ದೇವೆ ಎಂಬುದನ್ನು ಮಾನ್ಯ ಸದಸ್ಯರು ಗಮನಿಸಬೇಕೆಂದು ನನ್ನ ಪ್ರಾರ್ಥನೆ. ಒಟ್ಟು 4,250 ಡ್ರಿಂಕಿಂಗ್ ವಾಟರ್ ವೆಲ್ಸ್, 4,723 ಅಡಲ್ಟ್ ಲಿಟರೆಸಿ ಸೆಂಟರುಗಳು, 822 ಗ್ರಾಮ ಸಹಾಯಕರ ತರಬೇತು ಕ್ಯಾಂಪುಗಳು, 6,793 ಉದ್ದದ ಕಚ್ಚಾ ರಸ್ತೆ ಇವುಗಳನ್ನು ಮಾಡಿದೆ, 2,106 ಕಲ್ವರ್ಟ್‌ಗಳನ್ನೂ ಹಾಕಲಾಗಿದೆ.

ಶ್ರೀ ಜಿ. ಎನ್. ಪುಟ್ಟಣ್ಣ.—ರಸ್ತೆಗಳನ್ನು ಪಂಚಾಯಿತಿಯವರು ಮಾಡಿದ್ದು. ಇವುಗಳನ್ನು ಎನ್. ಇ. ಎಸ್.ಗೆ ಸೇರಿಸಿಕೊಂಡಿರುವುದು ತಮಗೆ ಗೊತ್ತಿದೆಯೆ?

ಶ್ರೀ ಎಚ್. ಸಿ. ಲಿಂಗಾರೆಡ್ಡಿ.—ಪಂಚಾಯಿತಿಯವರು, ತಮ್ಮಂಥವರು,' ರಾಷ್ಟ್ರೀಯ ವಿಸ್ತರಣಾ ಯೋಜನೆಯ ಅಧಿಕಾರಿಗಳು ಮತ್ತು ಸದಸ್ಯರು ಸೇರಿ ಮಾಡಿರುವ ಅನೇಕ ರಸ್ತೆಗಳು ದೇಶದಲ್ಲಿ ಇವೆ.

ಶ್ರೀ ಜಿ. ಎನ್. ಪುಟ್ಟಣ್ಣ.—ಕ್ರಿಟಿಸೈಸ್ ಮಾಡಬೇಕು ಎಂಬ ಉದ್ದೇಶದಿಂದ ನಾನು ಮಾಡುವವನಲ್ಲ. ಪಂಚಾಯಿತಿಯವರು ಹಿಂದೆ ಮಾಡಿದ ರಸ್ತೆಗಳನ್ನು ಎನ್.ಇ.ಎಸ್.ನವರು ತೆಗೆದುಕೊಂಡು ಮಣ್ಣು ಕೆರೆದು ಹಾಕಿ ಈ ಸಂಖ್ಯೆಯಲ್ಲಿ ಸೇರಿಸಿದ್ದಾರೆ, ಅಲ್ಲವೆ?

ಶ್ರೀ ಎಚ್. ಸಿ. ಲಿಂಗಾರೆಡ್ಡಿ.—ಇದು ಸುಳ್ಳು. ನಿಜವಲ್ಲ ಎಂದು ಹೇಳುತ್ತೇನೆ.

ಶ್ರೀ ಜಿ. ಎಸ್. ಪುಟ್ಟಣ್ಣ.—ಇದು ನಿಜ ಎಂದು ಹೇಳುತ್ತೇನೆ. ರುಜುವಾತು ಕೊಡುತ್ತೇನೆ. ಅದನ್ನು ಎನ್‌ಕ್ವೈರ್ ಮಾಡುತ್ತೀರಾ?

ಶ್ರೀ ಎಚ್. ಸಿ. ಲಿಂಗಾರೆಡ್ಡಿ.—ಶ್ರೀ ಪುಟ್ಟಣ್ಣನವರ ತಾಲ್ಲೂಕಿಗೂ ಹೋಗಿದ್ದೆ. ಐದು ಮೈಲಿ ದೂರ ರಸ್ತೆ ಆಗಿದೆ. ಅದನ್ನು ತೋರಿಸಿದ್ದಕ್ಕೆ ಅವರ ಸಂತೋಷಕ್ಕೆ ಪಾರವೇ ಇರಲಿಲ್ಲ.

ಶ್ರೀ ಜಿ. ಎಸ್. ಪುಟ್ಟಣ್ಣ.—ಎನ್.ಇ.ಎಸ್. ಮಾತು ಅಲ್ಲ. ಅದು ಪಂಚಾಯಿತಿ ಮಾತು, ಗ್ರಾಮಸ್ಥರ ಮಾತು.

ಶ್ರೀ ಎಚ್. ಸಿ. ಲಿಂಗಾರೆಡ್ಡಿ.—ಎನ್.ಇ.ಎಸ್. ಗ್ರಾಮಸ್ಥರ ಮಾತು. ನಮ್ಮ ಮಾನ್ಯ ಸದಸ್ಯರು ಇನ್ನೊಂದು ವಿಷಯವನ್ನು ಗಮನಿಸಬೇಕು. ರಾಷ್ಟ್ರೀಯ ವಿಸ್ತರಣಾ ಯೋಜನೆಯಲ್ಲಿ ರಸ್ತೆಗಳನ್ನು ಜನಗಳೇ ಮಾಡಿಕೊಳ್ಳಬೇಕಾಗಿದೆ. ರಸ್ತೆಯನ್ನು ಮಾಡುವಾಗ, ರಸ್ತೆಯ ಹಣವನ್ನು ಬೇರೆಯದಕ್ಕೆ ಖರ್ಚುಮಾಡಕೂಡದು ಎಂದು ರೂಲಿನಲ್ಲಿ ಇದ್ದರೂ ಕೂಡ ಸೇತುವೆ, ಕಲ್ವರ್ಟ್ಸ್, ಕಾಲುವೆ, ಕಟ್ಟುವುದಕ್ಕೆ ಹಣವನ್ನು ಖರ್ಚುಮಾಡಬೇಕಾಗಿದೆ. ರಸ್ತೆ ಮಾಡುವಾಗ ಜನಗಳ ಸಹಾಯದಿಂದ ಮಾಡಿಕೊಳ್ಳಬೇಕು. ದಾರಿಯಲ್ಲಿ ಸೇತುವೆ ಮುಂತಾದುವುಗಳನ್ನು ಮಾಡಿಕೊಳ್ಳಬೇಕಾದರೆ ಜನಗಳ ಕೈಯಲ್ಲಿ ಆಗುವುದಿಲ್ಲ.

ಶ್ರೀ ಜಿ. ಎನ್. ಪುಟ್ಟಣ್ಣ.—ಜನಗಳು ಮಾಡಬೇಕಾದುದು ನನಗೆ ಗೊತ್ತಿದೆ. ಜನಗಳು ಮಾಡುವುದನ್ನು ಎನ್.ಇ.ಎಸ್. ಮಾಡಿತು ಎಂದು ಇವರು ಹೇಳಿಕೊಳ್ಳುವುದು ಸಮಂಜಸವಾಗಿ ಕಾಣುವುದಿಲ್ಲ. ಎನ್.ಇ.ಎಸ್. ಮಾಡಿತು ಎಂದು ಫಿಗರ್ಸ್ ಕೊಡುತ್ತೀರ!

ಶ್ರೀ ಎಚ್. ಸಿ. ಲಿಂಗಾರೆಡ್ಡಿ.—ಎನ್.ಇ.ಎಸ್. ಯೋಜನೆ ಜನಗಳ ಯೋಜನೆ ಎನ್ನುವುದನ್ನು ಮಾನ್ಯ ಸದಸ್ಯರು ತಿಳಿದುಕೊಳ್ಳಬೇಕು. ಪಂಚಾಯಿತಿಗಳು, ಸಹಕಾರಸಂಘಗಳು, ಉಪಾಧ್ಯಾಯರುಗಳು ಮತ್ತು ಜನಗಳು ಎಲ್ಲರೂ ಸೇರಿ ಮಾಡಬೇಕಾದಂಥ ಕೆಲಸಗಳು ಈ ಯೋಜನೆಯಲ್ಲಿ ಸೇರಿವೆ ಎನ್ನುವುದನ್ನು ಮಾನ್ಯ ಸದಸ್ಯರು ಗಮನಿಸಬೇಕಾಗಿದೆ. ಮಾನ್ಯ ಸದಸ್ಯರು ಕೇಳುತ್ತಾ ಇರತಕ್ಕ ಪ್ರಶ್ನೆಗಳನ್ನು ನೋಡಿದರೆ, ರಾಷ್ಟ್ರೀಯ ವಿಸ್ತರಣಾ ಯೋಜನೆ ಕೇವಲ ರಸ್ತೆಗಳನ್ನು ಮಾಡುವುದು, ಚರಂಡಿ ಮಾಡುವುದು, ಶಾಲೆಗಳನ್ನು ಕಟ್ಟುವುದು, ಪಂಚಾಯಿತಿ ಹಾಲುಗಳನ್ನು ಕಟ್ಟುವುದು ಮತ್ತು ಮನರಂಜನೆ ಭವನಗಳನ್ನು ನಿರ್ಮಾಣಮಾಡುವುದು ಇಷ್ಟೇ ಇದರ ಕೆಲಸ ಎಂಬ ಮನೋಭಾವ ಅನೇಕರಿಗೆ ಇದ್ದ ಹಾಗೆ ಕಾಣುತ್ತಿದೆ. ಅದು ಸರಿಯಾದ ಅಭಿಪ್ರಾಯವಲ್ಲ ಎಂದು ತಮಗೆ ತಿಳಿಸಬೇಕಾಗಿದೆ. ಕಾಮಗಾರಿಗಳ ಕೆಲಸದ ಕಾರ್ಯಕ್ರಮಗಳುಮಾತ್ರ ರಾಷ್ಟ್ರೀಯ ವಿಸ್ತರಣಾ ಯೋಜನೆಯಲ್ಲಿ ಅಡಕವಾಗಿರುತ್ತವೆ ಎಂದು ತಿಳಿದುಕೊಳ್ಳಬಾರದು. ಈ ಕಾಮಗಾರಿ ಯೋಜನೆಗಿಂತಲೂ, ಬಹಳ ಮುಖ್ಯವಾದುದು ವ್ಯವಸಾಯ ಹಾಗೂ ಸಹಕಾರ ಅಭಿವೃದ್ಧಿ ಮಾಡುವುದು. ಹಳ್ಳಿಗಾಡಿನ ಜನಗಳ ಒಂದು ಮನೋಭಾವನೆಯನ್ನು ಬದಲಾವಣೆಮಾಡಿ ಅವರಲ್ಲಿ ಒಂದು ಹೊಸ ಚೈತನ್ಯವನ್ನು ಉಂಟುಮಾಡಿ, ಜನಗಳಲ್ಲಿ ನಾವು ಈಗಿರುವುದಕ್ಕಿಂತಲೂಕೂಡ ಉತ್ತಮವಾಗಿ ಬಾಳಬೇಕು, ಬದುಕಬೇಕು, ಹಳೆಯ ಪದ್ಧತಿಗಳನ್ನು ಬದಲಾವಣೆ ಮಾಡಿಕೊಳ್ಳಬೇಕು ಎಂಬ ಭಾವನೆಯನ್ನು ಉಂಟುಮಾಡುವುದೇ ಈ ಯೋಜನೆಯ ಮುಖ್ಯ ಉದ್ದೇಶ. ಜನತೆಯ ಔಟ್‌ಲುಕ್ಕನ್ನು ಬದಲಾವಣೆ ಮಾಡಬೇಕೆಂಬುದು ಬಹಳ ಮುಖ್ಯವಾದುದು ಎಂದು ಮಾನ್ಯ ಸದಸ್ಯರು ತಿಳಿದುಕೊಳ್ಳಬೇಕು.

Sri G. N. PUTTANNA.—The work turned out is quite contrary.

ಶ್ರೀ ಎಚ್. ಸಿ. ಲಿಂಗಾರೆಡ್ಡಿ.—ತಾವು ಹಾಗೆ ಹೇಳುತ್ತೀರಿ ಮತ್ತು ಜನಗಳ ಮತ್ತು ನಮ್ಮ ಗಮನವನ್ನು ತಿರುಗಿಸುವುದಕ್ಕೆ ಹೋಗುತ್ತೀರಿ. ಅದು ಸಾಧ್ಯವಾಗುವುದಿಲ್ಲ ಎಂದು ನೀವು ತಿಳಿದುಕೊಳ್ಳಬೇಕು.

ಶ್ರೀ ಸಿ. ಕೆ. ರಾಜಯ್ಯಶೆಟ್ಟಿ.—ಅಗ್ರಿಕಲ್ಚರ್ ಪ್ರೊಡಕ್ಷನ್ನಿಗೆ ಎಷ್ಟು ಲಕ್ಷ ರೂಪಾಯಿ, ಎಷ್ಟು ಪರ್ಸೆಂಟೇಜ್ ಖರ್ಚುಮಾಡುತ್ತೀರಿ ?

ಶ್ರೀ ಎಚ್. ಸಿ. ಲಿಂಗಾರೆಡ್ಡಿ.—ವ್ಯವಸಾಯಕ್ಕೆ ಸಹಕಾರಕ್ಕೆ ಎಷ್ಟು ಹಣ ಖರ್ಚುಮಾಡಿದ್ದೀರಿ, ಎಷ್ಟು ಗೋಡೌನ್ ಕಟ್ಟಿದ್ದೀರಿ ಎಂದು ಕೇಳಿದರೆ ನನಗೆ ಹೀಗೆ ನಿಸುತ್ತದೆ. ರಾಷ್ಟ್ರೀಯ ವಿಸ್ತರಣಾ ಯೋಜನೆ ಮತ್ತು ಸಾಮುದಾಯಿಕ ಅಭಿವೃದ್ಧಿ ಯೋಜನೆಗಳ ಅರ್ಥವನ್ನು ಇನ್ನೂ ಮಾಡಿಕೊಳ್ಳಬೇಕಾಗಿದೆ ಎಂದು ತಾವುಗಳು ಕೇಳುವ ಪ್ರಶ್ನೆಗಳಿಂದ ಗೊತ್ತಾಗುತ್ತದೆ. ಆದ್ದರಿಂದ ನಾನು ಈ ಸಂದರ್ಭದಲ್ಲಿ ಕಾಮಗಾರಿ ಕೆಲಸಗಳು ನಡೆಯುವ ದೃಷ್ಟಿಯಿಂದ, ವರ್ಕ್ಸ್ ಪ್ರೋಗ್ರಾಂ, ಕನ್‌ಸ್ಟ್ರಕ್ಷನಲ್ ಪ್ರೋಗ್ರಾಂ ಸಂಸ್ಥಾನದಲ್ಲಿ ಬಹಳ ಚೆನ್ನಾಗಿ ನಡೆಯುತ್ತಾ ಇದೆ, ಯಾವ ವಿಧವಾದ ಸಂಶಯವನ್ನೂ ಇಟ್ಟುಕೊಳ್ಳಬೇಕಾಗಿಲ್ಲ ಎಂದು ಹೇಳಬೇಕಾಗಿದೆ. ಒಂದೊಂದು ಬ್ಲಾಕಿನಲ್ಲಿ 25-40 ಪಾಠಶಾಲೆಗಳಿವೆ.

7-00 P.M.

ಪಾಠಶಾಲೆಯ ಸಲುವಾಗಿ ಅರ್ಧ ಹಣವನ್ನು ರಾಷ್ಟ್ರೀಯ ವಿಸ್ತರಣಾ ಯೋಜನೆಯಿಂದ ಕೊಟ್ಟಿದೆ, ಜನಗಳಿಂದ ಇನ್ನರ್ಧ ಹಣ ಬಂದಿದೆ. ಈ ಪ್ರಕಾರ ಸಹಕಾರ ದೊರೆತು ಅನೇಕ ಕಡೆ ಅತ್ಯುತ್ತಮವಾದ ಕೆಲಸ ನಡೆದಿದೆ. ಈ ಕೆಲಸಗಳ ಸಂಬಂಧವಾಗಿ ಯಾರೂ ಏನೂ ಸಂಶಯಪಡಬೇಕಾಗಿಲ್ಲ. ಕೆಲಸ ಎಷ್ಟು ಭರದಲ್ಲಿ ಸಾಗುತ್ತಿದೆಯೆಂದರೆ, ಅನೇಕ ಕಡೆಗಳಲ್ಲಿ ಜನರು ತಾವು ತಮ್ಮ ಭಾಗದ ಹಣವನ್ನು ಕೊಡುತ್ತೇವೆಂದು ಮುಂದೆ ಬಂದು ಕೆಲಸ ಮಾಡಿಸಿಕೊಡಿ ಎಂದು ಕೇಳಿದರೂ, ನಾವು ಸರ್ಕಾರದವರು ಅದಕ್ಕೆ ಸರಿಯಾಗಿ Matching Grants ಕೊಡುವುದಕ್ಕೆ ಹಣವಿಲ್ಲದೆ ಬೇರೆ ವಿದ್ಯಾ ಇಲಾಖೆ ಮುಂತಾದ ಇಲಾಖೆಗಳಿಂದ ಸಾಲ ತೆಗೆದುಕೊಂಡು ಕಟ್ಟಡವನ್ನು ಕಟ್ಟಿಸಿಕೊಡಬೇಕಾಗಿದೆ. ಹಾಗೆಯೇ ಪಬ್ಲಿಕ್ ವರ್ಕ್ಸ್‌ನಿಂದ ತೆಗೆದುಕೊಂಡು ಮೈನರ್ ಇರಿಗೇಷನ್ ಕೆಲಸಗಳನ್ನು ಮಾಡಬೇಕಾಗಿದೆ. ಹೀಗಿರುವಾಗ, ಮಾನ್ಯ ಸದಸ್ಯರುಗಳು ಈ ರಾಷ್ಟ್ರೀಯ ವಿಸ್ತರಣಾ ಯೋಜನೆ ಯಶಸ್ವಿಯಾಗಿ ನಡೆದಿಲ್ಲವೆಂದರೆ ಅದನ್ನು ನಂಬುವುದಕ್ಕೆ ಸಾಧ್ಯವೆ. ನಾನು ಶ್ರೀ ರಾಮಪ್ಪನವರ ಕ್ಷೇತ್ರಕ್ಕೇ ಒಮ್ಮೆ ಹೋಗಿದ್ದೆ. ಅವರನ್ನು ವಿಚಾರಿಸಿದ್ದರಲ್ಲಿ ಅವರು ಹೇಳಿದರು, ಈ ಯೋಜನೆ ಸರಿಯಾಗಿ ನಡೆದಿಲ್ಲ ಎಂದು. ದಾವಣಗೆರೆಯಲ್ಲಿ ಅದು ಸಂಪೂರ್ಣವಾಗಿ ವಿಫಲವಾಗಿದೆಯೆಂದರು. ನಿಮ್ಮ ತಾಲ್ಲೂಕಿನಲ್ಲಿ ಹೇಗಿದೆಯೆಂದು ಕೇಳಿದ್ದಕ್ಕೆ ನಮ್ಮ ತಾಲ್ಲೂಕಿನಲ್ಲಿ ಮಾತ್ರ ಚೆನ್ನಾಗಿದೆಯೆಂದರು. ಹೀಗೆ ಯಾರೊಬ್ಬ ಸದಸ್ಯರನ್ನು ಕೇಳಲಿ ಅವರು ಬೇರೊಬ್ಬರ ಕ್ಷೇತ್ರದ ವಿಚಾರದಲ್ಲಿ ಹೇಳುತ್ತಾರೆಯೇ ಹೊರತು ತಮ್ಮ ಕ್ಷೇತ್ರದಮಟ್ಟಿಗೆ ಚೆನ್ನಾಗಿಯೇ ಇದೆಯೆನ್ನುತ್ತಾರೆ. ತುರುವೇಕೆರೆ ತಾಲ್ಲೂಕಿನಲ್ಲಿಯೂ ಹೀಗೆಯೇ ಹೇಳಿದರು. ಇದೆಲ್ಲಾ ಹೇಗಿದೆ ಎಂದರೆ ಕಳ್ಳಬಟ್ಟಿ ಸಾರಾಯಿಯ ಕತೆ ಇದ್ದ ಹಾಗೆ. ಕಳ್ಳಬಟ್ಟಿ ಸಾರಾಯಿ ಎಲ್ಲೆಲ್ಲಿಯೂ ಇದೆಯೆಂದು ಪ್ರತಿಯೊಬ್ಬರೂ ಹೇಳುತ್ತಾರೆ. ನಿಮ್ಮ ಮನೆಯಲ್ಲಿ ಹೇಗಿದೆ ? ಎಂದು ಕೇಳಿದರೆ, ನಮ್ಮ ಮನೆಯಲ್ಲಿ ಇಲ್ಲ ಎನ್ನುತ್ತಾರೆ. ನಿಮ್ಮ ಊರಿನಲ್ಲಿ ಹೇಗೆ ಎಂದರೆ, ನಮ್ಮ ಊರಿನಲ್ಲಿ ಇಲ್ಲ ಎನ್ನುತ್ತಾರೆ. ಪ್ರತಿಯೊಬ್ಬರೂ ಹೀಗೆಯೇ ಹೇಳುತ್ತಾರೆ. ಹೀಗೆ ಟೀಕೆ ಮಾಡಬೇಕು ಎಂಬ ದೃಷ್ಟಿಯಿಂದ ಮಾತನಾಡುತ್ತಾರೆಯೇ ವಿನಾ, ಹೀಗೆ ಹೇಳುವುದರಿಂದ ಸಾಧಕ ಬಾಧಕಗಳೇನು, ಅದರಲ್ಲಿ ನಮ್ಮ ಭಾಗ ಏನು, ಅವರ ಭಾಗ ಏನು, ಅದನ್ನು ಯಶಸ್ವಿಮಾಡಬೇಕಾದರೆ ಏನು ಮಾಡಬೇಕು ಎಂಬುದೊಂದನ್ನೂ ಹೇಳುವುದಿಲ್ಲ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಹೀಗೆ ವೇದಾಂತ ಹೇಳುವುದಕ್ಕೆ ಬದಲು ಏನಾದರೂ Policy ವಿಚಾರ ಮಾತನಾಡಿದರೆ ಒಳ್ಳೆಯದು.

ಶ್ರೀ ಎಚ್. ಸಿ. ಲಿಂಗಾರೆಡ್ಡಿ.—ನಾನಾಗಲೇ, ಈ ಯೋಜನೆಯ ಉದ್ದೇಶವೇನು, ನಿರೀಕ್ಷಣೆಯೇನು ಎಂದು ಹೇಳಿದ್ದೇನೆ. ಶ್ರೀ ರಾಮಪ್ಪನವರು ಇದಕ್ಕೆ ಒದಗಿಸಿರುವ ಮೊಬಲಗು ಕಡಮೆ ಎಂದು ಹೇಳಿದರು.

Sri M. RAMAPPA.—He is misquoting me. I only said that our resources were limited. Without referring to the books I have referred to, he is simply misquoting me.

Sri H. C. LINGA REDDY.—I will come to that a little later. You said that our resources were limited.

ಈಗಲೂ ಶ್ರೀ ರಾಮಪ್ಪನವರು ಹೇಳಿದ್ದಾರೆ, "our resources are limited" ಎಂದು. ಅದು ನಿಜ. ಇದಕ್ಕೆ ಹಣ ಹೆಚ್ಚಾಗಿ ಇಲ್ಲ. ಆದರೆ, ವ್ಯವಸಾಯ, ವಿದ್ಯಾಭ್ಯಾಸ, ರಸ್ತೆ, ಡ್ರೈನೇಜು, ಕೈಗಾರಿಕೆಗಳು—ಇವಕ್ಕೆಲ್ಲಾ ಬೇರೆ ಬೇರೆ ಸ್ವಲ್ಪ ಸ್ವಲ್ಪ ಹಣ ಕೊಟ್ಟಿದ್ದಾರೆ. ಈ ರೀತಿಯಾಗಿ ಕೊಟ್ಟಿರತಕ್ಕ ಹಣವನ್ನು ಆಯಾ ಕೆಲಸಕ್ಕೆ ಉಪಯೋಗಿಸಿ....

Sri C. J. MUCKANNAPPA.—My friend is landing us in trouble not knowing what is N.E.S. and what is Second Plan.

ಶ್ರೀ ಎ. ಮುನಿಯಪ್ಪ.—ಶ್ರೀ ಮುಕ್ಕಣ್ಣಪ್ಪನವರು ಮಾತನಾಡುವಾಗ ಮದ್ರಾಸ್ ರೈಲಿಗೆ ನೀರು ಬೆಂಕಿ ಏನೂ ಇಲ್ಲದೆ ಹಾಗೆಯೇ ಹೊಡೆಯುವ ಹಾಗೆ ಮಾತನಾಡುತ್ತಾರೆ. ಆಗ ನಾವೇನೂ ಮಾತನಾಡುವುದಿಲ್ಲ. ಅದೇ ರೀತಿ ಈಗ ಅವರೂ ಏಕೆ ಸುಮ್ಮನೆ ನಾವು ಹೇಳುವುದನ್ನು ಕೇಳಕೂಡದು ?

ಶ್ರೀ ಎಚ್. ಸಿ. ಲಿಂಗಾರೆಡ್ಡಿ.—ಒಟ್ಟಿನಲ್ಲಿ ಹೇಳುವುದಾದರೆ, ಅನೇಕ ಕಾಮಗಾರಿಗಳು ಬಹಳ ಚೆನ್ನಾಗಿ ನಡೆಯುತ್ತಿವೆ ; ನಡೆದಿವೆ. ಆ ವಿಷಯದಲ್ಲಿ ಯಾವ ಸಂಶಯವೂ ಇಲ್ಲವೆಂದು ಹೇಳುತ್ತೇನೆ.

ಆಮೇಲೆ ನಮ್ಮ ಸ್ನೇಹಿತರು ವ್ಯವಸಾಯಕ್ಕೆ ಏನು ಖರ್ಚುಮಾಡಿದ್ದೀರಿ, ಏನು ಕೆಲಸ ನಡೆದಿದೆ ಎಂದು ಕೇಳಿದರು. ಅವರಿಗೆ ಒಂದು ಉದಾಹರಣೆಯನ್ನು ಕೊಡುತ್ತೇನೆ. ನಮ್ಮ ಮಾನ್ಯ ಮಿತ್ರರು ಪಕ್ಕದ ಚಿಂತಾಮಣಿ ತಾಲ್ಲೂಕಿಗೆ ನನ್ನ ಜೊತೆಯಲ್ಲಿ ಬರಲಿ. ರಾಷ್ಟ್ರೀಯ ವಿಸ್ತರಣಾ ಯೋಜನೆ ಪ್ರಾರಂಭವಾಗಿ ಅಲ್ಲಿ ಒಂದು ವರ್ಷವಾಗಿದೆ. ಈ ಸಾರಿ Rabi ಬೆಳೆ ಅಲ್ಲಿ ಪ್ರಾರಂಭವಾಗಿದೆ. 1,900 ಎಕರೆಯಲ್ಲಿ ಬೆಳೆ ಮಾಡಬೇಕೆಂದಿರುವಲ್ಲಿ 2,100 ಎಕರೆ ಜಮೀನಿನಲ್ಲಿ ಜಪಾನಿ ಮಾದರಿಯಲ್ಲಿ ಬತ್ತದ ಬೆಳೆಯನ್ನು ಮಾಡಿದ್ದಾರೆ. ಅಲ್ಲಿನ ಬ್ಲಾಕ್ ಡೆವಲಪ್‌ಮೆಂಟ್ ಆಫೀಸರು ಮತ್ತು ಕಮಿಟಿ ಮೆಂಬರುಗಳು ಎಷ್ಟು ಶ್ರಮವಹಿಸಿ ಕೆಲಸಮಾಡಿದ್ದಾರೆಂಬುದನ್ನು ನೀವೇ ಯೋಚನೆಮಾಡಬಹುದು. ಸಹಕಾರ ಸಂಘಗಳ ಮುಖಾಂತರ ಕೃತಕ ಗೊಬ್ಬರ ಮುಂತಾದುವುಗಳನ್ನು ತಂದು ಸಕಾಲದಲ್ಲಿ ಒದಗಿಸಿಕೊಟ್ಟು ಟಾರ್ಗೆಟ್ಟನ್ನು ಮೀರಿ ಹೇಗೆ ಕೆಲಸ ನಡೆಸಿದ್ದಾರೆ, ನೋಡಿ. 7,000 ರೂಪಾಯಿಗಳ ಔಷಧಿಯನ್ನು

ಕೊಂಡು ಬೆಳೆಗಳಿಗೆ ಬರುವ ರೋಗವನ್ನು ವಾಸಿ ಮಾಡಿದ್ದಾರೆ. ಒಬ್ಬ ರೈತರು ಎಕರೆಗೆ 45 ಪಲ್ಲ ಬೆಳೆದಿದ್ದಾರೆ; ಇನ್ನೊಬ್ಬರು 42 ಪಲ್ಲ ಬೆಳೆದಿದ್ದಾರೆ. ಇದಕ್ಕೆ ಎಷ್ಟು ಹಣ ಖರ್ಚುಮಾಡಿದ್ದೀರಿ ಎಂದು ಮಾನ್ಯ ಸದಸ್ಯರು ಪ್ರಶ್ನೆಮಾಡಬಹುದು. ಇದಕ್ಕಾಗಿ ಬೇರೆ ನಾವು ಯಾವುದನ್ನೂ ಖರ್ಚುಮಾಡಿಲ್ಲ. ಬ್ಲಾಕ್ ಡೆವಲಪ್‌ಮೆಂಟ್ ಆಫೀಸರು ಪ್ರಚಾರ ಮಾಡುತ್ತಾರೆ. ರಾಷ್ಟ್ರೀಯ ವಿಸ್ತರಣಾ ಯೋಜನೆಯಲ್ಲಿ ವ್ಯವಸಾಯ ಸಂಬಂಧವಾದ Demonstrationಗಳನ್ನು ಏರ್ಪಡಿಸುವುದಕ್ಕೂ, ಬಾವಿಗಳಿಗೆ ಸಬ್ಸಿಡಿ ಕೊಡುವುದೇ ಮುಂತಾಗಿ ಇಂಥಿಂಥ ವ್ಯವಸಾಯದ ಕೆಲಸಗಳಿಗೆ ಇಷ್ಟಿಷ್ಟು ಹಣವೆಂದು ನಿಗದಿಮಾಡಿದ್ದಾರೆ; ಅದರಂತೆ ಹಣ ಖರ್ಚು ಮಾಡಿದ್ದಾರೆ, ಅಷ್ಟೆ.

ಈಚೆಗೆ ಒಂದು ವರ್ಷದಿಂದಲೂ ನಮ್ಮ ಗಮನ, shift of emphasis ಎಲ್ಲವೂ constructional activity ಯಿಂದ ಬಿಟ್ಟು agricultural ಮತ್ತು extension activity ಕಡೆಗೆ ತಿರುಗಿದೆಯೆಂಬುದನ್ನು ಮಾನ್ಯ ಸದಸ್ಯರು ಗಮನಿಸಬೇಕು. ತಾವು ಮಂಡ್ಯ, ಮಳವಳ್ಳಿ, ಪಾವಗಡ ಮುಂತಾದ ಕಡೆ ಹೋಗಿ ನೋಡಿ. ಯಾವ ಯಾವ ಬ್ಲಾಕುಗಳು ಹೆಚ್ಚು ವರ್ಷಗಳ ಹಿಂದೆ ಪ್ರಾರಂಭವಾಗಿವೆಯೋ ಅಲ್ಲಿ ಹೆಚ್ಚು ಕೆಲಸಗಳಾಗಿವೆ. ಮೊನ್ನೆ ಮೊನ್ನೆ ಷುರುವಾದ ಸ್ಥಳಗಳಲ್ಲಿ ಅಷ್ಟಾಗಿ ನಡೆದಿಲ್ಲವೆನ್ನಬಹುದು, ಅಷ್ಟೆ. ಹೀಗಿರುವಾಗ ತಾವು ಹೋಗಿ ನೋಡದೆ, ಮಾಡದೆ,......

ಶ್ರೀ ಜಿ. ಎಚ್. ಪುಟ್ಟಣ್ಣ.—ಹೊಳಲ್ಕೆರೆಯಲ್ಲಿ ಹೇಗಿದೆ?

ಶ್ರೀ ಎಚ್. ಸಿ. ಲಿಂಗಾರೆಡ್ಡಿ.—ಅಲ್ಲಿ ಕೆಲಸ ಇನ್ನೂ ಆಗಬೇಕಾಗಿದೆ. ಅದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ.

ಸಹಕಾರದ ವಿಷಯದಲ್ಲಿ ಸಹಕಾರ ಇಲಾಖೆಯಿದೆ; ವಿಸ್ತರಣಾ ಅಧಿಕಾರಿಗಳು ಬಿ.ಡಿ.ಓ.ಗಳ ನೇತೃತ್ವದಲ್ಲಿ ಮಾಡುವ ಕೆಲಸ, ಸೊಸೈಟಿಗಳಲ್ಲಿ ಅಲ್ಪ ಕಾಲಾವಧಿ ಸಾಲ, ಮಧ್ಯಮವರ್ಗದ ಸಾಲ ಮತ್ತು ಕಬ್ಬಿಣ, ಅಮೋನಿಯಂ ಮುಂತಾದ ಗೊಬ್ಬರ ಹಂಚುವುದು, ಹೊಸದಾಗಿ ಸೊಸೈಟಿಗಳನ್ನು ಪ್ರಾರಂಭಿಸಿರುವುದು ಮತ್ತು ಇರುವ ಸೊಸೈಟಿಗಳನ್ನು ಅಭಿವೃದ್ಧಿ ಮಾಡುವುದು ಇವೆಲ್ಲಾ ನಡೆಯುತ್ತಿವೆ. ಗ್ರಾಮಸೇವಕರು ಮತ್ತು ಪ್ರವೀಣರು ಎಷ್ಟು ಚೆನ್ನಾಗಿ ಕೆಲಸ ಮಾಡುತ್ತಿದ್ದಾರೆಂಬುದನ್ನು ನೋಡಬಹುದು. ನಾನು ಅನೇಕ ಕಡೆಗೆ ಹೋಗಿ ನೋಡಿ ಬಂದಿದ್ದೇನೆ. ತಾವು ಇದನ್ನು ಕೂಡ ತಿಳಿದುಕೊಳ್ಳಬೇಕು. ನೆಲಮಂಗಲ ತಾಲ್ಲೂಕಿನಲ್ಲೂ ಕೂಡ ಕೆಲಸ ಚೆನ್ನಾಗಿಯೇ ನಡೆಯುತ್ತಿದೆ.

ಲೋಕಲ್ ಡೆವಲಪ್‌ಮೆಂಟ್ ಕೆಲಸಗಳ ಪ್ರೋಗ್ರೆಸ್ ವಿಷಯದಲ್ಲಿ ನಮ್ಮ ಸ್ನೇಹಿತರು ಕೆಲವರು ಸೂಚನೆ ಮಾಡಿದ್ದಾರೆ. ಇಂಡಿಯಾ ಸರ್ಕಾರದವರು ಇದುವರೆಗಾಗಲೇ ಬಹಳ ಹೆಚ್ಚಿನ ಮೊಬಲಗನ್ನು ಕೊಡುತ್ತಿದ್ದರು. 1953-54ರಲ್ಲಿ 6·90 ಲಕ್ಷ ರೂಪಾಯಿಗಳು, 1954-55ರಲ್ಲಿ 16·30 ಲಕ್ಷ ರೂಪಾಯಿಗಳು ಮತ್ತು ಈ ವರ್ಷ 19·86 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆ. ಈಗ 1ನೆಯ ಏಪ್ರಿಲ್ 1959 ರಿಂದ ಈ ಹಣವನ್ನು ನಿಲ್ಲಿಸುವ ಯೋಜನೆ ಅವರು ಮಾಡಿ ಮುಂದೆ ಕೊಡುವುದಕ್ಕಾಗುವುದಿಲ್ಲವೆಂದು ಹೇಳಿದ್ದಾರೆ. ಈ ಲೋಕಲ್ ಡೆವಲಪ್‌ಮೆಂಟ್ ವರ್ಕ್ಸ್ ಕಾರ್ಯಕ್ರಮದ ಪ್ರಕಾರ ಇಂಡಿಯಾ ಸರ್ಕಾರ ಅರ್ಧ ಕೊಡುವುದು, ಸಂಸ್ಥಾನದ ಸರ್ಕಾರ ಕಾಲುಭಾಗ, ಜನರು ಕಾಲುಭಾಗ ಕೊಡುವುದು ಎಂದು ಮೊದಲು ವಿಧಾಯಕವಾಗಿತ್ತು. ಈಚೆಗೆ ಇಂಡಿಯಾ ಸರ್ಕಾರ ಎರಡು ಭಾಗ ಸಂಸ್ಥಾನದ ಸರ್ಕಾರ ಒಂದು ಭಾಗ (2 : 1), ಜನರು ಅರ್ಧ ಕೊಡಬೇಕೆಂದು ನಿರ್ಧಾರವಾಗಿ ಅದರಂತೆ ಕೆಲಸ ಮಾಡುತ್ತಿದ್ದೇವೆ. ಈ ಪ್ರಕಾರ ಈಗಾಗಲೆ 300 ಲಕ್ಷ ರೂಪಾಯಿಗಳ ಕೆಲಸ ದೇಶದಲ್ಲಾಗಿದೆ. ಈ ಹಣದ ಒಂದು ವಿಶೇಷವೇನೆಂದರೆ, ರಾಷ್ಟ್ರೀಯ ವಿಸ್ತರಣಾಯೋಜನೆ ಇಲ್ಲದಿರುವ ತಾಲ್ಲೂಕುಗಳಲ್ಲಿ ಈ ಕೆಲಸ ಮಾಡಬೇಕೆಂದು ಒಂದು ವರ್ಷದ ಹಿಂದೆ ತೀರ್ಮಾನವಾಡಿ ಅದನ್ನು ಆ ತಾಲ್ಲೂಕುಗಳಿಗೆ ಕೊಡುತ್ತಿದ್ದೇವೆ. ಈಗ ರಾಷ್ಟ್ರೀಯ ವಿಸ್ತರಣಾ ಯೋಜನೆಯನ್ನು ಎಲ್ಲಾ ಗ್ರಾಮಗಳಿಗೂ ಅನ್ವಯಿಸಬೇಕಾದರೆ 1963ನೆಯ ಇಸವಿಯ ವರೆಗೆ ಕಾಲಾವಕಾಶಬೇಕಾಗುತ್ತದೆ, 268 ಬ್ಲಾಕುಗಳೂ ಕೂಡ 170 ತಾಲ್ಲೂಕುಗಳಲ್ಲಿ ತೆರೆಯಲ್ಪಡಬೇಕಾದರೆ 1963ನೆಯ ಇಸವಿಯ ವರೆಗೆ ಕಾಲ ತೆಗೆದುಕೊಳ್ಳುತ್ತದೆ.

ಶ್ರೀ ಯು. ಎಂ. ಮಾದಪ್ಪ.—On a point of order, Sir. ತಾವು ಘನತರವಾದ ಈ ಸಭೆಯಲ್ಲಿ ಯಾವುದೋ ಒಂದು ಗೊತ್ತಾದ ಕಾಲಾವಧಿ ಆದಮೇಲೆ ಡಿಮ್ಯಾಂಡುಗಳನ್ನು ಓಟಿಗೆ ಹಾಕದಿದ್ದರೆ ತೊಂದರೆ ಬರಬಹುದು. ರೂಲ್ಸ್ ಪ್ರಕಾರ ಈ ದಿವಸ ಆರು ಗಂಟೆಗೆ ಓಟಿಗೆ ಹಾಕಬೇಕಾಗಿತ್ತು. ಹಾಗೆ ಮಾಡದಿದ್ದರೆ ಇರ್ರೆಗ್ಯುಲ್ಯಾರಿಟೀಸ್ ಪ್ರಚಾರ ಮಾಡಿದ ಹಾಗಾಗುತ್ತದೆ. ಅದಕ್ಕೆ ಅವಕಾಶ ಕೊಡಬಾರದು.

ಅಧ್ಯಕ್ಷರು.—ಈಗ ಒಂದು ಪ್ರಶ್ನೆಯಿದೆ. ಈ ದಿವಸವೇ ಈ ಕ್ರಿಯಾಲೋಪ ಏಕೆ ಬಂತೋ ಗೊತ್ತಾಗಲಿಲ್ಲ. ಎಷ್ಟೋ ದಿವಸ ರಾತ್ರಿ ಎಂಟು ಗಂಟೆಯ ವರೆಗೆ ಕುಳಿತು ನಾವು ಕೆಲಸಮಾಡಿದ್ದೇವೆ. ಈ ದಿವಸ ಬೇಜಾರಾಗಿದೆಯೆಂದು ತಮ್ಮ ಕ್ರಿಯಾಲೋಪ ಸೂಚನೆಯಿಂದ ಅರ್ಥವಾಗುತ್ತಿದೆ. ರೂಲ್ಸ್‌ನಲ್ಲಿ 'at the end of the day' ಎಂದಿದೆ.

ಶ್ರೀ ಎಚ್. ಸಿ. ಲಿಂಗಾರೆಡ್ಡಿ.—ನಾನು ಸ್ಥಳೀಯ ಅಭಿವೃದ್ಧಿಗೆ ಸಂಬಂಧಿಸಿದ ಹಣದ ವಿಷಯವನ್ನು ಹೇಳುತ್ತಿದ್ದೆ.........

ಶ್ರೀ ಪಿ. ಜಿ. ಸಿದ್ಧಾಂತಿ.—ಲೋಕಲ್ ಡೆವಲಪ್‌ಮೆಂಟ್ ವರ್ಕ್ಸ್‌ಗೆ ಮುಂದಿನ ವರ್ಷವಾದರೂ ಅವಕಾಶ ಮಾಡುತ್ತೀರೋ ಇಲ್ಲವೋ ಎಂಬುದನ್ನು ಹೇಳಿ.

ಶ್ರೀ ಎಚ್. ಸಿ. ಲಿಂಗಾರೆಡ್ಡಿ.—ಸ್ಥಳೀಯ ಅಭಿವೃದ್ಧಿ ಕಾರ್ಯಗಳಿಗೆ ಇಂಡಿಯಾ ಸರ್ಕಾರದವರು ಮೊದಲು ರಾಜ್ಯ ಸರಕಾರದವರಿಗೆ ವರ್ಷೇ ವರ್ಷೇ ಎಂಟು ಲಕ್ಷ ರೂಪಾಯಿಗಳನ್ನು ಕೊಡುತ್ತಿದ್ದರು. ಹಾಗೂ ರಾಜ್ಯ ಸರಕಾರದವರು ಎಂಟು ಲಕ್ಷರೂಪಾಯಿಗಳನ್ನು ಅದಕ್ಕೆ ಸೇರಿಸಿ ಹೀಗೆ ಒಟ್ಟು 16 ಲಕ್ಷ ರೂಪಾಯಿ ಸ್ಥಳೀಯ ಅಭಿವೃದ್ಧಿ ಕಾರ್ಯಗಳಿಗೆ ಹಣ ಕೊಡಲಾಗುತ್ತಿತ್ತು. ಈ 16 ಲಕ್ಷ ರೂಪಾಯಿಗಳನ್ನು ಖರ್ಚುಮಾಡುವುದಕ್ಕೆ ಯೋಜನೆ ಹಾಕ ಬೇಕಾಗುತ್ತದೆ. ಅದನ್ನು ಯೋಚನೆ ಮಾಡುತ್ತಿದ್ದೇವೆ. ಈ ಲೋಕಲ್ ಡೆವಲಪ್‌ಮೆಂಟ್ ಕೆಲಸಕಾರ್ಯಗಳಲ್ಲಿ ಕೇಂದ್ರ ಸರಕಾರದವರು ಹಾಕಿಕೊಂಡಿರುವ ಪ್ರೋಗ್ರಾಮಿನಲ್ಲಿ ಕುಡಿಯುವ ನೀರಿನ ಬಾವಿಗಳನ್ನು ಒದಗಿಸುವ ಒಂದು ಅಂಶವು ಅದರಲ್ಲಿದೆ. ಇದಕ್ಕಾಗಿ ಕೇಂದ್ರ ಸರ್ಕಾರದವರು 1ನೆಯ ಏಪ್ರಿಲ್ 1959 ರಿಂದ ಹಣ ಒದಗಿಸುವುದಿಲ್ಲವೆಂದು ತಿಳಿಸಿದ್ದಾರೆ. ರಾಷ್ಟ್ರೀಯ ವಿಸ್ತರಣಾ ಯೋಜನೆಯಲ್ಲಿ ಇಲ್ಲದೇ ಇರುವ ಸ್ಥಳಗಳಲ್ಲಿ ಕುಡಿಯುವ ನೀರಿನ ಬಾವಿಗಳನ್ನು ಒದಗಿಸುವ ಈ ಕಾರ್ಯಕ್ರಮವನ್ನು 1ನೆಯ ಏಪ್ರಿಲ್ 1959 ರಿಂದ 1963ನೆಯ ಇಸವಿಯವರೆಗೆ ಇಟ್ಟುಕೊಳ್ಳಬೇಕೆಂದು ಮಾಡಿದ್ದೇವೆ.

ಶ್ರೀಮತಿ ಸುಶೀಲಾಬಾಯಿ ಶಹಾ.—ಎಲ್ಲ ತಾಲ್ಲೂಕುಗಳಲ್ಲಿ ಈ ಯೋಜನೆಯು ಜಾರಿಗೆ ಬರಲು ಇನ್ನೂ ಎಷ್ಟು ವರ್ಷಗಳು ಬೇಕು ?

ಶ್ರೀ ಎಚ್. ಸಿ. ಲಿಂಗಾರೆಡ್ಡಿ.—1963ನೆಯ ಇಸವಿಯೊಳಗಾಗಿ ಬರುತ್ತದೆ.

ಈ ಕುಡಿಯುವ ನೀರಿನ ಬಾವಿಗಳ ಯೋಜನೆಯ ಸಲುವಾಗಿ ಇಂಡಿಯಾ ಸರ್ಕಾರದವರು 1959–60ರ ವರೆಗೆ ಆಗಬಹುದು ಎಂದು ಹೇಳಿದ್ದಾರೆ. ಆದ್ದರಿಂದ ಇಲ್ಲಿಯವರೆಗೆ ರಾಜ್ಯ ಸರ್ಕಾರದವರು ಕೊಡುತ್ತಿದ್ದ ಎಂಟು ಲಕ್ಷ ರೂಪಾಯಿ ಮತ್ತು ಜನಗಳಿಂದ ಎಂಟು ಲಕ್ಷ ರೂಪಾಯಿ ಹೀಗೆ ಒಟ್ಟು 16 ಲಕ್ಷ ರೂಪಾಯಿಗಳ ಒಂದು ಯೋಜನೆಯನ್ನು ಇಟ್ಟುಕೊಳ್ಳಬೇಕೆಂದು ಮಾಡಿದ್ದೇವೆ.

ಒಬ್ಬ ಸದಸ್ಯರು.—ಹಣ ಕೊಡಲು ಚೈತನ್ಯವಿಲ್ಲದೇ ಇರತಕ್ಕಂಥ ಬಡಹಳ್ಳಿಗಳಿಗೆ ಏನು ಮಾಡುತ್ತೀರಿ ?

ಶ್ರೀ ಎಚ್. ಸಿ. ಲಿಂಗಾರೆಡ್ಡಿ.—ಅವರು ಹಣ ಕೊಡದೇ ಇರಬಹುದು. ಆದರೆ ಅಂಥವರು ಕೆಲಸ ಮಾಡಿದರೆ ಸಾಕು.

ಶ್ರೀ ಪಿ. ಜಿ. ಸಿದ್ಧಾಂತಿ.—ಬಜೆಟ್ಟಿನಲ್ಲಿ ಲೋಕಲ್ ಡೆವಲಪ್‌ಮೆಂಟ್ ಸ್ಕೀಮಿಗೆ 28 ಲಕ್ಷ ರೂಪಾಯಿ ಹಣ ಒದಗಿಸಿದ್ದೀರಿ. ಅದನ್ನು ಹೇಗೆ ಉಪಯೋಗಿಸಲಾಗುವುದು ಎಂಬುದಕ್ಕೆ ವಿವರಣೆ ಕೊಡುತ್ತೀರಾ ?

ಶ್ರೀ ಎಚ್. ಸಿ. ಲಿಂಗಾರೆಡ್ಡಿ.—ಕೇಂದ್ರ ಸರ್ಕಾರದವರು ಲೋಕಲ್ ಡೆವಲಪ್‌ಮೆಂಟ್ ಪ್ರೋಗ್ರಾಮನ್ನು ಮುಂದುವರಿಸಬೇಕೆಂದು ಹೇಳಿದ್ದಾರೆ. ಕುಡಿಯುವ ನೀರಿನ ಬಾವಿಗಳ ಸಲುವಾಗಿ 16 ಲಕ್ಷ ರೂಪಾಯಿ ಹಣ ಒದಗಿಸಲಾಗುವುದು. ನಾವೂ ಸಹ ಹಣ ಒದಗಿಸುತ್ತೇವೆ.

ಶ್ರೀ ಪಿ. ಜಿ. ಸಿದ್ಧಾಂತಿ.—ವಾಟರ್ ಸಪ್ಲೈ ಕಾರ್ಯಕ್ರಮ ಅಲ್ಲದೆ 28 ಲಕ್ಷ ರೂಪಾಯಿ ಹಣ ಲೋಕಲ್ ಡೆವಲಪ್‌ಮೆಂಟ್ ಪ್ರೋಗ್ರಾಮಿಗೆ ಬಜೆಟ್ಟಿನಲ್ಲಿ ಹಾಕಿದೆ. ಈ ಹಣ ಖರ್ಚು ಮಾಡುವ ಬಗ್ಗೆ ವಿವರ ಕೊಟ್ಟರೆ ಒಳ್ಳೆಯದಾಗುತ್ತದೆ.

ಶ್ರೀ ಎಚ್. ಸಿ. ಲಿಂಗಾರೆಡ್ಡಿ.—ಲೋಕಲ್ ಡೆವಲಪ್‌ಮೆಂಟ್ ಪ್ರೋಗ್ರಾಮಿನಲ್ಲಿ ಅನೇಕ ಬಾಬುಗಳು ಸೇರಿಕೊಂಡಿವೆ. ಅದರಲ್ಲಿ ಕುಡಿಯುವ ನೀರಿನ ಬಾವಿಯ ಯೋಜನೆ ಸಹ ಒಂದು ಬಾಬು ಇದೆ. ಈ ಯೋಜನೆಯನ್ನು ನಿಲ್ಲಿಸಕೂಡದು ಎಂದು ನಾವು ಕೇಂದ್ರ ಸರ್ಕಾರಕ್ಕೆ ತಿಳಿಸಿದ್ದೇವೆ. ಪತ್ರ ವ್ಯವಹಾರ ನಡೆದಿದೆ. ಅವರನ್ನು ಕೇಳುತ್ತಿದ್ದೇವೆ. ಇನ್ನೂ ಹೆಚ್ಚು ಪ್ರಯತ್ನ ಮಾಡುತ್ತೇವೆ.

ಇನ್ನು ಅನೇಕ ಮಾನ್ಯ ಸದಸ್ಯರು ಕೊಟ್ಟಿರುವ ಸಲಹೆಗಳಲ್ಲಿ ಶ್ರೀಮಾನ್ ಅರ್ಮುಗಂ ಅವರು ಜನರು ಕಾಂಟ್ರಿಬ್ಯೂಷನ್ ಕೊಡುವುದು ಬೇಡ ಎಂದು ಹೇಳಿದರು. ಆದರೆ ಜನರಲ್ಲಿ ಸ್ವಾವಲಂಬನ ಬೆಳೆಯಬೇಕು. ಅವರು ಯೋಜನೆಯ ಅರ್ಥಮಾಡಿಕೊಂಡಿಲ್ಲವೆಂದು ನನಗೆ ಅನಿಸುತ್ತದೆ.

ಶ್ರೀಮಾನ್ ಗಜಾನನಪಂಡಿತ್ ಅವರು ಪ್ರಾಪಗ್ಯಾಂಡಾ ಮಾತ್ರ ಮಾಡುತ್ತಾ ಇದ್ದೀರಿ, ಇದು ಸಾಲದು ಎಂದು ಹೇಳಿದರು. ಇದೂ ಕೂಡ ಬೇಕಾಗುತ್ತದೆ. ನಾವು ಪ್ರಾಪಗ್ಯಾಂಡಾ ಮಾತ್ರ ಮಾಡುತ್ತಾ ಕುಳಿತುಕೊಂಡಿಲ್ಲ. ಅದರ ಜೊತೆಗೆ ಕೆಲಸವನ್ನೂ ಮಾಡುತ್ತಾ ಇದ್ದೇವೆ. ಜೀಪ್ misuse ಆಗಿದೆ ಎಂಬ ವಿಷಯ ಅನೇಕ ಸ್ನೇಹಿತರು ಹೇಳಿದರು. 250 ರೂಪಾಯಿಗಳಿಗಿಂತಲೂ ಹೆಚ್ಚಾಗಿ ಈ ಜೀಪುಗಳಿಗೆ ಖರ್ಚುಮಾಡಕೂಡದು ಎಂದು ನಾವು ತಿಳಿಸಿದ್ದೇವೆ. ಇದಕ್ಕಿಂತಲೂ ಹೆಚ್ಚು ಖರ್ಚುಮಾಡಬೇಕಾಗಿದ್ದರೆ ಡಿವಿಜನಲ್ ಕಮೀಷನರ ಪರ್ಮಿಷನ್ ಪಡೆಯಬೇಕಾಗಿದೆ. ಈ ಜೀಪುಗಳನ್ನು ಕೇವಲ ಬಿ.ಡಿ.ಓ.ಗಳು ಮಾತ್ರ ಉಪಯೋಗಿಸಬೇಕೆಂದೇನೂ ಇಲ್ಲ. ಬೇರೆಯವರೂ ಕೂಡ ಕಾರ್ಯಕ್ರಮ ಹಾಕಿಕೊಂಡು ಉಪಯೋಗಿಸುವುದಕ್ಕೆ ಸೂಚನೆ ಕೊಟ್ಟಿದ್ದೇವೆ. ಅದರ ಪ್ರಕಾರ ಅವರು ಉಪಯೋಗಿಸುತ್ತಾ ಇದ್ದಾರೆ.

ಶ್ರೀಮಾನ್ ರಾಮಪ್ಪನವರು State Consultative Committee ಅಲ್ಲಿ ವಿರೋಧಪಕ್ಷದ ಸದಸ್ಯರು ಒಬ್ಬರನ್ನು ಮಾತ್ರ ಸೇರಿಸಿದ್ದೀರಿ ಎಂದು ಹೇಳಿದರು. ಅದರಲ್ಲಿ ಶ್ರೀಮಾನ್ ಶ್ರೀನಿವಾಸಶೆಟ್ಟರು ಇದ್ದಾರೆ, ಇನ್ನೊಬ್ಬರು ಎಂ.ಪಿ. ಕಟ್ಟಿ ಎಂಬವರು ಇದ್ದಾರೆ; ಮತ್ತು ಸ್ವತಂತ್ರರೂ ಕೂಡ ಕೆಲವರು ಇದ್ದಾರೆ. ಇನ್ನೂ ಕೆಲವು ಸದಸ್ಯರನ್ನು ಸೇರಿಸುವ ಯೋಚನೆಯನ್ನು ಮಾಡುತ್ತಾ ಇದ್ದೇವೆ.

ಆಮೇಲೆ ಶ್ರೀಮಾನ್ ವೀರಪ್ಪನವರು ಮತ್ತು ರಾಮಪ್ಪನವರು ಹಳ್ಳಿಗಳಲ್ಲಿ pre-Extension Block ನಲ್ಲಿ ಅಂಕಿಅಂಶಗಳನ್ನು ಶೇಖರಣೆ ಮಾಡಿಲ್ಲ ಎಂದು ಹೇಳಿದರು. ಒಂದು pro-forma ಇದೆ. Extension Block ಬರುತ್ತದಕ್ಕೆ ಮುಂಚೆ ಆರು ತಿಂಗಳ ಕಾಲ ಅಂಕಿಅಂಶಗಳನ್ನು ಶೇಖರಣೆಮಾಡಿ ಇಟ್ಟುಕೊಂಡಿದ್ದೇವೆ.

ಶ್ರೀ ಜಿ. ಎಸ್. ಪುಟ್ಟಣ್ಣ.—ಪಟೇಲರು, ಶಾನುಭೋಗರು ಮಾಡಿದ್ದಾರೆ. ಅವರನ್ನು ಆಫೀಸಿಗೆ ಕರೆಸಿಕೊಂಡು ಒಬ್ಬರ ಮುಖಾಂತರ ಬರೆಸಿರುವುದನ್ನು ತಮಗೆ ತೋರಿಸುತ್ತೇನೆ. ಆದ್ದರಿಂದ ಸರಿ ಎಂದು ತಾವು ಹೇಳುವುದನ್ನು justify ಮಾಡಬೇಡಿ.

ಶ್ರೀ ಎಚ್. ಸಿ. ಲಿಂಗಾರೆಡ್ಡಿ.—ಒಂದೊಂದು ಕಡೆ ಆ ರೀತಿ ನಡೆದಿರಬಹುದು. ಅದನ್ನು ನಮ್ಮ ಗಮನಕ್ಕೆ ತಂದರೆ ಒಪ್ಪಿಕೊಳ್ಳುತ್ತೇವೆ.

ಶ್ರೀ ಎಂ. ರಾಮಪ್ಪ.—ನಾನು ಹೇಳಿದ್ದೇ ಒಂದು ಅವರು ಉತ್ತರ ಕೊಡುವುದೇ ಒಂದು. ರೂರಲ್ ಇಂಡೆಟೆಡ್‌ನೆಸ್ ಎಷ್ಟಿದೆ ಎಂಬ ಅಂಕಿಅಂಶ ಶೇಖರಣೆ ಮಾಡಿಲ್ಲ ಎಂದು ಹೇಳಿದ್ದೆ. ಅದಕ್ಕೆ ಉತ್ತರ ಕೊಡಿ.

ಶ್ರೀ ಬಿ. ಡಿ. ಜತ್ತಿ (ಮುಖ್ಯ ಮಂತ್ರಿಗಳು).—ತಮಗೆಲ್ಲಾ ಸರ್ವೇ ಆಗಬೇಕು ಎಂಬುದು ಗೊತ್ತಿದೆ.

ಶ್ರೀ ಎಚ್. ಸಿ. ಲಿಂಗಾರೆಡ್ಡಿ.—ಹರಿಜನರಿಗೆ ಮನೆ ಕಟ್ಟಿಸುವ ವಿಷಯದಲ್ಲಿ ಈಗ ಒಂದು ಹೊಸ ಯೋಜನೆಯನ್ನು ಮಾಡಿದ್ದೇವೆ. ಅದೇನೆಂದರೆ 1,500 ರೂಪಾಯಿಗಳನ್ನು ಕೊಡುತ್ತೇವೆ. ಅದರಲ್ಲಿ 400 ರೂಪಾಯಿ ಸಬ್ಸಿಡಿ ಕೊಟ್ಟು, ಉಳಿದ ಹಣವನ್ನು ಸಾಲವಾಗಿ ಕೊಡುವುದು ಒಂದು ವಿಧ, ಎರಡನೆಯದ ರೂರಲ್ ಹೌಸಿಂಗ್ ಸಂಬಂಧವಾಗಿ ಈ ಬ್ಲಾಕ್‌ಗಳಲ್ಲಿ ಮನೆಗಳನ್ನು ಕಟ್ಟಬೇಕೆಂಬ ಯೋಚನೆ ಇದೆ. ಇದಕ್ಕೆ ಇಂಡಿಯಾ ಸರ್ಕಾರದವರು ಹಣ ಕೊಡುತ್ತಾರೆ.

ಇಷ್ಟು ವಿಷಯವನ್ನು ಹೇಳಿದ್ದೇನೆ. ಮಾನ್ಯ ಸದಸ್ಯರು ಬಾಯಿಗೆ ಬಂದ ಹಾಗೆ ಮಾತನಾಡಿ ಉತ್ತರ ಹೇಳುವಾಗ ಅಷ್ಟು ಆತುರಪಟ್ಟರೆ ನಾನು ಏನು ಹೇಳಬೇಕು ? ಎಲ್ಲೋ ಕೆಲವು ಉದಾಹರಣೆಗಳಿಂದ ಈ ಯೋಜನೆ ಸರಿಯಾಗಿಲ್ಲ, ಯಶಸ್ವಿಯಾಗಿಲ್ಲ ಎನ್ನುವ ತೀರ್ಮಾನಕ್ಕೆ ಯಾರೂ ಖಂಡಿತ ಬರಬಾರದು. ಈ ದಿವಸ ಈ ಯೋಜನೆಯಲ್ಲಿ ಸಹಕರಿಸಲು ಈ ಸಭೆಯ ಅನೇಕ ಮಾನ್ಯ ಸದಸ್ಯರೇ ಈಗಾಗಲೇ ಡೆವಲಪ್

ಮೆಂಟ್ ಕಮಿಟಿಯಲ್ಲಿ ಸದಸ್ಯರಾಗಿದ್ದಾರೆ. ಇಷ್ಟು ವಿಷಯಗಳನ್ನು ಹೇಳಿ ಮತ್ತೊಮ್ಮೆ ಸಭಾಧ್ಯಕ್ಷರಿಗೂ, ಮಾನ್ಯ ಸದಸ್ಯರೆಲ್ಲರಿಗೂ ನನ್ನ ವಂದನೆಗಳನ್ನು ಅರ್ಪಿಸಿ ನನ್ನ ಮಾತನ್ನು ಮುಗಿಸುತ್ತೇನೆ.

Mr. SPEAKER.—Before the demands are put, I would like to say a few words. These demands have been discussed for three days—25th, 26th and 27th *i.e.*, today. In all 22 members excluding the Ministers have taken part in the discussions; 11 are Congress and 11 Opposition. Among 11 in the Opposition, 7 are P.S.P. and Independents 4. The time taken by them (excluding Ministers) is 10 hours 57 minutes. Congress Members have taken 5 hours 17 minutes and Opposition members 5 hours 40 minutes. Out of 5 hours 40 minutes the P.S.P. members have taken 3 hours 47 minutes and Independents one hour 53 minutes. Three Ministers have taken part and between them they have taken three hours 48 minutes; out of that time the Minister for Agriculture has taken 1 hour 20 minutes; the Minister for Co-operation 44 minutes and the Deputy Minister for Planning and Development 47 minutes.

I shall now put the demands. the question is:

"That the respective sums not exceeding the amounts shown in the list of demands circulated to the members may be granted to defray the charges which will come in course of payment during the period ending 31st March 1960, in respect of Demands Nos. 5, 23, 25, 26 and 40."

The motion was adopted.

[As directed by the Speaker the motions for Demands for Grants which were put as above, are reproduced below:]

DEMAND No. 5.—FOREST.

10. *Forest.*

"That a sum not exceeding Rs. 2,28,60,800 be granted to the Government to defray the charges which will come in course of payment during the year ending 31st day of March 1960, in respect of 'Forest'."

DEMAND No. 23.—AGRICULTURE, HORTICULTURE AND FISHERIES.

40. *Agriculture.*

"That a sum not exceeding Rs. 2,48,09,400 be granted to the Government to defray the charges which will come in course of payment during the year ending 31st day of March 1960, in respect of 'Agriculture'."

DEMAND No. 25.—ANIMAL HUSBANDRY

41. *Animal Husbandry.*

"That a sum not exceeding Rs. 1,03,74,000 be granted to the Government to defray the charges which will come in course of payment during the year ending 31st day of March 1960, in respect of 'Animal Husbandry'."

DEMAND No. 26.—CO-OPERATION.

42. *Co-operation.*

"That a sum not exceeding Rs. 73,59,700 be granted to the Government to defray the charges which will come in course of payment during the year ending 31st day of March 1960, in respect of 'Co-operation'."

DEMAND No. 40.—COMMUNITY DEVELOPMENT, ETC.

63-B. *Community Development Projects, National Extension Service and Local Development works*

"That a sum not exceeding Rs. 1,93,01,000 be granted to the Government to defray the charges which will come in course of payment during the year ending 31st day of March 1960, in respect of 'Community Development Projects, National Extension Service and Local Development Works'."

———

Mr. SPEAKER.—Before we rise I would like to say that we are meeting at 8 A.M. tomorrow. In the List of Business it is mentioned as 8-30 A.M. But we are meeting at 8 A.M. tomorrow.

Sri A. V. NARASIMHA REDDY.—I request the Chair that the Industries demand also may be included for tomorrow.

Mr. SPEAKER.—It will come later on. It has been agreed to by the members that tomorrow we should meet at 8 A.M. and sit up to 12 NOON and again sit from 3 P.M. to 7 P.M. There will be no question hour tomorrow.

The House will now rise and meet again at 8 A.M. tomorrow.

The House adjourned at Thirty Minutes past Seven of the Clock to meet again at Eight of the Clock on Saturday, the 28th March 1959.

WD 547—GPB—900—7-10-59